ಹುಬ್ಬಳ್ಳಿ
ಮಂಗಳವಾರ, 16 ಜೂನ್ 2026
ಸಂಪುಟ 16, ಸಂಚಿಕೆ 83, ಪುಟಗಳು 12
ಹುಬ್ಬಳ್ಳಿ ▪ ಬೆಂಗಳೂರು ▪ ಮಂಗಳೂರು ▪ ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಆರ್ದ್ರ

ದಿನದ ಮಾತು

ಅನುಭವ ಒಳ್ಳೆಯ ಉಪಾಧ್ಯಾಯನಂತೆ. ಅದು ಮೊದಲು ಪರೀಕ್ಷೆ ಮಾಡಿ ನಂತರ ಪಾಠ ಕಲಿಸುತ್ತದೆ.

▲ ನಾಣ್ನುಡಿ

ಕಂಪನಿ ದೊಡ್ಡದಾಗಲಿಕ್ಕೆ, ದೊಡ್ಡ ಸದ್ದು ಮಾಡಲೇಬೇಕಿಲ್ಲ

ರಾಘವಾಂಕಣ

• ರಾಘವೇಂದ್ರ ಸುಬ್ರಹ್ಮಣ್ಯ

• ಪುಟ ೬

ಕಿರುಸುದ್ದಿ

ಯಾವ ಗ್ಯಾರಂಟಿಯೂ ನಿಲ್ಲೋದಿಲ್ಲ: ಸಿಎಂ ಡಿಕೆಶಿ

• **ಬೆಂಗಳೂರು:** ಮಹಿಳೆಯರಿಗೆ ಆರ್ಥಿಕ ಶಕ್ತಿ ತುಂಬಲು, ನಮ್ಮ ಸರ್ಕಾರ ಪ್ರೀತಿಯಿಂದ ಕೊಟ್ಟಿರುವ ಗ್ಯಾರಂಟಿ ಯೋಜನೆಗಳನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದರು. ಸೋಮವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಲಾಗುತ್ತಿದೆ ಎಂದು ವಿರೋಧ ಪಕ್ಷಗಳ ಪ್ರಚಾರಕ್ಕೆ ತಿರುಗೇಟು ನೀಡಿದ ಅವರು, ವಿಪಕ್ಷಗಳಿರುವುದೇ ಟೀಕೆ ಮಾಡಲು. ನಾವು ಏನೇ ಒಳ್ಳೆಯದು ಮಾಡಲು ಮುಂದಾದರೂ ಅದಕ್ಕೆ ಅಡ್ಡಗಾಲು ಹಾಕುವುದಕ್ಕೆ ವಿರೋಧ ಪಕ್ಷಗಳಿರುವುದು ಎಂದರು. ➡ಪುಟ ೪

ಹಾರ್ಮುಜ್ ದಾಟಿದ ಭಾರತ ಹಡಗು ದಿಶಾ

• ಪುಟ ೭

ಲಾಂಗ್ ರೇಂಜ್ ಲ್ಯಾಂಡ್ ಅಟ್ಯಾಕ್ ಕ್ರೂಸ್ ಮಿಸೈಲ್ ಪರೀಕ್ಷೆ ಯಶ

• ಪುಟ ೭

ಆ್ಯಪ್ ಮೂಲಕ ಜಿಪಿಎಸ್ ಆಧಾರಿತ ಹಾಜರಾತಿ ವ್ಯವಸ್ಥೆ

• ಪುಟ ೫

ರಾಮನಗರ ಶಾಸಕ ಇಕ್ಬಾಲ್ ಹುಸೇನ್‌ಗೆ ಹೃದಯಾಘಾತ

• ಪುಟ ೪

ಮೋದಿ ಕರೆಯ ಪ್ರೇರಣೆ ಚಿನ್ನ ಖರೀದಿಸದ ಕುಟುಂಬ

• ಪುಟ ೭



ಸಿಂಧೂ ಬಳಿಕ ಚೆನಾಬ್ ಅಭಿವೃದ್ಧಿಗೆ ಉತ್ತೇಜನ

• ಪುಟ ೭

ಸುದ್ದಿ ಸಮಗ್ರ

ಕೃಷಿ ಕಾರ್ಯಕ್ಕೆ ಪ್ರಕೃತಿ ವಿಕೋಪ ಅಡ್ಡಿ ಆಗದಂತೆ ನಿಗಾ ವಹಿಸಿ

ಡ್ರೋನ್, ಎಐ ತಂತ್ರಜ್ಞಾನ ತಲುಪಿಸಿ: ಸಿಎಂ ಡಿಕೆಶಿ ಸೂಚನೆ

ಬರ ಎದುರಿಸಲು ಸಜ್ಜಾಗಿ



• **ಬೆಂಗಳೂರು:** ಬಿತ್ತನೆ ಬೀಜ, ರಸಗೊಬ್ಬರ ಸಮರ್ಪಕ ಪೂರೈಕೆ ಖಾತರಿಗೆ ಸಿಎಂ ಡಿ.ಕೆ. ಶಿವಕುಮಾರ್ ಸೂಚನೆ ನೀಡಿದ್ದು, ಅಧಿಕಾರಿಗಳು ಬರ ಪರಿಸ್ಥಿತಿ ಎದುರಿಸಲು ತುರ್ತು ಕ್ರಮಗಳ ಪೂರ್ವ ಸಿದ್ಧತೆ ಕೈಗೊಳ್ಳಬೇಕು. ಡ್ರೋನ್, ಎಐ ಮತ್ತಿತರ ಆಧುನಿಕ ತಂತ್ರಜ್ಞಾನವನ್ನು ರೈತರಿಗೆ ತಲುಪಿಸುವ ವ್ಯವಸ್ಥೆ ಮಾಡಿ ಎಂದಿದ್ದಾರೆ.

ವಿಧಾನಸೌಧದಲ್ಲಿ ಸೋಮವಾರ ಕೃಷಿ, ರೇಷ್ಮೆ, ತೋಟಗಾರಿಕೆ ಹಾಗೂ ಮೀನುಗಾರಿಕೆ ಸಹಕಾರ ಮತ್ತು ಕೃಷಿ ಮಾರುಕಟ್ಟೆ ಇಲಾಖೆ ಪ್ರಗತಿ ಪರಿಶೀಲನೆ ನಡೆಸಿದ ಮುಖ್ಯಮಂತ್ರಿಗಳು, ಪ್ರಕೃತಿವೈಪರೀತ್ಯಗಳಿಂದ ರೈತರ ಕೃಷಿ ಚಟುವಟಿಕೆಗೆ ತೊಂದರೆ ಆಗಬಾರದು. ಕ್ರಿಮಿನಾಶಕ ಮತ್ತಿತರ ಔಷಧ ಸಿಂಪರಣೆ ಸಲಕರಣೆಗಳ ನೆರವನ್ನು ರೈತರಿಗೆ ಒದಗಿಸಬೇಕು ಎಂದು ಸೂಚನೆ ನೀಡಿದರು.

ಅಧ್ಯಯನ ವರದಿ ನೀಡಿ: ರೈತರ ಆದಾಯ ಹೆಚ್ಚಿಸಲು ಈಗಾಗಲೇ ಸೂಚಿಸಿರುವ ಕ್ರಮಗಳನ್ನು ಸಮರ್ಪಕವಾಗಿ ಜಾರಿ ಮಾಡಬೇಕಿದ್ದು, ಕೃಷಿ ಇಲಾಖೆ ಅಧೀನದಲ್ಲಿರುವ ಐದು ನಿಗಮ ಮತ್ತು ಮಂಡಳಿಗಳ ಸ್ಥಿತಿಗತಿಯ ಅಧ್ಯಯನ ನಡೆಸಿ ವರದಿ ನೀಡಿ. ರೈತರಿಗೆ ನೀಡಬೇಕಾದ ಪೂರಕ ಮಾಹಿತಿಗಳನ್ನು ವರದಿಯಲ್ಲಿ ಉಲ್ಲೇಖಿಸಿ ಎಂದು ಸೂಚಿಸಿದ್ದು, ಕೃಷಿ ಹೊಂಡಗಳಿಗೆ ಬಿದ್ದು ಸಾವನ್ನಪ್ಪುವ ಘಟನೆಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಹೊಂಡಗಳಿಗೆ ಬೇಲಿ ನಿರ್ಮಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ಇದಕ್ಕೆ ಹಣಕಾಸಿನ ನೆರವು ಸಂಬಂಧ ಅಗತ್ಯ ಯೋಜನೆ ರೂಪಿಸಲು ತಿಳಿಸಿದರು.

ಖಾಲಿ ಹುದ್ದೆ ಭರ್ತಿಗೆ ಕ್ರಮ: ಇತರೆ ರಾಜ್ಯಗಳಲ್ಲಿರುವ ಮಾದರಿ ಯೋಜನೆ, ಮಾರ್ಗಗಳನ್ನು ಅಧ್ಯಯನ ಮಾಡಿ ರಾಜ್ಯದ ಕೃಷಿ ಸಂಸ್ಕೃತಿ ಮತ್ತು ಬೆಳೆ ಮಾದರಿಗಳಿಗೆ ಅನುಗುಣವಾಗಿ ಕಾರ್ಯರೂಪಕ್ಕೆ ತರಬೇಕು. ➡ಪುಟ ೪

> **ರೈತರಿಗೆ ಸಬ್ಸಿಡಿ ದರದಲ್ಲಿ ಕೊಟ್ಟಿರುವ ಸವಲತ್ತುಗಳು ಎಷ್ಟು ಪ್ರಯೋಜನಕಾರಿಯಾಗಿವೆ ಎನ್ನುವ ಬಗ್ಗೆ ಪರಿಶೀಲನೆ ನಡೆಸಿ. ಸಬ್ಸಿಡಿ ನೀಡಿರುವ ಉದ್ದೇಶ ಜಾರಿ ಆಗುತ್ತಿದೆಯೇ ಎಂಬುದರ ಬಗ್ಗೆ ಅಧಿಕಾರಿಗಳು ವರದಿ ನೀಡಿ.**
> ■ ಡಿ.ಕೆ. ಶಿವಕುಮಾರ್, ಸಿಎಂ

ಮಾವು ಬೆಳೆಗಾರರಿಗೆ ನಷ್ಟ ಪರಿಹಾರ

ಈ ವರ್ಷ 1,068 ಕೋಟಿ ರೂ. ಮೌಲ್ಯದ ಮಾವು ಬೆಳೆ ನಾಶ ಆಗಿದ್ದು, ಈ ಪೈಕಿ ಶೇ.25 ರಷ್ಟು ಅಂದರೆ 229 ಕೋಟಿ ರೂ. ಪರಿಹಾರ ಕೊಡಬೇಕಿದೆ. ಕರ್ನಾಟಕ ಸರಕಾರ 114 ಕೋಟಿ ಹಾಗೂ ಕೇಂದ್ರ ಸರಕಾರ 115 ಕೋಟಿ ನಷ್ಟ ಪರಿಹಾರ ಭರಿಸಬೇಕಿದೆ. ಕಾನೂನು ಪ್ರಕಾರ ಮಾವು ಬೆಳೆಗಾರರಿಗೆ ನಷ್ಟ ಪರಿಹಾರ ಸಿಗುವಂತೆ ಗಮನ ಹರಿಸಿ ಎಂದು ಅಧಿಕಾರಿಗಳಿಗೆ ತಿಳಿಸಿದರು.

ರಫ್ತು ಉತ್ತೇಜಿಸಿ

ಕೆಪೆಕ್ ಮೂಲಕ ರಫ್ತು ಎಷ್ಟು ಹೆಚ್ಚಾಗಿದೆ. ರಫ್ತು ಉತ್ತೇಜಿಸಲು ಏನೇನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಪ್ರಶ್ನಿಸಿದ ಸಿಎಂ, ರಫ್ತು ಉತ್ತೇಜನಕ್ಕೆ ಯೋಜನೆ ರೂಪಿಸಲು ಆರ್ಥಿಕ ಸಲಹೆಗಾರ ಎಲ್. ಕೆ. ಅತೀಕ್, ಎಸಿಎಸ್ ತುಷಾರ ಗಿರಿನಾಥ್‌ರಿಗೆ ಸೂಚಿದರು.

ಬಡ್ಡಿರಹಿತ ಸಾಲ ದುರ್ಬಳಕೆಗೆ ಬ್ರೇಕ್

ಸಹಕಾರ ಇಲಾಖೆ ಅಡಿಯಲ್ಲಿ ಯಾವ್ಯಾವ ಸಂಸ್ಥೆಗಳಿಗೆ ಚುನಾವಣೆ ಆಗಬೇಕಿದೆಯೋ ಎಲ್ಲದಕ್ಕೂ ಚುನಾವಣೆ ನಡೆಸಬೇಕಿದೆ. ಕಾಸ್ಕಾರ್ಡ್ ಬ್ಯಾಂಕ್‌ಗಳು ಕೊಡುವ ಬಡ್ಡಿರಹಿತ ಸಾಲದ ಸೌಲಭ್ಯ ಅಗತ್ಯವಿರುವವರಿಗೆ ತಲುಪುತ್ತಿಲ್ಲ, ಬ್ಯಾಂಕ್‌ನವರೇ ತಮಗೆ ಬೇಕಾದವರ ಹೆಸರಲ್ಲಿ ಸಾಲ ಪಡೆಯುತ್ತಿದ್ದಾರೆ. ರೈತರಿಗೆ ವಂಚನೆ ಆಗಲು ಬಿಡಬಾರದು. 5 ಲಕ್ಷದವರೆಗೂ ಬಡ್ಡಿರಹಿತ ಸಾಲ ಸೌಲಭ್ಯ ದುರುಪಯೋಗ ಆಗುತ್ತಿರುವ ಬಗ್ಗೆ ರೈತರು ನನ್ನ ಬಳಿ ಬಂದು ದೂರುತ್ತಿದ್ದಾರೆ. ಇದಕ್ಕೆ ಕಟ್ಟುನಿಟ್ಟಿನ ಬ್ರೇಕ್ ಹಾಕಬೇಕೆಂದು ಆದೇಶ ನೀಡಿದ ಮುಖ್ಯಮಂತ್ರಿಗಳು, ಅಗತ್ಯ ಇರುವ ಫಲಾನುಭವಿಗಳಿಗೆ ಸಾಲ ಸವಲತ್ತು ತಲುಪುವಂತೆ ನೋಡಿಕೊಳ್ಳಿ ಎಂದರು.

ಎಪಿಎಂಸಿ ಜಾಗಗಳ ಸಂರಕ್ಷಣೆ

• ಪುಟ ೪

ಧರ್ಮಸ್ಥಳ ವಿರುದ್ಧ ಷಡ್ಯಂತ್ರ | ಸಿಎಂ ಡಿ.ಕೆ.ಶಿವಕುಮಾರ್‌ಗೆ ಸಿ.ಟಿ.ರವಿ ಪತ್ರ

ಸಿಬಿಐನಿಂದ ತನಿಖೆ ನಡೆಸಲು ಒತ್ತಾಯ



• **ಬೆಂಗಳೂರು:** ಶ್ರೀ ಕ್ಷೇತ್ರ ಧರ್ಮಸ್ಥಳ ಮತ್ತು ಧರ್ಮಾಧಿಕಾರಿ ಡಾ. ಡಿ.ವೀರೇಂದ್ರ ಹೆಗ್ಗಡೆ ಅವರ ವಿರುದ್ಧ ನಡೆದಿರುವ ಷಡ್ಯಂತ್ರದ ಸಮಗ್ರ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಒತ್ತಾಯಿಸಿ ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಅವರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದಿದ್ದಾರೆ.

ಧರ್ಮಸ್ಥಳದ ವಿಚಾರದಲ್ಲಿ ಇತ್ತೀಚೆಗೆ ಹೊರ ಬರುತ್ತಿರುವ ಬೆಳವಣಿಗೆಗಳು ನನ್ನನ್ನಷ್ಟೇ ಅಲ್ಲದೆ, ಕೋಟ್ಯಂತರ ಭಕ್ತರ ಮನಸ್ಸಿನಲ್ಲೂ ಆತಂಕ ಮತ್ತು ಅನುಮಾನಗಳನ್ನು ಹುಟ್ಟುಹಾಕಿವೆ. ಈ ಕಾರಣದಿಂದಲೇ ಈ ಪತ್ರ ಬರೆಯುತ್ತಿದ್ದೇನೆ. ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ.ವೀರೇಂದ್ರ ಹೆಗ್ಗಡೆ ಅವರ ವಿರುದ್ಧ ಕಳೆದ ಕೆಲವು ವರ್ಷಗಳಿಂದ ನಿರಂತರವಾಗಿ ಆರೋಪಗಳು, ಅಪಪ್ರಚಾರಗಳು ಮತ್ತು ಅನುಮಾನಗಳ ವಾತಾವರಣ ಸೃಷ್ಟಿ ಮಾಡುತ್ತಿರುವುದನ್ನು ರಾಜ್ಯದ ಜನ ಗಮನಿಸುತ್ತಿದ್ದಾರೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಈಗ ಉಚ್ಚ ನ್ಯಾಯಾಲಯದ ಮುಂದೆ ಸಲ್ಲಿಕೆಯಾಗಿರುವ ಅರ್ಜಿಯು ಈ ಪ್ರಕರಣಕ್ಕೆ ಮತ್ತೊಂದು ಗಂಭೀರ ಆಯಾಮ ನೀಡಿದೆ. ಮಾಧ್ಯಮ ವರದಿಗಳ ಪ್ರಕಾರ, ಆ ಅರ್ಜಿಯಲ್ಲಿ ನಟ ಪ್ರಕಾಶ್ ರಾಜ್, ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟಣ್ಣನವರ್, ವಿಠಲ್ ಗೌಡ, ಜಯಂತ್ ಹಾಗೂ ಯುಟ್ಯೂಬರ್‌ಗಳಾದ ಸಮೀರ್ ಎಂ.ಡಿ., ಅಜಯ್, ದಿನೇಶ್ ಸೇರಿದಂತೆ ಹಲವರ ಹೆಸರುಗಳನ್ನು ಉಲ್ಲೇಖಿಸಲಾಗಿದೆ. ➡ಪುಟ ೪

> **ಧರ್ಮಸ್ಥಳದ ವಿರುದ್ಧ ನಡೆದಿರುವ ಹುನ್ನಾರವನ್ನು ಲಘುವಾಗಿ ಪರಿಗಣಿಸಲು ಸಾಧ್ಯವಿಲ್ಲ. ಪ್ರಕರಣವನ್ನು ರಾಜ್ಯ ಪೊಲೀಸ್ ಇಲಾಖೆಯಿಂದ ತನಿಖೆ ನಡೆಸಿದರೆ ಸಾಕಾಗುವುದಿಲ್ಲ. ಆದ್ದರಿಂದ, ಕೇಂದ್ರ ಮಟ್ಟದ ತನಿಖಾ ಸಂಸ್ಥೆಗಳಿಂದ ತನಿಖೆ ನಡೆಸಿದರೆ ಮಾತ್ರವೇ ಷಡ್ಯಂತ್ರದ ಹಿಂದಿರುವವರು ಯಾರು ಎನ್ನುವುದು ಬೆಳಕಿಗೆ ಬರಲು ಸಾಧ್ಯ.**
> ■ ಸಿ.ಟಿ. ರವಿ, ವಿಧಾನಪರಿಷತ್ ಸದಸ್ಯ

ಹಿಂದು ಶ್ರದ್ಧಾ ಕೇಂದ್ರಗಳ ವಿರುದ್ಧ ಷಡ್ಯಂತ್ರವೇ?

ಇತ್ತೀಚಿನ ದಿನಗಳಲ್ಲಿ ಹಿಂದು ಶ್ರದ್ಧಾಕೇಂದ್ರಗಳು, ಪುರಾತನ ದೇವಾಲಯಗಳು ಮತ್ತು ಸಮಾಜದಲ್ಲಿ ಅಪಾರ ಗೌರವ ಹೊಂದಿರುವ ಧಾರ್ಮಿಕ ಸಂಸ್ಥೆಗಳನ್ನು ಗುರಿಯಾಗಿಸಿಕೊಂಡು ಅಪನಂಬಿಕೆ ಸೃಷ್ಟಿಸುವ ಯಾವುದೇ ದೊಡ್ಡ ಕಾರ್ಯತಂತ್ರದ ಭಾಗ ಇದಾಗಿತ್ತೇ? ಈ ಪ್ರಕ್ರಿಯೆಗೆ ಹೊರಗಿನಿಂದ ಹಣ ಹೂಡಿಕೆ ಯಾಗಿತ್ತೇ? ರಾಜ್ಯದ ಹೊರಗಿನ ಅಥವಾ ದೇಶದ ಹೊರಗಿನ ಯಾವುದೇ ಸಂಘಟಿತ ಶಕ್ತಿಗಳು ಇದರಲ್ಲಿ ಭಾಗಿಯಾಗಿವೆಯೇ ಎಂಬ ಅನುಮಾನ ಮೂಡುತ್ತಿದೆ. ➡ಪುಟ ೪

ಭಾರತ ಜತೆಗಿನ ಬಾಂಧವ್ಯ ಉನ್ನತೀಕರಣ | 11 ಒಪ್ಪಂದಕ್ಕೆ ಸಹಿ

ಸ್ಲೊವಾಕಿಯಾ ಸಂಬಂಧ ಸುಮಧುರ





• **ಬ್ರಾಟಿಸ್ಲಾವಾ:** ಭಾರತ ಮತ್ತು ಸ್ಲೊವಾಕಿಯಾ ಸೋಮವಾರ ತಮ್ಮ ದ್ವಿಪಕ್ಷೀಯ ಬಾಂಧವ್ಯವನ್ನು ಸಮಗ್ರ ಪಾಲುದಾರಿಕೆಯ ಮಟ್ಟಕ್ಕೆ ಉನ್ನತೀಕರಿಸಿವೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಸ್ಲೊವಾಕಿಯಾ ಪ್ರಧಾನಿ ರಾಬರ್ಟ್ ಫಿಕೊ ನಡುವಿನ ಮಾತುಕತೆಯ ನಂತರ ವಲಸೆ, ಡಿಜಿಟಲ್ ತಂತ್ರಜ್ಞಾನ ಮತ್ತು ರಕ್ಷಣೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಹಕಾರವನ್ನು ವಿಸ್ತರಿಸಲು ಉಭಯ ದೇಶಗಳು 11 ಒಪ್ಪಂದಗಳನ್ನು ಅಂತಿಮಗೊಳಿಸಿವೆ.

ಈ ಒಪ್ಪಂದಗಳಲ್ಲಿ, ಕಾರ್ಮಿಕ ವಲಸೆ, ರಕ್ಷಣೆ, ಡಿಜಿಟಲ್ ತಂತ್ರಜ್ಞಾನಗಳು, ಉನ್ನತ ಶಿಕ್ಷಣ, ಕ್ವಾಂಟಮ್ ಸಂವಹನ ಕ್ಷೇತ್ರಗಳಲ್ಲಿ ಆಳವಾದ ಸಹಕಾರ ಒದಗಿಸಲಿವೆ. ಈ ಪಾಲುದಾರಿಕೆ, ಇರುವ ಸಂಬಂಧವನ್ನು ಬಲಪಡಿಸುವ ಮತ್ತು ಆಳವಾದ ಸಹಕಾರಕ್ಕೆ ಹೊಸ ಮಾರ್ಗಗಳನ್ನು ಅನ್ವೇಷಿಸುವ ಉದ್ದೇಶ ಹೊಂದಿದೆ. ಪ್ರಧಾನಿ ಮೋದಿ ತಮ್ಮ ಒಂದು ವಾರದ ಯುರೋಪ್ ಪ್ರವಾಸದ ಭಾಗವಾಗಿ ಬ್ರಾಟಿಸ್ಲಾವಾಕ್ಕೆ ಭೇಟಿ ನೀಡಿದ್ದಾರೆ. ➡ಪುಟ ೪

ತ್ರಿಶೂರ್‌ನಲ್ಲಿ ಸರಸಂಘಚಾಲಕ ಡಾ.ಭಾಗವತ್ ಅಭಿಪ್ರಾಯ

ಆರೆಸ್ಸೆಸ್‌ಗೆ ನೋಂದಣಿ ಅಗತ್ಯವಿಲ್ಲ



• **ತ್ರಿಶೂರ್:** ಆರ್‌ಎಸ್‌ಎಸ್ ನೋಂದಣಿ ಬಗ್ಗೆ ಕರ್ನಾಟಕದಲ್ಲಿ ಸುದ್ದಿಯಾಗುತ್ತಿರುವ ನಡುವೆಯೇ, ಆರ್‌ಎಸ್‌ಎಸ್ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಅವರು ಪ್ರತಿಕ್ರಿಯೆ ನೀಡಿದ್ದು, ಸಂಘಕ್ಕೆ ಯಾವುದೇ ನೋಂದಣಿ ಅಗತ್ಯವಿಲ್ಲ. ಹಾಗೆಯೇ ಇಂಥ ಸಂಗತಿಗಳಿಗೆ ಉತ್ತರಿಸುವುದು ಅಗತ್ಯವಿಲ್ಲ ಎಂದಿದ್ದಾರೆ.

ಕೇರಳದ ತ್ರಿಶೂರ್‌ನಲ್ಲಿ ನಡೆದ ಸಂಘದ 100 ವರ್ಷಗಳ ಪಯಣ ಸಂವಾದ ಕಾರ್ಯಕ್ರಮದಲ್ಲಿ ಸಭಿಕರ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಇದಕ್ಕೆ ನಾನು ಪ್ರತಿಕ್ರಿಯಿಸುವ ಅಗತ್ಯವಿಲ್ಲ. ನೋಂದಣಿಯಾಗದ ಅನೇಕ ವಿಷಯಗಳು ನಡೆಯುತ್ತಿವೆ. ನಾವು ಯಾವುದೇ ರಹಸ್ಯವನ್ನು ಕಾಯ್ದುಕೊಂಡಿಲ್ಲ. ನಾವು ತೆರೆದ ಮೈದಾನದಲ್ಲಿ ಕೆಲಸ ಮಾಡುತ್ತಿದ್ದೇವೆ. ಜನರನ್ನು ಕರೆಯುತ್ತಿದ್ದೇವೆ ಮತ್ತು ಅವರಿಗೆ ಸಂಘದ ಬಗ್ಗೆ ಹೇಳುತ್ತಿದ್ದೇವೆ ಎಂದು ಹೇಳಿದರು.

ರಾಜಕೀಯ ಗಿಮಿಕ್: ಇಂಥ ಸಂಗತಿಗಳು ಕೇವಲ ರಾಜಕೀಯದ ಗಿಮಿಕ್‌ಗಳಷ್ಟೇ. ಅದನ್ನು ಮಾಡಲು ಹೋಗಬೇಡಿ. ನಮಗೆ ಇದೆಲ್ಲವೂ ಅಭ್ಯಾಸವಾಗಿದೆ. ➡ಪುಟ ೪

- ನಾವು ಬ್ರಿಟಿಷರ ಕಾಲದಿಂದಲೇ ಸಂಘದ ಕೆಲಸ ಆರಂಭಿಸಿದ್ದೇವೆ
- ಇತಿಹಾಸದಿಂದಲೂ ಸಂಘಕ್ಕೆ ಅಡ್ಡಿ ಮಾಡುವ ಕೆಲಸ ನಿರಂತರ
- ಸರ್ಕಾರವೇ ನಿಷೇಧಿಸಿತ್ತು ಎಂದ ಭಾಗವತ್
- ಭಾನುವಾರ ಸಭಿಕರೊಬ್ಬರ ಪ್ರಶ್ನೆಯೊಂದಕ್ಕೆ ಭಾಗವತ್ ಉತ್ತರ

ಗೃಹ ಸಚಿವ ಖರ್ಗೆಯಿಂದ ಆರೆಸ್ಸೆಸ್‌ಗೆ ಸುದೀರ್ಘ ಪತ್ರ



• **ಬೆಂಗಳೂರು:** ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಮೋಹನ್ ಭಾಗವತ್ ಅವರಿಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಸುದೀರ್ಘ ಪತ್ರವೊಂದನ್ನು ಬರೆದಿದ್ದಾರೆ. 100 ವರ್ಷಗಳನ್ನು ಪೂರೈಸಿದ್ದಕ್ಕಾಗಿ ಆರ್‌ಎಸ್‌ಎಸ್‌ಗೆ ಅಭಿನಂದನೆ ಸಲ್ಲಿಸಿರುವ ಅವರು, ಸಾಂಸ್ಥಿಕ ಸ್ಥಿತಿಯ ಕುರಿತು ಕಾನೂನು ಸ್ಪಷ್ಟೀಕರಣಕ್ಕಾಗಿ ವಿನಂತಿಸಿಕೊಂಡಿದ್ದಾರೆ. ಅಲ್ಲದೆ, 8 ಪ್ರಶ್ನೆಗಳಿಗೆ ಉತ್ತರಿಸುವಂತೆ ಮನವಿ ಮಾಡಿದ್ದಾರೆ. 100 ವರ್ಷ ಪೂರೈಸಿದ ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಭಾರತ, ವಿದೇಶಗಳಲ್ಲಿ 60,000ಕ್ಕೂ ಹೆಚ್ಚು ಶಾಖೆಗಳು, ಕೋಟಿ ಸ್ವಯಂಸೇವಕರನ್ನು ಹೊಂದಿದೆ ಎಂದು ಹೇಳಿಕೊಳ್ಳುವ ಈ ಸಂಸ್ಥೆ ನಿಸ್ಸಂದೇಹವಾಗಿ ಸಾರ್ವಜನಿಕ ಜೀವನ, ಸಮಾಜದಲ್ಲಿ ಗಮನಾರ್ಹ ಪ್ರಭಾವ ಹೊಂದಿದೆ. ➡ಪುಟ ೪

ಪರಿಷತ್‌ನ 7 ಸ್ಥಾನಗಳಿಗೆ ಚುನಾವಣೆ ಹಿನ್ನೆಲೆ

ಇಂದು ರೆಸಾರ್ಟ್‌ನಲ್ಲೇ ಕೈ ಶಾಸಕಾಂಗ ಪಕ್ಷದ ಸಭೆ

• **ಬೆಂಗಳೂರು:** ವಿಧಾನಪರಿಷತ್ತಿನ 7 ಸ್ಥಾನಗಳಿಗೆ ಜೂ.18 (ಗುರುವಾರ) ರಂದು ನಡೆಯುವ ಚುನಾವಣೆಯಲ್ಲಿ ಅಡ್ಡ ಮತದಾನಕ್ಕೆ ಅವಕಾಶ ಇಲ್ಲದಂತೆ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವು ಸುಗಮವಾಗುವಂತೆ ನೋಡಿಕೊಳ್ಳಲು ಎಲ್ಲ ಕಾಂಗ್ರೆಸ್ ಶಾಸಕರನ್ನು ಮಂಗಳವಾರ (ಜೂ.16)ದಂದು ರೆಸಾರ್ಟ್‌ಗೆ ಕರೆದೊಯ್ಯಲಾಗುತ್ತಿದ್ದು, ಅಲ್ಲಿಯೇ ಶಾಸಕಾಂಗ ಸಭೆ ನಡೆಯಲಿದೆ.

ವಿಧಾನಪರಿಷತ್ತಿನ ಚುನಾವಣೆ ಹಿನ್ನೆಲೆಯಲ್ಲಿ ಮಂಗಳವಾರ(ಜೂ.16) ಸಂಜೆ 6 ಗಂಟೆಗೆ ಬಿಡದಿ ಬಳಿಯ ಖಾಸಗಿ ರೆಸಾರ್ಟ್‌ನಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ನಡೆಯಲಿದ್ದು, ಈ ಸಭೆಯಲ್ಲಿ ಪಾಲ್ಗೊಳ್ಳುವ ಕಾಂಗ್ರೆಸ್ ಶಾಸಕರು ಮಂಗಳವಾರ ಮತ್ತು ಬುಧವಾರ ಎರಡು ದಿನ ರೆಸಾರ್ಟ್‌ನಲ್ಲೇ ವಾಸ್ತವ್ಯ ಹೂಡಿ ಗುರುವಾರ ಅಲ್ಲಿಂದಲೇ ನೇರವಾಗಿ ವಿಧಾನಸೌಧಕ್ಕೆ ಮತದಾನಕ್ಕೆ ಬರಲಿದ್ದಾರೆ. ➡ಪುಟ ೪

> **ಮಂಗಳವಾರ ನಡೆಯುವ ಶಾಸಕಾಂಗ ಪಕ್ಷದ ಸಭೆಯಲ್ಲಿ ಸುರ್ಜೇವಾಲ ಸೇರಿ ನಮ್ಮ ನಾಯಕರೆಲ್ಲ ಭಾಗಿಯಾಗಲಿದ್ದಾರೆ. ದೂರವಾಣಿ, ಪತ್ರದ ಮೂಲಕ ಎಲ್ಲ ಶಾಸಕರನ್ನು ಆಹ್ವಾನಿಸಲಾಗಿದೆ. ಸದಸ್ಯರು ಬರದಿದ್ದರೆ ವ್ಹಿಪ್ ಜಾರಿ ಮಾಡುತ್ತೇವೆ. ನಾಲ್ಕೈದು ಶಾಸಕರು ಅನಾರೋಗ್ಯ, ಇತರೆ ಕಾರಣಕ್ಕಾಗಿ ಗೈರಾಗಲಿದ್ದಾರೆ.**
> ■ ಅಲ್ಲಮಪ್ರಭು ಪಾಟೀಲ್, ಶಾಸಕಾಂಗ ಪಕ್ಷದ ಕಾರ್ಯದರ್ಶಿ

ವಿಮೆ ಹಣಕ್ಕಾಗಿ ಮಾಜಿ ಸೈನಿಕನ ಹತ್ಯೆಗೈದ ಪತ್ನಿ

ಕೊಲೆ ಕೇಸ್: ಎಫ್‌ಎಸ್ಸೆಲ್ ಅಧಿಕಾರಿಗಳೂ ಶಾಮೀಲು

• **ಬೆಳಗಾವಿ:** ಎರಡು ಕೋಟಿ ರೂಪಾಯಿ ವಿಮೆ ಹಣ ಪಡೆಯುವ ಉದ್ದೇಶದಿಂದ ಪತ್ನಿಯೇ ತನ್ನ ಪ್ರಿಯಕರನೊಂದಿಗೆ ಸೇರಿ ಪತಿಯ ಹತ್ಯೆ ಮಾಡಿಸಿರುವ ಪ್ರಕರಣದಲ್ಲಿ ಇದೀಗ ಮತ್ತೊಂದು ಮಹತ್ವದ ಬೆಳವಣಿಗೆ ನಡೆದಿದ್ದು, ಪ್ರಕರಣದ ತನಿಖೆಯ ವೇಳೆ ಎಫ್ ಎಸ್ಎಲ್ (ಫೊರೆನ್ಸಿಕ್ ಸೈನ್ಸ್ ಲ್ಯಾಬೊರೇಟರಿ) ಅಧಿಕಾರಿಗಳ ಪಾತ್ರವೂ ಬೆಳಕಿಗೆ ಬಂದಿದೆ.



ಅಧಿಕಾರಿಗಳು ಸೇರಿ ಐವರ ಬಂಧನ

ರಾಜ್ಯದಲ್ಲೇ ಮೊದಲ ಬಾರಿಗೆ ಕೊಲೆ ಪ್ರಕರಣವೊಂದರಲ್ಲಿ ಎಫ್‌ಎಸ್‌ಎಲ್ ಅಧಿಕಾರಿಗಳು ನೇರವಾಗಿ ಭಾಗಿಯಾಗಿರುವ ಆರೋಪ ಕೇಳಿ ಬಂದಿರುವುದು ವ್ಯಾಪಕ ಚರ್ಚೆಗೆ ಕಾರಣವಾಗಿದೆ. ಯಮಕನಮರಡಿ ಪೊಲೀಸ್ ಠಾಣಾ ವ್ಯಾಪ್ತಿಯ ಘಡಗೋರಿ ಗ್ರಾಮದ ಮಾಜಿ ಸೈನಿಕ ಸಂದೀಪ್ ಮಂಜರಗಿ ಅವರ ಸಾವನ್ನು ಆರಂಭಿಕ ಹಂತದಲ್ಲಿ ರಸ್ತೆ ಅಪಘಾತ ಎಂದು ಬಿಂಬಿಸಲಾಗಿತ್ತು.

ಆದರೆ, ಪ್ರಕರಣದ ತನಿಖೆಯನ್ನು ಆಳವಾಗಿ ನಡೆಸಿದಾಗ ಇದು ಪೂರ್ವ ನಿಯೋಜಿತವಾಗಿ ರೂಪಿಸಲಾದ ಕೊಲೆ ಎಂಬುದು ಬಹಿರಂಗವಾಗಿದೆ. ತನಿಖೆಯ ವೇಳೆ ಮರಣೋತ್ತರ ಪರೀಕ್ಷೆ ಹಾಗೂ ಎಫ್‌ಎಸ್‌ಎಲ್ ವರದಿಗಳನ್ನು ತಿರುಚಿ ಪ್ರಕರಣದ ದಿಕ್ಕು ತಪ್ಪಿಸಲು ಯತ್ನ ನಡೆದಿರುವ ಶಂಕೆ ವ್ಯಕ್ತವಾಗಿದ್ದು, ಈ ಹಿನ್ನೆಲೆಯಲ್ಲಿ ಹಲವು ಅಧಿಕಾರಿಗಳನ್ನು ಪೊಲೀಸರು ಬಂಧಿಸಿದ್ದಾರೆ. ➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,65,000 (2,60,000) ಅಪರಂಜಿ ಚಿನ್ನ: 1,51,530 (1,49,090) ಆಭರಣ ಚಿನ್ನ: 1,38,900 (1,36,650) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 76,264 (736↑) ಎನ್‌ಎಸ್‌ಇ 23,853 (231↑)

$1 = ₹95.12

ಕಿರುಸುದ್ದಿ

ವಿದ್ಯುತ್ ವ್ಯತ್ಯಯ ನಾಳೆ

ಹುಬ್ಬಳ್ಳಿ: 110/11 ಕೆ.ವಿ ವಿದ್ಯುತ್ ಉಪಕೇಂದ್ರದಲ್ಲಿ ಪವರ ಹೌಸ್ ಕಾಂಪೌಂಡ್‌ನಲ್ಲಿ ತುರ್ತು ನಿರ್ವಹಣಾ ಕಾರ್ಯದ ನಿಮಿತ್ತ ಜೂ.17ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಅಂದು ಬೆಳಗ್ಗೆ 9ಗಂಟೆಯಿಂದ ಮಧ್ಯಾಹ್ನ 4ರ ವರೆಗೆ ಶಹಾ ಬಜಾರ್, ಸಿ.ಬಿ.ಟಿ.ಕಿಲ್ಲಾ, ತೋರವಿ ಗಲ್ಲಿ, ಮಂಗಳವಾರ್ ಪೇಟ್, ರುದ್ರಾಕ್ಷಿಮಠ, ವಿಟ್ಟವ ಗಲ್ಲಿ, ವಾಲ್ವೇಕರ್‌ಗಲ್ಲಿ, ಇಟಗಿ ಮಾರುತಿಗಲ್ಲಿ, ರಾಧಾಕೃಷ್ಣ ಗಲ್ಲಿ, ಬಾಣತಿಗಲ್ಲಿ, ಬರ್ದನ್‌ಸಾಲ್, ಎಮ್.ಜಿ. ಮಾರ್ಕೆಟ್, ಹೀರೆ ಪೇಟ್, ಬಮ್ಮಾಪೂರ್ ಓಣಿ, ಬೈಲಿ ಓಣಿ, ಸೇಟ್ಲ್‌ಮೆಂಟ್, ಗೊಲ್ಲರ್ ಕಾಲೋನಿ, ಕೆ.ಬಿ ನಗರ, ಘಂಟಿಗೇರಿ ಓಣಿ, ಯಲ್ಲಾಪೂರ್ ಓಣಿ, ಗಾರ್ಡನ್ ಪೇಟ್, ಬಂಕಾಪೂರ ಓಣಿ, ವೀರಪೂರ್ ಓಣಿ, ಕುಲಕರ್ಣಿ ಗಲ್ಲಿ, ಮಹಬಲೇಶ್ವರ ಗುಡಿ, ಶಾಂತಿನಿಕೇತನ ಕಾಲೋನಿ, ಇಂದ್ರನಗರ, ಹುದಾರ್ ಓಣಿ, ಗಣೇಶ್ ಪೇಟ್, ಸ್ಟೇಷನ್ ರೋಡ್, ಹೆಡ್ ಪೋಸ್ಟ್, ಜೆ.ಸಿ. ನಗರ, ಜೆ.ಸಿ ನಗರ, ಕುಲಕರ್ಣಿ ಹಕ್ಕಲ್, ಶೆಟ್ಟರ ಓಣಿ, ಕುಂಬಾರ್ ಓಣಿ, ಎ.ಕೆ ಇಂಡಸ್ಟ್ರೀಸ್ ರೋಡ್, ಗುಂಡಿ ಮಾರ್ಕೆಟಿಂಗ್, ತಬೀಬ್ ಲ್ಯಾಂಡ್ ಆ್ಯಂಡ್ ಮಂಟೂರ್ ಮುಖ್ಯ ರಸ್ತೆ, ಬ್ಯಾಳಿ ಪ್ಲಾಟ್ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಹೆಸ್ಕಾಂನ ಗ್ರಾಮೀಣ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಹುಬ್ಬಳ್ಳಿ: ಗ್ರಾಮೀಣ ಭಾಗದ ಯುವಜನತೆಗೆ ಉಚಿತವಾಗಿ ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಮೂಡುಬಿದ್ರೆಯ ಡಾ. ಜಿ. ರಾಮಕೃಷ್ಣ ಆಚಾರ್ ಚಾರಿಟೇಬಲ್ ಟ್ರಸ್ಟ್ ಹಾಗೂ ಎಸ್‌ಕೆಎಫ್ ಎಲಿಕ್ಸರ್ ಇಂಡಿಯಾ ಪ್ರೈ.ಲಿ. ಜಂಟಿಯಾಗಿ ಕುಂದಾಪುರದಲ್ಲಿರುವ ಅತ್ಯುನ್ನತ, ಅತ್ಯಾಧುನಿಕ ಎಸ್‌ಕೆಎಫ್ ಎಲಿಕ್ಸರ್ ಇಂಡಸ್ಟ್ರಿಯಲ್ ಟ್ರೇನಿಂಗ್ ಸೆಂಟರ್ ನಲ್ಲಿ ಉಚಿತ ಐಟಿಐ ಶಿಕ್ಷಣ ಹಾಗೂ ಕೌಶಲ್ಯಾಧಾರಿತ ತಾಂತ್ರಿಕ ತರಬೇತಿ ನೀಡುತ್ತಿದೆ. ಇಲ್ಲಿ ಕಲಿತ ಅರ್ಹರಿಗೆ ವಿದೇಶಿ ಉದ್ಯೋಗಾವಕಾಶ ಸೇರಿದಂತೆ ಇತರೆಡೆಗಳಲ್ಲಿ ಉಚಿತವಾಗಿ ಉದ್ಯೋಗಾವಕಾಶ ಕಲ್ಪಿಸುವ ಯೋಜನೆ ಹಾಕಿಕೊಂಡಿದ್ದಾರೆ.

ನೈಜ ಕೈಗಾರಿಕಾ ಉದ್ಯೋಗಗಳಿಗಾಗಿ ಇಲ್ಲಿ ಒಂದು ವರ್ಷದ ಕೌಶಲ್ಯಾಧಾರಿತ ತಾಂತ್ರಿಕ ತರಬೇತಿಯನ್ನು ಸಂಪೂರ್ಣ ಉಚಿತವಾಗಿ ನೀಡಲಾಗುತ್ತದೆ. ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್, ಫಿಟ್ಟಿಂಗ್ ಮತ್ತು ವೆಲ್ಡಿಂಗ್, ಮೆಕ್ಯಾನಿಕ್- ಎಲೆಕ್ಟ್ರಿಕ್, ಏಸಿ ಮತ್ತು ಪ್ಲಂಬಿಂಗ್ ಎಂಬ ಮೂರು ಕೋರ್ಸ್‌ಗಳಿವೆ. ವಿದ್ಯಾರ್ಥಿಗಳಿಗೆ 3 ತಿಂಗಳ ಇಂಟರ್ನ್‌ಶಿಪ್ ಹಾಗೂ ಕೈಗಾರಿಕಾ ತರಬೇತಿ ನೀಡಲಾಗುತ್ತದೆ. ತರಬೇತಿ ನಂತರ ಭಾರತದಾದ್ಯಂತ ಮಾತ್ರವಲ್ಲದೆ, ಆಸ್ಟ್ರೇಲಿಯಾ ಸೇರಿದಂತೆ ಪ್ರಮುಖ ವಿದೇಶಿ ಕೈಗಾರಿಕಾ ಸಂಸ್ಥೆಗಳೊಂದಿಗೆ ಸಂಯೋಜಿತ ಉದ್ಯೋಗಾವಕಾಶ ಹಾಗೂ ಮಾರ್ಗದರ್ಶನ ನೀಡಲಾಗುತ್ತದೆ. ಗ್ರಾಮೀಣ ಮಹಿಳೆಯರು ಸಹ ಆರ್ಥಿಕವಾಗಿ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಸಂಸ್ಥೆಯು ವೇದಿಕೆ ಕಲ್ಪಿಸಿದೆ. ಮಹಿಳೆಯರಿಗಾಗಿ 6 ತಿಂಗಳ ಅವಧಿಯ ವಿಶೇಷ ಫ್ಯಾಷನ್ ಡಿಸೈನ್ ಕೋರ್ಸ್ ಹಮ್ಮಿಕೊಳ್ಳಲಾಗಿದ್ದು, ಸ್ಕಿಲ್ಡ್ ಟೈಲರಿಂಗ್, ಉಡುಪು ತಯಾರಿಕೆ, ಎಂಬ್ರಾಯ್ಡರಿ ಮತ್ತು ಫ್ಯಾಷನ್ ಟ್ರೆಂಡ್ಸ್ ಮುಂತಾದ ತರಬೇತಿಗಳನ್ನು ನೀಡಲಾಗುತ್ತಿದೆ. ಎಸ್‌ಎಸ್‌ಎಲ್‌ಸಿ ಪಾಸ್, ಫೇಲ್ ಆದವರೂ ಅರ್ಜಿ ಸಲ್ಲಿಸಬಹುದಾಗಿದೆ.


ಇಂದು ಪುಸ್ತಕ ಬಿಡುಗಡೆ

ಧಾರವಾಡ: ಡಾ.ಸಂತೋಷ ಹಾನಗಲ್ಲ ಅವರ 'ದಿ ಲ್ಯಾಂಪ್ ಬೇರರ್' ಪುಸ್ತಕ ಲೋಕಾರ್ಪಣೆ ಸಮಾರಂಭ ಜೂ.16ರಂದು ಸಂಜೆ 6ಕ್ಕೆ ಕರ್ನಾಟಕ ವಿದ್ಯಾವರ್ಧಕ ಸಂಘದ ರಾ.ಹ.ದೇಶಪಾಂಡೆ ಭವನದಲ್ಲಿ ಆಯೋಜಿಸಿದೆ. ಡಾ.ಮಲ್ಲಿಕಾರ್ಜುನ ಸ್ವಾಮೀಜಿ, ಡಾ.ಬಸವಲಿಂಗ ಪಟ್ಟದೇವರು, ಡಾ.ಗುರುಮಹಾಂತ ಸ್ವಾಮೀಜಿ, ಡಾ.ಅಲ್ಲಮಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಗುರುಬಸವ ಪಟ್ಟದೇವರು ಸಮ್ಮುಖ ವಹಿಸಲಿದ್ದಾರೆ. ಕವಿಸಂ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಅಧ್ಯಕ್ಷತೆ ವಹಿಸುವರು. ಕವಿಸಂ ಡಾ. ಎ.ಎಂ.ಖಾನ್ ಕೃತಿ ಲೋಕಾರ್ಪಣೆ ಮಾಡುವರು. ಡಾ.ಮಹಾಂತಪ್ರಭು ಶ್ರೀಗಳು ಕೃತಿ ಪರಿಚಯಿಸಲಿದ್ದಾರೆ. ಕೃತಿಯ ಲೇಖಕ ಡಾ.ಸಂತೋಷ ಹಾನಗಲ್ಲ, ಡಾ.ಮನೋಜ ಹಾಗೂ ಡಾ. ವೈಜನಾಥ ಬುಟ್ಟೆ ಪಾಲ್ಗೊಳ್ಳಲಿದ್ದಾರೆ.

ಜೂ.21ಕ್ಕೆ ಯೋಗ ದಿನ

ಧಾರವಾಡ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆಯುಷ್ ಇಲಾಖೆಯಿಂದ ಯೋಗ ದಿನಾಚರಣೆ ಕಾರ್ಯಕ್ರಮ ಜೂ.21ರಂದು ಬೆಳಗ್ಗೆ 6.30ರಿಂದ 8ರವರೆಗೆ ನಗರದ ಡಾ. ಆರ್.ಎನ್.ಶೆಟ್ಟಿ ಕ್ರೀಡಾಂಗಣದಲ್ಲಿ ಜರುಗಲಿದೆ ಎಂದು ಜಿಲ್ಲಾ ಆಯುಷ್ ಅಧಿಕಾರಿ ಡಾ. ಗಣೇಶ ಕಬಾಡೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿ. ಗೋವಿಂದರಾವ್ ನಿಧನ



ಹುಬ್ಬಳ್ಳಿ: ಇಲ್ಲಿಯ ಹೊಸೂರಿನ ಸಿದ್ದಲಿಂಗೇಶ್ವರ ಕಾಲೋನಿ ನಿವಾಸಿ, ಸಾಮಾಜಿಕ ಹೋರಾಟಗಾರ ಡಿ. ಗೋವಿಂದರಾವ್(87) ಸೋಮವಾರ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು, ಪುತ್ರಿ ಇದ್ದಾರೆ. ಹೆಗ್ಗೇರಿಯ ಮುಕ್ತಿಧಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು. ಶ್ರೀ ಗಜಾನನ ಮಹಾ ಮಂಡಳದ ಸಂಸ್ಥಾಪಕ ಅಧ್ಯಕ್ಷರಾಗಿದ್ದ ಅವರು, ದುಶ್ಚಟಗಳ ನಿರ್ಮೂಲನೆ ಮತ್ತು ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ 'ಜಗಜ್ಯೋತಿ ಬಸವೇಶ್ವರ'ರ ಹೆಸರು ಇಡಬೇಕೆಂದು ಅಭಿಯಾನ ನಡೆಸಿದ್ದರು.



ನವಲಗುಂದ: ಅಮೇರಿಕ ವಾಷಿಂಗ್ಟನ್ ದ ಅಂಕಿ ಸಂಖ್ಯಾತ್ಮಕ ವಿಶ್ವವಿದ್ಯಾಲಯದವರು ತಾಲೂಕಿನ ಆರೇಕುರಹಟ್ಟಿ ಗ್ರಾಮದ ಧರ್ಮರಡ್ಡಿ ಕೃಷ್ಣರಡ್ಡಿ ಲಕ್ಕಣ್ಣವರ ಅವರ ಕೃಷಿ ಯಂತ್ರೋಪಕರಣ ತಯಾರಿಕೆಯಲ್ಲಿನ ಗಣನೀಯ ಸಾಧನೆ ಪರಿಗಣಿಸಿ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿದೆ. ಈ ಹಿನ್ನೆಲೆ ಕಾಲವಾಡ ಗ್ರಾಮದ ರೆಡ್ಡಿ ಸಮಾಜದವರು ಅವರನ್ನು ಸನ್ಮಾನಿಸಿದರು. ಎಚ್.ಎನ್. ಲಿಂಗರಡ್ಡಿ, ಸಣ್ಣನಿಂಗಪ್ಪ ಲಿಂಗರಡ್ಡಿ, ಪಿ.ವೈ. ಬಾಡಗಿ, ಕೃಷ್ಣಪ್ಪ ಸೋಮಾಪುರ, ಪಿ.ಎಚ್. ಕೋನರಡ್ಡಿ, ರಾಮಣ್ಣ ಮಣೇಣ್ಣವರ, ಫಕೀರಡ್ಡಿ ದಾಸರಡ್ಡಿ, ಗೋವಿಂದರಡ್ಡಿ ಮಣೇಣ್ಣವರ, ಸುರೇಶ ಬಾಡಗಿ ಇತರರಿದ್ದರು.

ಬೇಡಿಕೆಗಳಿಗೆ ಸ್ಪಂದಿಸಿದ ಕೇಂದ್ರ ಸರ್ಕಾರ: ನಾಯಕ

ಧಾರವಾಡ: ದೆಹಲಿಯ ಕೆಂಪುಕೋಟೆ ಮೈದಾನದಲ್ಲಿ ಇತ್ತೀಚೆಗೆ ಜನಜಾತಿ ಸಂಸ್ಕೃತಿ, ಪರಂಪರೆ, ನಂಬಿಕೆ ಮತ್ತು ಅಸ್ಮಿತೆಯ ಭವ್ಯ ರಾಷ್ಟ್ರೀಯ ಪ್ರತೀಕವಾಗಿ ಆಯೋಜಿಸಿದ್ದ ಜನಜಾತಿ ಸಮಾಗಮದಲ್ಲಿ ಕೇಂದ್ರ ಸರ್ಕಾರವು ನಮ್ಮ ಕೆಲವು ಬೇಡಿಕೆಗಳಿಗೆ ಸ್ಪಂದನೆ ನೀಡಿದೆ ಎಂದು ಗಿರಿಜನ ಸುರಕ್ಷಾ ವೇದಿಕೆಯ ರಾಜ್ಯ ಸಂಯೋಜಕ ಗಂಗಾಧರ ನಾಯಕ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಮೇ 24ರಂದು ನಡೆದ ಜನಜಾತಿ ಸಮಾಗಮದಲ್ಲಿ ದೇಶದ 500ಕ್ಕೂ ಹೆಚ್ಚು ಸಮುದಾಯಗಳಿಂದ ಲಕ್ಷಾಂತರ ಜನ ಪಾಲ್ಗೊಂಡು ಜಾಗೃತಿ ಮೂಡಿಸಿದರು. ಇದೇ ವೇಳೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು, ಕಳೆದ 75 ವರ್ಷಗಳಿಂದ ಬಾಕಿ ಉಳಿದಿರುವ ನ್ಯಾಯಯುತ ಬೇಡಿಕೆಯ ರಾಷ್ಟ್ರೀಯ ಪುನರುಜ್ಜೀವನ ಆಗಿದೆ ಎಂಬುದಾಗಿ ಹೇಳುವ ಜತೆಗೆ ನಮ್ಮ ಬೇಡಿಕೆಗಳನ್ನು ಈಡೇರಿಸುವ ಬಗ್ಗೆ ಸ್ಪಂದನೆ ನೀಡಿದ್ದಾರೆ ಎಂದರು. ಮೇ 28ರಂದು ಜನಜಾತಿ ಸುರಕ್ಷಾ ಮಂಚ್‌ನ ಪ್ರತಿನಿಧಿ ಮಂಡಳಿಯು ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಿ, ಜನಜಾತಿ ಕಲ್ಯಾಣಕ್ಕೆ ಸಂಬಂಧಿಸಿದ ಕಾನೂನು ಮತ್ತು ಸಂವಿಧಾನಾತ್ಮಕ ಕುರಿತು ಮಾತನಾಡಲಾಗಿದೆ ಎಂದರು. ನಮ್ಮ ಸಾಂಪ್ರದಾಯಿಕ ಸಂಸ್ಕೃತಿ, ಆಚರಣೆಗಳು ಮತ್ತು ಸಾಮಾಜಿಕ ಸಂಪ್ರದಾಯಗಳನ್ನು ತ್ಯಜಿಸುವ ವ್ಯಕ್ತಿಗೆ ಅನುಸೂಚಿತ ಜನಜಾತಿಯ ಸಂವಿಧಾನಾತ್ಮಕ ಸ್ಥಾನಮಾನ ಹಾಗೂ ಅದರೊಂದಿಗೆ ಸಂಬಂಧಿಸಿದ ಸೌಲಭ್ಯಗಳು ಕೊಡಬಾರದು ಎಂದರು. ಸುದ್ದಿಗೋಷ್ಠಿಯಲ್ಲಿ ಧೋಂಡು ಪಾಟೀಲ, ಕರಬಸಪ್ಪ ರೇವಡಿಹಾಳ, ವಿಶ್ವನಾಥ ಪೂಜಾರ ಇದ್ದರು.



ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯ ವಾರ್ಡ್ ನಂ 67 ರಲ್ಲಿ ಸ್ವಚ್ಛ ಸಂಡೆ ಅಭಿಯಾನದ ಅಂಗವಾಗಿ ಸತತವಾಗಿ 16 ನೇ ವಾರ ಬಮ್ಮಾಪುರ ಓಣಿ ಹಾಗೂ ವೀರಭದ್ರೇಶ್ವರ ದೇವಸ್ಥಾನದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಾಮೂಹಿಕ ಸ್ವಚ್ಛತಾ ಅಭಿಯಾನವನ್ನು ಕೈಗೊಂಡು ಫಾಗಿಂಗ್ ಮಾಡಿಸಲಾಯಿತು.

ಸಂಗೀತ ದತ್ತಿ ಕಾರ್ಯಕ್ರಮ | ಕುಲಪತಿ ಡಾ.ಖಾನ್ ಅಭಿಮತ

ಬಸವತತ್ವ ಸಾರ್ವಕಾಲಿಕ ಶ್ರೇಷ್ಠ

ಧಾರವಾಡ: ಪೃಥ್ವಿಯ ಮೇಲಿನ ಸರ್ವಜನಾಂಗದ ಒಳಿತು ಬಯಸುವ ಜಗಜ್ಯೋತಿ ಬಸವೇಶ್ವರರ ಚಿಂತನೆಗಳು ಸಾರ್ವಕಾಲಿಕ ಶ್ರೇಷ್ಠ. ಕರ್ನಾಟಕ ವಿಶ್ವವಿದ್ಯಾಲಯದ ಬಸವ ಪೀಠ ಮಾದರಿಯಾಗಿದೆ ಎಂದು ಕವಿವಿಯ ಕುಲಪತಿ ಪ್ರೊ. ಎ.ಎಂ.ಖಾನ್ ಅಭಿಪ್ರಾಯಪಟ್ಟರು.

ನಗರದ ಕರ್ನಾಟಕ ವಿಶ್ವವಿದ್ಯಾಲಯದ ಬಸವೇಶ್ವರ ಪೀಠವು ಅಲ್ಲಮಪ್ರಭು ಸಭಾ ಭವನದಲ್ಲಿ ಆಯೋಜಿಸಿದ್ದ ವಿದೂಷಿ ಡಾ.ನಂದಾ ಪಾಟೀಲ ವಚನ ಸಂಗೀತ ದತ್ತಿ ಉದ್ಘಾಟಿಸಿದ ಅವರು, ಶರಣರ ತತ್ವಗಳಲ್ಲಿ ಬದುಕಿನ ಸಾರ ಅಡಕವಾಗಿದೆ. ಕವಿವಿಯ ಬಸವೇಶ್ವರ ಅತ್ಯಂತ ಪೀಠವು ಬಸವಣ್ಣನವರ ವಿಚಾರಗಳನ್ನು ಜನರಿಗೆ ತಲುಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ ಎಂದರು.

ಕವಿವಿಯ ಕುಲಸಚಿವ ಪ್ರೊ. ಮೃತ್ಯುಂಜಯ ಅಗಡಿ ಮಾತನಾಡಿ, ಸಾಹಿತ್ಯ ಮತ್ತು ಸಂಗೀತಕ್ಕೆ ಅವಿನಾಭಾವ ಸಂಬಂಧವಿದೆ. ವಚನ ಸಾಹಿತ್ಯವು ಸಂಗೀತದ ಮೂಲಕ ಹೆಚ್ಚೆಚ್ಚು ಜನರನ್ನು ತಲುಪಲು ಸಾಧ್ಯವಾಗಿದೆ ಎಂದರು. ಪ್ಲೇಟೋ, ಕಾರ್ಲ್ ಮಾರ್ಕ್ಸ್, ರೂಸೋ, ಅರಿಸ್ಟಾಟಲ್ ಅವರ ಎಲ್ಲ ಚಿಂತನೆಗಳು ಬಸವೇಶ್ವರರ ಚಿಂತನೆಗಳಲ್ಲಿ ಕಾಣುತ್ತೇವೆ. ಇಂಥ ಶ್ರೇಷ್ಠ ಚಿಂತನೆ ವಿದ್ಯಾರ್ಥಿಗಳು ಅಳವಡಿಸಿಕೊಂಡು ಬೆಳೆಯಲು ದತ್ತಿದಾನಿ ಪ್ರೊ. ಮಲ್ಲಿಕಾರ್ಜುನ ಪಾಟೀಲ ಸಲಹೆ ನೀಡಿದರು. ಬಸವೇಶ್ವರ ಪೀಠದ ಸಂಯೋಜಕ ಪ್ರೊ. ನಿಜಲಿಂಗಪ್ಪ ಮಟ್ಟಿಹಾಳ ಮಾತನಾಡಿ, ಬಸವೇಶ್ವರ ಪೀಠವು ಸರ್ಕಾರದ ನೆರವಿಲ್ಲದೆ, ಕೇವಲ ದಾಸೋಹದ ಮೂಲಕ ಗುಣಮಟ್ಟದ ಕಾರ್ಯಕ್ರಮ ನಡೆಸಿಕೊಂಡು ಬಂದಿರುವುದು ಮಾದರಿಯಾಗಿದೆ ಎಂದರು. ಡಾ.ಶಕ್ತಿ ಪಾಟೀಲ ವಚನ ಸಂಗೀತ ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ವಿದ್ವಾಂಸ ಡಾ.ವೀರಣ್ಣ ರಾಜೂರ, ಡಾ. ಸಿ.ಎಂ.ಕುಂದಗೋಳ, ಡಾ. ಅನುಸೂಯ ಕಾಂಬಳೆ ಡಾ.ಮಲ್ಲಪ್ಪ ಬಂಡಿ, ಪ್ರೊ. ನಿಜಲಿಂಗಪ್ಪ ಮಟ್ಟಿಹಾಳ ಪ್ರೊ.ನಂದಾ ಪಾಟೀಲ ಇತರರು ಇದ್ದರು.



> ವಚನ ಸಂಗೀತ ದತ್ತಿ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ವಚನ ಸಾಹಿತ್ಯ ಮತ್ತು ಸಂಗೀತದ ಆಸಕ್ತಿಯ ಜೊತೆಗೆ ಅಭಿರುಚಿ ಮೂಡಿಸಲು ಸಹಕಾರಿ. ಸಂಗೀತದಲ್ಲಿ ಮಾನಸಿಕ ಖಾಯಿಲೆಗಳು ಗುಣಪಡಿಸುವ ಗುಣವಿದೆ. ಹೀಗಾಗಿ ಸಂಗೀತ ಎಲ್ಲರೂ ಆಲಿಸಲಬೇಕು.
>
> ■ **ಮೃತ್ಯುಂಜಯ ಅಗಡಿ,** ಕವಿವಿ ಕುಲಸಚಿವ

ಅವಹೇಳನಕಾರಿ ಹೇಳಿಕೆ ಖಂಡಿಸಿ ಪ್ರತಿಭಟನೆ

ಕುಂದಗೋಳ: ಪಟ್ಟಣದಲ್ಲಿ ಇತ್ತೀಚೆಗೆ ನಡೆದ ಪ್ರತಿಭಟನೆಯಲ್ಲಿ ಬ್ರಾಹ್ಮಣ ಸಮಾಜದ ಕುರಿತು ಅವಹೇಳನಕಾರಿ ಹೇಳಿಕೆಗಳು ಕೇಳಿಬಂದಿವೆ ಎಂದು ಆರೋಪಿಸಿ ಪಟ್ಟಣದ ತಹಶೀಲ್ದಾರ್ ಕಚೇರಿ ಆವರಣದಲ್ಲಿ ಸೋಮವಾರ ಕೆಲ ಕಾಲ ಪ್ರತಿಭಟನೆ ನಡೆಸಿ ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಅಥವಾ ಸಾರ್ವಜನಿಕವಾಗಿ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿ ತಾಲೂಕು ಬ್ರಾಹ್ಮಣ ಸಂಘದ ಅಧ್ಯಕ್ಷರು, ಸದಸ್ಯರು ಹಾಗೂ ಸಮಾಜವರಿಂದ ತಹಶೀಲ್ದಾರ್ ರಾಜು ಮಾವರಕರ ಹಾಗೂ ಪಿಎಸ್ಐ ಶರಣಬಸಪ್ಪ ಸಂಗಳದ ಅವರ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.

ಇತ್ತೀಚೆಗೆ ಅಂಜುಮನ್-ಎ-ಇಸ್ಲಾಂ ಸಮಿತಿ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಗೋಹತ್ಯೆ ನಿಷೇಧ ಹಾಗೂ ಗೋಮಾತೆಯನ್ನು ರಾಷ್ಟ್ರೀಯ ಪ್ರಾಣಿಯನ್ನಾಗಿ ಘೋಷಿಸುವ ಕುರಿತು ಆಗ್ರಹ ವ್ಯಕ್ತವಾಗಿದ್ದ ವೇಳೆ ಬ್ರಾಹ್ಮಣ ಸಮಾಜದ ವಿರುದ್ಧ ಆಕ್ಷೇಪಾರ್ಹ ಹೇಳಿಕೆಗಳು ಕೇಳಿಬಂದಿವೆ ಎಂದು ದೂರಿದರು. ಸಮಾಜದ ಭಾವನೆಗಳಿಗೆ ಧಕ್ಕೆ ಉಂಟುಮಾಡುವ ರೀತಿಯ ಹೇಳಿಕೆಗಳನ್ನು ನೀಡಿರುವವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಪ್ರಕಾರ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ಆರೋಪಿಗಳಿಗೆ ದಾಖಲೆಗಳಿದ್ದರೆ ಅವುಗಳನ್ನು ಬಹಿರಂಗಪಡಿಸಬೇಕು. ಇಲ್ಲವಾದಲ್ಲಿ ಸಾರ್ವಜನಿಕವಾಗಿ ಕ್ಷಮೆಯಾಚನೆ ಮಾಡಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ. ಬ್ರಾಹ್ಮಣ ಸಮಾಜದ ಗೌರವಕ್ಕೆ ಧಕ್ಕೆ ಉಂಟಾಗದಂತೆ ಸರ್ಕಾರ ಹಾಗೂ ಜಿಲ್ಲಾಡಳಿತ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಂಘದ ಪದಾಧಿಕಾರಿಗಳು ಆಗ್ರಹಿಸಿದರು.

ರಾಜ್ಯ ಬ್ರಾಹ್ಮಣ ಸಮಾಜದ ಉಪಾಧ್ಯಕ್ಷ ಲಕ್ಷ್ಮಣ ಕುಲಕರ್ಣಿ, ರಮೇಶ ಕುಲಕರ್ಣಿ, ಮೋಹನ ನಾಡಿಗೇರ್, ಹರ್ಷಭಟ್ ಜೋಶಿ, ಟಿ.ಕೆ.ಕುಲಕರ್ಣಿ, ಆರ್.ಎಸ್. ಸಪ್ರೆ, ಶಾಮ ಸುಂದರ ದೇಸಾಯಿ, ಪ್ರಕಾಶ ನಾಡಗೀರ, ವಿಶ್ವಾಮ ಭರ ಪಾಟೀಲ, ಪವನಪ್ರಸಾದ ಪಾಳಂದೆ, ನರಸಿಂಹ ಭಟ್ಟ ಜೋಶಿ, ರಂಗನಾಥ ಪಾಟೀಲ, ಕೇದಾರ ದೇಸಾಯಿ, ಸುನಿಲ ಕರೋಗಲ್, ಕಿರಣ ಹೊಸ್ಮಿ, ಸತೀಶ ದೇಸಾಯಿ, ವಿನಾಯಕ ಕುಲಕರ್ಣಿ, ಗಿರೀಶ ಪಾಟೀಲ, ಕೃಷ್ಣ ಕುಲಕರ್ಣಿ ಸಾಹಸ ಶಂಕರ ಅಗ್ನಿಹೋತ್ರಿ, ಗಜಾನನ ನಾಡಿಗೇರ, ಅಪ್ಪಣ್ಣ ಪಾಟೀಲ ಸೇರಿದಂತೆ ಅನೇಕರಿದ್ದರು.



ನವೋದಯ ವಿದ್ಯಾಲಯಕ್ಕೆ ಡಿಸಿ ಭೇಟಿ

ಧಾರವಾಡ: ಇಲ್ಲಿನ ಜವಾಹರ್ ನವೋದಯ ವಿದ್ಯಾಲಯಕ್ಕೆ ಜಿಲ್ಲಾಧಿಕಾರಿ ಸ್ನೇಹಲ್ ಆರ್., ಜಿಪಂ ಸಿಇಒ ಭುವನೇಶ ಪಾಟೀಲ, ಪ್ರೊಬೇಷನರಿ ಐಎಎಸ್ ಅಧಿಕಾರಿ ಅನುಪ್ರಿಯಾ ಸಾಕ್ಯಾ ಅವರು ಭೇಟಿ ನೀಡಿ, ವಿದ್ಯಾಲಯದ ವಿವಿಧ ಚಟುವಟಿಕೆಗಳನ್ನು ಪರಿಶೀಲಿಸಿದರು.

ವಿದ್ಯಾಲಯದ ತರಗತಿ ಕೊಠಡಿಗಳು, ಗ್ರಂಥಾಲಯ, ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಸಹಪಠ್ಯ ಚಟುವಟಿಕೆಗಳು, ಅಡುಗೆಮನೆ, ದಿನಸಿ ಸಾಮಗ್ರಿಗಳ ಉಗ್ರಾಣ, ವಿದ್ಯಾರ್ಥಿ ವಸತಿ ನಿಲಯಗಳು, ಕ್ರೀಡಾಂಗಣ, ಇತರೆ ಸೌಲಭ್ಯಗಳ ಪರಿಶೀಲನೆ ನಡೆಸಿದರು. ವಿದ್ಯಾರ್ಥಿಗಳೊಂದಿಗೆ ಸಮಾಲೋಚನೆ ನಡೆಸಿದ ಜಿಲ್ಲಾಧಿಕಾರಿಗಳು, ವಿದ್ಯಾರ್ಥಿಗಳ ಕನಸುಗಳು, ಗುರಿಗಳು, ಭವಿಷ್ಯದ ಯೋಜನೆಗಳ ಕುರಿತು ಸಂವಾದ ನಡೆಸಿದರು. ತಮ್ಮ ಸ್ಫೂರ್ತಿದಾಯಕ ಮಾತುಗಳಿಂದ ವಿದ್ಯಾರ್ಥಿಗಳ ಬೆಳವಣಿಗೆ ಸಾಧಿಸುವಂತೆ ಹುರಿದುಂಬಿಸಿದರು. ನಂತರ ವಿದ್ಯಾರ್ಥಿಗಳೊಂದಿಗೆ ಕುಳಿತು ಮಧ್ಯಾಹ್ನದ ಉಪಹಾರ ಸೇವಿಸಿ, ಅವರೊಂದಿಗೆ ಆತ್ಮೀಯವಾಗಿ ಬೆರೆತರು. ಜವಹರ್ ನವೋದಯ ವಿದ್ಯಾಲಯದ ಪ್ರಭಾರಿ ಪ್ರಾಚಾರ್ಯ ರಾಘವನ್ ಪಿ.ಕೆ., ಸಿಬ್ಬಂದಿ ವರ್ಗ, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.





ಹುಬ್ಬಳ್ಳಿ: ಛತ್ರಪತಿ ಶಿವಾಜಿ ಮಹಾರಾಜ ಸೇವಾ ಸಮಿತಿ ಹಾಗೂ ಕರ್ನಾಟಕ ಕ್ಷತ್ರಿಯ ಮರಾಠಾ ಸೇವಾ ಸಮಿತಿ ಸಹಯೋಗದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ಶ್ರೀರುದ್ರ ಪಠಣದಿಂದ ಅಹಂಕಾರ ನಿವಾರಣೆ

ಧಾರವಾಡ: ಮನುಷ್ಯನನ್ನು ಭೋಗದಿಂದ ಯೋಗದ ಕಡೆಗೆ, ಅಹಂಕಾರದಿಂದ ಸಮರ್ಪಣೆ ಕಡೆಗೆ ಬಂಧನದಿಂದ ಮೋಕ್ಷದ ಕಡೆಗೆ ನಡೆಸಲು ಶ್ರೀರುದ್ರ ಪಠಣ ಸಾಧನೆಯಾಗಿದೆ ಎಂದು ಅಮ್ಮಿನಬಾವಿ ಹಿರೇಮಠದ ಹಿರಿಯ ಶಾಂತಲಿಂಗ ಶ್ರೀಗಳು ಹೇಳಿದರು.

ಇಲ್ಲಿಯ ಮದಿಹಾಳದ ಸಿದ್ಧಾರೂಢ ಕಾಲೋನಿಯ ಆರೂಢ ರುದ್ರಬಳಗವು ಅಧಿಕ ಮಾಸದ ಅಂಗವಾಗಿ ತಾಲೂಕಿನ ಅಮ್ಮಿನಬಾವಿ ಸಂಸ್ಥಾನ ಪಂಚಗೃಹ ಹಿರೇಮಠಕ್ಕೆ ಆಗಮಿಸಿ ಶ್ರೀರುದ್ರ ಪಠಿಸಿದ ನಂತರ ಸದಸ್ಯರಿಗೆ ಶಿವಾಚಾರ್ಯರು ಆಶೀರ್ವಾದ ನೀಡಿದರು. ನಿತ್ಯವೂ ಶ್ರೀರುದ್ರದ ಪಠಣ ಮಾಡುವುದರಿಂದ ಕೇವಲ ಐಹಿಕ ಸುಖಗಳಷ್ಟೇ ಅಲ್ಲ, ಮನಶಾಂತಿ, ಚಿತ್ತಶುದ್ಧಿ, ಶಿವಭಕ್ತಿ, ಸರ್ವಜೀವ ಸಮದೃಷ್ಟಿ ಧರ್ಮನಿಷ್ಠೆ, ಆತ್ಮಜ್ಞಾನ ಫಲಗಳು ದೊರೆಯುತ್ತವೆ. ಶ್ರೀರುದ್ರ ಪಠಣದಿಂದ ಮಾನವನ 'ನಾನು' ಅಹಂಕಾರದ ನಿವಾರಣೆಯಾಗಲಿದೆ ಎಂದರು. ಸರೋಜ ಶಿಗ್ಗಿಹಿರೇಮಠ, ಸುಜಾತಾ ಪೂಜಾರ, ಕಮಲಾಕ್ಷಿ ಕಿತ್ತೂರ, ಸಾವಿತ್ರಿ ಬೆಳ್ಳಕ್ಕಿ ಸವಿತಾ ತುರಮರಿ, ಜ್ಯೋತಿ ಹೂಗಾರ, ಮಂಜುಳಾ ಕಾಲವಾಡ, ರಶ್ಮಿ ಮುಂದಿನಮನಿ, ಸವಿತಾ ಕಡಕೋಳ, ಮಹಾದೇವಿ ಹೆಗಡೆ, ವಿದ್ಯಾ ಹೆಬ್ಬಳ್ಳಿ ಸೇರಿದಂತೆ ಅನೇಕರು ಇದ್ದರು.



ಅಣಕು ನ್ಯಾಯಾಲಯ ಸ್ಪರ್ಧೆ: ಚಾಂಪಿಯನ್



ಹುಬ್ಬಳ್ಳಿ: ಇಲ್ಲಿನ ನವನಗರದ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕಾನೂನು ಶಾಲೆಯಲ್ಲಿ ಹಮ್ಮಿಕೊಂಡಿದ್ದ ರಾಜ್ಯಮಟ್ಟದ 12ನೇ ಅಣಕು ನ್ಯಾಯಾಲಯ ಸ್ಪರ್ಧೆಯಲ್ಲಿ ಬೆಂಗಳೂರಿನ ಕಾನೂನು ಮಹಾವಿದ್ಯಾಲಯ ಮತ್ತು ಕಾನೂನು ಅಧ್ಯಯನ ವಿಭಾಗದ ಪವನ ಕಲ್ಯಾಣ್ ಜಿ., ಮಂಜುನಾಥ ಡಿ., ಧನ್ಯಶ್ರೀ ಕೆ.ಎಲ್., ಅವರ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿತು.

ಗದಗನ ಕೆಎಲ್‌ಇ ಎಸ್.ಎ.ಮಾನ್ವಿ ಕಾನೂನು ಮಹಾವಿದ್ಯಾಲಯದ ರಂಜಿತಾ, ಶಿವಶಂಕರ, ಅರುಣ್ ಅವರ ತಂಡ ರನ್ನರ್‌ಅಪ್ ಸ್ಥಾನ ಪಡೆಯಿತು. ಅತ್ಯುತ್ತಮ ಮಹಿಳಾ ನ್ಯಾಯವಾದಿ ಪ್ರಶಸ್ತಿಯನ್ನು ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕಾನೂನು ಶಾಲೆಯ ಅಂದಾನಮ್ಮ ಬಳ್ಳಾರಿ, ಅತ್ಯುತ್ತಮ ಪುರುಷ ನ್ಯಾಯವಾದಿ ಪ್ರಶಸ್ತಿಯನ್ನು ಪುತ್ತೂರಿನ ವಿವೇಕಾನಂದ ಕಾನೂನು ಕಾಲೇಜಿನ ಅಭಿಷೇಕ್ ಎಂ. ಪಡೆದರು. ಅತ್ಯುತ್ತಮ ವಾದಪತ್ರ ಪ್ರಶಸ್ತಿಯನ್ನು ಗದಗನ ಕೆಎಲ್‌ಇ ಎಸ್.ಎ. ಮಾನ್ವಿ ಕಾನೂನು ಮಹಾವಿದ್ಯಾಲಯ, ಧಾರವಾಡದ ಕೆಎಲ್‌ಇಎಸ್ ಡಾ. ಜಿ.ಎಂ. ಪಾಟೀಲ ಕಾನೂನು ಮಹಾವಿದ್ಯಾಲಯ ತಮ್ಮದಾಗಿಸಿಕೊಂಡವು. ಭಾನುವಾರ ನಡೆದ ಸಮಾರೋಪ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಹೈಕೋರ್ಟ್ ನ್ಯಾಯಮೂರ್ತಿ ರಾಜೇಶ್ವರಿ ಹೆಗಡೆ ಮಾತನಾಡಿ, ಕರ್ತವ್ಯಗಳನ್ನು ಪಾಲಿಸಿದಾಗ ಮಾತ್ರ ಹಕ್ಕುಗಳ ರಕ್ಷಣೆ ಸಾಧ್ಯ. ಕಾನೂನು ವಿದ್ಯಾರ್ಥಿಗಳು ಪ್ರಾಮಾಣಿಕತೆ, ನಿಷ್ಠೆ, ಭಾಷಾ ಪ್ರಭುತ್ವ ಬೆಳೆಸಿಕೊಳ್ಳಬೇಕು ಎಂದರು. ಕುಲಪತಿ ಪ್ರೊ. ಸಿ.ಬಸವರಾಜು ಮಾತನಾಡಿ, ವಕೀಲರಿಗೆ ಭಾಷಾ ಪ್ರೌಢಿಮೆ, ವಾಕ್ ಚಾತುರ್ಯ, ನಿಪುಣತೆ ಬೇಕು. ವೃತ್ತಿಯ ಜೊತೆಗೆ ಸಾಮಾಜಿಕ ಜವಾಬ್ದಾರಿಯೂ ಮುಖ್ಯ ಎಂದರು. ವಕೀಲ ಬಸವಪ್ರಭು ಹೊಸಕೇರಿ ಮಾತನಾಡಿದರು. ಕಾನೂನು ಶಾಲೆ ನಿರ್ದೇಶಕಿ, ಡೀನ್ ಗೀತಾ ಕೌಲಗಿ, ಕುಲಸಚಿವ ಪ್ರೊ. ರತ್ನಾ ಭರಮಗೌಡರ್, ಸಂಯೋಜಕ ಡಿ. ರಂಗಸ್ವಾಮಿ, ಭೀಮಾಬಾಯಿ ಇದ್ದರು.

ವಿಶ್ವ ರಕ್ತದಾನಿಗಳ ದಿನ: ಜಾಗೃತಿ ಜಾಥಾ

ಹುಬ್ಬಳ್ಳಿ: ವಿಶ್ವ ರಕ್ತದಾನಿಗಳ ದಿನದ ಅಂಗವಾಗಿ ನಗರದ ಶಾ ದಾಮಜಿ ಜಾದವಜಿ ಛೇಡಾ ಮೆಮೋರಿಯಲ್ ರಾಷ್ಟ್ರೋತ್ಥಾನ ರಕ್ತ ಕೇಂದ್ರದ ವತಿಯಿಂದ ಸೋಮವಾರ ನಗರದಲ್ಲಿ ಜಾಗೃತಿ ಜಾಥಾ ನಡೆಯಿತು.

ಜಾಗೃತಿ ಜಾಥಾವು ನಿಲಿಜಿನ್ ರಸ್ತೆ ಮೂಲಕ ಹಳೆಯ ಕೋರ್ಟ್ ಸರ್ಕಲ್, ಸಂಗೊಳ್ಳಿ ರಾಯಣ್ಣ ವೃತ್ತ, ದಾಜಿಬಾನಪೇಟೆ, ಎಸ್.ಟಿ.ಭಂಡಾರಿ, ಮೂರುಸಾವಿರ ಮಠದಿಂದ ಮರಳಿ ನಿಲಿಜಿನ್ ರಸ್ತೆಯಲ್ಲಿ ರಕ್ತ ಭಂಡಾರ ತಲುಪಿತು.

ನಂತರ ನಡೆದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ದೇವರಹುಬ್ಬಳ್ಳಿಯ ಸಿದ್ಧಾರೂಢ ಮಠದ ಶ್ರೀ ಸಿದ್ಧ ಶಿವಯೋಗಿ ಸ್ವಾಮೀಜಿ, ರಕ್ತದಾನ ಮಾಡುವುದರಿಂದ ದೇಹದಲ್ಲಿನ ರಕ್ತ ಶುದ್ಧಿಯಾಗುತ್ತದೆ. ನಿರಂತರವಾಗಿ ರಕ್ತದಾನ ಮಾಡಬೇಕು. ಭಗವಂತ ನೀಡಿದ ಈ ಶರೀರದಿಂದ ಇನ್ನೊಬ್ಬರಿಗೆ ಉಪಯೋಗವಿದ್ದರೆ ದಾನ ಮಾಡಬೇಕು. ಇದರಲ್ಲಿ ರಕ್ತದಾನವೂ ಒಂದು ಎಂದರು.

ರಾಷ್ಟ್ರೋತ್ಥಾನ ಬ್ಲಡ್ ಬ್ಯಾಂಕ್ ಮುಖ್ಯಸ್ಥ ದತ್ತಮೂರ್ತಿ ಕುಲಕರ್ಣಿ 95 ಬಾರಿ, ಶ್ರೀಧರ ಜೋಶಿ 60 ಸಲ, ವಿನೋದಕುಮಾರ ಪಟ್ವಾ 71ನೇ ಬಾರಿ ರಕ್ತದಾನಮಾಡಿದರು. ಅಲ್ಲದೆ, ಬಹಳಷ್ಟು ಜನರು ರಕ್ತದಾನ ಮಾಡಿದರು. ಈ ವೇಳೆ ರಕ್ತ ದಾನಿಗಳ ಸನ್ಮಾನಿಸಲಾಯಿತು.

ಸ್ವರ್ಣ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕಸ್ವರ್ಣ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಡಾ.ವಿ.ಎಸ್.ವಿ.ಪ್ರಸಾದ, ವಿಎಕೆ ಫೌಂಡೇಷನ್ ಸಂಸ್ಥಾಪಕ ವೆಂಕಟೇಶ ಕಾಟವೆ, ಶಿವಲಿಂಗಯ್ಯ ಶಿವಯೋಗಿಮಠ, ಡ್ಯಾಸ್ಕೋ ಅಧಿಕಾರಿ ಡಾ.ರಾಘವೇಂದ್ರ ಬೋವರ, ಸಹಾಯಕ ಡ್ರಗ್ ಕಂಟ್ರೋಲರ್ ನೀಲಿಮಾ ಅಶೋಕ ಕೊಟ್ಟಣ, ಅಜಯ ಮುದುಗಲ್, ವೀರೇಂದ್ರ ಛೇಡಾ, ರವಿ ನಾಯಕ, ಡಾ.ಎಸ್.ಎಸ್.ಸಂಗೊಳ್ಳಿ, ಡಾ.ಸಿ.ಡಿ.ಕಳಸಗೌಡರ, ನವೀನ ಚಿಕ್ಕಮಠ, ಬಸವರಾಜ ದೇವರಮನಿ, ವಿವಿಧ ಶಾಲಾ ಕಾಲೇಜ್‌ಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಶಿಕ್ಷಕರು ಭವಿಷ್ಯ ರೂಪಿಸುವ ಶಿಲ್ಪಿಗಳು



ಧಾರವಾಡ: ನಗರದ ಜನತಾ ಶಿಕ್ಷಣ ಸಮಿತಿಯಲ್ಲಿ ನಡೆದ ಸಮಾರಂಭದಲ್ಲಿ ಉತ್ತರ ಕರ್ನಾಟಕದ 35 ಶಾಲೆಗಳ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ಹಾಗೂ ಬೋಧಿಸಿದ ಉತ್ತಮ ಶಿಕ್ಷಕರಿಗೆ ಸನ್ಮಾನಿಸಿಸಲಾಯಿತು.

ಆಡಳಿತಾಧಿಕಾರಿ ಅರಿಹಂತ ಪ್ರಸಾದ ಮಾತನಾಡಿ, ವಿದ್ಯಾರ್ಥಿಗಳ ಕಠಿಣ ಪರಿಶ್ರಮ, ಸಮರ್ಪಣೆ ಹಾಗೂ ಸಾಧನೆ ಶ್ಲಾಘಿಸಿದ ಅವರು, ಶಿಕ್ಷಕರು ಕೇವಲ ಜ್ಞಾನ ಹಂಚುವ ಯಂತ್ರಗಳಲ್ಲ, ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಶಿಲ್ಪಿಗಳು ಎಂದರು.

ಕಠಿಣ ಪರಿಶ್ರಮ, ಶಿಸ್ತಿನ ಅಧ್ಯಯನ ಮತ್ತು ಶಿಕ್ಷಕರ ಮಾರ್ಗದರ್ಶನವೇ ಸಾಧನೆಗೆ ಕಾರಣವಾಗಿದೆ. ಅಲ್ಲದೇ ಪೋಷಕರ ಬೆಂಬಲವೂ ಕೂಡ ಸಾಧನೆ ಮಾಡಲು ಹೆಚ್ಚು ಪ್ರೇರಣೆಯಾಗಿದೆ ಎಂದು ವಿದ್ಯಾರ್ಥಿಗಳು ಅನಿಸಿಕೆ ಹಂಚಿಕೊಂಡರು. ಸುಮಾರು 37 ಶಿಕ್ಷಕರಿಗೆ ಹಾಗೂ 53 ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ಪ್ರಾಚಾರ್ಯೆ ರಜನಿ ಪಾಟೀಲ, ಡಾ.ಮಂಜುನಾಥ ಮಾನ್ವಿ, ವಾಣಿಶ್ರೀ ಕೆ. ಅಗಸ್ಟಿನ್ ಫರ್ನಾಂಡಿಸ್ ಅನೇಕರು ಇದ್ದರು.

ಹಿಂದೂಸ್ತಾನಿ ಸಂಗೀತದ ಸತ್ವ ಸಾರ್ವಕಾಲಿಕ

ಹುಬ್ಬಳ್ಳಿ: ಭಾರತೀಯ ಶಾಸ್ತ್ರೀಯ ಸಂಗೀತವು ಮಾನಸಿಕ ಶಾಂತಿ ಮತ್ತು ಸಂಸ್ಕಾರವನ್ನು ನೀಡುವ ಅದ್ಭುತ ಶಕ್ತಿಯನ್ನು ಹೊಂದಿದೆ. ಹಿಂದೂಸ್ತಾನಿ ಸಂಗೀತದ ಸತ್ವ ಎಂದೂ ಮಾಸದು ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರ ಆಪ್ತ ಕಾರ್ಯದರ್ಶಿ ಮುರಲೀಧರ ಮಳಗಿ ಹೇಳಿದರು.

ನಗರದ ಸಂಸ್ಕಾರ ಭಾರತಿ, ಸುನಿಧಿ ಕಲಾ ಸೌರಭ ಹಾಗೂ ಸಿಂಫೋನಿ ಇನ್‌ಸ್ಟಿಟ್ಯೂಟ್ ಆಫ್ ಮ್ಯೂಸಿಕ್ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಲಾಗಿದ್ದ 'ಸ್ವರ ಸಂಭ್ರಮ' ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಹುಬ್ಬಳ್ಳಿ-ಧಾರವಾಡ ಅವಳಿ ನಗರವು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಲೋಕಕ್ಕೆ ಜಾಗತಿಕ ಮಟ್ಟದ ದಿಗ್ಗಜರನ್ನು ಕೊಡುಗೆಯಾಗಿ ನೀಡಿದ ಪುಣ್ಯಭೂಮಿಯಾಗಿದೆ. ಇಂತಹ ಮಣ್ಣಿನಲ್ಲಿ ಇಂದಿನ ಯುವ ಪೀಳಿಗೆಯು ಶಾಸ್ತ್ರೀಯ ಸಂಗೀತದ ಕಡೆಗೆ ಆಕರ್ಷಿತರಾಗುತ್ತಿರುವುದು ಮತ್ತು ಮೂರು ಪ್ರಮುಖ ಸಂಸ್ಥೆಗಳು ಒಟ್ಟಾಗಿ ಈ ಸ್ವರ ಸಂಭ್ರಮವನ್ನು ಆಯೋಜಿಸಿರುವುದು ಶ್ಲಾಘನೀಯ ಎಂದರು. ಶಾಸ್ತ್ರೀಯ ಸಂಗೀತದ ರಾಗಗಳು ಮತ್ತು ಸ್ವರಗಳು ಕೇವಲ ಮನರಂಜನೆಯಲ್ಲ, ಅವು ನಮ್ಮ ಸಂಸ್ಕೃತಿ ಮತ್ತು ದೈವಿಕ ಭಾವನೆಯನ್ನು ಜಾಗೃತಗೊಳಿಸುತ್ತವೆ. ಪಾಲಕರು ತಮ್ಮ ಮಕ್ಕಳನ್ನು ಶಿಕ್ಷಣದ ಜೊತೆಗೆ ನಮ್ಮ ಭಾರತೀಯ ಕಲೆಗಳತ್ತ ಆಸಕ್ತರಾಗಲು ಪ್ರೇರೇಪಿಸಲು ಹೇಳಿದರು. ಹಿರಿಯ ತಜ್ಞವೈದ್ಯ ಡಾ. ರಾಮಚಂದ್ರ ಕೌಲಗಿ ಉದ್ಘಾಟಿಸಿದರು. ವಾಸುದೇವ ಪಾಟೀಲ, ವಿನಯ ನಾಯಕ, ಸುಭಾಸ ನರೇಂದ್ರ ಉಪಸ್ಥಿತರಿದ್ದರು. ಸಂಗೀತಸಭೆಯಲ್ಲಿ ಕಲಾವಿದರ ಸ್ವರ ಲಹರಿಯು ನೆರೆದಿದ್ದ ಸಂಗೀತಾಸಕ್ತರನ್ನು ಮಂತ್ರಮುಗ್ಧರನ್ನಾಗಿಸಿತು.



ದಾಸ ಸಂಕೀರ್ತನೆ: ಲಕ್ಷ ಕುಂಕುಮಾರ್ಚನೆ



ಕಲಘಟಗಿ: ಪಟ್ಟಣದ ಶ್ರೀ ಮಹಾಲಕ್ಷ್ಮಿ ದೇವಸ್ಥಾನದಲ್ಲಿ ಶ್ರೀ ಶಾರದಾ ಭಜನಾ ಮಂಡಳಿ ವತಿಯಿಂದ ಅಧಿಕ ಮಾಸ ಪರಿಯಂತ ನಡೆದ ದಾಸ ಸಂಕೀರ್ತನೆ ಕಾರ್ಯಕ್ರಮದ ಸಾಂಗತಾ ನಿಮಿತ್ತ ಲಕ್ಷ ಕುಂಕುಮಾರ್ಚನೆಯನ್ನು ನೆರವೇರಿಸಲಾಯಿತು.

ಬೆಳಗ್ಗೆ ದೇವಿಗೆ ಶ್ರೀ ಸೂಕ್ತ ಪೂರ್ವಕ ವಿಶೇಷ ಅಭಿಷೇಕ, ಅಲಂಕಾರವನ್ನು ನೆರವೇರಿಸಲಾಯಿತು. ದೇವಸ್ಥಾನದ ಅರ್ಚಕ ವೇ. ಮೂ. ಚಿದಂಬರ ಜೋಷಿ ಅವರು ಕಾರ್ಯಕ್ರಮದ ನೇತೃತ್ವ ವಹಿಸಿ ಅಧಿಕ ಮಾಸದ ಮಹತ್ವ ಹಾಗೂ ಆಚರಣೆಯ ಫಲ ವಿವರಿಸಿದರು.

ಈ ಸಂಧರ್ಭದಲ್ಲಿ ಶಾರದಾ ಮಂಡಳಿಯ ಸರ್ವ ಸದಸ್ಯರು, ಲಕ್ಷ್ಮೀಬಾಯಿ ಮ ಕಡ್ಲಾಸ್ಕರ ಪಾಂಡುರಂಗಜೋಷಿ ,ಅಂಕಿತಾ ಕಡ್ಲಾಸ್ಕರ್, ನಂದಾ, ರೋಹಿಣಿ, ಮುರಳಿಧರ ಪೂಜಾರ ಹಾಗೂ ಅನೇಕ ಭಕ್ತಾದಿಗಳು ಪಾಲ್ಗೊಂಡರು.

ವಿದ್ಯಾರ್ಥಿಗಳು ಉತ್ತಮವಾಗಿ ಆಲೋಚಿಸಲಿ

ನವಲಗುಂದ: ಉತ್ತಮವಾಗಿ ಆಲೋಚಿಸಿ ಬುದ್ಧಿ ಚುರುಕುಗೊಳಿಸಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಅಜಾತ ನಾಗಲಿಂಗ ಮಹಾಸ್ವಾಮಿ ಮಠದ ವೀರೇಂದ್ರ ಶ್ರೀಗಳು ಹೇಳಿದರು.

ಅವರು ಶ್ರೀ ಜಗದ್ಗುರು ಅಜಾತ ನಾಗಲಿಂಗ ಮಹಾಸ್ವಾಮಿ ಮಠದ ಸಭಾಭವನದಲ್ಲಿ ನಡೆದ ಎಸ್‌ಎಸ್‌ಎಲ್ ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ವಿಶ್ವಕರ್ಮ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ದ್ವಿತೀಯ ವರ್ಷದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಆಶೀರ್ವದಿಸಿ ಮಾತನಾಡಿದರು. ಉತ್ತಮ ಆಲೋಚನೆಗಳನ್ನು ಬೆಳೆಸಿಕೊಳ್ಳಲು ಶೈಕ್ಷಣಿಕ ಸಾಧನೆಯೊಂದಿಗೆ ವಿದ್ಯಾರ್ಥಿಗಳು ಶಿಸ್ತು ಸಂಯಮ ಹಾಗೂ ಕೌಶಲ್ಯ, ನೈತಿಕ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಹೇಳಿದರು.

ಇಂದಿನ ದಿನಗಳಲ್ಲಿ ಮೌಲ್ಯವರ್ಧಿತ ಶಿಕ್ಷಣ ಇಂದು ಅಗತ್ಯವಿದೆ ಎಂದು ಪ್ರಾಚಾರ್ಯೆ ನಿರ್ಮಲಾ ಬಟ್ಟಲ್ ಉಪನ್ಯಾಸ ನೀಡಿದರು. ಪಿಯುಸಿ ಮತ್ತು ಎಸ್ ಎಸ್ ಎಲ್ ಸಿ 75 ಹೆಚ್ಚು ಅಂಕಗಳಿಸಿದ ಪ್ರತಿಭಾನ್ವಿತ 12 ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಿ ಗೌರವಿಸಿಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಿದ್ದಯ್ಯಸ್ವಾಮೀಜಿ ವಹಿಸಿದ್ದರು. ಅತಿಥಿಗಳಾಗಿ ಆರ್.ಜಿ.ಪಂಡಿತ್, ಪಿ.ಪಿ. ಬಡಿಗೇರ್, ಕಾಳಪ್ಪ ಬಡಿಗೇರ, ವಿ.ಕೆ.ಪೋತದಾರ, ಸುನೀಲ ಅರ್ಕಸಾಲಿ, ಮೌನೇಶ್ ವಿಶ್ವಜ್ಞ, ಡಾ. ವಿರೂಪಾಕ್ಷ ಬಡಿಗೇರ್, ಎನ್. ಬಿ. ಬಡಿಗೇರ, ಗಂಗಪ್ಪ ಕಮ್ಮಾರ ಸೇರಿದಂತೆ ಇತರರಿದ್ದರು. ಎಲ್.ಎಚ್. ಕಮ್ಮಾರ ನಿರೂಪಿಸಿದರು. ಭೀಮರಾಶಿ ಹೂಗಾರ ವಂದಿಸಿದರು.



ಮಾಜಿ ಸಚಿವ ಸಿ.ಟಿ.ರವಿ ಹೇಳಿಕೆ

ಜನಪರ ಆಡಳಿತದಿಂದ ಇತಿಹಾಸ ಸೃಷ್ಟಿಸಿದ ಪ್ರಧಾನಿ ನರೇಂದ್ರ ಮೋದಿ



ಬಳ್ಳಾರಿ: ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 12 ವರ್ಷ ಜನಪರ ಆಡಳಿತ ನಡೆಸುವ ಮೂಲಕ ಇತಿಹಾಸ ಸೃಷ್ಟಿಸಿದ್ದಾರೆ. ಕಳೆದ 2014ರ ಹಿಂದಿನ ಹಾಗೂ ಇಂದಿನ ಅಭಿವೃದ್ಧಿ ಕೆಲಸಗಳನ್ನು ಅವಲೋಕಿಸಿದರೇ ಪ್ರಧಾನ ಮಂತ್ರಿಯಾಗಿ ಮೋದಿ ಅವರು ದೇಶಕ್ಕಾಗಿ, ದೇಶದ ಜನರಿಗಾಗಿ ಏನು ಕೊಡುಗೆ ನೀಡಿದ್ದಾರೆ ಎಂಬುದು ತಿಳಿಯಲಿದೆ ಎಂದು ಮಾಜಿ ಸಚಿವ ಸಿ.ಟಿ.ರವಿ ಹೇಳಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಶೌಚಾಲಯಗಳ ನಿರ್ಮಾಣ, ಜನಧನ ಯೋಜನೆಯಡಿ 32 ಕೋಟಿ ಬ್ಯಾಂಕ್ ಖಾತೆ ತೆರೆದಿದೆ. ಈ ಮೂಲಕ ಸರ್ಕಾರದ ಯೋಜನೆಯ ಹಣ ನೇರವಾಗಿ ಫಲಾನುಭವಿಗಳ ಖಾತೆಗೆ ಜಮಾ ಆಗುವಂತೆ ಮಾಡಿದ್ದಾರೆ. ಉಜ್ವಲ ಯೋಜನೆಯಡಿ ಹೊಗೆ ರಹಿತ ಅಡುಗೆ ಮನೆಗೆ ಕಾರಣರಾಗಿದ್ದಾರೆ. 81 ಕೋಟಿ ಜನರಿಗೆ ತಲಾ 5 ಕೆಜಿ ಅಕ್ಕಿ ಮಾಸಿಕವಾಗಿ ನೀಡುತ್ತಿದೆ. ದೇಶದ 11 ಕೋಟಿ ರೈತರಿಗೆ ವಾರ್ಷಿಕ 6 ಸಾವಿರ ರೂ., ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ ಮೂಲಕ ಹಣ ಪಾವತಿಸಲಾಗಿದೆ. ಜಲ ಜೀವನ್ ಮಿಷನ್ ಮೂಲಕ ದೇಶದ ಪ್ರತಿ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು ಯೋಜನೆ ಜಾರಿ, ಶಿಕ್ಷಣ, ಆರೋಗ್ಯ, ಸಾರಿಗೆ, ರೈಲ್ವೆ ಯೋಜನೆ, ದೇಶದ ರಕ್ಷಣೆ, ಕೈಗಾರಿಕೆ ವಲಯ, ಕ್ಷೇತ್ರಕ್ಕೆ ಮೊದಲ ಆದ್ಯತೆ ನೀಡಿ, ಉದ್ಯೋಗ ಸೃಷ್ಟಿ ಸೇರಿದಂತೆ ಎಲ್ಲ ವಲಯಗಳಿಗೂ ಆದ್ಯತೆ ನೀಡಿರುವ ಪ್ರಧಾನಿ ನರೇಂದ್ರ ಮೋದಿ ಅವರು, ದಾಖಲೆ ಸೃಷ್ಟಿಸಿದ್ದಾರೆ ಎಂದರು.

> **ಕಳೆದ 12 ವರ್ಷ ಭ್ರಷ್ಟಾಚಾರ ರಹಿತ, ಜನಪರ ಆಡಳಿತ ನಡೆಸುವ ಮೂಲಕ ಮೋದಿ ಅವರು ವಿಶ್ವದ ಗಮನಸೆಳೆದಿದ್ದಾರೆ. ಜಾಗತಿಕ ಯುದ್ಧದ ಪರಿಣಾಮ ಬೆಲೆಗಳು ಏರಿಕೆಯಾಗಿವೆ. ಹಲವು ದೇಶಗಳಲ್ಲಿ ಬೆಲೆ ಏರಿಕೆ ಹೋಲಿಕೆ ಮಾಡಿದರೆ ನಮ್ಮ ದೇಶದಲ್ಲಿ ಬೆಲೆ ಏರಿಕೆ ನಿಯಂತ್ರಣದಲ್ಲಿದೆ.**
> ■ **ಸಿ.ಟಿ.ರವಿ, ಮಾಜಿ ಸಚಿವ**

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಏನು ಮಾಡಿದ್ದಾರೆ ಎನ್ನುವುದಕ್ಕಿಂತ, ಮೋದಿ ಅವರು ಪ್ರಧಾನಿಯಾದ ಬಳಿಕ ದೇಶದ ಅಭಿವೃದ್ಧಿ ಹೇಗಾಗಿದೆ ಎಂಬುದನ್ನು ವಿರೋಧಿಗಳು ಒಮ್ಮೆ ಅವಲೋಕಿಸಿದರೇ ಎಲ್ಲವೂ ಅರ್ಥವಾಗಿದೆ.

ಮತದಾರರ ಪಟ್ಟಿಯಲ್ಲಿ ಮೃತಪಟ್ಟವರು, ಎರಡ್ಮೂರು ಕಡೆ ಮತದಾರರ ಪಟ್ಟಿಯಲ್ಲಿರುವವರನ್ನು ನಕಲಿ ದಾಖಲೆ ನೀಡಿ ಪಟ್ಟಿಯಲ್ಲಿ ಸೇರ್ಪಡೆ ಯಾದವರು ಮತದಾರರ ಪಟ್ಟಿಯಿಂದ ಹೊರಗುಳಿಯಬೇಕು. ಅವರನ್ನು ತೆಗೆಯಬೇಕು ಎನ್ನುವ ಪ್ರಕ್ರಿಯೆ ಎಸ್‌ಐಆರ್ ನಡೆಸುತ್ತಿದೆ. ಇದರಿಂದ ಅರ್ಹ, ಶುದ್ಧ ಮತದಾರರು ಪಟ್ಟಿಯಲ್ಲಿ ಉಳಿಯಬೇಕು ಎನ್ನುವ ಪ್ರಕ್ರಿಯೆ ಇದು. ಈ ಕುರಿತು ಅಪಪ್ರಚಾರ ಬೇಡ, ಈ ಪ್ರಕ್ರಿಯೆ ಹೊಸದೇನಲ್ಲ, ಸ್ವಾತಂತ್ರ್ಯದ ಬಳಿಕ ಹಲವು ಬಾರಿ ನಡೆದಿದೆ. ಇದನ್ನು ವಿರೋಧಿಸುವವರು ದೇಶದ್ರೋಹಿಗಳು, ತುಕಡಿ ಗ್ಯಾಂಗ್‌ಗಳು, ದೇಶದಲ್ಲಿ ಅರಾಜಕತೆ ಸೃಷ್ಟಿ ಮಾಡಲು ಇದರ ವಿರುದ್ಧ ಹೋರಾಟಕ್ಕಿಳಿದಿದ್ದಾರೆ ಎಂದು ವಿರೋಧಿಗಳಿಗೆ ಎಚ್ಚರಿಸಿದರು.

ಎಮ್ಮೆಲ್ಸಿ ವೈ.ಎಂ.ಸತೀಶ್, ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ, ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಮೋಕ, ಮಾಜಿ ಶಾಸಕ ಎಂ.ಎಸ್. ಸೋಮಲಿಂಗಪ್ಪ, ಮಾಜಿ ಸಂಸದ ಸಣ್ಣ ಫಕೀರಪ್ಪ, ಗುರುಲಿಂಗನ ಗೌಡ, ಕೆ.ರಾಮಲಿಂಗಪ್ಪ, ಕೆ.ಎಸ್ .ದಿವಾಕರ್, ಕಾರ್ಕಲತೋಟ ಪಾಲಣ್ಣ, ಎಚ್. ಹನುಮಂತಪ್ಪ, ಮುದ್ದನಗೌಡ, ತಿಮ್ಮಪ್ಪ, ಎರಂಗಳಿ ತಿಮ್ಮಾರೆಡ್ಡಿ, ಸುರೇಖಾ ಮಲ್ಲನಗೌಡ ಸೇರಿದಂತೆ ಇತರರಿದ್ದರು.

ಶಾಸಕ ಗಾಲಿ ಜನಾರ್ದನ ರೆಡ್ಡಿ ಅಭಿಪ್ರಾಯ

ಮೋದಿ ಸಾಧನೆಗಳು ದೇಶದ ಅಭಿವೃದ್ಧಿಗೆ ಹೊಸ ದಿಕ್ಕು



ಕೊಪ್ಪಳ: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ ಕಳೆದ 12 ವರ್ಷಗಳಲ್ಲಿ ದೇಶದ ಸಮಗ್ರ ಅಭಿವೃದ್ಧಿಗೆ ಅನೇಕ ಐತಿಹಾಸಿಕ ಯೋಜನೆಗಳು ಹಾಗೂ ಜನಪರ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದು, ಬಡವರು, ರೈತರು, ಮಹಿಳೆಯರು, ಯುವಕರು ಹಾಗೂ ಮಧ್ಯಮ ವರ್ಗದ ಜನರ ಜೀವನಮಟ್ಟವನ್ನು ಸುಧಾರಿಸುವಲ್ಲಿ ಮಹತ್ವದ ಸಾಧನೆ ಮಾಡಿದೆ ಎಂದು ಗಂಗಾವತಿ ಶಾಸಕ ಗಾಲಿ ಜನಾರ್ದನ ರೆಡ್ಡಿ ಹೇಳಿದರು.

ಕೊಪ್ಪಳ ನಗರದ ಬಿಜೆಪಿ ಕಾರ್ಯಾಲಯದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದ ಆರ್ಥಿಕತೆ ವಿಶ್ವದ ಪ್ರಮುಖ ಆರ್ಥಿಕತೆಗಳಲ್ಲಿ ಒಂದಾಗಿ ಹೊರಹೊಮ್ಮಿದ್ದು, ಭಾರತವು ಜಾಗತಿಕ ಮಟ್ಟದಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡಿದೆ. ರೈತರಿಗೆ ಕಿಸಾನ್ ಸಮ್ಮಾನ್ ನಿಧಿ, ಉಚಿತ ಆಹಾರ ಧಾನ್ಯ ವಿತರಣೆ, ಮಹಿಳಾ ಸಬಲೀಕರಣ, ಮೂಲಸೌಕರ್ಯ ಅಭಿವೃದ್ಧಿ, ಡಿಜಿಟಲ್ ಇಂಡಿಯಾ, ಮೇಕ್ ಇನ್ ಇಂಡಿಯಾ ಸೇರಿದಂತೆ ಹಲವಾರು ಯೋಜನೆಗಳ ಮೂಲಕ ಜನರ ಬದುಕಿನಲ್ಲಿ ಗುಣಾತ್ಮಕ ಬದಲಾವಣೆ ತರಲಾಗಿದೆ ಎಂದು ತಿಳಿಸಿದರು.

ಮೋದಿಯವರ ಆಡಳಿತದಲ್ಲಿ ರಾಷ್ಟ್ರೀಯ ಹೆದ್ದಾರಿಗಳ ವಿಸ್ತರಣೆ, ರೈಲ್ವೆ ಆಧುನೀಕರಣ, ವಿಮಾನ ನಿಲ್ದಾಣಗಳ ಅಭಿವೃದ್ಧಿ, ವಂದೇ ಭಾರತ್ ರೈಲುಗಳ ಸಂಚಾರ, ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಮೂಲಸೌಕರ್ಯಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗಿದೆ. ಭಾರತ ಇಂದು ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಿದ್ದು, ಆತ್ಮನಿರ್ಭರ ಭಾರತದ ಕನಸನ್ನು ನನಸಾಗಿಸುವ ದಿಕ್ಕಿನಲ್ಲಿ ದೇಶ ಮುನ್ನಡೆಯುತ್ತಿದೆ ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ, ಕೇಂದ್ರ ಸರ್ಕಾರದ ಜನಕಲ್ಯಾಣ ಯೋಜನೆಗಳು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪುವಂತೆ ಕಾರ್ಯನಿರ್ವಹಿಸುತ್ತಿವೆ ಎಂದು ಹೇಳಿದರು.

ಜನಧನ್ ಯೋಜನೆ, ಉಜ್ವಲಾ ಯೋಜನೆ, ಆಯುಷ್ಮಾನ್ ಭಾರತ್, ಪ್ರಧಾನಮಂತ್ರಿ ಆವಾಸ್ ಯೋಜನೆ, ಉಚಿತ ಆಹಾರ ಧಾನ್ಯ ವಿತರಣೆ ಸೇರಿದಂತೆ ವಿವಿಧ ಯೋಜನೆಗಳು ಕೋಟ್ಯಾಂತರ ಜನರಿಗೆ ನೇರ ಪ್ರಯೋಜನವನ್ನು ಒದಗಿಸಿವೆ. ಡಿಬಿಟಿ ವ್ಯವಸ್ಥೆಯ ಮೂಲಕ ಫಲಾನುಭವಿಗಳಿಗೆ ಮಧ್ಯವರ್ತಿಗಳ ಹಾವಳಿ ಇಲ್ಲದೆ ನೇರವಾಗಿ ನೆರವು ತಲುಪುತ್ತಿರುವುದು ಕೇಂದ್ರ ಸರ್ಕಾರದ ಆಡಳಿತ ದಕ್ಷತೆಗೆ ಸಾಕ್ಷಿಯಾಗಿದೆ ಎಂದು ತಿಳಿಸಿದರು.

ಭಾರತದ ಅಂತಾರಾಷ್ಟ್ರೀಯ ಗೌರವವೂ ಗಣನೀಯವಾಗಿ ಹೆಚ್ಚಿದ್ದು, ಜಿ-20 ಅಧ್ಯಕ್ಷತೆ, ಅಂತರರಾಷ್ಟ್ರೀಯ ಸೌರ ಒಕ್ಕೂಟ, ಕ್ವಾಡ್ ಸಹಕಾರ ಸೇರಿದಂತೆ ವಿವಿಧ ಜಾಗತಿಕ ವೇದಿಕೆಗಳಲ್ಲಿ ಭಾರತ ಪ್ರಮುಖ ಪಾತ್ರ ವಹಿಸುತ್ತಿದೆ. ಅಭಿವೃದ್ಧಿ, ಜನಕಲ್ಯಾಣ ಹಾಗೂ ಸುಶಾಸನದ ಮೂಲಕ ದೇಶವನ್ನು ವಿಶ್ವಗುರುವಾಗಿಸುವ ಸಂಕಲ್ಪದೊಂದಿಗೆ ಕೇಂದ್ರ ಸರ್ಕಾರ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು.

ರಾಜ್ಯ ಕಾರ್ಯಕಾರ್ಣಿ ಸದಸ್ಯ ಡಾ. ಬಸವರಾಜ ಕ್ಯಾವಟರ, ಜಿಲ್ಲಾ ಅಧ್ಯಕ್ಷ ನವೀನ ಕುಮಾರ್ ಗುಳಗಣ್ಣನವರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನೀಲಕುಮಾರ ಹೆಸರೂರ, ಇನ್ನಿತರರು ಉಪಸ್ಥಿತರಿದ್ದರು.

ಕಿರುಸುದ್ದಿ

ವಿಶೇಷ ಎಕ್ಸ್‌ಪ್ರೆಸ್ ರೈಲು ಸೇವೆ

ಹುಬ್ಬಳ್ಳಿ: ಪ್ರಯಾಣಿಕರ ಅನುಕೂಲಕ್ಕಾಗಿ ಮತ್ತು ಹೆಚ್ಚುವರಿ ಜನದಟ್ಟಣೆ ನಿವಾರಿಸಲು, ನೈರುತ್ಯ ರೈಲ್ವೆಯು ಎಸ್‌ಎಸ್‌ಎಸ್ ಹುಬ್ಬಳ್ಳಿ ಮತ್ತು ಚಿಕ್ಕಮಗಳೂರು ನಡುವೆ ವಿಶೇಷ ಎಕ್ಸ್‌ಪ್ರೆಸ್ ರೈಲು ಸೇವೆಯನ್ನು ಓಡಿಸಲು ನಿರ್ಧರಿಸಿದೆ. ಈ ಕುರಿತು ನೈರುತ್ಯ ರೈಲ್ವೆ ಪ್ರಕಟಣೆಗೆ ತಿಳಿಸಿದ್ದು, ಜೂನ್ 20 ಹಾಗೂ 21ರಂದು ರೈಲು ಸಂಖ್ಯೆ 07341 ಎಸ್‌ಎಸ್‌ಎಸ್ ಹುಬ್ಬಳ್ಳಿ-ಚಿಕ್ಕಮಗಳೂರು ವಿಶೇಷ ಎಕ್ಸ್‌ಪ್ರೆಸ್ ರೈಲು ಹುಬ್ಬಳ್ಳಿಯಿಂದ 5 ಗಂಟೆಗೆ ಹೊರಟು, ಅದೇ ದಿನ 11.15 ಗಂಟೆಗೆ ಚಿಕ್ಕಮಗಳೂರು ತಲುಪಲಿದೆ. ಮರು ಪ್ರಯಾಣದಲ್ಲಿ ಈ ರೈಲು (07342) ಜೂನ್ 20 ಹಾಗೂ 21ರಂದು ಚಿಕ್ಕಮಗಳೂರಿನಿಂದ 17.30 ಗಂಟೆಗೆ ಹೊರಟು, ಅಂದೇ 23.20 ಗಂಟೆಗೆ ಎಸ್‌ಎಸ್ ಎಸ್ ಹುಬ್ಬಳ್ಳಿ ನಿಲ್ದಾಣಕ್ಕೆ ಆಗಮಿಸಲಿದೆ. ಈ ವಿಶೇಷ ರೈಲು ಮಾರ್ಗಮಧ್ಯೆ ಕುಂದಗೋಳ, ಸಂಶಿ, ಯಳವಿಗಿ, ಹಾವೇರಿ, ರಾಣೇಬೆನ್ನೂರು, ಹರಿಹರ, ದಾವಣಗೆರೆ, ಚಿಕ್ಕಜಾಜೂರು, ರಾಮಗಿರಿ, ಅಜ್ಜಂಪುರ, ಬೀರೂರು, ಕಡೂರು, ಬಿಸ್ಲೆಹಳ್ಳಿ, ಸಖರಾಯಪಟ್ಟಣ ಹಾಗೂ ಕಣಿವೆಹಳ್ಳಿ ನಿಲ್ದಾಣಗಳಲ್ಲಿ ನಿಲುಗಡೆ ಹೊಂದಿರಲಿದೆ. ಈ ವಿಶೇಷ ರೈಲಿನಲ್ಲಿ ಒಟ್ಟು 10 ಬೋಗಿಗಳು ಒಳಗೊಂಡಿದ್ದು, ಇದರಲ್ಲಿ ಒಂದು ಸ್ಲೀಪರ್ ಕ್ಲಾಸ್, 7 ಸಾಮಾನ್ಯ ದರ್ಜೆ ಮತ್ತು 2 ದ್ವಿತೀಯ ದರ್ಜೆ ಲಗೇಜ್ ಕಮ್ ಬ್ರೇಕ್ ವ್ಯಾನ್/ದಿವ್ಯಾಂಗ ಜನ ಕಂಪಾರ್ಟ್‌ಮೆಂಟ್ ಬೋಗಿಗಳು ಇರಲಿವೆ.

ಕೃಷಿಕ ಸಮಾಜದ ಅಧ್ಯಕ್ಷ ಶ್ರೀಧರ ಹೆಬ್ಬಾರ ನಿಧನ



ಭಟ್ಕಳ: ಭಾರತೀಯ ಕಿಸಾನ್ ಸಂಘದ ರಾಜ್ಯ ಮುಖಂಡ, ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ಹಾಗೂ ರೈತ ಮುಖಂಡ, ಪ್ರಗತಿಪರ ರೈತ ಶ್ರೀಧರ ಎಸ್ ಹೆಬ್ಬಾರ ಹಾಕೋಡ್ಲು (74) ಅವರು ಅನಾರೋಗ್ಯದಿಂದ ಮಣಿಪಾಲದ ಆಸ್ಪತ್ರೆಯಲ್ಲಿ ಸೋಮವಾರ ಸಂಜೆ ನಿಧರಾದರು.ಮೃತರು ಪತ್ನಿ, ಇಬ್ಬರು ಪುತ್ರರು, ಒಬ್ಬಳು ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಸದಾ ರೈತರ ಪರವಾಗಿ ಧ್ವನಿ ಎತ್ತುತ್ತಿದ್ದ ಅವರು ಭಟ್ಕಳದಲ್ಲಿ ಭಾರತೀಯ ಕಿಸಾನ್ ಸಂಘ ಶಾಖೆ ಆರಂಭ ಮಾಡಿ ವಿದ್ಯುತ್ ದರ ಏರಿಕೆ ಸೇರಿದಂತೆ ಹಲವು ರೈತಪರ ಹೋರಾಟ ನಡೆಸಿದ್ದರು. ಹವ್ಯಕ ಸಮಾಜದ ಮುಖಂಡರೂ ಆಗಿದ್ದ ಅವರು ಉತ್ತಮ ಸಲಹೆಗಾರರು, ಮಾರ್ಗದರ್ಶಕರೂ ಕೂಡ ಆಗಿದ್ದರು.ಕಳೆದ ಹಲವು ವರ್ಷಗಳಿಂದ ತಾಲೂಕು ಕೃಷಿಕ ಸಮಾಜದ ಅಧ್ಯಕ್ಷರಾಗಿ ರೈತರ ಒಡನಾಡಿಯಾಗಿ ಕೆಲಸ ಮಾಡಿ ಮೆಚ್ಚುಗೆ ಗಳಿಸಿದ್ದರು. ವಿಶೇಷವೆಂದರೆ ಇವರು ನರ್ಮದಾ ಪರಿಕ್ರಮ ನಡೆಸಿ ಗಮನ ಸೆಳೆದಿದ್ದರು. ಇವರ ನಿಧನಕ್ಕೆ ಮಾಜಿ ಸಚಿವ ಮಂಕಾಳ ಎಸ್ ವೈದ್ಯ ಸೇರಿದಂತೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.

ಸಚಿವ ಖರ್ಗೆ ದುರಾಡಳಿತ ಪ್ರಶ್ನಿಸಿದರೆ, ಜೀವ ಬೆದರಿಕೆ: ಸಿದ್ದಲಿಂಗ ಶ್ರೀ

ಕಲಬುರಗಿ: ಸಾಮಾಜಿಕ ಜಾಲತಾಣದಲ್ಲಿ ನಿಂದನೆ ಮತ್ತು ಕೊಲೆ ಬೆದರಿಕೆ ಹಾಕುವ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚಾಗಿದ್ದು, ಇದೀಗ ಶಿವಸೇನಾ ಕರ್ನಾಟಕದ ರಾಜ್ಯಾಧ್ಯಕ್ಷ,ಆಂದೋಲಾ ಸಿದ್ಧಲಿಂಗ ಸ್ವಾಮೀಜಿ ತಮಗೆ ಮತ್ತು ತಮ್ಮ ಸಂಗಡಿಗರ ಪ್ರಾಣಕ್ಕೆ ಅಪಾಯವಿದೆ ಎಂದು ಗಂಭೀರ ಆರೋಪ ಮಾಡಿದ್ದಾರೆ.



> **ಪೊಲೀಸ್ ಇಲಾಖೆಗೆ ಮನವಿ**
> **ತಮಗೆ ಏನಾದರೂ ಅನಾಹುತ ಸಂಭವಿಸಿದರೆ, ಅದಕ್ಕೆ ರಾಜು ಜಾನೆ, ಕೆಎಎಸ್ ಅಧಿಕಾರಿ ಭೀಮಾಶಂಕರ ತೆಗ್ಗಳ್ಳಿ, ಸಂಜಯ್ ಪಾಟೀಲ ಮತ್ತು ಗೃಹ ಸಚಿವ ಪ್ರಿಯಾಂಕ್ ಖರ್ಗೆಯವರೇ ನೇರ ಹೊಣೆಗಾರರು ಎಂದು ಎಚ್ಚರಿಸಿದ ಸ್ವಾಮೀಜಿ ಅವರು, ಬೆದರಿಕೆ ಹಾಕಿದವರ ಕರೆಗಳ ವಿವರಗಳನ್ನು ತಕ್ಷಣವೇ ಪರಿಶೀಲಿಸಿ, ಈ ಕೃತ್ಯದ ಹಿಂದೆ ಇರುವ ಪ್ರಭಾವಿ ವ್ಯಕ್ತಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಪೊಲೀಸ್ ಇಲಾಖೆಗೆ ಒತ್ತಾಯಿಸಿದರು.**

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,ಕಾಂಗ್ರೆಸ್‌ಕಾರ್ಯಕರ್ತನೆಂದು ಹೇಳಿಕೊಳ್ಳುವ ಸಿದ್ಧಾರೂಢ ಖಜೂರಿ ಅಲಿಯಾಸ್ ಕಾಂಬಳೆ ಎಂಬಾತ ಫೇಸ್ ಬುಕ್‌ನಲ್ಲಿ ಅತ್ಯಂತ ಕೀಳುಮಟ್ಟದ ಭಾಷೆ ಬಳಸುತ್ತಾ, ಹಿಂದು ಧರ್ಮದವರ ವಿರುದ್ಧ ಅವಾಚ್ಯ ಶಬ್ದಗಳಿಂದ ನಿಂದಿಸಿ, ಜೀವ ಬೆದರಿಕೆ ಹಾಕಿದ್ದಾನೆ ಎಂದು ದೂರಿದ್ದು, ಈ ಕುರಿತು ಜೇವರ್ಗಿ ನ್ಯಾಯಾಲಯದ ನಿರ್ದೇಶನದ ಮೇರೆಗೆ ಜೇವರ್ಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದರು.

ಕೇವಲ ಸಾಮಾಜಿಕ ಜಾಲತಾಣ ಮಾತ್ರವಲ್ಲದೆ, ದೈಹಿಕವಾಗಿಯೂ ದಾಳಿ ನಡೆಯುತ್ತಿದೆ ಎಂದು ಆರೋಪಿಸಿರುವ ಅವರು, ಕಳೆದ ಮೇ 24ರಂದು ರಾತ್ರಿ ಸಾಮಾಜಿಕ ಕಾರ್ಯಕರ್ತ ಸಿದ್ಧರಾಮಯ್ಯ ಹಿರೇಮಠ ಅವರ ಕಾರನ್ನು ಹಿಂಬಾಲಿಸಿ, ಗುದ್ದಿ, ಚಾಕುವಿನಿಂದ ಕೊಲೆ ಮಾಡಲು ಯತ್ನಿಸಲಾಗಿದೆ.

ಈ ಕುರಿತು ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ಕೊಲೆ ಯತ್ನದ ಅಡಿಯಲ್ಲಿ ಪ್ರಕರಣ ದಾಖಲಾಗಿದೆ. ಆದರೆ, ಆ ನಂತರ ಹಿರೇಮಠ ಅವರ ಮೇಲೆ ಸುಳ್ಳು ಅಟ್ರಾಸಿಟಿ ಪ್ರಕರಣ ದಾಖಲಿಸಲಾಗಿದೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ನಾವು ಸಚಿವ ಪ್ರಿಯಾಂಕ್ ಖರ್ಗೆಯವರ ದುರಾಡಳಿತ ಮತ್ತು ಅಕ್ರಮಗಳನ್ನು ಪ್ರಶ್ನಿಸುತ್ತಿರುವುದರಿಂದಲೇ ನಮಗೆ ಜೀವ ಬೆದರಿಕೆ ಹಾಕಲಾಗುತ್ತಿದೆ ಎಂದು ಆರೋಪಿಸಿರುವ ಸಿದ್ಧಲಿಂಗ ಸ್ವಾಮೀಜಿ ಅವರು, ಸಿದ್ಧಾರೂಢನಂತಹ ವ್ಯಕ್ತಿಗಳಿಗೆ ಪ್ರಭಾವಿ ರಾಜಕಾರಣಿಗಳು ಮತ್ತು ಅಧಿಕಾರಿಗಳು ಬೆಂಬಲ ನೀಡುತ್ತಿದ್ದಾರೆ ಎಂದು ದೂರಿದರು.

ರಾಕೇಶ ಜಮಾದಾರ, ಮಲ್ಲಣ್ಣ ಹಿರೇಪೂಜಾರಿ, ರೋಹಿತ ಪಿಸ್ಕೆ, ಸುರೇಶ ತಳವಾರ, ಸಾಯಿಕಿರಣ, ಸುಧಾಕರ ಜೇವರ್ಗಿ ಇದ್ದರು.

ಹುದ್ದೆ ಕೊಡಿಸುವುದಾಗಿ ವಂಚನೆ: ಬಂಧನ

ಹುಬ್ಬಳ್ಳಿ: ಹಣ ನೀಡಿದರೆ ಕೆಪಿಟಿಸಿಎಲ್‌ನಲ್ಲಿ ಲೈನಮನ್ ಹುದ್ದೆ ಕೊಡಿಸುವುದಾಗಿ ನಂಬಿಸಿ ಸಾರ್ವಜನಿಕ ವಂಚಿಸುತ್ತಿದ್ದ ಓರ್ವನನ್ನು ವಿದ್ಯಾನಗರ ಪೊಲೀಸರು ಬಂಧಿಸಿದ್ದಾರೆ.

ಕಲಬುರಗಿ ಮೂಲದ ವೆಂಕಟೇಶ ರಾಠೋಡ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ಕೆಪಿಟಿಸಿಎಲ್ ಇಲಾಖೆಯಲ್ಲಿ ಲೈನಮನ್ ಹುದ್ದೆಗಳಿಗೆ ನಗರದ ಕಲ್ಯಾಣನಗರದ ಮೈದಾನದಲ್ಲಿ ಒಂದೂವರೆ ವರ್ಷಗಳ ಹಿಂದೆ ಪ್ರಾಯೋಗಿಕ ತರಬೇತಿ ನಡೆಯುತ್ತಿದ್ದಾಗ ಉದ್ಯೋಗಾಕಾಂಕ್ಷಿಗಳನ್ನು ಉದ್ದೇಶಿಸಿ ವೆಂಕಟೇಶನು, ಹಣ ಕೊಟ್ಟರೆ ನೌಕರಿ ಕೊಡಿಸುವೆ. ಬೇಗ ಹಣ ರೆಡಿ ಮಾಡಿಕೊಳ್ಳಿ. ಅದಕ್ಕೆ ನಾನು ಗ್ಯಾರಂಟಿ ಎಂದು ಸುಳ್ಳು ಭರವಸೆ ನೀಡಿ ಆಮಿಷವೊಡ್ಡಿ ಮೋಸಗೊಳಿಸಲು ಪ್ರಯತ್ನಿಸಿದ್ದ ಹೇಳಿಕೆಯು ಯೂಟ್ಯೂಬ್ ಚಾನಲ್ ಒಂದರಲ್ಲಿ ವಿಡಿಯೋ ವೈರಲ್ ಆಗಿತ್ತು. ಇದನ್ನು ಆಧರಿಸಿ ವಿದ್ಯಾನಗರ ಪೊಲೀಸರು ಸ್ವಯಂ ಪ್ರಕರಣ ದಾಖಲಿಸಿಕೊಂಡು, ವೆಂಕಟೇಶನನ್ನು ಬಂಧಿಸಿದ್ದಾರೆ.

ಬಸವಲಿಂಗ ಶ್ರೀಗಳಿಗೆ ತಪೋರತ್ನಂ ಪ್ರಶಸ್ತಿ ಪ್ರದಾನ



ದೇವರಹಿಪ್ಪರಗಿ: ಅಧ್ಯಾತ್ಮ, ಯೋಗ, ಸಮಾಜ ಪ್ರಬೋಧನೆ ಹಾಗೂ ಮಾನವಕಲ್ಯಾಣ ಕ್ಷೇತ್ರಗಳಲ್ಲಿ ಸುದೀರ್ಘ ಕಾಲದಿಂದ ನಿಸ್ವಾರ್ಥ ಭಾವದಿಂದ ನಿರಂತರ ಸೇವೆ ಸಲ್ಲಿಸುತ್ತಾ ಬಂದಿರುವ ತಾಲೂಕಿನ ಕೊರವಾರ ಗ್ರಾಮದ ಮಹಂತೇಶ್ವರ ಮಠದ ಬಸವಲಿಂಗ ಶಿವಾಚಾರ್ಯರಿಗೆ ಕಾಶಿ ಪೀಠದ ವತಿಯಿಂದ ಪ್ರತಿಷ್ಠಿತ ''ತಪೋರತ್ನಂ'' ಪ್ರಶಸ್ತಿ ನೀಡಿ ಗೌರವಿಸಲಾಯಿತು.


ವಾರಾಣಸಿಯ ಜಗದ್ಗುರು ವಿಶ್ವಾರಾಧ್ಯ ಜ್ಞಾನಸಿಂಹಾಸನ ಜಂಗಮವಾಡಿ ಮಠದ ಪರವಾಗಿ ಈ ಪ್ರಶಸ್ತಿಯನ್ನು ಭಾನುವಾರ ಮಹಾರಾಷ್ಟ್ರದ ಸೊಲ್ಲಾಪುರದ ಬೃಹನ್ಮಠ ಹೋಟಗಿಯ ವೀರತಪಸ್ವಿ ದೇವಸ್ಥಾನದ ಆವರಣದಲ್ಲಿ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ರಂಭಾಪುರಿ ಜಗದ್ಗುರು ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಬಾಳೆಹೊನ್ನೂರ ಕೋರವಾರದ ಬಸವಲಿಂಗ ಶ್ರೀಗಳಿಗೆ ಗೌರವ ಸಮರ್ಪಿಸಿದರು. ಕಾಶಿ ಜ್ಞಾನಸಿಂಹಾಸನಾಽಶ್ವರ ಡಾ.ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿಗಳು ಹಾಗೂ ಕಾಶಿ ಜ್ಞಾನ'ಸಿಂಹಾಸ'ನಾಧೀಶ್ವ'ರ' ಡಾ.ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮೀಜಿಗಳ ಆದೇಶಾನುಸಾರ, ಜಗದ್ಗುರು ಪಂಚಾಚಾರ್ಯರ ದಿವ್ಯ ಸಾನ್ನಿಧ್ಯ ಹಾಗೂ ಶುಭ ಆಶೀರ್ವಾದದೊಂದಿಗೆ ಈ ಪ್ರಶಸ್ತಿ ಪ್ರದಾನಕಾರ್ಯಕ್ರಮ ನೆರವೇರಿತು.

ಕೊರವಾರ ಶ್ರೀಗಳು ದಶಕಗಳಿಂದ ನಡೆಸಿಕೊಂಡು ಬಂದಿರುವ ಧಾರ್ಮಿಕ ಆಚರಣೆ ಹಾಗೂ ಸಮಾಜಮುಖಿ ಚಿಂತನೆಗಳಿಗೆ ಜಗದ್ಗುರುಗಳ ಪೀಠದಿಂದ ಸಂದಿರುವ ಈ ಗೌರವ ದೇವರಹಿಪ್ಪರಗಿ ಕ್ಷೇತ್ರ ಹಾಗೂ ಕೊರವಾರ ಗ್ರಾಮಕ್ಕೆ ಹೆಮ್ಮೆಯ ಸಂಗತಿಯಾಗಿದೆ.

ಶ್ರೀಗಳು ಪ್ರಶಸ್ತಿ ಸ್ವೀಕರಿಸಿದ್ದಕ್ಕೆ ಕ್ಷೇತ್ರದ ರಾಜಕೀಯ ಮುಖಂಡರು, ವಿವಿಧ ಪ್ರಮುಖ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಮಠದ ಸದ್ಭಕ್ತರು ಹಾಗೂ ಗ್ರಾಮದ ಹಿರಿಯರು ಭಕ್ತಿಪೂರ್ವಕ ಅಭಿನಂದನೆ ಸಲ್ಲಿಸಿದ್ದಾರೆ.

ನೀಲಣ್ಣವರ ಜೈಲಿನಿಂದ ಬಿಡುಗಡೆ

ಬೆಳಗಾವಿ: ಬಹುಕೋಟಿ ಹಣ ವಂಚನೆ ಆರೋಪದ ಹಿನ್ನೆಲೆಯಲ್ಲಿ ಬಂಧನಕ್ಕೊಳಗಾಗಿ ಜೈಲು ಸೇರಿದ್ದ ಶಿವಂ ಅಸೋಸಿಯೇಟ್ಸ್‌ನ ಮಾಲೀಕ ಶಿವಾನಂದ ನೀಲಣ್ಣವರ ಅವರು ಜೈಲಿನಿಂದ ಬಿಡುಗಡೆಯಾಗಿದ್ದಾರೆ.



ಶಿವಂ ಅಸೋಸಿಯೇಟ್ಸ್ ಬಹುಕೋಟಿ ವಂಚನೆ ಪ್ರಕರಣ

ಶಿವಂ ಅಸೋಸಿಯೇಟ್ ಸಂಸ್ಥೆಯ ಮೂಲಕ ಸುಮಾರು 4,500 ಕೋಟಿ ರೂಪಾಯಿ ಹಣವನ್ನು ಸಾರ್ವಜನಿಕರಿಂದ ಠೇವಣಿ ರೂಪದಲ್ಲಿ ಸಂಗ್ರಹಿಸಿ ವಂಚನೆ ಎಸಗಿರುವ ಆರೋಪಕ್ಕೆ ಸಂಬಂಧಿಸಿದಂತೆ ಶಿವಾನಂದ ನೀಲಣ್ಣವರ ಅವರನ್ನು ಮೇ 15ರಂದು ಮಾಳಮಾರುತಿ ಪೊಲೀಸರು ಬಂಧಿಸಿದ್ದರು. ಬಳಿಕ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು.


ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ 92ನೇ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯವು ಜೂನ್ 12ರಂದು ಶಿವಾನಂದ ನೀಲಣ್ಣವರ ಅವರಿಗೆ ಮಧ್ಯಂತರ ಜಾಮೀನು ಮಂಜೂರು ಮಾಡಿದ್ದು, ಅದರಂತೆ ಅವರು ಜೈಲಿನಿಂದ ಬಿಡುಗಡೆಯಾಗಿದ್ದಾರೆ.

ಜೈಲಿನಿಂದ ಹೊರಬಂದ ನಂತರ ಮಾಧ್ಯಮ ಪ್ರತಿನಿಧಿಗಳು ಪ್ರತಿಕ್ರಿಯೆ ಕೇಳಿದಾಗ, ಶಿವಾನಂದ ನೀಲಣ್ಣವರ ಅವರು ''ಓಂ ನಮಃ ಶಿವಾಯ'' ಎಂದು ಮಾತ್ರ ಹೇಳಿ ಯಾವುದೇ ಹೆಚ್ಚಿನ ಪ್ರತಿಕ್ರಿಯೆ ನೀಡದೆ ಮುಂದಕ್ಕೆ ಸಾಗಿದರು.

ನ್ಯಾಯಾಲಯವು ಮಧ್ಯಂತರ ಜಾಮೀನು ನೀಡುವ ವೇಳೆ ಕೆಲವು ಷರತ್ತುಗಳನ್ನು ವಿಧಿಸಿದೆ. ಜೂನ್ 27ರಂದು ನ್ಯಾಯಾಲಯಕ್ಕೆ ಕಡ್ಡಾಯವಾಗಿ ಹಾಜರಾಗುವಂತೆ ಸೂಚನೆ ನೀಡಿರುವುದರ ಜೊತೆಗೆ, ಮೂರು ಲಕ್ಷ ರೂಪಾಯಿ ಮೊತ್ತದ ಬಾಂಡ್ ಹಾಗೂ ಶೂರಿಟಿ ಸಲ್ಲಿಸುವಂತೆ ಆದೇಶಿಸಿದೆ. ಅಲ್ಲದೆ, ದೇಶವನ್ನು ತೊರೆಯದಂತೆ ನ್ಯಾಯಾಲಯವು ನಿರ್ಬಂಧ ಹೇರಿದೆ.

ಶಿವಂ ಅಸೋಸಿಯೇಟ್ ಬಹುಕೋಟಿ ವಂಚನೆ ಪ್ರಕರಣವು ರಾಜ್ಯಾದ್ಯಂತ ಸಾಕಷ್ಟು ಚರ್ಚೆಗೆ ಗ್ರಾಸವಾಗಿದ್ದು, ಸಾವಿರಾರು ಹೂಡಿಕೆದಾರರು ತಮ್ಮ ಹಣ ಮರಳಿ ಪಡೆಯುವ ನಿರೀಕ್ಷೆಯಲ್ಲಿದ್ದಾರೆ. ಪ್ರಕರಣದ ತನಿಖೆ ಮುಂದುವರಿದಿದೆ.

ಪ್ರವಾಸಿಗರ ಹುಚ್ಚಾಟ: ತಂತಿ ಬೇಲಿ ನಿರ್ಮಾಣಕ್ಕೆ ಆಗ್ರಹ



ಗೋಕರ್ಣ: ಇಲ್ಲಿನ ಓಂ ಕಡಲತೀರದಲ್ಲಿ ಸಮುದ್ರದಂಚಿನ ಕಲ್ಲು ಬಂಡೆಗಳ ಮೇಲೆ ನಿಂತು ಫೋಟೋ ತೆಗೆಯಲು ಪ್ರವಾಸಿಗರು ಮುಗಿ ಬೀಳುತ್ತಿದ್ದು, ಈ ಅಪಾಯಕಾರಿ ಸ್ಥಳಕ್ಕೆ ತೆರಳದಂತೆ ಬೇಲಿ ನಿರ್ಮಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿ ದ್ದಾರೆ.

ಕಡಲತೀರಕ್ಕೆ ತೆರಳುವಾಗ ಬಲಭಾಗದಲ್ಲಿ ಬೃಹತ್ ಕಲ್ಲು ಬಂಡೆಗಳಿದ್ದು, ಇದರ ಮೇಲೆ ನಿಂತು ಫೋಟೋ ತೆಗೆಯುವುದು, ರೀಲ್ಸ್ ಮಾಡುತ್ತಾ ಪ್ರವಾಸಿಗರು ಹುಚ್ಚಾಟ ಮಾಡುತ್ತಾರೆ. ಪ್ರಸ್ತುತ ಸಮುದ್ರದ ರಕ್ಕಸ ಅಲೆ ಬಂಡೆಗಳ ಮೇಲೆ ಬಂದು ಬಡಿಯುತ್ತಿದ್ದು, ಸ್ವಲ್ಪ ಯಾಮಾರಿದರೂ ಅಲೆ ರಭಸಕ್ಕೆ ನೀರು ಪಾಲಾಗುತ್ತಾರೆ.

ಈ ಹಿಂದೆ ಅನೇಕ ಘಟನೆಗಳು ನಡೆದಿದೆ. ಅರಣ್ಯ ಅಥವಾ ಪ್ರವಾಸೋದ್ಯಮ ಇಲಾಖೆ ತಂತಿ ಬೇಲಿ ನಿರ್ಮಿಸಿ ಇಲ್ಲಿ ತೆರಳದಂತೆ ಸೂಚನಾ ಫಲಕ ತುರ್ತಾಗಿ ಅಳವಡಿಸಬೇಕಿದೆ. ಇಲ್ಲಿ ಕರ್ತವ್ಯ ನಿರ್ವಹಿಸುವ ಜೀವರಕ್ಷ ಸಿಬ್ಬಂದಿಗಳು ಪ್ರವಾಸಿಗರಿಗೆ ನಿರಂತರವಾಗಿ ತಿಳಿ ಹೇಳುತ್ತಾ ನಿಗಾವಹಿಸಿದ್ದರೂ ಸಹ ಇವರೊಂದಿಗೆ ವಾದಕ್ಕಿಳಿದು ರಂಪಾಟ ಸಹ ನಡೆಸುತ್ತಾರೆ. ಇವರನ್ನ ನಿಯಂತ್ರಿಸಲು ಪೊಲೀಸ್ ಸಿಬ್ಬಂದಿ ನಿಯೋಜಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸುತ್ತಾ ಬಂದಿದ್ದರು, ಇದುವರೆಗೂ ನೇಮಿಸಿಲ್ಲ ಎಂದು ಆರೋಪಿಸಿದರು.

ಕಪ್ಪೆಚಿಪ್ಪು ತೆಗೆಯಲು ಹೋಗಿ ನದಿಯಲ್ಲಿ ದುರಂತ

ಮೃತಪಟ್ಟ ಕುಟುಂಬಸ್ಥರ ಮನೆಗೆ ಶ್ರೀಗಳ ಭೇಟಿ, ಸಾಂತ್ವನ



ಭಟ್ಕಳ: ಇತ್ತೀಚಿಗೆ ಕಪ್ಪೆಚಿಪ್ಪು ತೆಗೆಯಲು ಹೋಗಿ ನೀರಿನಲ್ಲಿ ಮುಳುಗಿ ಮೃತಪಟ್ಟ 11 ಜನರ ಮನೆಗೆ ಸೋಮವಾರ ಶ್ರೀರಾಮ ಕ್ಷೇತ್ರದ ಮಠಾಧೀಶ ಹಾಗೂ ನಾಮಧಾರಿ ಸಮಾಜದ ಕುಲಗುರುಗಳಾದ ಶ್ರೀ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿಯವರು ಆಗಮಿಸಿ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಇದೊಂದು ಘೋರ ದುರಂತವಾಗಿದೆ. ಯಾವ ಕುಟುಂಬದವರಿಗೂ ಇಂತಹ ಪರಿಸ್ಥಿತಿ ಬರಬಾರದು, ಬಂದಾಗ ನೊಂದವರಿಗೆ ಸಮಾಜದವರು ಅವರೊಂದಿಗೆ ಇರಬೇಕು ಎಂದರಲ್ಲದೇ ದುರಂತದ ದಿನ ನಾನು ಅಯೋಧ್ಯೆಯಲಿದ್ದ ಕಾರಣ ತಕ್ಷಣ ಬರಲು ಆಗಲಿಲ್ಲ. ಆದರೆ, ನನ್ನ ಶಿಷ್ಯರಿಂದ ವಿಷಯವನ್ನು ತಿಳಿದು ಸಂತ್ರಸ್ಥ ಕುಟಂಬಗಳಿಗೆ ಹೆಚ್ಚಿನ ಪರಿಹಾರ ನೀಡುವಂತೆ ಸರ್ಕಾರ ಹಾಗೂ ಸಚಿವರಿಗೆ ಸೂಚಿಸಿದ್ದೇನೆ.

ಸಚಿವ ಮಂಕಾಳ ವೈದ್ಯರು ಸರ್ಕಾರದಿಂದ ಇನ್ನೂ ಹೆಚ್ಚಿಗೆ ಪರಿಹಾರ ನೀಡುವ ಭರವಸೆ ನೀಡಿದ್ದಾರೆ. ಕುಟುಂಬದವರನ್ನು ಪೋಷಣೆ ಮಾಡುವ ಕೆಲಸ ಮಠ ಹಾಗೂ ಸಮಾಜ ಮಾಡುತ್ತದೆ ಎಂದ ಅವರು ಸಮಾಜದ ಪ್ರತಿಯೊಬ್ಬರೂ ಸಂತ್ರಸ್ತರ ಕುಟುಂಬದವರಿಗೆ ಸಹಾಯ ಮಾಡಬೇಕು. ಸಂತ್ರಸ್ತ ಕುಟುಂಬದ ಮಕ್ಕಳ ವಿದ್ಯಾಭ್ಯಾಸಕ್ಕೆ ನಮ್ಮ ಮಠವು ಅನುಕೂಲ ಮಾಡಿಕೊಡಲಿದೆ ಎಂದರು.

ಈ ಸಂದರ್ಭದಲ್ಲಿ ಮಠದ ಪರವಾಗಿ ಸ್ವಾಮಿಗಳು ಪ್ರತಿ ಕುಟುಂಬದವರಿಗೆ ಧನ ಸಹಾಯ ನೀಡಿದರು. ಹಾಗೂ ಮೃತ ಕುಟುಂಬದವರ ಮಕ್ಕಳಿಗೆ ಉದ್ಯೋಗ ನೀಡಲು ಸ್ಥಳೀಯ ಬ್ಯಾಂಕುಗಳ ಆಡಳಿತ ವ'ಂಡ'ಳಿಯ ವ'ರೊಂದಿಗೆ ಮಾತನಾಡಿ ಉದ್ಯೋಗ ನಿಡುವಂತೆ ತಿಳಿಸಿದರು.

ಭಟ್ಕಳ ನಾಮಧಾರಿ ಸಮಾಜದ ಅಧ್ಯಕ್ಷ ಅರುಣ ನಾಯ್ಕ, ಸಾರದಹೊಳೆ ನಾಮಧಾರಿ ಸಮಾಜದ ಅಧ್ಯಕ್ಷ ನಾಗೇಂದ್ರ ನಾಯ್ಕ, ಸಾರದಹೊಳೆ ಹಳೆಕೋಟೆ ಹನುಮಂತ ದೇವಸ್ಥಾನದ ಧರ್ಮದರ್ಶಿ ಸುಬ್ರಾಯ ನಾಯ್ಕ ಪ್ರಮುಖರಾದ ಕೃಷ್ಣ ನಾಯ್ಕ ಪೃಥ್ವಿ, .ಡಿ.ಎಲ್.ನಾಯ್ಕ, ಕೆ.ಆರ್.ನಾಯ್ಕ ಎಸ್.ಎಂ.ನಾಯ್ಕ, ಡಿ.ಬಿ.ನಾಯ್ಕ, ವಿಠ್ಠಲ್ ನಾಯ್ಕ, ಶ್ರೀಧರ ನಾಯ್ಕ ,ಎಚ್.ಆರ್.ನಾಯ್ಕ, ಕುಮಟಾ, ವಾಮನ ನಾಯ್ಕ ಹೊನ್ನಾವರ, ಕೃಷ್ಣ ನಾಯ್ಕ , ಸೇರಿದಂತೆ ನಾಮಧಾರಿ ಸಮಾಜದ ಪ್ರಮುಖರು ಹಾಗೂ ಶ್ರೀರಾಮ ಕ್ಷೇತ್ರ ಸಮಿತಿಯ ಪ್ರಮುಖರು ಉಪಸ್ಥಿತರಿದ್ದರು.

ಕಳ್ಳತನ ಮಾಡಿದ ಆಭರಣ ಫೈನಾನ್ಸ್ ಸಂಸ್ಥೆಗಳಲ್ಲಿ ಇಟ್ಟಿದ್ದ ವ್ಯಕ್ತಿ ಬಂಧನ



ಹೊನ್ನಾವರ: ಮನೆಯೊಂದರ ಟ್ರಂಕ್‌ನಲ್ಲಿ ಇಟ್ಟ ಬಂಗಾರದ ಆಭರಣಗಳನ್ನು ಕಳ್ಳತನ ಮಾಡಿ ಫೈನಾನ್ಸ್ ಸಂಸ್ಥೆಗಳಲ್ಲಿ ಇಟ್ಟಿರುವ ವ್ಯಕ್ತಿಯನ್ನು ಮತ್ತು ಆಭರಣಗಳ ವಿಲೇವಾರಿಗೆ ಸಹಕರಿಸಿದ ಆತನ ಸ್ನೇಹಿತನನ್ನು ಹೊನ್ನಾವರ ಪೊಲೀಸರು ಬಂಧಿಸಿದ್ದಾರೆ.

ಕಾಸರಕೋಡ ದೇವಸ್ಥಾನಕೇರಿ ನಿವಾಸಿ ಧನುಶ ಶ್ರೀಧರ ಗೌಡ ಮತ್ತು ಗೇರುಸೊಪ್ಪ ನಿವಾಸಿ ಗೌರೀಶ ಗಣಪತಿ ಗೌಡ ಬಂಧಿತ ಆರೋಪಿಗಳಾಗಿದ್ದು, ಬಂಧಿತರು ಫೈನಾನ್ಸ್ ಸಂಸ್ಥೆಗಳಲ್ಲಿ ಇಟ್ಟ ಸುಮಾರು 17 ಲಕ್ಷ ರೂಪಾಯಿ ಮೌಲ್ಯದ 127.5 ಗ್ರಾಂ ಬಂಗಾರದ ಆಭರಣಗಳನ್ನು ವಶಕ್ಕೆ ಪಡೆಯಲಾಗಿದೆ.

ದೇವಸ್ಥಾನಕೇರಿ ನಿವಾಸಿ ಪಾರ್ವತಿ ಪಟಗಾರ ಎನ್ನುವವರ ಮನೆಯ ಕಬ್ಬಿಣದ ಟ್ರಂಕ್‌ನಲ್ಲಿ ಇಟ್ಟ 128 ಗ್ರಾಂ ಆಭರಣಗಳನ್ನು ಮೇ 20ರ ರಾತ್ರಿ 8 ಗಂಟೆಯಿಂದ ಜೂನ್ 7ರ ನಡುವಿನ ಅವಧಿಯಲ್ಲಿ ಕಳ್ಳತನ ನಡೆಸಿರುವ ಕುರಿತಂತೆ ದೂರು ದಾಖಲಾಗಿತ್ತು.

ಆರೋಪಿತ ಟ್ರಂಕ್‌ನಲ್ಲಿರುವ ಚಿಕ್ಕ ಬ್ಯಾಗಿನಲ್ಲಿ ಇಟ್ಟ 4 ಲಕ್ಷ ಮೌಲ್ಯದ 40 ಗ್ರಾಂ ಮಂಗಳಸೂತ್ರ,1.5 ಲಕ್ಷ ಮೌಲ್ಯದ 15 ಗ್ರಾಂ ಮಂಗಳಸೂತ್ರ, 2 ಲಕ್ಷ ಮೌಲ್ಯದ 20 ಗ್ರಾಂ ನೆಕ್ಲೆಸ್, 3.5 ಲಕ್ಷ ಮೌಲ್ಯದ 35 ಗ್ರಾಂ ಹವಳದ ಸರ, 80 ಸಾವಿರ ಮೌಲ್ಯದ 8 ಗ್ರಾಂ ಚೈನ್, 50 ಸಾವಿರ ಮೌಲ್ಯದ 5 ಗ್ರಾಂ ಚೈನ್, 50 ಸಾವಿರ ಮೌಲ್ಯದ 5 ಗ್ರಾಂ ಉಂಗುರವನ್ನು ಕಳ್ಳತನ ಮಾಡಿರುವ ಕುರಿತಂತೆ ದೂರು ದಾಖಲಿಸಿ ಆರೋಪಿತ ದರ್ಶನನ ಮೇಲೆ ಸಂಶಯ ಇರುವುದಾಗಿ ತಿಳಿಸಲಾಗಿತ್ತು.

ಆರೋಪಿತನ ವಿಚಾರಣೆ ನಡೆಸಿರುವ ಪೊಲೀಸರು ಹೊನ್ನಾವರದ ಮಣಪುರಂ ಫೈನಾನ್ಸ್, ಮುತ್ತೂಟ್ ಪಿನ್ ಕಾರ್ಪ್ ಮತ್ತು ಗಿರೀಶ ಗೌಡನ ಬಳಿ ಇರುವ ಮತ್ತು ಆತ ಮಾರಾಟ ಮಾಡಿರುವ ಆಭರಣಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠ ದೀಪನ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಕೃಷ್ಣಮೂರ್ತಿ,ಡಿ.ವೈ.ಎಸ್.ಪಿ ಗಿರೀಶ್ ಮಾರ್ಗದರ್ಶನದಲ್ಲಿ ಹೊನ್ನಾವರ ಪೊಲೀಸ್ ನಿರೀಕ್ಷಕ ಸಿದ್ದರಾಮೇಶ್ವರ ಅವರ ನೇತೃತ್ವದಲ್ಲಿ ಪೊಲೀಸ್ ಉಪ ನಿರೀಕ್ಷಕರುಗಳಾದ ಮಹಾಂತೇಶ ವಾಲ್ಮೀಕಿ, ಸಂಗೀತಾ, ರೇಣುಕಾ ಮತ್ತು ಸಿಬ್ಬಂದಿಗಳು ಕಾ'ರ್ಯಾ'ಚ'ರ'ಣೆ'ಯ'ಲ್ಲಿ ಪಾಲ್ಗೊಂಡಿದ್ದರು.

ಆರೆಸ್ಸೆಸ್‌ಗೆ ನೋಂದಣಿ ಅಗತ್ಯವಿಲ್ಲ

ಪುಟ ೧➡ ಸಂಘ ಪ್ರಾರಂಭವಾದ 10-15 ವರ್ಷಗಳ ನಂತರವೂ ನಾವು ಈ ಎಲ್ಲಾ ವಿಷಯಗಳನ್ನು ಎದುರಿಸಬೇಕಾಯಿತು. ನಮಗೆ ಇದು ಒಗ್ಗಿಹೋಗಿದೆ. ಒಂದು ವೇಳೆ ಇಂತಹ ಟೀಕೆಗಳು ಬರದಿದ್ದರೆ ಏನೋ ತಪ್ಪಾಗಿದೆ, ಏನೋ ಕಡಿಮೆಯಾಗಿದೆ ಎಂದು ನಮಗೆ ಅನಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಹಾಗಾಗಿ ನಾನು ಪ್ರತಿಕ್ರಿಯಿಸುವ ಅಗತ್ಯವಿಲ್ಲ. ಸಂಘವು ಬ್ರಿಟಿಷರ ಕಾಲದಲ್ಲೇ ಪ್ರಾರಂಭವಾಯಿತು. ಸಂಘವು ಜನರ ಇಚ್ಛೆಯಿಂದ ಪ್ರಾರಂಭವಾಯಿತು. ಜನರಲ್ಲಿ ವಿಚಾರ ಮಂಥನ ಹೇಗೆ ನಡೆಯಿತು. ಬಳಿಕ ಎಲ್ಲರೂ ಒಪ್ಪಿಕೊಂಡ ತೀರ್ಮಾನವನ್ನು ಹೇಗೆ ತೆಗೆದುಕೊಳ್ಳಲಾಯಿತು. ಅದರ ಮೇಲೆ ಹೇಗೆ ಕೆಲಸ ಮಾಡಲಾಯಿತು ಎಂದು ನಾನು ಆಗಲೇ ನಿಮಗೆ ವಿವರಿಸಿದ್ದೇನೆ. ಅದೇ ಈ ಸಂಘ. ಹಾಗಾಗಿ ಇದಕ್ಕೆ ನಿರ್ಬಂಧಗಳ ಅಗತ್ಯವಿಲ್ಲ ಎಂದರು.

ಹಿಂದಿನ ಸರ್ಕಾರಗಳಿಂದಲೇ ಗುರುತು: ಒಂದು ಧರ್ಮ ನೋಂದಣಿಯಾಗಿಲ್ಲ, ಅದೇ ರೀತಿ ಅನೇಕ ವಿಷಯಗಳು ನೋಂದಣಿಯಾಗಿಲ್ಲ, ಆದರೆ ನೋಂದಣಿಯಾಗದಿರುವುದನ್ನು ಸರ್ಕಾರಗಳೂ ಗುರುತಿಸಿವೆ. ಸರ್ಕಾರವೇ ನಮ್ಮನ್ನು ನಿಷೇಧಿಸಿತ್ತು. ಆ ನಿಷೇಧವನ್ನು ನ್ಯಾಯಾಲಯದ ಆದೇಶದಿಂದ, ಸ್ವಾಗ್ರಹದಿಂದ ಹಿಂಪಡೆಯಲಾಯಿತು. ಸರ್ಕಾರ ಆರ್‌ಎಸ್‌ಎಸ್‌ನ್ನು ನಿಷೇಧಿಸುತ್ತಿದ್ದರೆ, ಅವರಿಗೆ ಆರ್‌ಎಸ್‌ಎಸ್ ಅಸ್ತಿತ್ವದಲ್ಲಿದೆ ಎಂಬುದು ಗೊತ್ತಿತ್ತು ಎಂದರ್ಥ. ಆರ್‌ಎಸ್‌ಎಸ್‌ನ್ನು ಗುರುತಿಸಲಾಗಿದೆ. ಕಳೆದ 100 ವರ್ಷಗಳಲ್ಲಿ ಇದೆಲ್ಲವೂ ನಡೆದಿದೆ. ಆದರೆ ನೀವು ನೋಂದಾಯಿಸಿಕೊಳ್ಳಲೇಬೇಕು ಎಂದು ಯಾರೂ ನಮಗೆ ಹೇಳಿರಲಿಲ್ಲ ಎಂದು ಪ್ರತಿಪಾದಿಸಿದರು.

ಹಿಂದೆ ಹೇಳಿರಲಿಲ್ಲ: ನಮ್ಮ ಸಂವಿಧಾನ, ಅಂದರೆ ಲಿಖಿತ ಸಂವಿಧಾನವು ಸರ್ಕಾರದ ಬಳಿಯೇ ಇದೆ. ನಾವು ಅದನ್ನು 1950ರ ದಶಕದಲ್ಲಿಯೇ ಸಲ್ಲಿಸಿದ್ದೇವೆ. ಆಗ ಸರ್ಕಾರವು 'ಸರಿ, ಎಲ್ಲವೂ ಚೆನ್ನಾಗಿದೆ, ಆದರೆ ನೀವು ನೋಂದಾಯಿಸಿಕೊಂಡಿಲ್ಲ, ಮೊದಲು ನೋಂದಾಯಿಸಿ, ನಂತರ ನಾವು ಸ್ವೀಕರಿಸುತ್ತೇವೆ' ಎಂದು ಹೇಳಬಹುದಿತ್ತು. ಆದರೆ ಅವರು ಹಾಗೆ ಹೇಳಲಿಲ್ಲ ಎಂದು ಭಾಗವತ್ ಅವರು ಹೇಳಿದರು.

ಸಂಘದ ಕೆಲಸಗಳಿಗೆ ಅಡ್ಡಿ: ನೋಂದಣಿ ಸೇರಿದಂತೆ ಎಲ್ಲ ವಿಚಾರಗಳು ರಾಜಕೀಯ ವಿಚಾರಗಳಷ್ಟೇ. ಇದರಲ್ಲಿ ಗಂಭೀರವಾದದ್ದೇನೂ ಇಲ್ಲ. ಅವರು ಹೇಗಾದರೂ ಮಾಡಿ ಒಂದು ಕಡೆ ಸಂಘದ ಕೆಲಸಕ್ಕೆ ಅಡ್ಡಿಪಡಿಸಲು ಬಯಸುತ್ತಾರೆ. ಮತ್ತೊಂದು ಕಡೆ ಜನರ ಮನಸ್ಸಿನಲ್ಲಿ ಅನುಮಾನಗಳನ್ನು ಸೃಷ್ಟಿಸಲು ಯತ್ನಿಸುತ್ತಾರೆ. ಆದರೆ ಅದು ಇನ್ನು ಮುಂದೆ ಸಾಧ್ಯವಿಲ್ಲ. ಏಕೆಂದರೆ ಜನರಿಗೆ ನಮ್ಮ ಬಗ್ಗೆ ಚೆನ್ನಾಗಿ ತಿಳಿದಿದೆ. ಅವರು ನಮ್ಮನ್ನು ರಹಸ್ಯ ಸಂಸ್ಥೆ ಎನ್ನುತ್ತಾರೆ. ಆದರೆ ನಮ್ಮ ಕಾರ್ಯಕರ್ತರು ಎಲ್ಲ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಜನರು ಅವರನ್ನು ಪ್ರತಿನಿತ್ಯ ನೋಡುತ್ತಿದ್ದಾರೆ. ನಮ್ಮ ಶಾಖೆಗಳು ತೆರೆದ ಮೈದಾನಗಳಲ್ಲಿ ನಡೆಯುತ್ತವೆ. ನಾವು ಸಾರ್ವಜನಿಕ ಕಾರ್ಯಕ್ರಮಗಳನ್ನು ಮಾಡುತ್ತೇವೆ. ನಾವು ಜನರನ್ನು ತಲುಪುವ ಅಂತಹ ಅಗಾಧವಾದ ವ್ಯಾಪ್ತಿ ಹೊಂದಿದ್ದೇವೆ. ಈ ವರ್ಷ ಪ್ರತಿ ವಿಭಾಗದಲ್ಲೂ ನಾವು ಕಾರ್ಯಕ್ರಮಗಳನ್ನು ಮಾಡಿದ್ದೇವೆ. ಒಂದು ವೇಳೆ ನಾವು ರಹಸ್ಯವಾಗಿ ಕಾರ್ಯನಿರ್ವಹಿಸುವವರಾಗಿದ್ದರೆ ಇದೆಲ್ಲವೂ ಸಾಧ್ಯವಾಗುತ್ತಿತ್ತೇ ಎಂದು ಮರು ಪ್ರಶ್ನಿಸಿದರು.

ಯೋಗ ದಿನ ನಿಮಿತ್ತ ಕಾರ್ಯಕ್ರಮ | ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಧ್ಯೇಯವಾಕ್ಯ

ಕೋಲ್ಕತ್ತಾ ಯೋಗ ದಿನದಲ್ಲಿ ಮೋದಿ ಭಾಗಿ

• **ಹೊಸದಿಲ್ಲಿ:** ಜೂನ್ 21ರಂದು ಆಚರಿಸಲಾಗುವ ಅಂತಾರಾಷ್ಟ್ರೀಯ ಯೋಗದಿನದ ಮುಖ್ಯ ಕಾರ್ಯಕ್ರಮವು ಪಶ್ಚಿಮ ಬಂಗಾಳದ ರಾಜಧಾನಿ ಕೋಲ್ಕತ್ತಾದ ಐತಿಹಾಸಿಕ ರೆಡ್ ರೋಡ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ನಡೆಯಲಿದೆ ಎಂದು ಕೇಂದ್ರ ಆಯುಷ್ ಖಾತೆ ರಾಜ್ಯ ಸಚಿವ ಪ್ರತಾಪರಾವ್ ಜಾಧವ್ ತಿಳಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿಯ ಯೋಗ ದಿನದ ಧ್ಯೇಯವಾಕ್ಯ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಆಗಿದ್ದು, ದೈಹಿಕ ಆರೋಗ್ಯ, ಮಾನಸಿಕ ನೆಮ್ಮದಿ ಹಾಗೂ ಆರೋಗ್ಯಯುತ ವೃದ್ಧಾಪ್ಯಕ್ಕೆ ಯೋಗದ ಮಹತ್ವವನ್ನು ಇದು ಪ್ರತಿಬಿಂಬಿಸುತ್ತದೆ ಎಂದು ಹೇಳಿದರು.

ಈ ಬಾರಿ ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ ವಿಶ್ವದ ಸುಮಾರು 2,500 ಸ್ಥಳಗಳಲ್ಲಿ ಯೋಗ ಕಾರ್ಯಕ್ರಮಗಳು ನಡೆಯಲಿವೆ. ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಮಂಡಳಿಯ ಸಹಯೋಗದಲ್ಲಿ ವಿದೇಶಗಳಲ್ಲಿರುವ 210ಕ್ಕೂ ಹೆಚ್ಚು ಭಾರತೀಯ ರಾಯಭಾರಿ ಕಚೇರಿಗಳು ಮತ್ತು ಮಿಷನ್‌ಗಳು ಯೋಗ ಕಾರ್ಯಕ್ರಮಗಳನ್ನು ಆಯೋಜಿಸಲಿವೆ ಎಂದು ಅವರು ತಿಳಿಸಿದರು. ಯೋಗ ದಿನದ ಪೂರ್ವಭಾವಿಯಾಗಿ ಜೂನ್ 14ರಂದು ದೇಶವ್ಯಾಪಿ ನೀರ ಯೋಗಾಭ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ನಾಲ್ಕು ಲಕ್ಷಕ್ಕೂ ಹೆಚ್ಚು ಜನರು ಏಕಕಾಲದಲ್ಲಿ ಭಾಗವಹಿಸುವ ಮೂಲಕ ಹೊಸ ವಿಶ್ವದಾಖಲೆ ನಿರ್ಮಿಸಲಾಗಿದೆ ಎಂದು ಅವರು ತಿಳಿಸಿದರು.

ಇದಲ್ಲದೆ, ಕೇಂದ್ರ ಸಂಸ್ಕೃತಿ ಸಚಿವಾಲಯವು ದೇಶದ 100 ಸ್ಥಳಗಳಲ್ಲಿ ವಿಶೇಷ ಯೋಗ ದಿನ ಕಾರ್ಯಕ್ರಮಗಳನ್ನು ಆಯೋಜಿಸಲಿದ್ದು ಭಾರತದ ಸಾಂಸ್ಕೃತಿಕ ಪರಂಪರೆ ಮತ್ತು ಯೋಗ ಸಂಪ್ರದಾಯಗಳ ಸಮನ್ವಯವನ್ನು ಪ್ರದರ್ಶಿಸಲಿದೆ ಎಂದರು.

ಕಳೆದ ಕೆಲವು ತಿಂಗಳುಗಳಲ್ಲಿ ದೆಹಲಿಯಲ್ಲಿ 100 ದಿನಗಳ ಕೌಂಟ್‌ಡೌನ್ ಕಾರ್ಯಕ್ರಮ, ಮಹಾರಾಷ್ಟ್ರದ ಲೋನಾರ್‌ನಲ್ಲಿ 75 ದಿನಗಳ ಕಾರ್ಯಕ್ರಮ, ಹೈದರಾಬಾದ್‌ನ ಕನ್ಹಾ ಶಾಂತಿ ವನದಲ್ಲಿ 50 ದಿನಗಳ ಕಾರ್ಯಕ್ರಮ ಹಾಗೂ ಮಧ್ಯಪ್ರದೇಶದ ಖಜುರಾಹೋದಲ್ಲಿ 25 ದಿನಗಳ ಕೌಂಟ್‌ಡೌನ್ ಕಾರ್ಯಕ್ರಮ ಯಶಸ್ವಿಯಾಗಿ ನಡೆದಿರುವುದನ್ನೂ ಅವರು ಉಲ್ಲೇಖಿಸಿದರು.

ಜೂ.13ರಿಂದ 20ರವರೆಗೆ ನಡೆಯುತ್ತಿರುವ ಗಂಗೋತ್ರಿಯಿಂದ ಗಂಗಾಸಾಗರದವರೆಗೆ: ಗಂಗಾ ತಟ ಯೋಗ ಯಾತ್ರೆ ಕಾರ್ಯಕ್ರಮದ ಕುರಿತು ಮಾಹಿತಿ ನೀಡಿದ ಜಾಧವ್, ಗಂಗೋತ್ರಿ, ಹರಿದ್ವಾರ, ವಾರಾಣಸಿ, ಪಾಟ್ನಾ, ಹುಗ್ಲಿ ಹಾಗೂ ಗಂಗಾಸಾಗರ ಸೇರಿದಂತೆ ಹಲವು ಪ್ರದೇಶಗಳನ್ನು ಒಳಗೊಂಡಿರುವ ಈ ಯಾತ್ರೆಯು ಯೋಗ, ಪರಿಸರ ಸಂರಕ್ಷಣೆ, ನದಿ ಸಂಸ್ಕೃತಿ ಹಾಗೂ ಜನಸಹಭಾಗಿತ್ವವನ್ನು ಉತ್ತೇಜಿಸುವ ಉದ್ದೇಶ ಹೊಂದಿದೆ ಎಂದು ಹೇಳಿದರು.

ಮುಖ್ಯ ಕಾರ್ಯಕ್ರಮಕ್ಕೂ ಮುನ್ನ ಕೋಲ್ಕತ್ತಾದಲ್ಲಿ ವಿಶೇಷ ಕಾರ್ಯಕ್ರಮಗಳ ಸರಣಿ ನಡೆಯಲಿದೆ. ಜೂ.19ರಂದು ಓಟದಿಂದ ಧ್ಯಾನದತ್ತ ಕಾರ್ಯಕ್ರಮದ ಮೂಲಕ ದೈಹಿಕ ಸಾಮರ್ಥ್ಯ ಮತ್ತು ಮಾನಸಿಕ ಆರೋಗ್ಯದ ನಡುವಿನ ಸಂಬಂಧವನ್ನು ಬಿಂಬಿಸಲಾಗುವುದು. ಜೂನ್ 20ರಂದು ವಂದೇ ಯೋಗಂ ಹಾಗೂ ಪಶ್ಚಿಮ ಬಂಗಾಳ ದಿನಾಚರಣೆ ಕಾರ್ಯಕ್ರಮಗಳ ಮೂಲಕ ಯೋಗ, ದೇಶಭಕ್ತಿ ಮತ್ತು ಸಾಂಸ್ಕೃತಿಕ ಪರಂಪರೆಯ ಸಮನ್ವಯವನ್ನು ಪ್ರದರ್ಶಿಸಲಾಗುವುದು ಎಂದು ಅವರು ತಿಳಿಸಿದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೇರಿ

ನಾನೊಬ್ಬ ಹಿಂದೂ, ಹಿಂದುವಾಗಿಯೇ ಸಾಯುತ್ತೇನೆ, ಆದರೆ ನನ್ನದು ಎಲ್ಲರನ್ನೂ ಒಳಗೊಂಡ ಹಿಂದುತ್ವ

- ಡಿಕೆಶಿ

-ಅಂದರೆ ನಿಮ್ಮ ಹಿಂದುತ್ವದಲ್ಲಿ ದೇಶವನ್ನು ವಿರೋಧಿಸುವವರೂ ಸೇರುತ್ತಾರಾ? ನಮ್ಮ ಹಿಂದುತ್ವದಲ್ಲಿ ದೇಶ ಪ್ರೇಮಿಗಳು ಮಾತ್ರ ಇರುತ್ತಾರೆ, ಅವರು ಯಾವುದೇ ಜಾತಿ, ಮತ, ಧರ್ಮಕ್ಕೆ ಸೇರಿದವರಾಗಿದ್ದರೂ!

ದಿನ ಭವಿಷ್ಯ

ಮೇಷ
ಕಚೇರಿ ಕೆಲಸದಲ್ಲಿ ಹೆಚ್ಚು ಎಚ್ಚರ ವಹಿಸಿ. ಲೋಪ ಆಗದಿರಲಿ. ಸಂಜೆ ವೇಳೆಗೆ ತೃಪ್ತಿಯ ಭಾವ. ತಾಳ್ಮೆಯ ನಡೆ ನಿಮ್ಮನ್ನು ಮುನ್ನಡೆಸುವುದು.

ವೃಷಭ
ನಿಮ್ಮ ನಿರ್ವಹಣೆ ಇತರರಿಗೆ ಅಸೂಯೆ ತರಬಹುದು. ವೃತ್ತಿ ಸಂಬಂಧ ಪ್ರಯಾಣ. ಬೆನ್ನು ನೋವಿದ್ದವರಿಗೆ ಉಪಶಮನ ಸಿಗಲಿದೆ.

ಮಿಥುನ
ನಿಮ್ಮ ಯೋಜನೆ ಸಫಲ. ಆರ್ಥಿಕ ಲಾಭ. ಪ್ರಮುಖ ವ್ಯಕ್ತಿಯನ್ನು ಭೇಟಿಯಾಗುವ ಅವಕಾಶ. ಭಾವನಾತ್ಮಕ ಏರುಪೇರು. ದೃಢ ಮನಸ್ಸಿರಲಿ.

ಕಟಕ
ವೃತ್ತಿಯಲ್ಲಿ ಮತ್ತು ಪ್ರೀತಿಯ ವಿಷಯದಲ್ಲಿ ಮಹತ್ವದ ಬೆಳವಣಿಗೆ. ಹಳೆಯ ಮಿತ್ರರ ಭೇಟಿ. ಅತಿಯಾದ ಕೆಲಸ ಬಳಲಿಕೆ ತರಲಿದೆ. ಖರ್ಚು ಅಧಿಕ.

ಸಿಂಹ
ಆಶಾವಾದದಿಂದ ದಿನ ಆರಂಭಿಸಿ. ಸಣ್ಣ ಹಿನ್ನಡೆಗಳಿಗೆ ಅಂಜದಿರಿ. ಕ್ರೀಡಾಳುಗಳಿಗೆ ಶುಭದಿನ. ಕೌಟುಂಬಿಕ ವ್ಯಾಜ್ಯ ಪರಿಹಾರದ ಸಂಕೇತ.

ಕನ್ಯಾ
ಜನರ ಜತೆ ಸಂವಹನ ಸಾಧಿಸಲು ಹಿಂಜರಿಕೆ ಬೇಡ. ನಿಮ್ಮ ವೃತ್ತಿ ಉನ್ನತಿಗೆ ಅದು ಅಗತ್ಯ. ಆತ್ಮೀಯರು ಮನಸ್ಸಿಗೆ ಬೇಸರ ತರುವರು.

ತುಲಾ
ವೃತ್ತಿ ಕಾರ್ಯದಲ್ಲೇ ಇಂದು ದಿನ ಕಳೆಯಲಿದೆ. ಉಳಿದ ವಿಚಾರಗಳಿಗೆ ವೇಳೆ ಸಾಲದು. ಶಾಪಿಂಗ್ ಹೊರಟರೆ ಜೇಬು ಖಾಲಿಯಾದೀತು.

ವೃಶ್ಚಿಕ
ಸ್ನೇಹವೊಂದು ಪ್ರೀತಿಗೆ ತಿರುಗಬಹುದು. ವೃತ್ತಿಪರರು ಹೊಸ ವ್ಯವಹಾರ ಆರಂಭಿಸಲು ಸಕಾಲ. ಕೌಟುಂಬಿಕ ಭಿನ್ನಮತ ನಿವಾರಣೆ.

ಧನು
ಕೆಲಸದಲ್ಲಿ ನಿರಾಸಕ್ತಿ. ವಿರಾಮ ಬಯಸುವಿರಿ. ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಸಾಂಸಾರಿಕ ಸಮಸ್ಯೆಗೆ ಪರಿಹಾರ ತುಸು ಕಷ್ಟ, ತಾಳ್ಮೆ ವಹಿಸಿ.

ಮಕರ
ನಿಮ್ಮ ಸುತ್ತ ಒಂದು ಬಗೆಯ ಅಸಹನೆ, ಉದ್ವಿಗ್ನತೆ ಆವರಿಸುವುದು. ಅನ್ಯರ ಜತೆ ವಿನಯದಿಂದ ವ್ಯವಹರಿಸಿ. ನಿಮ್ಮ ಕೋಪ ನಿಯಂತ್ರಿಸಬೇಕು.

ಕುಂಭ
ಪ್ರತಿಯೊಂದು ವಿಷಯವನ್ನು ಗುಣಾತ್ಮಕ ದೃಷ್ಟಿಯಿಂದ ನೋಡಿ. ನೆಗೆಟಿವ್ ಚಿಂತನೆ ಬಿಡಿ. ಹಳೆಯ ಹೂಡಿಕೆ ಲಾಭ ತರಲಿದೆ.

ಮೀನ
ಖಾಸಗಿ ಸಮಸ್ಯೆ ಕಿರಿಕಿರಿ ತರುವುದು. ಸಣ್ಣ ವಿಷಯದಲ್ಲೂ ತಪ್ಪು ಹುಡುಕುವಿರಿ. ಅತಿಥಿ ಆಗಮನದಿಂದ ಮನೆಯ ವಾತಾವರಣ ಬದಲು.

ರಾಹುಕಾಲ: 3.00 - 4.30
ಗುಳಿಕಕಾಲ: 12.00-1.30

ಅದೃಷ್ಟ ಸಂಖ್ಯೆ: 5,9,2,7

ಚಂದ್ರಶೇಖರ ಶ್ರೀಗಳು ಕಲಿತ ಶಾಲೆ ಅಭಿವೃದ್ಧಿಗೆ ಮುಂದಾದ ಮಠ

ಮಠದಿಂದ ಶಾಲೆ ದತ್ತು

• **ರಮೇಶ್, ಕರುವಾನೆ**

• **ಶೃಂಗೇರಿ:** ಶ್ರೀ ಶಾರದಾ ಪೀಠದ 34ನೇ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಸ್ವಾಮೀಜಿಗಳು ಕಲಿತ ಶಾಲೆಯನ್ನು ಉಳಿಸಿಕೊಳ್ಳಲು ಪಟ್ಟಣದ ಮಲ್ಲಿಕಾರ್ಜುನ ಬೀದಿಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಶ್ರೀಮಠ ದತ್ತು ಪಡೆದುಕೊಂಡು ಅಭಿವೃದ್ಧಿಗೆ ಮುಂದಾಗಿದೆ.

ತಾಲೂಕಿನ ಪ್ರಥಮ ಸರ್ಕಾರಿ ಪ್ರಾಥಮಿಕ ಶಾಲೆ ಎಂಬ ಹೆಗ್ಗಳಿಕೆಗೆ ಪಾತ್ರವಾದ ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕರ ಶಾಲೆಗೆ 173 ವರ್ಷಗಳ ಇತಿಹಾಸವಿದೆ. ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯ ಎದುರು ಇರುವ ಈ ಶಾಲೆ ಬ್ರಿಟಿಷರ ಆಳ್ವಿಕೆಯಲ್ಲಿ 1853ರಲ್ಲಿ ಆರಂಭಗೊಂಡಿತು ಎಂಬುದು ದಾಖಲೆಯಿಂದ ತಿಳಿದುಬಂದಿದೆ.

ಶಾಲೆಯಲ್ಲಿ ಸಹಸ್ರಾರು ವಿದ್ಯಾರ್ಥಿಗಳು ಈವರೆಗೆ ವ್ಯಾಸಂಗ ಮಾಡಿದ್ದು 1980-90 ರ ದಶಕದಲ್ಲಿ 800ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು. ತಾಲೂಕಿನಲ್ಲಿ ಖಾಸಗಿ ಶಾಲೆಗಳು ಪ್ರಾರಂಭಗೊಂಡ ಕಾರಣ ಮಕ್ಕಳ ಸಂಖ್ಯೆ ಗಣನೀಯವಾಗಿ ಕುಸಿದಿದೆ. ಕಳೆದ ವರ್ಷ 10 ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಮಾಡಿದ್ದರು. ಈ ಹಿಂದೆ ಶ್ರೀ ಶಾರದಾ ಪೀಠದ 34ನೇ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಸ್ವಾಮೀಜಿಗಳು ಈ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪೂರೈಸಿದ್ದು ಅಪೂರ್ವ ದಾಖಲೆಯಾಗಿದೆ. ಜಗದ್ಗುರುಗಳು ಕಲಿತ ಶಾಲೆ ಎಂಬ ಕಾಳಜಿಯಿಂದ ಶಾಲೆ ಉಳಿಸಲು ಶ್ರೀ ಮಠವು ಇದೀಗ ದತ್ತು ಪಡೆದಿದೆ.

ವಿಶೇಷವೆಂದರೆ ಸರ್ಕಾರಿ ಶಾಲೆಯಲ್ಲಿ ಸೌಕರ್ಯವಿದ್ದರೂ ಶಾಲೆಗೆ ಮಾತ್ರ ಮಕ್ಕಳು ಬರುತ್ತಿಲ್ಲ. ವಿದ್ಯಾದಿ ದೇವತೆಯ ನಾಡಿನಲ್ಲಿರುವ ಸರ್ಕಾರಿ ಶಾಲೆಯನ್ನು ಮುಚ್ಚುವ ಸ್ಥಿತಿಗೆ ಬಂದಿರುವುದು ಸೋಜಿಗದ ಸಂಗತಿ. ಆಧುನಿಕ ಕಾಲದ ಶಿಕ್ಷಣ ವ್ಯವಸ್ಥೆಯಲ್ಲಿ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಪಡೆಯಲು ನಿರಾಸಕ್ತಿ ತೋರಿಸುತ್ತಿರುವುದರಿಂದ ಮಕ್ಕಳ ಕೊರತೆ ಕಾಡುತ್ತಿದ್ದು ಶಾಲೆಯನ್ನು ಮುಚ್ಚುವ ಪರಿಸ್ಥಿತಿ ಬಂದಿದೆ. ಸ್ಥಳೀಯರು ಹಳೆ ವಿದ್ಯಾರ್ಥಿಗಳು ಹಾಗೂ ಶಿಕ್ಷಣ ಇಲಾಖೆ ಅವಿರತವಾಗಿ ಶ್ರಮಿಸಿದ್ದಾರೆ. ಇದೀಗ ಶ್ರೀಮಠದ ಆಡಳಿತ ಅಧಿಕಾರಿಗಳು ಹಾಗೂ ಸಿಬ್ಬಂದಿ ಶಾಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು ಸರ್ಕಾರದಿಂದ ನೇಮಕವಾಗುವ ಶಿಕ್ಷಕರೊಂದಿಗೆ ಅಗತ್ಯವಿದ್ದಲ್ಲಿ ಅತಿಥಿ ಶಿಕ್ಷಕರ ಸೇವೆಯನ್ನು ಪಡೆಯಲು ಅನುಮತಿ ನೀಡಿದ್ದಾರೆ.



ತಾಲೂಕಿನ ಮೊದಲ ಶಾಲೆ ಹಾಗೂ ಜಗದ್ಗುರುಗಳು ಶಿಕ್ಷಣ ಪಡೆದ ಶಾಲೆ ಮುಚ್ಚಬಾರದು ಎಂಬ ನಿರ್ಧಾರದಿಂದ ಶಾಲೆಯನ್ನು ಉಳಿಸಿಕೊಳ್ಳಲು ಶ್ರಮಿಸಲಾಗುತ್ತಿದೆ. ಈ ಹಿಂದೆ ರಾಜ್ಯ ಸಚಿವರಾಗಿದ್ದ ಬೇಗಾನೆ ರಾಮಯ್ಯ ಈ ಶಾಲೆಯಲ್ಲಿ ವ್ಯಾಸಂಗ ಮಾಡಿದ್ದವರಾಗಿದ್ದರು.
■ **ಡಾ. ನಿರಂಜನ್‌ಕುಮಾರ್, ಶಾಲಾ ಅಭಿವೃದ್ಧಿ ಸಮಿತಿ ಸದಸ್ಯ.**

ಶ್ರೀಮಠವು ಶಾಲೆಯನ್ನು ದತ್ತು ಪಡೆಯುವುದರೊಂದಿಗೆ ಮಕ್ಕಳನ್ನು ಕರೆ ತರಲು ಉಚಿತವಾಗಿ ವಾಹನ ವ್ಯವಸ್ಥೆ ಕಲ್ಪಿಸಿದೆ. ಜಗದ್ಗುರುಗಳ ಮಾರ್ಗದರ್ಶನದಂತೆ ಶ್ರೀಮಠದ ಆಡಳಿತ ಅಧಿಕಾರಿಗಳು ಶಾಲೆಗೆ ಭೇಟಿ ನೀಡಿ ಪರಿಶೀಲಿಸಿದ್ದಾರೆ.
■ **ವರಲಕ್ಷ್ಮೀ, ಕ್ಷೇತ್ರ ಶಿಕ್ಷಣಾಧಿಕಾರಿ, ಶೃಂಗೇರಿ.**

ಆಧುನೀಕರಣಗೊಳಿಸಲು ಸಜ್ಜು: ಶಾಲೆಯನ್ನು ದತ್ತು ಪಡೆದಿರುವ ಶ್ರೀ ಮಠವು ಶಾಲೆಯ ಗೋಡೆ ಕಾಂಪೌಂಡ್ ಸಹಿತ ಎಲ್ಲಾ ಕಡೆ ಸುಣ್ಣಬಣ್ಣ ಮಾಡಿಸಿದೆ. ಕಿಟಕಿ, ಬಾಗಿಲು, ಉಪಕರಣಗಳನ್ನು ಆಧುನಿಕರಿಸಿದೆ. ಶಿಕ್ಷಕರು ಹಾಗೂ ಸಮಿತಿಯ ಸದಸ್ಯರ ಪ್ರಯತ್ನದಿಂದ ಕುಸಿದಿದ್ದ ಮಕ್ಕಳ ಸಂಖ್ಯೆ ಗಣನೀಯವಾಗಿ ಏರಿಕೆ ಕಂಡಿದೆ. ಪ್ರಸಕ್ತ ಸಾಲಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ 40 ದಾಟಿದ್ದು, ಇನ್ನಷ್ಟು ಮಕ್ಕಳು ಸೇರ್ಪಡೆಯಾಗಲಿದ್ದಾರೆ. ಆಂಗ್ಲ ಮಾಧ್ಯಮ ಎಲ್‌ಕೆಜಿ, ಯುಕೆಜಿ ಸಹಿತ ಆಧುನಿಕ ಶಿಕ್ಷಣ ಪದ್ಧತಿ ಆರಂಭಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆಯಾಗಿದೆ.

ಬಸ್ ವ್ಯವಸ್ಥೆ: ಶ್ರೀ ಮಠವು ಶಾಲೆಗೆ ಮೂಲ ಸೌಕರ್ಯ ಒದಗಿಸಲು ಆದ್ಯತೆ ನೀಡಿದೆ. ಮಕ್ಕಳನ್ನು ಕರೆತರಲು ವಾಹನ ವ್ಯವಸ್ಥೆ ಮಾಡಿದ್ದು ಪೋಷಕರಿಗೆ ಹೊರೆಯಾಗದಂತೆ ಸಂಪೂರ್ಣ ಉಚಿತ ಸಾರಿಗೆಯ ಅನುಕೂಲ ಕಲ್ಪಿಸಿದೆ.

ಅಭಿವೃದ್ಧಿ ಸಮಿತಿ ರಚನೆ: ಶಾಲೆಯ ಹಳೆ ವಿದ್ಯಾರ್ಥಿಗಳನ್ನು ಒಳಗೊಂಡ ಸಮಿತಿ ರಚಿಸಲಾಗಿದ್ದು ಶ್ರೀಮಠದ ಆಡಳಿತಾಧಿಕಾರಿ ಪಿ.ಎ. ಮುರಳಿ ಅಧ್ಯಕ್ಷರಾಗಿದ್ದಾರೆ. ಟಿ. ನಾಗೇಶ ಕಾರ್ಯದರ್ಶಿಯಾಗಿದ್ದು, ನಿರಂಜನ್ ಕುಮಾರ್, ಲಕ್ಷ್ಮಿ, ವೆಂಕಟರಮಣ, ವೇಣು, ಮಾಧವ ನಾಯಕ್, ಮಂಜುನಾಥ್, ಸುವರ್ಣ, ವಿಜಯಕುಮಾರ್, ಬೇಗಾನೆ ಮಂಜುನಾಥ್ ಸಮಿತಿಯ ಸದಸ್ಯರಾಗಿದ್ದಾರೆ.

ಗೃಹ ಸಚಿವ ಖರ್ಗೆಯಿಂದ ಆರೆಸ್ಸೆಸ್‌ಗೆ ಸುದೀರ್ಘ ಪತ್ರ

ಪುಟ ೧➡ ಈ ಪ್ರಮಾಣ, ಪ್ರಭಾವ ಮತ್ತು ವ್ಯಾಪ್ತಿಯ ಕಾರಣದಿಂದಾಗಿ ಆರ್‌ಎಸ್‌ಎಸ್‌ನ್ನು ಪಾರದರ್ಶಕತೆ, ಹೊಣೆಗಾರಿಕೆ ಮತ್ತು ಸಾಂವಿಧಾನಿಕ ಅನುಸರಣೆಯ ಅತ್ಯುನ್ನತ ಮಾನದಂಡಗಳಿಗೆ ಬದ್ಧಗೊಳಿಸಬೇಕು ಎಂದು ಪ್ರಿಯಾಂಕ್ ಖರ್ಗೆ ಪತ್ರದಲ್ಲಿ ಮನವಿ ಮಾಡಿಕೊಂಡಿದ್ದಾರೆ.

8 ಅಂಶಗಳ ಬಗ್ಗೆ ಮಾಹಿತಿ ಕೇಳಿದ ಸಚಿವ ಖರ್ಗೆ:

1. ಆರ್‌ಎಸ್‌ಎಸ್‌ನ ಕಾನೂನಾತ್ಮಕ ಸ್ಥಾನಮಾನ ಮತ್ತು ಸಂಘಟಿತ ರಚನೆ ವಿವರ
2. ಪದಾಧಿಕಾರಿಗಳು ಮತ್ತು ಅಧಿಕೃತ ಪ್ರತಿನಿಧಿಗಳ ವಿವರಗಳು
3. ದೇಣಿಗೆ, ಕೊಡುಗೆ ಮತ್ತು ಆದಾಯದ ಮೂಲಗಳು
4. ವೆಚ್ಚ ಮತ್ತು ಆಸ್ತಿಪಾಸ್ತಿಗಳ ವಿವರಗಳು
5. ಕಾನೂನಿನ ಪ್ರಕಾರ ಅನ್ವಯವಾಗುವ ತೆರಿಗೆಗಳನ್ನು ಸಕ್ರಮವಾಗಿ ಪಾವತಿಸಲಾಗುತ್ತಿದೆಯೇ ಎಂಬ ವಿಷಯ
6. ಔಪಚಾರಿಕ ನೋಂದಣಿಯಿಲ್ಲದೆ ತನ್ನ ಚಟುವಟಿಕೆಗಳನ್ನು ನಡೆಸಲು ಯಾವ ಕಾನೂನಾತ್ಮಕ ಆಧಾರವನ್ನು ಅವಲಂಬಿಸಲಾಗಿದೆ ಎನ್ನುವ ಕುರಿತು
7. ಯಾವುದೇ ಸಾರ್ವಜನಿಕ ಜವಾಬ್ದಾರಿಯಿಲ್ಲದೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಕಾರ್ಯನಿರ್ವಹಿಸುವ ಹಕ್ಕನ್ನು ಯಾವ ಸಾಂವಿಧಾನಿಕ ಮತ್ತು ಶಾಸನಾತ್ಮಕ ಚೌಕಟ್ಟಿನ ಅಡಿಯಲ್ಲಿ ಪಡೆದುಕೊಳ್ಳಲಾಗಿದೆ?
8. ಸಾರ್ವಜನಿಕ ಕಾರ್ಯಕ್ರಮಗಳು, ಮಾರ್ಗ ಮೆರವಣಿಗೆಗಳು, ಸಾಮೂಹಿಕ ಸಭೆಗಳು ಮತ್ತು ಇತರ ಸಂಘಟಿತ ಚಟುವಟಿಕೆಗಳಿಗೆ ಅನುಮತಿಗಳು, ಅಧಿಕಾರಗಳು ಮತ್ತು ಅನುಸರಣಾ ಕಾರ್ಯವಿಧಾನಗಳ ವಿವರ

ಈ ಸಂಬಂಧ ಅಧಿಕೃತ ಚರ್ಚೆಗೆ ಸಿದ್ಧರಿದ್ದೇವೆ. ನಿಮ್ಮ ಅಧಿಕೃತ ಪ್ರತಿನಿಧಿಗಳನ್ನು ಕಳುಹಿಸುವ ಬಗ್ಗೆ ಪ್ರತಿಕ್ರಿಯೆ ನಿರೀಕ್ಷಿಸುತ್ತೇವೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಪತ್ರದಲ್ಲಿ ಬರೆದಿದ್ದಾರೆ.

ಬರ ಎದುರಿಸಲು ಸಜ್ಜಾಗಿ



ಪುಟ ೧➡ ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಬೇಕು. ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಗಳು ಎಷ್ಟರಮಟ್ಟಿಗೆ ಜಾರಿ ಆಗುತ್ತಿದೆ ಎನ್ನುವ ಬಗ್ಗೆ ವರದಿ ನೀಡಬೇಕಿದ್ದು, ಇದರ ಆಧಾರದ ಮೇಲೆ ಕೇಂದ್ರದ ಸಹಕಾರ, ಅನುದಾನಕ್ಕೆ ಬರುವಂತೆ ಒತ್ತಡ ಹೇರೋಣ ಎಂದರು.

ಎಪಿಎಂಸಿ ಜಾಗಗಳ ಸಂರಕ್ಷಣೆ

ರಾಜ್ಯದಲ್ಲಿರುವ ಶೀತಲಗೃಹ ಮತ್ತು ಗೋದಾಮುಗಳ ಬಗ್ಗೆ ಪಟ್ಟಿ ನೀಡಬೇಕು. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಸೇರಿದ ಜಾಗಗಳು ಸುರಕ್ಷಿತವಾಗಿರಬೇಕು. ಕಾಂಪೌಂಡ್ ಹಾಕಿಸಿ ಈ ಬಗ್ಗೆ ಕ್ರಮ ಕೈಗೊಳ್ಳಬೇಕು. ಎಪಿಎಂಸಿಗಳು ಸರಿಯಾಗಿ ರೈತರಿಗೆ ಬಳಕೆ ಆಗುತ್ತಿವೆಯೇ ಎನ್ನುವುದನ್ನು ಖಚಿತಪಡಿಸಿಕೊಳ್ಳಬೇಕು. ಎಪಿಎಂಸಿ ಆವರ್ತ ನಿಧಿ ಸದ್ಬಳಕೆ ಆಗುವಂತೆ ನೋಡಿಕೊಳ್ಳಿ ಎಂದು ಸೂಚಿಸಿದರು.

ಯಾವ ಗ್ಯಾರಂಟಿಯೂ ನಿಲ್ಲೋದಿಲ್ಲ: ಸಿಎಂ ಡಿಕೆಶಿ

ಪುಟ ೧➡ ಸರ್ಕಾರವು ಕರ್ನಾಟಕದವರಿಗೆ ಈ ಯೋಜನೆ ನೀಡುತ್ತಿದ್ದು, ಅನ್ಯ ರಾಜ್ಯದವರಿಗೆ ಈ ಯೋಜನೆ ನೀಡುವುದಿಲ್ಲ, ಉಚಿತ ವಿದ್ಯುತ್‌ನ್ನು ನಮ್ಮ ರಾಜ್ಯದ ಮತದಾರರಿಗೆ ನೀಡಬೇಕೇ ಹೊರತು, ಬೇರೆ ರಾಜ್ಯದವರಿಗೆ ಯಾಕೆ ಕೊಡಬೇಕು? ಹೀಗಾಗಿ ಫಲಾನುಭವಿಗಳಿಗೆ ಗುರುತಿನ ಚೀಟಿ ನೀಡಲು ಸಚಿವ ಸಂಪುಟದಲ್ಲಿ ತೀರ್ಮಾನಿಸಿದ್ದೇವೆ. ಆ ಪ್ರಕ್ರಿಯೆ ನಡೆಯುತ್ತಿದೆ. ಯೋಜನೆ ನಿಲ್ಲಿಸುವುದು ನಮ್ಮ ಉದ್ದೇಶವಲ್ಲ. ನಮ್ಮ ಗ್ಯಾರಂಟಿ ದೇಶಕ್ಕೆ ಮಾದರಿ. ಮಹಾರಾಷ್ಟ್ರ, ಮಧ್ಯಪ್ರದೇಶ, ಆಂಧ್ರಪ್ರದೇಶ ಸೇರಿದಂತೆ ಬೇರೆ ರಾಜ್ಯಗಳು ನಮ್ಮ ಮಾದರಿ ಅನುಸರಿಸಿವೆ ಎಂದು ತಿಳಿಸಿದರು. ಕೆಲವರು ಗೃಹಲಕ್ಷ್ಮಿ ಹಣವನ್ನು ನಕಲಿ ಫೈನಾನ್ಸ್ ವ್ಯವಹಾರಕ್ಕೆ ಬಳಸುತ್ತಿದ್ದಾರೆ. ಬೆಳಗಾವಿಯ ಪ್ರಕರಣವನ್ನು ನೋಡಿದ್ದೇವಲ್ಲ. ಇದಕ್ಕಾಗಿ ಗ್ರಾಮ ಪಂಚಾಯ್ತಿಯಿಂದ ತಾಲ್ಲೂಕು ಪಂಚಾಯ್ತಿವರೆಗೆ ಎಲ್ಲೆಲ್ಲಿ ಇಂತಹ ಸ್ಕೀಂಗಳಿವೆ. ಅವುಗಳಿಗೆ ಕಡಿವಾಣ ಹಾಕಲು ನಾವು ನಿರ್ದೇಶನ ನೀಡಿದ್ದೇವೆ. ನಮ್ಮ ಹೃದಯದಿಂದ ಕೊಟ್ಟ ಯೋಜನೆಗಳಿವು. ಹೆಣ್ಣು ಕುಟುಂಬದ ಕಣ್ಣು. ಅವರ ಮನೆಗಳು ಬೆಳಗಬೇಕು ಎಂದು ನೀಡಲಾಗಿದೆ. ವಿರೋಧ ಪಕ್ಷಗಳು ಹೀಗೆ ಮಾತನಾಡುತ್ತಿರಲಿ ಎಂದು ಕಿಡಿಕಾರಿದರು.

ಸಿಬಿಐನಿಂದ ತನಿಖೆ ನಡೆಸಲು ಒತ್ತಾಯ

ಪುಟ ೧➡ ಇದರ ಜತೆಗೆ, ಧರ್ಮಸ್ಥಳ ಹಾಗೂ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರ ವಿರುದ್ಧ ಸುಮಾರು 200 ಕೋಟಿ ರೂ. ವೆಚ್ಚದಲ್ಲಿ ಸಂಘಟಿತ ಮತ್ತು ವ್ಯವಸ್ಥಿತ ಷಡ್ಯಂತ್ರ ರೂಪಿಸಲಾಗಿತ್ತು ಎಂಬ ಅತ್ಯಂತ ಗಂಭೀರ ಆರೋಪವೂ ನ್ಯಾಯಾಲಯದ ಮುಂದೆ ಬಂದಿದೆ ಎಂದಿದ್ದಾರೆ.

ಈ ಆರೋಪಗಳು ಸತ್ಯವೋ ಸುಳ್ಳೋ ಎಂಬುದನ್ನು ತನಿಖೆಯೇ ನಿರ್ಧರಿಸಬೇಕು. ಧರ್ಮಸ್ಥಳದಂತಹ ಪ್ರತಿಷ್ಠಿತ ಸಂಸ್ಥೆಯ ವಿರುದ್ಧ ಇಷ್ಟೊಂದು ದೊಡ್ಡ ಮಟ್ಟದ ಅಭಿಯಾನ ನಡೆಸಲು ಹಣ ಎಲ್ಲಿಂದ ಬಂತು? ಇದರ ಹಿಂದೆ ಯಾರು ಇದ್ದರು? ಇದು ಕೆಲವರ ವೈಯಕ್ತಿಕ ಕೃತ್ಯವೋ ಅಥವಾ ಇದರ ಹಿಂದೆ ದೊಡ್ಡ ಜಾಲವೇ ಕಾರ್ಯನಿರ್ವಹಿಸುತ್ತಿದೆಯೋ ಎಂಬ ಸತ್ಯ ಹೊರಬರಬೇಕಾಗಿದೆ. ಧರ್ಮಸ್ಥಳದ ವಿರುದ್ಧದ ಆರೋಪಗಳ ತನಿಖೆ ನಡೆದಂತೆಯೇ, ಧರ್ಮಸ್ಥಳದ ವಿರುದ್ಧವೇ ಯಾವುದೇ ಸಂಚು ನಡೆದಿದೆಯೇ ಎಂಬುದರ ಬಗ್ಗೆಯೂ ತನಿಖೆ ನಡೆಯಬೇಕು ಎಂದು ಒತ್ತಾಯಿಸಿದ್ದಾರೆ.

ಪ್ರಸ್ತುತ ಪ್ರಕರಣದಲ್ಲಿ, ಕರ್ನಾಟಕ ಮಾತ್ರವಲ್ಲದೆ ವಿವಿಧ ರಾಜ್ಯಗಳ ಜನರೂ ಸಂಚಿನ ಭಾಗವಾಗಿದ್ದಾರೆನ್ನುವ ಆರೋಪ ಕೇಳಿಬಂದಿದೆ. ಕೋಟ್ಯಂತರ ಭಕ್ತರ ಶ್ರದ್ಧಾಕೇಂದ್ರವಾದ ಧರ್ಮಸ್ಥಳದ ವಿರುದ್ಧ ನಡೆದಿರುವ ಹುನ್ನಾರವನ್ನು ಲಘುವಾಗಿ ಪರಿಗಣಿಸಲು ಸಾಧ್ಯವಿಲ್ಲ. ಪ್ರಕರಣವನ್ನು ರಾಜ್ಯ ಪೊಲೀಸ್ ಇಲಾಖೆಯಿಂದ ತನಿಖೆ ನಡೆಸಿದರೆ ಸಾಕಾಗುವುದಿಲ್ಲ. ಆದ್ದರಿಂದ, ಕೇಂದ್ರ ಮಟ್ಟದ ತನಿಖಾ ಸಂಸ್ಥೆಗಳಿಂದ ತನಿಖೆ ನಡೆಸಿದರೆ ಮಾತ್ರವೇ ವಿಸ್ತೃತ ವಿಚಾರಣೆ ನಡೆದು, ಷಡ್ಯಂತ್ರದ ಹಿಂದಿರುವವರು ಯಾರು, ಅವರ ಉದ್ದೇಶವೇನು ಎನ್ನುವುದು ಬೆಳಕಿಗೆ ಬರಲು ಸಾಧ್ಯ.

ಹಿಂದು ಶ್ರದ್ಧಾ ಕೇಂದ್ರಗಳ ವಿರುದ್ಧ ಷಡ್ಯಂತ್ರವೇ?

ಪುಟ ೧➡ **ಹಣದ ಮೂಲ, ಹಣದ ಹರಿವು, ಈ ಪ್ರಕರಣದಲ್ಲಿ ಹೆಸರು ಕೇಳಿಬರುತ್ತಿರುವ ವ್ಯಕ್ತಿಗಳ ಪಾತ್ರ, ಡಿಜಿಟಲ್ ಮತ್ತು ಸಾಮಾಜಿಕ ಜಾಲತಾಣಗಳ ಮೂಲಕ ನಡೆದಿರುವ ಪ್ರಚಾರ ಹಾಗೂ ಇದರ ಹಿಂದಿರುವ ಸಂಪೂರ್ಣ ಜಾಲ ಪತ್ತೆ ಹಚ್ಚಬೇಕಾಗಿದೆ ಎಂದು ಸಿ.ಟಿ. ರವಿ ಆಗ್ರಹಿಸಿದ್ದಾರೆ.**

ಹೀಗಾಗಿ, ಈ ಪ್ರಕರಣವನ್ನು ಕೇಂದ್ರ ತನಿಖಾ ದಳ (ಸಿಬಿಐ)ಕ್ಕೆ ವಹಿಸಿ ಸಮಗ್ರ ಮತ್ತು ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ನಾನು ಆಗ್ರಹಿಸುತ್ತೇನೆ. ಸತ್ಯ ಏನೇ ಇರಲಿ ಅದು ಹೊರಬರಬೇಕು. ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ನಡೆದಿದ್ದರೆ ಅದರ ಹಿಂದಿರುವವರು ಬಯಲಾಗಬೇಕು. ಆರೋಪಗಳಲ್ಲಿ ಸತ್ಯವಿದ್ದರೆ ಅದೂ ಕಾನೂನಿನ ಮುಂದೆ ಸಾಬೀತಾಗಬೇಕು. ಸರ್ಕಾರ ಈ ವಿಚಾರವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ತಕ್ಷಣವೇ ಸಿಬಿಐ ತನಿಖೆಗೆ ಶಿಫಾರಸು ಮಾಡಬೇಕೆಂದು ಸಿ.ಟಿ. ರವಿ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಇಕ್ಬಾಲ್ ಹುಸೇನ್‌ಗೆ ಅನಾರೋಗ್ಯ

• **ಬೆಂಗಳೂರು:** ಹೃದಯ ಸಂಬಂಧಿತ ಅನಾರೋಗ್ಯದಿಂದ ರಾಮನಗರ ಕ್ಷೇತ್ರದ ಶಾಸಕ ಇಕ್ಬಾಲ್ ಹುಸೇನ್ ಅವರನ್ನು ಬೆಂಗಳೂರಿನ ವೈದೇಹಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆರೋಗ್ಯ ಸ್ಥಿರವಾಗಿದೆ. ಎಂದು ಇಕ್ಬಾಲ್ ಹುಸೇನ್ ಅವರಿಗೆ ಚಿಕಿತ್ಸೆ ನೀಡಿರುವ ವೈದೇಹಿ ಆಸ್ಪತ್ರೆಯ ಹೃದ್ರೋಗ ತಜ್ಞ ಡಾ.ವಿ.ಕೆ. ಶ್ರೀನಿವಾಸ್ ಹೇಳಿದರು.



ಆಸ್ಪತ್ರೆಯಲ್ಲಿ ಇಕ್ಬಾಲ್ ಹುಸೇನ್ ಅವರ ಆರೋಗ್ಯ ವಿಚಾರಿಸಿ ಮಾತನಾಡಿದ ಸಿಎಂ ಡಿ.ಕೆ. ಶಿವಕುಮಾರ್, ಶನಿವಾರ ಎದೆ ನೋವು ಕಾಣಿಸಿಕೊಂಡಿದೆ. ಎಡಗೈ ನೋವು ಬಂದಿದ್ದರಿಂದ ಮುನ್ನೆಚ್ಚರಿಕಾ ಕ್ರಮವಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದರು.

ಕೊಲೆ ಕೇಸ್: ಎಫ್‌ಎಸ್ಸೆಲ್ ಅಧಿಕಾರಿಗಳೂ ಶಾಮೀಲು

ಪುಟ ೧➡ ಪೊಲೀಸ್ ತನಿಖೆಯ ಪ್ರಕಾರ, ಬೆಳಗಾವಿಯ ಎಫ್‌ಎಸ್‌ಎಲ್ ಕಚೇರಿಯ ಸೀನಿಯರ್ ಸೈಂಟಿಫಿಕ್ ಆಫಿಸರ್ ಪಿ.ಎನ್ .ನಾಗರಾಜ್, ಲ್ಯಾಬ್ ಅಸಿಸ್ಟೆಂಟ್ ಚನ್ನಯ್ಯ, ಗುಮಾಸ್ತ ಅಪ್ಪಾಸಾಬ್ ನಾಯಿಕ್, ಆರ್ ಎಂಪಿ ವೈದ್ಯ ಬಸವರಾಜ್ ಭಸ್ಮೆ ಹಾಗೂ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಎಫ್‌ಡಿಎ ಅಶೋಕ ಗುಜಾನಾಳ ಅವರನ್ನು ಬಂಧಿಸಲಾಗಿದೆ.

ಪ್ರಕರಣದಲ್ಲಿ ಪ್ರಮುಖ ಆರೋಪಿ ಸುಮಾ ಅವರಿಂದ ಹಣದ ಹಂಚಿಕೆ ನಡೆದಿರುವ ಮಾಹಿತಿ ತನಿಖೆಯಲ್ಲಿ ಬಹಿರಂಗವಾಗಿದ್ದು, ಎಫ್‌ಡಿಎ ಅಶೋಕ ಗುಜಾನಾಳ ಮೂಲಕ ಎಫ್‌ಎಸ್‌ಎಲ್ ಅಧಿಕಾರಿಗಳ ಸಂಪರ್ಕ ಸಾಧಿಸಲಾಗಿತ್ತು ಎನ್ನಲಾಗಿದೆ. ಈ ಮೂಲಕ ಪ್ರಕರಣವನ್ನು ಅಪಘಾತ ಎಂದು ತೋರಿಸುವ ಪ್ರಯತ್ನ ನಡೆದಿರಬಹುದೆಂಬ ಅನುಮಾನ ವ್ಯಕ್ತವಾಗಿದೆ.ಇದುವರೆಗೆ ಪ್ರಕರಣದಲ್ಲಿ ಮೃತ ಸಂದೀಪ್ ಮಂಜರಗಿ ಅವರ ಪತ್ನಿ ಸುಮಾ, ಆಕೆಯ ಪ್ರಿಯಕರ ಮಂಡಲೀಕ, ಸ್ನೇಹಿತ ಸಚಿನ್ ಸೇರಿದಂತೆ ಒಟ್ಟು ಒಂಬತ್ತು ಮಂದಿಯನ್ನು ಪೊಲೀಸರು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ. ಬಂಧಿತರಿಂದ ಮಹತ್ವದ ಮಾಹಿತಿಗಳು ಲಭ್ಯವಾಗುತ್ತಿದ್ದು, ಪ್ರಕರಣದಲ್ಲಿ ಇನ್ನೂ ಕೆಲವರ ಪಾತ್ರ ಇರುವ ಸಾಧ್ಯತೆಗಳಿವೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಈ ಪ್ರಕರಣವು ರಾಜ್ಯದ ತನಿಖಾ ವ್ಯವಸ್ಥೆಯ ವಿಶ್ವಾಸಾರ್ಹತೆಯ ಕುರಿತು ಪ್ರಶ್ನೆಗಳನ್ನು ಹುಟ್ಟುಹಾಕಿದ್ದು, ಫೊರೆನ್ಸಿಕ್ ವರದಿಗಳ ದುರುಪಯೋಗ ಮತ್ತು ಅಧಿಕಾರ ದುರ್ಬಳಕೆಯ ಆರೋಪಗಳು ಸಾರ್ವಜನಿಕ ವಲಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿವೆ. ತನಿಖೆ ಮುಂದುವರಿದಿದ್ದು, ಇನ್ನಷ್ಟು ಆರೋಪಿಗಳ ಬಂಧನ ಸಾಧ್ಯತೆ ಇದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಪ್ರಕರಣದ ಸಂಪೂರ್ಣ ಸತ್ಯಾಂಶ ಅರಿಯಲು ಪೊಲೀಸರು ವಿವಿಧ ಆಯಾಮಗಳಲ್ಲಿ ತನಿಖೆ ಮುಂದುವರಿಸಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಮಹತ್ವದ ಮಾಹಿತಿಗಳು ಬಹಿರಂಗವಾಗುವ ನಿರೀಕ್ಷೆಯಿದೆ.

ಇಂದು ರೆಸಾರ್ಟ್‌ನಲ್ಲೇ ಕೈ ಶಾಸಕಾಂಗ ಪಕ್ಷದ ಸಭೆ

ಪುಟ ೧➡ ವಿಧಾನಪರಿಷತ್ತಿನ 7 ಸ್ಥಾನಗಳಿಗೆ 8 ಅಭ್ಯರ್ಥಿಗಳು ಕಣದಲ್ಲಿರುವುದರಿಂದ ಕಾಂಗ್ರೆಸ್ ಪಕ್ಷ ತನ್ನ ಐವರು ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಲು ರಣತಂತ್ರ ರೂಪಿಸಿದ್ದು, ಅದರಂತೆ ಕಾಂಗ್ರೆಸ್ ಶಾಸಕರ ಮತಗಳು ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮಾತ್ರ ಚಲಾಯಿಸಲು ಏನೆಲ್ಲಾ ತಂತ್ರ ಮಾಡಬೇಕು ಎನ್ನುವ ಬಗ್ಗೆ ಚರ್ಚೆ ನಡೆಯಲಿದೆ.

ಡಿಕೆಶಿ ಸಿಎಂ ಆದ ಬಳಿಕ ಮೊದಲ ಶಾಸಕಾಂಗ ಸಭೆ

ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾದ ನಂತರ ಅವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಮೊದಲ ಶಾಸಕಾಂಗ ಸಭೆ ನಡೆಯುತ್ತಿದ್ದು, ಈ ಸಭೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರುಗಳು ಹಾಗೂ ಪಕ್ಷದ ಎಲ್ಲಾ ಕಾರ್ಯಾಧ್ಯಕ್ಷರು ಪಾಲ್ಗೊಳ್ಳಲಿದ್ದು, ಈ ಸಭೆಗೆ ಕಡ್ಡಾಯವಾಗಿ ಹಾಜರಿರುವಂತೆ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಎಲ್ಲ ಸದಸ್ಯರುಗಳಿಗೆ ಸೂಚನೆ ನೀಡಲಾಗಿದೆ.

ಚುನಾವಣೆಯಲ್ಲಿ ಮತ ಚಲಾಯಿಸುವ ವಿಧಾನ ಬಗ್ಗೆ ಮಾಹಿತಿ: ಸಭೆಯಲ್ಲಿ ವಿಧಾನಪರಿಷತ್ತಿನ ಚುನಾವಣೆಯಲ್ಲಿ ಯಾವ ರೀತಿ ಮತ ಚಲಾಯಿಸಬೇಕು, ಯಾವ ಶಾಸಕರು ಕಾಂಗ್ರೆಸ್‌ನ ಯಾವ ಅಭ್ಯರ್ಥಿಗೆ ಮತ ಹಾಕಬೇಕು ಎನ್ನುವ ಬಗ್ಗೆ ಶಾಸಕರುಗಳಿಗೆ ಸೂಚನೆ ನೀಡಲಾಗುತ್ತದೆ. ವಿಧಾನ ಪರಿಷತ್ತಿನ ಚುನಾವಣೆಯಲ್ಲಿ ಮೊದಲ ಮತ್ತು ದ್ವಿತೀಯ ಪ್ರಾಶಸ್ತ್ಯದ ಮತ ಚಲಾಯಿಸಲು ಅವಕಾಶವಿದ್ದು, ಮೊದಲ ಪ್ರಾಶಸ್ತ್ಯ ಮತವನ್ನು ಪಕ್ಷ ಸೂಚಿಸಿದ ಅಭ್ಯರ್ಥಿಗಳಿಗೆ ಹಾಕುವ ಶಾಸಕರುಗಳು ಎರಡನೇ ಪ್ರಾಶಸ್ತ್ಯ ಮತವನ್ನು ಯಾವ ಕಾಂಗ್ರೆಸ್ ಅಭ್ಯರ್ಥಿಗೆ ಹಾಕಬೇಕು ಎಂಬುದನ್ನು ಎಲ್ಲಾ ಶಾಸಕರಿಗೂ ತಿಳಿಸಲಾಗುತ್ತದೆ.

ಅಡ್ಡ ಮತದಾನವಾಗದಂತೆ ಎಚ್ಚರ

ಈ ಚುನಾವಣೆಯಲ್ಲಿ ಜೆಡಿಎಸ್ ಪಕ್ಷ 8ನೇ ಅಭ್ಯರ್ಥಿಯನ್ನಾಗಿ ಗೋವಿಂದರಾಜು ಅವರನ್ನು ಕಣಕ್ಕಿಳಿಸಿರುವುದರಿಂದ ಕಾಂಗ್ರೆಸ್ ಪಕ್ಷದಿಂದ ಯಾರೂ ಅಡ್ಡ ಮತದಾನ ಮಾಡದಂತೆ ಕಟ್ಟೆಚ್ಚರ ವಹಿಸಲಾಗಿದ್ದು, ಈ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಸೂಚನೆಯನ್ನು ಎಐಸಿಸಿ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಶಾಸಕರುಗಳಿಗೆ ನೀಡಲಿದ್ದಾರೆ. ವಿಧಾನ ಪರಿಷತ್ತಿನ ಚುನಾವಣೆ ಗೌಪ್ಯ ಮತದಾನವಾಗಿರುವುದರಿಂದ ಯಾರಾದರೂ ಅಡ್ಡಮತದಾನ ಮಾಡಬಹುದು ಎಂಬ ಭೀತಿಯೂ ಇದ್ದು, ಅದಕ್ಕೆ ಅವಕಾಶ ಕೊಡದಂತೆ ಕಾಂಗ್ರೆಸ್ ಶಾಸಕರನ್ನು ಮತದಾನದವರೆಗೂ ರೆಸಾರ್ಟ್‌ನಲ್ಲಿ ಇರಿಸುವ ತಂತ್ರಗಾರಿಕೆಯನ್ನು ಮಾಡಲಾಗಿದೆ. ವಿಧಾನಪರಿಷತ್ತಿನ 7 ಸ್ಥಾನಗಳ ಪೈಕಿ 5 ಸ್ಥಾನಗಳಿಗೆ ಕಾಂಗ್ರೆಸ್ ಪಕ್ಷ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ಎಐಸಿಸಿ ಕಾರ್ಯದರ್ಶಿ ಪಿ.ವಿ. ಮೋಹನ್, ತಿಪ್ಪಣ್ಣ ಕಮಕನೂರು, ಮಳವಳ್ಳಿ ಶಿವಣ್ಣ ಹಾಗೂ ವಿನಯ್ ಕಾರ್ತಿಕ್ ಇವರುಗಳನ್ನು ಅಭ್ಯರ್ಥಿಯಾಗಿ ಕಣಕ್ಕಿಳಿಸಿದೆ. ವಿಧಾನ ಪರಿಷತ್ತಿಗೆ ಮತದಾನ ಬೆಳಿಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೂ ನಡೆಯಲಿದ್ದು, 5 ಗಂಟೆಯ ನಂತರ ಮತ ಎಣಿಕೆ ನಡೆದು ಫಲಿತಾಂಶ ಪ್ರಕಟಿಸಲಾಗುತ್ತದೆ.

ಸ್ಲೋವಾಕಿಯಾ ಸಂಬಂಧ ಸುಮಧುರ

ಪುಟ ೧➡ ಭಾರತದ ಪ್ರಧಾನಿಯೊಬ್ಬರು ಈ ಯುರೋಪಿಯನ್ ರಾಷ್ಟ್ರಕ್ಕೆ ಭೇಟಿ ನೀಡುತ್ತಿರುವುದು ಇದೇ ಮೊದಲು.

ಆರ್ಥಿಕ ಮತ್ತು ಇಂಧನ ಸಹಕಾರ: ಭಾರತ-ಯುರೋಪಿಯನ್ ಯೂನಿಯನ್ ಮುಕ್ತ ವ್ಯಾಪಾರ ಒಪ್ಪಂದವನ್ನು ಆದಷ್ಟು ಬೇಗ ಅನುಷ್ಠಾನಗೊಳಿಸಲು ಇಬ್ಬರೂ ನಾಯಕರು ಒಪ್ಪಿಕೊಂಡಿದ್ದಾರೆ. ಉಭಯ ದೇಶಗಳ ನಡುವೆ ಸಂಚಾರವನ್ನು ಸುಲಭಗೊಳಿಸಲು ಕಾರ್ಮಿಕ ವಲಸೆ ಕ್ಷೇತ್ರದಲ್ಲಿ ಸಹಕಾರದ ಕುರಿತು ತಿಳುವಳಿಕಾ ಪತ್ರಕ್ಕೆ ಸಹಿ ಹಾಕಲಾಗಿದ್ದು, ಸಾಮಾಜಿಕ ಭದ್ರತಾ ಒಪ್ಪಂದವನ್ನು ಶೀಘ್ರದಲ್ಲೇ ಪೂರ್ಣಗೊಳಿಸಲು ನಿರ್ಧರಿಸಲಾಗಿದೆ. ಇದರೊಂದಿಗೆ, ಪರಮಾಣು ಶಕ್ತಿ ಮತ್ತು ಜಿಯೋಥರ್ಮಲ್ ವಿದ್ಯುತ್ ಸೇರಿದಂತೆ ಇಂಧನ ವಲಯದಲ್ಲಿ ಸಹಕಾರವನ್ನು ಹೆಚ್ಚಿಸಲು ಮತ್ತು ಆಟೋಮೊಬೈಲ್, ರೈಲ್ವೆ, ಸುಧಾರಿತ ಉತ್ಪಾದನೆ ಹಾಗೂ ಹಸಿರು ತಂತ್ರಜ್ಞಾನಗಳತ್ತ ಗಮನ ಹರಿಸಲು ಉಭಯ ದೇಶಗಳು ಸಮ್ಮತಿಸಿವೆ.

ರಕ್ಷಣೆ ಮತ್ತು ಜಾಗತಿಕ ಸಮನ್ವಯ: ರಕ್ಷಣಾ ಉದ್ಯಮಗಳ ನಡುವೆ ಸಹಕಾರ ಹೆಚ್ಚಿಸಲು ಉಭಯ ನಾಯಕರ ಮಾತುಕತೆಯ ನಂತರ ರಕ್ಷಣಾ ಸಹಕಾರದ ಕುರಿತು ಆಶಯ ಪತ್ರವನ್ನು ಅಂತಿಮಗೊಳಿಸಲಾಯಿತು. ಜಾಗತಿಕ ಮಟ್ಟದಲ್ಲಿ ಎಲ್ಲಾ ವಿವಾದಗಳು ಮತ್ತು ಉದ್ವಿಗ್ನತೆಗಳನ್ನು ಶಾಂತಿಯುತವಾಗಿ ಬಗೆಹರಿಸಬೇಕು ಮತ್ತು ಜಾಗತಿಕ ಸಂಸ್ಥೆಗಳು 21ನೇ ಶತಮಾನದ ವಾಸ್ತವಗಳನ್ನು ಎದುರಿಸಲು ಮರು ವ್ಯಾಖ್ಯಾನಿಸಿಕೊಳ್ಳಬೇಕು ಎಂದು ಎರಡೂ ದೇಶಗಳು ಒಮ್ಮತ ಸೂಚಿಸಿವೆ.ಬೆಳೆಯುತ್ತಿರುವ ಇಂಡೋ-ಪೆಸಿಫಿಕ್ ಪ್ರದೇಶದ ಪ್ರಾಮುಖ್ಯತೆಯಿಂದ, ಪ್ರಾದೇಶಿಕ ಸಂಪರ್ಕ, ಮುಕ್ತ ಅಂತರರಾಷ್ಟ್ರೀಯ ವ್ಯಾಪಾರ ಮತ್ತು ನೌಕಾಯಾನದ ಸ್ವಾತಂತ್ರ್ಯ ಬೆಂಬಲಿಸಲು ಪ್ರಬಲ ಪಾಲುದಾರಿಕೆಯ ಅಗತ್ಯವಿದೆ ಎಂದು ನಾಯಕರು ಒಪ್ಪಿಕೊಂಡಿದ್ದಾರೆ.

ಭಯೋತ್ಪಾದಕರು ಬ್ರದರ್ಸ್ ಹೇಗಾದರು: ಸಿ.ಟಿ.ರವಿ ಪ್ರಶ್ನೆ

ಬಳ್ಳಾರಿ: ಭಯೋತ್ಪಾದಕರನ್ನು, ಕುಕ್ಕರ್ ಬಾಂಬ್ ಇಟ್ಟವರನ್ನು ಕಾಂಗ್ರೆಸ್‌ನವರು ಅವರೆಲ್ಲರೂ ನಮ್ಮ ಬ್ರದರ್ಸ್ ಎಂದು ಕರೆದಿದ್ದರು. ಇದು ಕಾಂಗ್ರೆಸ್ ಇತಿಹಾಸ. ಆದರೆ, ನಮ್ಮ ಬಿಜೆಪಿ ಸಂಸ್ಕೃತಿಯೇ ಬೇರೆ ಎಂದು ಮಾಜಿ ಸಚಿವ ಸಿ.ಟಿ.ರವಿ ಹೇಳಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ದೇಶದಲ್ಲಿ ಆತಂಕ ಸೃಷ್ಟಿಸುವವರ, ಭಯೋತ್ಪಾದಕರನ್ನು ಸಂಹಾರ ಮಾಡುತ್ತೇವೆ ಹೊರತೂ, ಅವರಿಗೆ ರಾಜ ಮರ್ಯಾದೆ ನೀಡಿ ಬಿರಿಯಾನಿ ಕೊಡುವ ಸರ್ಕಾರ ನಮ್ಮದಲ್ಲ. ಮಂಗಳೂರಿನಲ್ಲಿ ಆಟೋದಲ್ಲಿ ಕುಕ್ಕರ್ ಬಾಂಬ್ ಬ್ಲಾಸ್ಟ್ ಮಾಡಿದವರನ್ನು ಕಾಂಗ್ರೆಸ್‌ನವರು ಅವರು ನಮ್ಮ ಬ್ರದರ್ಸ್ ಅಂತಾರೆ ಅಂದ್ರೆ, ನಾಚಿಕೆಯಾಗಬೇಕು ಎಂದರು.




ನಕ್ಸಲ್ ಮುಕ್ತ ಭಾರತ ಮಾಡುವ ಸಂಕಲ್ಪ ನಮ್ಮ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ ಮಾಡಿದೆ. ನಗರ ನಕ್ಸಲ್‌ರು ಬಿಜೆಪಿಯೇತರ ಸರ್ಕಾರ ಇರುವ ರಾಜ್ಯಗಳಲ್ಲಿದ್ದು, ಅವರನ್ನು ತೊಲಗಿಸಬೇಕು ಎಂದು ಕೈ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದರು. ರಾಜ್ಯದ ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ರಾಜ್ಯದ ಜನರಿಗೆ ಅನೇಕ ಭರವಸೆಗಳನ್ನು ನೀಡಿದ್ದು ಸ್ವಾಗತಾರ್ಹ. ಯಾರಾದರೂ ಲಂಚ ಕೇಳಿದರೆ, ಲಂಚ ಪಡೆದರೆ ನಮ್ಮ ಕಚೇರಿಗೆ ದೂರು ನೀಡಿ, ಗಮನಕ್ಕೆ ತನ್ನಿ ಎಂದು ಸಿಎಂ ಡಿ.ಕೆ.ಶಿವಕುಮಾರ ಅವರ ಹೇಳಿಕೆ ಸ್ವಾಗತಾರ್ಹ. ಆದರೆ, ಸಿಎಂ ಕಚೇರಿಯೇ ಭ್ರಷ್ಟಾಚಾರ ಕೇಂದ್ರವಾದರೇ ಯಾರಿಗೆ ದೂರು ನೀಡಬೇಕು ಎನ್ನುವ ಪ್ರಶ್ನೆ ಎಲ್ಲರನ್ನೂ ಕಾಡುತ್ತಿದೆ. ಒಳ್ಳೆಯ ಆಡಳಿತ ನೀಡಲಿ ಎಂದು ಹಾರೈಸೋಣ. ಆದರೆ, ಅದು ಆಗದ ಕನಸು ಕಾಂಗ್ರೆಸ್ ಭ್ರಷ್ಟಾಚಾರದ ಪಿತಾಮಹ, ಎಲ್ಲವನ್ನೂ ಕಾದು ನೋಡುತ್ತೇವೆ ಎಂದು ಎಚ್ಚರಿಸಿದರು.



ವಿಕಸಿತ ಭಾರತದ ನಿರ್ಮಾಣಕ್ಕೆ ಶ್ರಮಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರ ಸಾರ್ಥಕ ಸಾಧನೆಗಳ 12 ವರ್ಷಗಳನ್ನು ಪೂರೈಸಿರುವ ಅಂಗವಾಗಿ ಶ್ರೀಕ್ಷೇತ್ರ ಕೊಲ್ಲೂರು ಮೂಕಾಂಬಿಕೆ ದೇವಾಲಯಕ್ಕೆ ಸೋಮವಾರ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಪಕ್ಷದ ಶಾಸಕರಾದ ಸುನೀಲ್ ಕುಮಾರ್, ಭೈರತಿ ಬಸವರಾಜ್, ಹರೀಶ್ ಪೂಂಜಾ ಜತೆಗಿದ್ದರು.

ದೇಶದಲ್ಲಿ ಮೋದಿ ಸಾಧನೆ ಕ್ರಾಂತಿ: ಸಚಿವ ಸೋಮಣ್ಣ

ತುಮಕೂರು: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ 12 ವರ್ಷಗಳ ಆಡಳಿತವು ದೇಶದಲ್ಲಿ ಅತಿ ದೊಡ್ಡ ಸಾಮಾಜಿಕ ಹಾಗೂ ಆರ್ಥಿಕ ಪರಿವರ್ತನೆಗೆ ಕಾರಣವಾಗಿದೆ ಎಂದು ಕೇಂದ್ರ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಅವರು, ದೇಶದ 25 ಕೋಟಿ ಜನರು ಬಡತನದಿಂದ ಮುಕ್ತರಾಗಿದ್ದಾರೆ. ಪಿಎಂ ಗರೀಬ್ ಕಲ್ಯಾಣ್ ಯೋಜನೆಯಲ್ಲಿ 81 ಕೋಟಿ ಜನರಿಗೆ ಉಚಿತ ರೇಷನ್, ಆವಾಸ್ ಯೋಜನೆಯಲ್ಲಿ 4 ಕೋಟಿ ಮನೆ ಹಾಗೂ ಜನ ಧನ್ ಮೂಲಕ 58 ಕೋಟಿ ಬ್ಯಾಂಕ್ ಖಾತೆ ತೆರೆಯಲಾಗಿದೆ ಎಂದರು.



ಜಲ ಜೀವನ್ ಮಿಷನ್‌ನಿಂದ 16 ಕೋಟಿ ಮನೆಗಳಿಗೆ ನಲ್ಲಿ ನೀರು ಹಾಗೂ 11 ಕೋಟಿ ಎಲ್‌ಪಿಜಿ ಸಂಪರ್ಕ ನೀಡಲಾಗಿದೆ. ಪಿಎಂ ಕಿಸಾನ್ ಮೂಲಕ ರೈತರ ಖಾತೆಗೆ 4.3 ಲಕ್ಷ ಕೋಟಿ ಜಮಾ ಮಾಡಲಾಗಿದ್ದು, ಯೂರಿಯಾಕ್ಕೆ ಶೇ.90 ರಷ್ಟು ಸಬ್ಸಿಡಿ ನೀಡಲಾಗುತ್ತಿದೆ. ಮುದ್ರಾ ಯೋಜನೆಯಲ್ಲಿ 57 ಕೋಟಿ ಜನರಿಗೆ ಸಾಲ ಸೌಲಭ್ಯ ನೀಡಲಾಗಿದೆ. ದೇಶದಲ್ಲಿ 164 ವಂದೇ ಭಾರತ್ ರೈಲುಗಳು ಕಾರ್ಯನಿರ್ವಹಿಸುತ್ತಿದ್ದು ಹಾಗೂ 26 ನಗರಗಳಲ್ಲಿ ಮೆಟ್ರೋ ಸಂಪರ್ಕ ಕಲ್ಪಿಸಲಾಗಿದೆ. ಆಯುಷ್ಮಾನ್ ಭಾರತ್ ಅಡಿ 60 ಕೋಟಿ ಜನರಿಗೆ 5 ಲಕ್ಷದವರೆಗೆ ಉಚಿತ ಚಿಕಿತ್ಸೆ ಸಿಗುತ್ತಿದೆ.

ಭಾರತದ ಯುಪಿಐ ಬಳಕೆ ಜಗತ್ತಿನಲ್ಲೇ ನಂ.1 ಆಗಿದೆ ಎಂದರು. ಇಂದು ಭಾರತೀಯ ಮಧ್ಯಮ ವರ್ಗವೇ ದೇಶದ ಅತಿದೊಡ್ಡ ಗ್ರಾಹಕ ಶಕ್ತಿಯಾಗಿದೆ. ಪ್ರತಿಯೊಬ್ಬ ನಾಗರಿಕನು ಮೊದಲ ಕಾರು, ಸ್ವಂತ ಮನೆ ಹಾಗೂ ಮಕ್ಕಳ ಉನ್ನತ ಶಿಕ್ಷಣದ ಕನಸನ್ನು ನನಸು ಮಾಡುವ ಮೂಲಕ ವಿಕಸಿತ ಭಾರತ 2047 ನಿರ್ಮಿಸುವುದೇ ಪ್ರಧಾನಿ ಮೋದಿಯವರ ಸಂಕಲ್ಪವಾಗಿದೆ ಎಂದು ಕೇಂದ್ರ ಸಚಿವ ವಿ. ಸೋಮಣ್ಣ ತಿಳಿಸಿದರು.

ಕಿರುಸುದ್ದಿ

ಕಾಂಗ್ರೆಸ್‌ನಿಂದ ಎಸ್‌ಐಆರ್ ಕುರಿತು ಜಾಗೃತಿ ಸಮಾವೇಶ

ಬೆಂಗಳೂರು: ರಾಜ್ಯದಲ್ಲಿ ಮತದಾರರ ಪಟ್ಟಿ ತೀವ್ರ ಪರಿಷ್ಕರಣೆ (ಎಸ್‌ಐಆರ್) ಹಿನ್ನಲೆಯಲ್ಲಿ ಕಾಂಗ್ರೆಸ್‌ನಿಂದ ಜೂ. 23 ರಿಂದ ಕಾಂಗ್ರೆಸ್‌ನಿಂದ ವಿಭಾಗವಾರು ಜಾಗೃತಿ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಜೂ. 23ಕ್ಕೆ ಮಂಗಳೂರು, ಜೂ.25ಕ್ಕೆ ಹುಬ್ಬಳ್ಳಿ, ಜೂ.27ಕ್ಕೆ ಮೈಸೂರು ಮತ್ತು ಜೂ.29ಕ್ಕೆ ಕಲಬುರಗಿಯಲ್ಲಿ ಹಾಗೂ ಜೂ.30 ಬೆಂಗಳೂರಿನಲ್ಲಿ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಕಾಂಗ್ರೆಸ್ ನಡಿಗೆ ಮತದಾರರ ಕಡೆಗೆ ಎಂಬ ಜಾಗೃತಿ ಕಾರ್ಯಕ್ರಮದಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಪ್ರಮುಖರು ಭಾಗವಹಿಸಲಿದ್ದಾರೆ.

ಹಲ್ಲಿ ಬಿದ್ದ ನೀರು ಸೇವಿಸಿ ವಿದ್ಯಾರ್ಥಿಗಳು ಅಸ್ವಸ್ಥ

ಕಲಬುರಗಿ: ಗುಲ್ಬರ್ಗ ವಿಶ್ವವಿದ್ಯಾಲಯದ ಆವರಣದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹಳೆಯ ಬಾಲಕರ ವಸತಿ ನಿಲಯದ ನೀರಿನ ಟ್ಯಾಂಕ್‌ನಲ್ಲಿ ಹಲ್ಲಿ ಬಿದ್ದ ನೀರು ಸೇವಿಸಿ 15ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಸ್ವಸ್ಥಗೊಂಡಿರುವ ಆತಂಕಕಾರಿ ಘಟನೆ ಸೋಮವಾರ ನಡೆದಿದೆ. ಜಿಲ್ಲೆಯ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಸಾಲು ಸಾಲು ಅವಾಂತರಗಳು ಸೃಷ್ಟಿಯಾಗುತ್ತಿದ್ದರೂ ಜಿಲ್ಲೆಯ ಇಬ್ಬರು ಸಚಿವರು ಇತ್ತ ಸುಳಿಯದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.ನೀರು ಸೇವಿಸಿದ ವಿದ್ಯಾರ್ಥಿಗಳಲ್ಲಿ ತೀವ್ರ ವಾಂತಿ ಹಾಗೂ ಎದೆ ಉರಿ ಕಾಣಿಸಿಕೊಂಡಿದ್ದು, ಸಮಾಜಶಾಸ್ತ್ರ ವಿಭಾಗದ ಅರುಣಕುಮಾರ್ ನಾಯಕೋಡಿ ಹಾಗೂ ಇತಿಹಾಸ ವಿಭಾಗದ ಮಲ್ಲಿಕಾರ್ಜುನ ಜೇವರ್ಗಿ ಅವರನ್ನು ಜಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಕಳೆದ ಎರಡು ದಿನಗಳಿಂದ ನೀರು ಕುಡಿಯುವಾಗ ತೀವ್ರ ದುರ್ವಾಸನೆ ಬಂದ ಹಿನ್ನೆಲೆಯಲ್ಲಿ ಟ್ಯಾಂಕ್ ಪರಿಶೀಲಿಸಿದಾಗ ಅದರಲ್ಲಿ ಎರಡು ಹಲ್ಲಿಗಳು ಸತ್ತು ಬಿದ್ದಿರುವುದು ಪತ್ತೆಯಾಗಿದೆ.

ಯುವತಿ ಆತ್ಮಹತ್ಯೆಗೆ ಯತ್ನ: ಕಾಂಗ್ರೆಸ್ ನಾಯಕಿ ಕೈವಾಡ

ಬೆಳಗಾವಿ: ಮದುವೆಯಾಗುವುದಾಗಿ ನಂಬಿಸಿ ಯುವತಿಯೊಂದಿಗೆ ದೈಹಿಕ ಸಂಬಂಧ ಬೆಳೆಸಿದ ಯುವಕನನ್ನು ಮದುವೆಯಾಗದಂತೆ ಒತ್ತಡ ಹೇರಲಾಗುತ್ತಿದ್ದು, ಖಾಸಗಿ ಕ್ಷಣಗಳ ಫೋಟೋಗಳನ್ನು ಬಹಿರಂಗಪಡಿಸುವುದಾಗಿ ಬೆದರಿಕೆ ಹಾಕಲಾಗಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಮನನೊಂದ ಯುವತಿಯೊಬ್ಬಳು ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಬೆಳಗಾವಿಯಲ್ಲಿ ಬೆಳಕಿಗೆ ಬಂದಿದೆ.ಯುವತಿ ಗಂಭೀರ ಸ್ಥಿತಿಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಸಾವು–ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದಾಳೆ ಎಂದು ತಿಳಿದುಬಂದಿದೆ. ಈ ಪ್ರಕರಣದಲ್ಲಿ ಬೆಳಗಾವಿ ಕಾಂಗ್ರೆಸ್ ನಾಯಕಿ ಆಯೇಶಾ ಸನದಿ ವಿರುದ್ಧ ಯುವತಿಯ ಪೋಷಕರು ಗಂಭೀರ ಆರೋಪಗಳನ್ನು ಮಾಡಿದ್ದಾರೆ. ಸಲೀಂ ಕಿಲ್ಲೇದಾರ್ ಎಂಬ ಯುವಕ ಮದುವೆಯಾಗುವುದಾಗಿ ನಂಬಿಸಿ ಯುವತಿಯೊಂದಿಗೆ ದೈಹಿಕ ಸಂಬಂಧ ಬೆಳೆಸಿದ್ದಲ್ಲದೆ, ಆಕೆಯ ಖಾಸಗಿ ಕ್ಷಣಗಳ ಫೋಟೋಗಳನ್ನು ತನ್ನ ಬಳಿ ಇಟ್ಟುಕೊಂಡಿದ್ದಾನೆ ಎಂದು ದೂರಲಾಗಿದೆ.

ಮೊಬೈಲ್ ಆ್ಯಪ್ ಮೂಲಕ ಜಿಪಿಎಸ್ ಆಧಾರಿತ ಹಾಜರಾತಿ ವ್ಯವಸ್ಥೆ

ಶೇ.25 ನೋಂದಣಿ ಪ್ರಗತಿ

ಬೆಂಗಳೂರು: ಮೊಬೈಲ್ ಆ್ಯಪ್ ಮೂಲಕ ಜಿಪಿಎಸ್ ಆಧಾರಿತ ಹಾಜರಾತಿ ವ್ಯವಸ್ಥೆಗೆ 42 ಇಲಾಖೆಗಳ 4,78,522 ಸರ್ಕಾರಿ ನೌಕರರು ಒಳಪಟ್ಟಿದ್ದು, ಈ ಪೈಕಿ 3.01 ಲಕ್ಷಕ್ಕೂ ಹೆಚ್ಚು ನೌಕರರು ಈಗಾಗಲೇ ನೋಂದಾಯಿಸಿಕೊಂಡಿದ್ದಾರೆ. ಒಂದೇ ವಾರದಲ್ಲಿ ನೋಂದಣಿ ಪ್ರಕ್ರಿಯೆಯಲ್ಲಿ ಶೇ.25 ರಷ್ಟು ಪ್ರಗತಿ ಕಂಡುಬಂದಿದೆ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಹೇಳಿದರು.

ಕಳೆದ ವಾರ ಅಂದಾಜು 2,46,000 ರಷ್ಟಿದ್ದ ಒಟ್ಟು ನೋಂದಾಯಿತ ಉದ್ಯೋಗಿಗಳ ಸಂಖ್ಯೆ ಪ್ರಸ್ತುತ ವಾರದಲ್ಲಿ 3,01,034ಕ್ಕೆ ಏರಿಕೆಯಾಗಿದೆ. ಇದು ಕೇವಲ ಒಂದೇ ವಾರದಲ್ಲಿ ಶೇ.25 ಕ್ಕಿಂತಲೂ ಹೆಚ್ಚು (55,000ಕ್ಕೂ ಅಧಿಕ ಹೊಸ ಸೇರ್ಪಡೆ) ಬೆಳವಣಿಗೆಯಾಗಿದೆ. ಇದೇ ಅವಧಿಯಲ್ಲಿ, ಆ್ಯಪ್ ಮೂಲಕ ಪ್ರತಿದಿನ ದಾಖಲಾಗುವ ದೈನಂದಿನ ಹಾಜರಾತಿ ಸಂಖ್ಯೆಯು ಸಹ 1,85,308 ರಿಂದ 2,32,612 ಕ್ಕೆ ಜಿಗಿದಿದ್ದು, ಸಕ್ರಿಯ ಬಳಕೆಯಲ್ಲಿ ಶೇ.25 ರಷ್ಟು ಭಾರಿ ಏರಿಕೆ ದಾಖಲಾಗಿದೆ ಎಂದರು.

ಈ ಹಿಂದೆ ಜಾರಿಯಲ್ಲಿದ್ದ ಬಯೋಮೆಟ್ರಿಕ್ ವ್ಯವಸ್ಥೆಯಲ್ಲಿ ಉದ್ಯೋಗಿಗಳು ಕೇವಲ ಡಿಜಿಟಲ್ ಸಹಿ ಮಾಡಿ ಕಚೇರಿಯಿಂದ ಗೈರಾಗುವ ಸಾಧ್ಯತೆಗಳಿದ್ದವು. ಈ ದೋಷವನ್ನು ನಿವಾರಿಸಲು, ಉದ್ಯೋಗಿಗಳ ಭೌತಿಕ ಉಪಸ್ಥಿತಿ ಮತ್ತು ಕಚೇರಿಯ ಭೌಗೋಳಿಕ ಸ್ಥಳವನ್ನು ನಿಖರವಾಗಿ ಪತ್ತೆಹಚ್ಚುವ ಈ ಹೊಸ ವ್ಯವಸ್ಥೆಯನ್ನು ರೂಪಿಸಲಾಗಿದೆ. ರಾಜ್ಯ ಸರ್ಕಾರ ಜಾರಿಗೆ ತಂದಿರುವ ಕರ್ತವ್ಯ ಆ್ಯಪ್ ತಂತ್ರಜ್ಞಾನವನ್ನು ಕರ್ನಾಟಕದಲ್ಲೇ ಅಭಿವೃದ್ಧಿಪಡಿಸಲಾಗಿದೆ.

ತಂತ್ರಜ್ಞಾನದ ವೈಶಿಷ್ಟ್ಯಗಳು: ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಮುಖ ಗುರುತಿಸುವಿಕೆ ತಂತ್ರಾಂಶವು ವಂಚನೆಯ ಹಾಜರಾತಿ ತಡೆಯಲಿದ್ದು, ಜಿಪಿಎಸ್



ತಂತ್ರಜ್ಞಾನದ ಮೂಲಕ ಉದ್ಯೋಗಿ ತನ್ನ ಕಚೇರಿಯ ನಿಗದಿತ ಪರಿಧಿಯೊಳಗೆ ಇದ್ದಾಗ ಮಾತ್ರ ಹಾಜರಾತಿ ದಾಖಲಿಸಲು ಸಾಧ್ಯವಾಗುತ್ತದೆ. ಆಂಡ್ರಾಯ್ಡ್ ಮತ್ತು ಐಒಎಸ್ ಆ್ಯಪ್ ಮೂಲಕ ಹಾಜರಾತಿ, ರಜೆ ಮತ್ತು ಅಧಿಕೃತ ಹೊರಗಿನ ಕೆಲಸದ ವಿವರಗಳನ್ನು ದಾಖಲಿಸುವ ಸೌಲಭ್ಯವಿದೆ ಎಂದರು.

ಮೊದಲ ಸ್ಥಾನದಲ್ಲಿ ಶಿಕ್ಷಣ ಇಲಾಖೆ: ಶಾಲಾ ಶಿಕ್ಷಣ ಇಲಾಖೆಯ ಒಟ್ಟು 1,76,055 ಉದ್ಯೋಗಿಗಳಲ್ಲಿ ಈಗಾಗಲೇ 1,68,252 ನೌಕರರು ನೋಂದಾಯಿಸಿಕೊಂಡಿದ್ದು, 1,41,800ಕ್ಕೂ ಹೆಚ್ಚು ದೈನಂದಿನ ಚೆಕ್-ಇನ್‌ಗಳೊಂದಿಗೆ ಮೊದಲ ಸ್ಥಾನದಲ್ಲಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು 66,969 ನೋಂದಣಿ ಹಾಗೂ 54,400ಕ್ಕೂ ಹೆಚ್ಚು ದೈನಂದಿನ ಹಾಜರಾತಿಯೊಂದಿಗೆ ಎರಡನೇ ಸ್ಥಾನದಲ್ಲಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಶಾಲಾ ಶಿಕ್ಷಣ ಇಲಾಖೆಗಳಲ್ಲಿ ಪ್ರಾಯೋಗಿಕವಾಗಿ ಯಶಸ್ವಿಯಾದ ನಂತರ, ಶಾಲಾ ಶಿಕ್ಷಣ ಇಲಾಖೆಯ ಸಿಬ್ಬಂದಿ ಇದನ್ನು ಸಕ್ರಿಯವಾಗಿ ಬಳಸುತ್ತಿದ್ದಾರೆ. ಇನ್ನುಳಿದ ಹಲವು ಇಲಾಖೆಗಳು ಈಗಾಗಲೇ ಶೇ.90 ಕ್ಕಿಂತ ಹೆಚ್ಚು ನೋಂದಣಿ ಮೈಲಿಗಲ್ಲು ದಾಟಿವೆ ಎಂದು ತಿಳಿಸಿದರು.

> ಕಚೇರಿಗಳಲ್ಲಿ ಅಧಿಕಾರಿಗಳ ಭೌತಿಕ ಲಭ್ಯತೆ ಮತ್ತು ವಿಶ್ವಾಸಾರ್ಹತೆಯನ್ನು ಖಾತರಿಪಡಿಸುವ ಮೂಲಕ ಸಾರ್ವಜನಿಕರಿಗೆ ಸಿಗುವ ಸೇವೆಗಳು ಇನ್ನು ಮುಂದೆ ಹೆಚ್ಚು ಸುಲಭ ಹಾಗೂ ತಡೆರಹಿತವಾಗಲಿವೆ. ಈ ಮೂಲಕ ಕರ್ನಾಟಕವು ಡಿಜಿಟಲ್ ಆಡಳಿತ ಮತ್ತು ನಾಗರಿಕ ಕೇಂದ್ರಿತ ಸುಧಾರಣೆಯಲ್ಲಿ ದೇಶದಲ್ಲೇ ಮುಂಚೂಣಿ ರಾಜ್ಯವಾಗಿ ಹೊರಹೊಮ್ಮಿದೆ.
> ■ ಡಾ. ಶಾಲಿನಿ ರಜನೀಶ್, ಸರ್ಕಾರದ ಮುಖ್ಯಕಾರ್ಯದರ್ಶಿ

ಮೇಡ್ ಇನ್ ಕರ್ನಾಟಕ: ಯಾವುದೇ ಬಾಹ್ಯ ಖಾಸಗಿ ತಂತ್ರಜ್ಞಾನ ಸಂಸ್ಥೆಗಳ ನೆರವಿಲ್ಲದೆ, ಸಂಪೂರ್ಣವಾಗಿ ಸರ್ಕಾರದ ಪರಿಸರ ವ್ಯವಸ್ಥೆಯಲ್ಲೇ ಕರ್ತವ್ಯ ಸಾಫ್ಟ್‌ವೇರ್ ವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸಲಾಗಿದೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ-ಆಡಳಿತ) ಉಸ್ತುವಾರಿಯಲ್ಲಿ, ಸೆಂಟರ್ ಫಾರ್ ಇ-ಗವರ್ನೆನ್ಸ್ (ಸಿಇಜಿ) ಮತ್ತು ಕರ್ನಾಟಕ ಎಐ ಸೆಲ್ ಜಂಟಿಯಾಗಿ ಇದನ್ನು ಸಿದ್ದಪಡಿಸಿವೆ. ಇದರಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿ ಸಿಬ್ಬಂದಿ ವೆಚ್ಚ ಉಳಿತಾಯವಾಗಿದ್ದು, ದತ್ತಾಂಶ ಸುರಕ್ಷತೆ ಮತ್ತು ಸ್ವಾಯತ್ತತೆ ಹೆಚ್ಚಾಗಿದೆ. ಕರ್ನಾಟಕದ ಈ ಯಶಸ್ವಿ ಮಾದರಿಯನ್ನು ದೇಶದ ಇತರೆ ರಾಜ್ಯಗಳೂ ಅಳವಡಿಸಿಕೊಳ್ಳಬಹುದಾಗಿದೆ ಎಂದರು.

ಅಭಿವೃದ್ಧಿ ಶೂನ್ಯ ಸರ್ಕಾರ: ಬಿವೈವಿ

ಶಿವಮೊಗ್ಗ: ಸಿಎಂ ಡಿ.ಕೆ.ಶಿವ ಕುಮಾರ್ ಅವರು ಭ್ರಷ್ಟಾಚಾರ ಸಹಿಸಿಕೊಳ್ಳುವುದಿಲ್ಲ ಎಂದಿದ್ದಾರೆ. ಆದರೆ ಇದು ಹಾಸ್ಯಾಸ್ಪದವಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಲೇವಡಿ ಮಾಡಿದ್ದಾರೆ.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, ಭ್ರಷ್ಟಾಚಾರಕ್ಕೂ ಕಾಂಗ್ರೆಸ್‌ಗೂ ಅವಿನಾಭಾವ ಸಂಬಂಧವಿದೆ. ನಾನು ಈಗಲೇ ಸಿಎಂ ಬಗ್ಗೆ ಮಾತನಾಡುವುದಿಲ್ಲ, ಆದರೆ ರಾಜ್ಯದ ಜನತೆಯ ಹೇಳಿಕೆಗಳ ಪ್ರಕಾರ ಈ ಸರ್ಕಾರ ಅಭಿವೃದ್ಧಿ ಶೂನ್ಯ ಸರ್ಕಾರವಾಗಿದೆ.



ಆಡಳಿತದಲ್ಲಿ ವೈಫಲ್ಯ ಖಂಡಿದೆ. ಡಿ.ಕೆ. ಶಿವಕುಮಾರ್ ಸಿಎಂ ಆಗಿರುವಷ್ಟು ದಿನ ವಾದರೂ ಒಳ್ಳೆಯ ಆಡಳಿತ ನೀಡಲಿ ಎಂದರು.

ಗ್ಯಾರಂಟಿ ಯೋಜನೆಯ ಲಕ್ಷಾಂತರ ಫಲಾನುಭವಿಗಳಿಗೆ ರಾಜ್ಯ ಸರ್ಕಾರ ಅನ್ಯಾಯ ಮಾಡಿದೆ. ಹೊಸದಾಗಿ ದಾಖಲೆ ನೀಡಬೇಕು ಎಂಬು ಸಬೂಬು ಹೇಳಿ ಯೋಜನೆಯನ್ನು ರದ್ದು ಮಾಡಿದೆ. ಇದು ಚುನಾವಣಾ ಪೂರ್ವದಲ್ಲಿ ನೀಡಿದ ಭರವಸೆಗಳಿಗೆ ತದ್ವಿರುದ್ಧವಾಗಿದೆ. ಆಗ ಯಾರ್‍ಯಾರಿಗೆ ಗ್ಯಾರಂಟಿ ಕೊಡುತ್ತೇವೆಂದು ಹೇಳಿದ್ದರೋ ಅವರೆಲ್ಲರಿಗೂ ಈ ಯೋಜನೆಯ ಲಾಭ ನೀಡಲೇಬೇಕು.

> **ಶೇ.90ರಷ್ಟು ರೈತರ ವಿರೋಧ**
> ಬಿಡದಿ ರೈತರನ್ನು ಒಕ್ಕಲೆಬ್ಬಿಸುತ್ತಿರುವುದು ಅಕ್ಷಮ್ಯ ಅಪರಾಧ. ಕನಿಷ್ಠ ಶೇ. 70 ರಷ್ಟು ರೈತರು ಯೋಜನೆಗೆ ಒಪ್ಪಿಗೆ ಸೂಚಿಸಬೇಕು. ಇಲ್ಲಿ ಶೇ.90ರಷ್ಟು ರೈತರು ವಿರೋಧಿಸುತ್ತಿದ್ದಾರೆ. ಒತ್ತಾಯಪೂರ್ವಕವಾಗಿ ಜಮೀನು ಖರೀದಿ ಮಾಡುತ್ತಿರುವುದು ಸರಿಯಲ್ಲ. ರಾಹುಲ್‌ಗಾಂಧಿ ಅವರಿಗೆ ಕೂಡ ನಾನು ಪತ್ರ ಬರೆದು ರೈತರ ಭೂಸ್ವಾಧೀನ ಪ್ರಕ್ರಿಯೆ ಕೈಬಿಡುವಂತೆ ತಾಕೀತು ಮಾಡಲು ಸರ್ಕಾರಕ್ಕೆ ಸೂಚನೆ ನೀಡುವಂತೆ ಹೇಳಿದ್ದೇನೆ ಎಂದರು.

ಕುಂಟುನೆಪ ಹೇಳಿ ಕತ್ತರಿ ಹಾಕುವ ಕೆಲಸಬೇಡ. ಅದರ ಬದಲು ರಾಜ್ಯದ ಆರ್ಥಿಕ ಸ್ಥಿತಿಗತಿಯ ಶ್ವೇತಪತ್ರ ಹೊರಡಿಸಿ ಎಂದು ಒತ್ತಾಯಿಸಿದರು. ಈಗಾಗಲೇ ಗ್ಯಾರಂಟಿ ಯೋಜನೆಯ ಭರವಸೆ ನೀಡಿದ ಹಿಮಾಚಲ ಪ್ರದೇಶ, ತೆಲಂಗಾಣದಲ್ಲಿ ಸರ್ಕಾರಿ ನೌಕರರಿಗೂ ಸಂಬಳ ಸಿಗುತ್ತಿಲ್ಲ, ಇಲ್ಲಿಯೂ ಅದೇ ಪರಿಸ್ಥಿತಿ ಬರಲಿದೆ. ಮತಕ್ಕಾಗಿ ಗ್ಯಾರಂಟಿಗಳನ್ನು ಘೋಷಿಸಿ ಅದಕ್ಕೆ ಕತ್ತರಿ ಹಾಕಿ ಕುಂಟುನೆಪ ಹೇಳುವುದು ಸರ್ಕಾರಕ್ಕೆ ಶೋಭೆಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಆರ್‌ಟಿಇ ವಿಸ್ತರಿಸುವ ಕುರಿತ ಸುತ್ತೋಲೆ ಜಾರಿಗೆ ಹೈ ತಡೆ

ಬೆಂಗಳೂರು: 2026–27ನೇ ಶೈಕ್ಷಣಿಕ ವರ್ಷದಿಂದ 9ನೇ ತರಗತಿಗೂ ಶಿಕ್ಷಣ ಹಕ್ಕು ಕಾಯ್ದೆ (ಆರ್‌ಟಿಇ) ಸೌಲಭ್ಯ ವಿಸ್ತರಿಸುವ ಕುರಿತು ಸಾರ್ವಜನಿಕ ಶಿಕ್ಷಣ ಇಲಾಖೆ ಹೊರಡಿಸಿದ್ದ ಸುತ್ತೋಲೆ ಜಾರಿಗೆ ಕರ್ನಾಟಕ ಹೈಕೋರ್ಟ್ ಜು.3ರವರೆಗೆ ತಡೆ ನೀಡಿದೆ. ಈ ಹಿನ್ನೆಲೆಯಲ್ಲಿ, ರಾಜ್ಯದ ಎಲ್ಲ ಕ್ಷೇತ್ರಾಧಿಕಾರಿಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡುವಂತೆ ಕರ್ನಾಟಕ ಅಸೋಸಿಯೇಟೆಡ್ ಮ್ಯಾನೇಜ್‌ಮೆಂಟ್ಸ್ ಆಫ್ ಸ್ಕೂಲ್ಸ್ (ಕ್ಯಾಮ್ಸ್) ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರಿಗೆ ಕ್ಯಾಮ್ಸ್ ಪ್ರಧಾನ ಕಾರ್ಯದರ್ಶಿ ಶಶಿಕುಮಾರ್ ಡಿ. ಈ ಸಂಬಂಧ ಪತ್ರ ಬರೆದಿದ್ದಾರೆ. ರಾಜ್ಯದ ಎಲ್ಲಾ ಉಪನಿರ್ದೇಶಕರು (ಡಿಡಿಪಿಐ), ಕ್ಷೇತ್ರ ಶಿಕ್ಷಣಾಧಿಕಾರಿಗಳು (ಬಿಇಒ) ಹಾಗೂ ಅಧೀನ ಅಧಿಕಾರಿಗಳಿಗೆ ತಕ್ಷಣವೇ ಸ್ಪಷ್ಟ ನಿರ್ದೇಶನ ನೀಡುವಂತೆ ಕ್ಯಾಮ್ಸ್ ಮನವಿ ಮಾಡಿದೆ.

ಈ ಸುತ್ತೋಲೆಯ ಆಧಾರದ ಮೇಲೆ ಯಾವುದೇ ಶಾಲೆಯನ್ನು 9ನೇ ತರಗತಿಗೆ ಆರ್‌ಟಿಇ ಅಡಿಯಲ್ಲಿ ವಿದ್ಯಾರ್ಥಿಗಳನ್ನು ಸೇರಿಸಲು ಒತ್ತಾಯಿಸಬಾರದು. ಆದೇಶ ಪಾಲಿಸದ ಶಾಲೆಗಳ ವಿರುದ್ಧ ಯಾವುದೇ ರೀತಿಯ ಬಲವಂತದ ಅಥವಾ ದಂಡಾತ್ಮಕ ಕ್ರಮ ಕೈಗೊಳ್ಳಬಾರದು. ಸುತ್ತೋಲೆಯ ಅಡಿ ಸೇರಿರುವ ವಿದ್ಯಾರ್ಥಿಗಳಿಂದ ಈಗಾಗಲೇ ಸಂಗ್ರಹಿಸಿರುವ ಶುಲ್ಕವನ್ನು ಹಿಂತಿರುಗಿಸುವಂತೆ ಶಾಲೆಗಳಿಗೆ ನಿರ್ದೇಶನ ನೀಡಬಾರದು ಎಂದು ಮನವಿ ಮಾಡಿದೆ.

ಪ್ರಸ್ತುತ 2026–27ನೇ ಸಾಲಿನ ಪ್ರವೇಶ ಪ್ರಕ್ರಿಯೆಗಳು ಪೂರ್ಣಗೊಂಡಿರುವುದರಿಂದ, ಶಾಲೆಗಳು, ಪೋಷಕರು ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳಲ್ಲಿ ಗೊಂದಲ ಉಂಟಾಗದಂತೆ ಸರ್ಕಾರ ತಕ್ಷಣವೇ ಸ್ಪಷ್ಟನೆ ನೀಡಬೇಕು ಎಂದು ಕ್ಯಾಮ್ಸ್ ಒತ್ತಾಯಿಸಿದೆ.

ಪ್ರಿಯಾಂಕ್ ಆರೆಸ್ಸೆಸ್ ಫೋಬಿಯಾದಿಂದ ಹೊರಬರಲ್ಲ: ವಿ.ಸುನೀಲ್ ಕುಮಾರ್

ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ವನ್ನು ನೋಂದಣಿ ಮಾಡಿಸಿ ಎಂದು ಸರಸಂಘಚಾಲಕರಿಗೆ ಪತ್ರ ಬರೆದಿರುವ ಗೃಹಸಚಿವ ಪ್ರಿಯಾಂಕ್ ಖರ್ಗೆ ಆರ್‌ಎಸ್‌ಎಸ್ ಫೋಬಿಯಾದಿಂದ ಹೊರಬರುವುದಿಲ್ಲ ಎನ್ನುವ ಮೂಲಕ ಶಾಸಕ ವಿ.ಸುನೀಲ್‌ಕುಮಾರ್ ತಿರುಗೇಟು ನೀಡಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಅವರು ಪೋಸ್ಟ್ ಮಾಡಿದ್ದಾರೆ.



ಕೊಟ್ಟ ಕುದುರೆಯ ಏರಲರಿಯದ ವೀರ ಪ್ರಿಯಾಂಕ್ ಖರ್ಗೆ ಅವರೇ, ನಿಮ್ಮನ್ನು ಆವರಿಸಿದ ಆರ್‌ಎಸ್‌ಎಸ್ ಫೋಬಿಯಾ ಬಿಡುಗಡೆಯಾಗುವ ಯಾವುದೇ ಲಕ್ಷಣಗಳು ಕಾಣುತ್ತಿಲ್ಲ. ಪರಿಸ್ಥಿತಿ ಬದಲಾದಾಗ ಮನಃಸ್ಥಿತಿ ಬದಲಾಗುತ್ತದೆ ಎಂದು ನಾವೆಲ್ಲ ಭಾವಿಸಿದ್ದೆವು. ಆದರೆ, ನಿಮ್ಮ ವಿಚಾರದಲ್ಲಿ ಆ ನಿರೀಕ್ಷೆ ಹುಸಿಯಾಗಿದೆ ಎಂದು ಟೀಕಿಸಿದ್ದಾರೆ. ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರಾಗಿ ಮೂರು ವರ್ಷಗಳ ಕಾಲ ನಿಮ್ಮಿಂದ ಏನು ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಮೂರು ವರ್ಷದಲ್ಲಿ ಎಷ್ಟು ಕಿ.ಮೀ. ಗ್ರಾಮೀಣ ರಸ್ತೆ ನಿರ್ಮಾಣ ಮಾಡಿದಿರಿ ಎಂಬ ಪ್ರಶ್ನೆ ರಾಜ್ಯದ ಜನರಿಗೆ ಇನ್ನೂ ನಿಗೂಢವಾಗಿಯೇ ಉಳಿದಿದೆ.

ಗ್ಯಾರಂಟಿ ಯೋಜನೆಗಳಿಗೆ ಪರಿಶಿಷ್ಟ ಜಾತಿ ಹಾಗೂ ಪಂಗಡದ ವಿಶೇಷ ಉಪಯೋಜನೆ ಎಸ್‌ಸಿಎಸ್‌ಪಿ – ಟಿಎಸ್‌ಪಿ ಹಣವನ್ನು ರಾಜ್ಯ ಸರ್ಕಾರ ದುರ್ಬಳಕೆ ಮಾಡಿಕೊಂಡಾಗ ಉಸಿರೆತ್ತದ ನೀವು ನಿಮ್ಮ ವೈಫಲ್ಯವನ್ನು ಮುಚ್ಚಿಕೊಳ್ಳುವುದಕ್ಕೆ ಆರ್‌ಎಸ್‌ಎಸ್ ವಿರುದ್ಧ ನಾಲಗೆ ಹರಿಬಿಡುತ್ತಲೇ ಬಂದಿರಿ ಎಂದು ಕುಟುಕಿದ್ದಾರೆ.

ಭ್ರಷ್ಟಾಚಾರದಲ್ಲಿ ಮುಳುಗಿ ಹೋಗಿರುವ ಪೊಲೀಸ್ ಇಲಾಖೆಯನ್ನು ತಹಬದಿಗೆ ತರುವ ಆದ್ಯ ಕರ್ತವ್ಯ ನಿಮ್ಮ ಮೇಲಿದೆ. ಅನ್ಯರಾಜ್ಯಗಳಲ್ಲಿ ಕರ್ನಾಟಕ ಪೊಲೀಸ್ ಮಾನ ಹರಾಜಾಗುತ್ತಿದೆ. ಕಾನೂನು ಸುವ್ಯವಸ್ಥೆ ಕುಸಿದು ಬಿದ್ದು ಖಾಕಿ ಕರ್ತವ್ಯ ಮರೆತಿದೆ. ಇದೆಲ್ಲದರ ಬಗ್ಗೆ ಉತ್ತರಿಸಬೇಕಾದ ನೀವು ಆರ್‌ಎಸ್‌ಎಸ್ ಬಗ್ಗೆ ಕಂಠ ಶೋಷಣೆ ಮಾಡಿಕೊಳ್ಳುವ ಪ್ರಯತ್ನವನ್ನು ಇನ್ನಾದರೂ ನಿಲ್ಲಿಸಿ ಎಂದು ಸುನೀಲ್ ಕುಮಾರ್ ಸಲಹೆ ನೀಡಿದ್ದಾರೆ.

ಬೆಂಕಿ ಅವಘಡ: ಇಬ್ಬರ ಸಾವು, ಹಲವರು ಗಂಭೀರ

ಮೈಸೂರು: ಮೈಸೂರಿನ ದಟ್ಟಗಳ್ಳಿ ಸಮೀಪದ ಬಾರ್ ಆ್ಯಂಡ್ ರೆಸ್ಟೋರೆಂಟ್‌ನಲ್ಲಿ ನಡೆದ ಬೆಂಕಿ ಅವಘಡ ಸಂಭವಿಸಿ, ಇಬ್ಬರು ಮೃತಪಟ್ಟಿದ್ದು ಹಲವರು ಗಂಭೀರವಾಗಿ ಗಾಯಗೊಂಡಿರುವ ಘಟನೆ ನಡೆದಿದೆ.

ರೆಸ್ಟೋರೆಂಟ್ ನೌಕರರು ಎಂದು ಹೇಳಲಾಗುತ್ತಿರುವ ಪ್ರಕಾಶ್ ಹಾಗೂ ಸುಹೆಲ್ ಎಂಬವರು ಮೃತಪಟ್ಟಿದ್ದು, ಸುಮಾರು 7 ಮಂದಿಗೆ ಸುಟ್ಟ ಗಾಯಗಳಾಗಿದ್ದು, ಗಾಯಾಳುಗಳನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸಲಾಗಿದೆ.ಕಟ್ಟಡದ ಮೇಲಂತಸ್ತು ಮರ ಮತ್ತು ಹುಲ್ಲಿನಿಂದ ಅಲಂಕರಿಸಲಾಗಿತ್ತು.ಹಾಗಾಗಿ ಬೆಂಕಿ ಬೇಗ ಆವರಿಸಿದೆ,ಮೇಲಿಂದ ಕೆಳಗೆ ಬರಲು ಚಿಕ್ಕ ಸ್ಟೆಪ್ ಮಾತ್ರ ಇದೆ. ಜತೆಗೆ ಹೊರಗೆ ಬರಲು ಕೂಡಾ ಒಂದೇ ಬಾಗಿಲು ಇದ್ದುದರಿಂದ ಬಹಳ ಮಂದಿ ಬೆಂಕಿಯಿಂದ

ಸ್ಫೋಟದ ಬಳಿಕ ಕಟ್ಟಡದಲ್ಲಿ ದಟ್ಟ ಹೊಗೆ ಆವರಿಸಿದ್ದರಿಂದ ರೆಸ್ಟೋರೆಂಟ್‌ನಲ್ಲಿದ್ದವರು ಆತಂಕಗೊಂಡು ಮೇಲಂತಸ್ತಿನಿಂದ ಜಿಗಿದು ಪಾರಾಗಲು ಯತ್ನಿಸಿದ್ದಾರೆ. ಇದರಿಂದಾಗಿ ಗಾಯಗೊಂಡಿದ್ದಾರೆ. ಸ್ಫೋಟದ ತೀವ್ರತೆಗೆ ಇಡೀ ಆವರಣ ಸುಟ್ಟು ಕರಕಲಾಗಿದೆ. ಈ ಘಟನೆಯಿಂದಾಗಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ವಿಷಯ ತಿಳಿದು ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ, ಹರಸಾಹಸ ನಡೆಸಿ ಬೆಂಕಿಯನ್ನು ನಂದಿಸಿದರು. ಘಟನೆಗೆ ಸಿಲಿಂಡರ್ ಸ್ಫೋಟವಾಗಿದ್ದೆ ಕಾರಣ ಎಂದು ಹೇಳಲಾಗುತ್ತಿದೆ. ಆದರೆ ಘಟನೆ ನೋಡಿದವರು ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಇದು ಆಗಿದೆ ಎಂದು ಹೇಳುತ್ತಿದ್ದಾರೆ.

ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಅವಘಡಕ್ಕೆ ಕಾರಣ ಏನು ಎಂಬ ಬಗ್ಗೆ ತನಿಖೆ ಕೈಗೊಂಡಿದ್ದಾರೆ.

ಕೃತಕ ಬುದ್ಧಿಮತ್ತೆ, ಯಂತ್ರ ಕಲಿಕೆ ಶಿಕ್ಷಣಕ್ಕೆ ಮಹತ್ವದ ಹೆಜ್ಜೆ ಇಟ್ಟ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ

ಕೃಷಿ ಕ್ಷೇತ್ರದ ಪದವಿ ವಿದ್ಯಾರ್ಥಿಗಳಿಗೆ ಎಐ ಕೋರ್ಸ್ ಆರಂಭ

ದೇವಿತಾ ಸಿ.ಸುಬ್ಬಯ್ಯ

ಬೆಂಗಳೂರು: ಕೃಷಿ ಕ್ಷೇತ್ರದಲ್ಲಿ ತಂತ್ರಜ್ಞಾನದ ಬಳಕೆ ದಿನದಿಂದ ದಿನಕ್ಕೆ ವಿಸ್ತರಿಸುತ್ತಿರುವ ಸಂದರ್ಭದಲ್ಲಿ, ಕೃಷಿ ವಿಶ್ವವಿದ್ಯಾಲಯದಲ್ಲಿ ಕೃತಕ ಬುದ್ಧಿಮತ್ತೆ (AI) ಮತ್ತು ಯಂತ್ರ ಕಲಿಕೆ (Machine Learning) ಶಿಕ್ಷಣಕ್ಕೆ ಹೊಸ ದಿಕ್ಕು ನೀಡುವ ಮಹತ್ವದ ಹೆಜ್ಜೆಯಿಟ್ಟಿದೆ. ಬೆಂಗಳೂರು ಕೃಷಿ ವಿವಿಯು ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಕೃಷಿ ಬಿಎಸ್‌ಸಿ ಪದವಿ ಮತ್ತು ನಾನಾ ವಿಭಾಗಗಳಲ್ಲಿ ಸ್ನಾತಕೋತ್ತರ ಪದವಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಕೃತಕ ಬುದ್ಧಿಮತ್ತೆ (ಎಐ) ನಾನ್ ಗ್ರೇಡಿಯಲ್ ಕಂಪಲ್ಸರಿ ಕೋರ್ಸ್ ಆರಂಭಿಸಿದೆ.

ಕೃಷಿ ವಿವಿಯಲ್ಲಿ ಮೊದಲ ಬಾರಿಗೆ ಪ್ರಾರಂಭಿಸುತ್ತಿರುವ ಆರ್ಟಿಫಿಷಿಯಲ್ ಇಂಟೆಲಿಜೆನ್ಸಿ ಮಷಿನ್ ಲರ್ನಿಂಗ್ ಮತ್ತು ಬಿಗ್ ಡೇಟಾ ಅನಾಲಿಸಿಸ್ ಅನ್ನು ಒಂದು ಭಾಗವಾಗಿ ತೆಗೆದುಕೊಂಡು, ಆರು ತಿಂಗಳ ಕಾಲ ಅಧ್ಯಯನ ಮಾಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯವು ಪ್ರತ್ಯೇಕ ಆರ್ಟಿಫಿಷಿಯಲ್ ಇಂಟೆಲಿಜೆನ್ಸಿ, ಮಷಿನ್ ವಿಭಾಗ ಪ್ರಾರಂಭಿಸಿದ್ದು, ನುರಿತ ಪ್ರಾಧ್ಯಾಪಕರನ್ನು ನಿಯೋಜಿಸುತ್ತಿದೆ. ಜತೆಗೆ,



ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜುಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದ್ದು, ವರ್ಚುಯಲ್ ತರಗತಿಗಳನ್ನು ನಡೆಸಲು ಈ ಕಾಲೇಜುಗಳ ಪ್ರಾಧ್ಯಾಪಕರನ್ನು ಬಳಸಿಕೊಳ್ಳಲಾಗುತ್ತದೆ. ವಾರಾಂತ್ಯದಲ್ಲಿ ವಿದ್ಯಾರ್ಥಿಗಳೊಂದಿಗೆ ಸಂವಾದ, ಚರ್ಚಾ ಕಾರ್ಯಕ್ರಮಗಳಿಗಾಗಿ ಭೌತಿಕ ತರಗತಿ ನಡೆಸಲಾಗುವುದು. ಈ ಕೋರ್ಸ್‌ಗೆ ಅಂಕಗಳು ಇರುವುದಿಲ್ಲ. ಆದರೆ ಇದಕ್ಕೆ ಗ್ರೇಡಿಂಗ್ ಇರಲಿದ್ದು, ಕಡ್ಡಾಯವಾಗಿ ಕಲಿಯಬೇಕಾಗಿರುತ್ತೆ.

> ಜಿಕೆವಿಕೆಯಲ್ಲಿ ಕೈಗೊಂಡಿರುವ ಈ ಉಪಕ್ರಮಗಳು ಕೇವಲ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಸೀಮಿತವಾಗದೇ, ಭವಿಷ್ಯದ ಸ್ಮಾರ್ಟ್ ಕೃಷಿ ವ್ಯವಸ್ಥೆಗೆ ಬಲವಾದ ಅಡಿಪಾಯ ಹಾಕುವ ಪ್ರಯತ್ನವಾಗಿ ಪರಿಣಮಿಸಿವೆ. ಕೃಷಿ ಮತ್ತು ತಂತ್ರಜ್ಞಾನ ಒಂದಾಗುವ ಹೊಸ ಯುಗಕ್ಕೆ ಇದು ನಾಂದಿಯಾಗುವ ಸಾಧ್ಯತೆಗಳಿವೆ.
> ■ ಡಾ.ಮಂಜುನಾಥ್, ಸಹಾಯಕ ಪ್ರಾಧ್ಯಾಪಕ

ವಿದ್ಯಾರ್ಥಿಗಳಿಗೆ ಎಐ ಪಾಠ: ಪ್ರಸ್ತುತ ವಿಶ್ವವಿದ್ಯಾಲಯವು ಅಂತಿಮ ವರ್ಷದ ಬಿಎಸ್‌ಸಿ (ಕೃಷಿ) ಹಾಗೂ ಕೃಷಿ ವ್ಯವಹಾರ ನಿರ್ವಹಣೆ (ಅಬಿಎಂ) ವಿದ್ಯಾರ್ಥಿಗಳಿಗಾಗಿ EAI& 421: ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಕಲಿಕೆಯ ಅನ್ವಯಿಕೆಗಳು ಎಂಬ ವಿಶೇಷ ಕೋರ್ಸ್ ಯಶಸ್ವಿಯಾಗಿ ನಡೆಸಿದೆ. ಈ ಕೋರ್ಸ್‌ಗಳನ್ನು ರೇವಾ ವಿಶ್ವವಿದ್ಯಾಲಯದ ತಜ್ಞ ಅಧ್ಯಾಪಕರ ಸಹಯೋಗದಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸಲಾಗಿದೆ.

ಅತ್ಯಾಧುನಿಕ ಎಐ ಪ್ರಯೋಗಾಲಯ

ಕೃಷಿ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ತಂತ್ರಜ್ಞಾನ ಅಭಿವೃದ್ಧಿಗೆ ಉತ್ತೇಜನ ನೀಡುವ ಉದ್ದೇಶದಿಂದ ಜಿಕೆವಿಕೆ ವಿಶೇಷ ಎಐ ಪ್ರಯೋಗಾಲಯ ಸ್ಥಾಪಿಸಲಾಗಿದ್ದು, ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಇಖ) ನಿಧಿ ಹಾಗೂ ವಿಶ್ವವಿದ್ಯಾಲಯದ ಅಭಿವೃದ್ಧಿ ಅನುದಾನಗಳ ನೆರವಿನಿಂದ ಈ ಯೋಜನೆ ರೂಪುಗೊಂಡಿದೆ. ಈ ಪ್ರಯೋಗಾಲಯದಲ್ಲಿ ವಿದ್ಯಾರ್ಥಿಗಳು ಕೃತಕ ಬುದ್ಧಿಮತ್ತೆ, ಡೇಟಾ ವಿಶ್ಲೇಷಣೆ, ಕೃಷಿ ಮುನ್ಸೂಚನಾ ಮಾದರಿಗಳು, ಸ್ಮಾರ್ಟ್ ಕೃಷಿ ತಂತ್ರಜ್ಞಾನ ಮತ್ತು ಸ್ವಯಂಚಾಲಿತ ವ್ಯವಸ್ಥೆಗಳ ಕುರಿತು ಪ್ರಾಯೋಗಿಕ ತರಬೇತಿ ಪಡೆಯಬಹುದಾಗಿದೆ.

ವಿಶೇಷ ಎಐ ಇಂಜಿನಿಯರಿಂಗ್ ಪದವಿ

ವಿಶ್ವವಿದ್ಯಾಲಯವು ಮುಂದಿನ 2027–28ನೇ ಶೈಕ್ಷಣಿಕ ವರ್ಷದಿಂದ ಬಿ.ಟೆಕ್ (ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ) ಎಂಬ ಪದವಿ ಕೋರ್ಸ್ ಆರಂಭಿಸಲು ಯೋಜನೆ ರೂಪಿಸಿದೆ. ಅದೇ ರೀತಿ ಡಿಸೆಂಬರ್ ಮಾಹೆಯೊಳಗೆ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ CMC- 511: ಕೃಷಿಯಲ್ಲಿ ಕೃತಕ ಬುದ್ಧಿಮತ್ತೆಯ ಅನ್ವಯಿಕೆಗಳು ಎಂಬ ಕೋರ್ಸ್ ಪರಿಚಯಿಸಲಾಗುತ್ತಿದ್ದು, ಕೃಷಿ ಅಂಕಿ ಅಂಶ ಶಾಸ್ತ್ರ, ಅನ್ವಯಿಕ ಗಣಿತ ಮತ್ತು ಕಂಪ್ಯೂಟರ್ ವಿಜ್ಞಾನ ವಿಭಾಗಗಳ ಅಧ್ಯಾಪಕರು ಈ ಪಠ್ಯಕ್ರಮವನ್ನು ಬೋಧಿಸಲಿದ್ದಾರೆ.

ಗ್ಯಾರಂಟಿಗಳ ಹೆಸರಿನಲ್ಲಿ ಜನರಿಗೆ ಮೋಸ: ಸಂಸದ

ಶಿವಮೊಗ್ಗ: ಕಾಂಗ್ರೆಸ್ ಸರ್ಕಾರ ಮೂರು ವರ್ಷಗಳಲ್ಲೇ ದಿವಾಳಿಯಾಗಿದೆ. ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ಜನರಿಗೆ ಮೋಸ ಮಾಡುತ್ತಿದೆ ಎಂದು ಸಂಸದ ಗೋವಿಂದ ಕಾರಜೋಳ ಆರೋಪಿಸಿದರು.

ನಗರದಲ್ಲಿ ಸೋಮವಾರ ಮಾಧ್ಯಮಗಳೊಂದಿಗೆ ಮಾತನಾಡಿ, ವಿಧಾನಸಭಾ ಚುನಾವಣೆ ವೇಳೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಇಬ್ಬರೂ ಮಹಿಳೆಯರು ಮತ್ತು ಯುವಕರಿಗೆ ಆರ್ಥಿಕ ನೆರವು, ಉಚಿತ ಬಸ್ ಪ್ರಯಾಣ, ಉಚಿತ ವಿದ್ಯುತ್ ಹಾಗೂ 10 ಕೆ.ಜಿ ಅಕ್ಕಿ ನೀಡುವುದಾಗಿ ಭರವಸೆ ನೀಡಿ ಅಧಿಕಾರಕ್ಕೆ ಬಂದರು. ಇದೀಗ ಬಡವರು, ದಲಿತರು ಹಾಗೂ ರೈತರಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂದು ದೂರಿದರು.



ದಲಿತ ಸಮುದಾಯದ ಅಭಿವೃದ್ಧಿ, ಶಿಕ್ಷಣ, ಉದ್ಯೋಗ, ಮನೆ ನಿರ್ಮಾಣ ಹಾಗೂ ಭೂಮಿಗಾಗಿ ಬಳಸಬೇಕಾದ ಹಣವನ್ನು ಸರ್ಕಾರ ಬೇರೆ ಉದ್ದೇಶಗಳಿಗೆ ದುರುಪಯೋಗ ಪಡಿಸಿಕೊಂಡಿದೆ. ಇದರಿಂದ ದಲಿತರಿಗೆ ದೊಡ್ಡ ಮಟ್ಟದ ಅನ್ಯಾಯವಾಗಿದೆ ಎಂದು ಆರೋಪಿಸಿದರು. ರಾಜ್ಯದಲ್ಲಿ ರೈತರ ಆತ್ಮಹತ್ಯೆ ಹೆಚ್ಚಾಗುತ್ತಿದ್ದರೂ ಸರ್ಕಾರ ಯಾವುದೇ ಕಾಳಜಿ ತೋರಿಸುತ್ತಿಲ್ಲ. ಈಗ ಗೃಹಲಕ್ಷ್ಮಿ ಯೋಜನೆಗೂ ಕುತ್ತು ತರುವ ಕೆಲಸ ನಡೆಯುತ್ತಿದೆ. ಜನರು ಸರ್ಕಾರದ ನಿಜ ಸ್ವರೂಪವನ್ನು ಅರಿತು ಎಚ್ಚೆತ್ತುಕೊಳ್ಳಬೇಕು ಎಂದರು. ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸುವ ಪ್ರಯತ್ನ ಖಂಡನೀಯ. ಆದ್ದರಿಂದ ವಿದ್ಯುತ್ ನಿರ್ವಹಣೆಯನ್ನು ಖಾಸಗಿ ಕಂಪನಿಗಳಿಗೆ ನೀಡಬಾರದು ಎಂದು ಒತ್ತಾಯಿಸಿದರು.

ಸಂಪಾದಕೀಯ

ಶಾಶ್ವತ ಶಾಂತಿ ನೆಲೆಸಲಿ…

ಅಮೆರಿಕ ಮತ್ತು ಇರಾನ್‌ಗಳು ಯುದ್ಧ ನಿಲ್ಲಿಸುವ ಒಪ್ಪಂದಕ್ಕೆ ಬಂದಿರುವುದು ಹಾಗೂ ಹೊರ್ಮುಜ್ ಜಲಸಂಧಿಯನ್ನು ನಿರ್ಬಂಧಮುಕ್ತ ಮಾಡಲು ನಿರ್ಧರಿಸಿರುವುದು ಜಾಗತಿಕವಾಗಿ ನಿರಾಳತೆ ತರುವ ಬೆಳವಣಿಗೆ. ಉಭಯದೇಶಗಳ ಮಧ್ಯೆ ಹಲವಾರು ವಿಷಯಗಳಿಗೆ ಸಂಬಂಧಿಸಿ ಒಪ್ಪಂದಕ್ಕೆ ಬರಲಾಗಿದ್ದು, ಅಂತಿಮ ಶಾಂತಿ ಒಪ್ಪಂದಕ್ಕೆ ಜೂನ್ 19ರಂದು ಸಹಿ ಹಾಕಲಾಗುವುದು ಎಂದು ಹೇಳಲಾಗಿದೆ. ಇರಾನಿನ ಪರಮಾಣು ಕಾರ್ಯಕ್ರಮ ಹಾಗೂ ಇನ್ನಿತರ ಕೆಲವು ಗಂಭೀರ ವಿಷಯಗಳಿಗೆ ಸಂಬಂಧಿಸಿ 60 ದಿನಗಳೊಳಗೆ ಸಹಮತದ ಒಪ್ಪಂದ ರೂಪಿಸುವ ಕುರಿತಂತೆಯೂ ಪ್ರಸ್ತಾಪಿಸಲಾಗಿದೆ. ಮೊನ್ನೆ ಮೊನ್ನೆವರೆಗೆ ತನಕ ಶಾಂತಿ ಒಪ್ಪಂದದ ಕುರಿತಂತೆ ಹಲವಾರು ಬಗೆಯ ಗೊಂದಲದ ವರದಿಗಳು ಬರುತ್ತಿದ್ದ ಮಧ್ಯೆ ಇದೀಗ ಅಮೆರಿಕ ಮತ್ತು ಇರಾನ್‌ಗಳೆರಡೂ 'ಒಪ್ಪಂದ ರೂಪಿಸಲ್ಪಟ್ಟಿದೆ' ಎಂದು ಹೇಳಿಕೊಂಡಿರುವುದು ಸಮಾಧಾನ ತರುವ ವಿಚಾರ. ಜಗತ್ತು ತೈಲ ಬಿಕ್ಕಟ್ಟಿನಿಂದ ಪಾರಾಗುವ ಆಶಾವಾದವನ್ನು ಇದು ಹುಟ್ಟಿಸಿದೆ.



ಆದರೆ ಕಳೆದ ಮೂರು ತಿಂಗಳಲ್ಲಿ ಕೊಲ್ಲಿ ಸಮರವು ಸಾಗಿ ಬಂದ ರೀತಿಯನ್ನು ಮತ್ತು ಶಾಂತಿ ಒಪ್ಪಂದ ರೂಪುಗೊಳ್ಳುವಲ್ಲಿ ಕಂಡುಬಂದ ವಿಲಕ್ಷಣಗಳನ್ನು ಕಂಡವರಿಗೆ ಈಗಿನ ಒಪ್ಪಂದ ಶಾಶ್ವತವಾಗಿ ಉಳಿಯಬಲ್ಲುದೆ ಎಂಬ ಅನುಮಾನ ಮೂಡಿದ್ದರೆ ಅದು ಸಹಜವೇ ಆಗಿದೆ.

ಕ್ಷಣಕ್ಕೊಂದು ಹೇಳಿಕೆ ನೀಡುವ ಟ್ರಂಪ್ ವರ್ತನೆ ಗಮನಿಸಿದವರಿಗೆ ಮತ್ತೊಮ್ಮೆ ಯುದ್ಧ ಸಾರುವ ಹೇಳಿಕೆಯು ಟ್ರಂಪ್‌ರಿಂದ ಯಾವಾಗ ಹೊರಬಿದ್ದೀತು ಎಂಬ ಆತಂಕ ಇದ್ದೇ ಇರುತ್ತದೆ. ಅದೂ ಸಾಲದೆಂಬಂತೆ ಲೆಬನಾನ್‌ಗೆ ಸಂಬಂಧಿಸಿ ಈ ಶಾಂತಿ ಒಪ್ಪಂದವನ್ನು ವಿಸ್ತರಿಸಲು ಒಪ್ಪದ ಇಸ್ರೇಲ್, ಕೊಲ್ಲಿಯಲ್ಲಿ ದಾಳಿ ಮುಂದುವರಿಸುವ ಸಾಧ್ಯತೆಗಳು ಇನ್ನೂ ಇವೆ. ತಾನು ಈ ಒಪ್ಪಂದದ ಪಾಲುದಾರನಲ್ಲ ಎಂಬುದಾಗಿ ಇಸ್ರೇಲ್ ಈಗಾಗಲೆ ಘೋಷಿಸಿದೆ.

ಇದೇವೇಳೆ, ಇರಾನಿನ ಪರಮಾಣು ಕಾರ್ಯಕ್ರಮ ಮತ್ತು ಅದರ ಬಳಿಯಿರುವ ಸಂಸ್ಕರಿತ ಯುರೇನಿಯಂ ಕುರಿತಾದ ಬಿಕ್ಕಟ್ಟು ಯಾವ ಕ್ಷಣದಲ್ಲಿಯೂ ಶಾಂತಿ ಒಪ್ಪಂದವನ್ನು ಮುರಿದು ಬೀಳಿಸುವ ಸಂಭವನೀಯತೆ ಹೊಂದಿದೆ. ಇರಾನಿನ ಸಂಸ್ಕರಿತ ಯುರೇನಿಯಂ ಕುರಿತಂತೆ 60 ದಿನಗಳೊಳಗೆ ಅಂತಿಮ ಒಪ್ಪಂದ ರೂಪಿಸುವ ನಿರ್ಧಾರಕ್ಕೆ ಬರಲಾಗಿದ್ದರೂ, ಈ ಸಂಕೀರ್ಣ ವಿಷಯವು ಯಾವ ಬಗೆಯ ತಿರುವು ಪಡೆಯಬಹುದೆಂದು ಹೇಳಲಾಗದು.

ಸದ್ಯಕ್ಕಂತೂ ಅಮೆರಿಕ ಮತ್ತು ಇರಾನ್‌ಗಳು ಯುದ್ಧ ನಿಲ್ಲಿಸುವ ಒಪ್ಪಂದಕ್ಕೆ ಬಂದಿರುವುದು ಗುಣಾತ್ಮಕ ಬೆಳವಣಿಗೆ. ಇದರಿಂದ ಜಗತ್ತು ಎದುರಿಸುತ್ತಿರುವ ಕೆಲವಾರು ಬಿಕ್ಕಟ್ಟುಗಳು ಪರಿಹಾರ ಕಾಣಬಹುದು. ಈ ಒಪ್ಪಂದವು ಶಾಶ್ವತ ಶಾಂತಿಗೆ ದಾರಿ ಕಲ್ಪಿಸುವಂತಾಗಲೆಂದು ಆಶಿಸಬೇಕಾಗಿದೆ.

ಕಂಪನಿ ದೊಡ್ಡದಾಗಲಿಕ್ಕೆ, ದೊಡ್ಡ ಸದ್ದು ಮಾಡಲೇಬೇಕಿಲ್ಲ

ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ
raghavaankana@gmail.com



ಸ್ಪೇಸ್ ಎಕ್ಸ್ ಷೇರು ಮಾರುಕಟ್ಟೆಗೆ ಬಂದಿದ್ದು ಕಳೆದ ವಾರದ ಮಹತ್ವದ ಸುದ್ದಿಗಳಲ್ಲೊಂದು. ಈ ಐಪಿಒದ ಮೂಲಕ ಸ್ಪೇಸ್-ಎಕ್ಸ್ ಎರಡು ಟ್ರಿಲಿಯನ್ ಡಾಲರ್ ಮೌಲ್ಯದ ಕಂಪನಿಯಾಗಿದ್ದು ಮಾತ್ರವಲ್ಲದೇ, ತನ್ನ ಸ್ಥಾಪಕ ಎಲಾನ್ ಮಸ್ಕ್‌'ನನ್ನು ಕೂಡಾ ಜಗತ್ತಿನ ಮೊದಲ ಟ್ರಿಲಿಯನೇರ್ ಆಗಿಸಿತು. ಐಪಿಒ ಬರುವ ಮೊದಲೂ ಸ್ಪೇಸ್ ಎಕ್ಸ್ ಜಗತ್ತಿನ ದೊಡ್ಡಕಂಪನಿಗಳಲ್ಲೊಂದು ಆಗಿತ್ತು. ಬಾಹ್ಯಾಕಾಶ ಪರಿಶೋಧನೆಯಲ್ಲಂತೂ ಸ್ಪೇಸ್ ಎಕ್ಸ್ ಮಂಚೂಣಿಯ ಕಂಪನಿಯೇ ಆಗಿದೆ.

ಪ್ರಬಲ ಕಂಪನಿಗಳ ಬಗ್ಗೆ ಹೇಳಿ ಎಂದಾಗ ಹೆಚ್ಚಿನ ಜನರಿಗೆ ಆಪಲ್, ಗೂಗಲ್, ಮೈಕ್ರೋಸಾಫ್ಟ್, ಅಮೆಜಾನ್, ಅಥವಾ ಸ್ಪೇಸ್-ಎಕ್ಸ್'ನಂತಹ ಹೆಸರುಗಳು ಸಾಮಾನ್ಯವಾಗಿ ನೆನಪಿಗೆ ಬರುತ್ತವೆ. ಆದರೆ ಭೂಮಿಯ ಮೇಲಿನ ಎಷ್ಟೋ ವ್ಯವಹಾರಗಳು ತೆರೆಮರೆಯಲ್ಲಿ ಸದ್ದಿಲ್ಲದೆ ಕಾರ್ಯನಿರ್ವಹಿಸುತ್ತವೆ. ಬಿಲಿಯನ್ನುಗಟ್ಟಲೇ ವ್ಯವಹಾರ ನಡೆಸುವ ಈ ಕಂಪನಿಗಳ ಹೆಸರನ್ನಾಗಲೀ, ಅವುಗಳ ಬಗೆಗಿನ ಹೆಚ್ಚಿನ ಮಾಹಿತಿಯನ್ನಾಗಲೀ ಹೆಚ್ಚಿನ ಗ್ರಾಹಕರು ಎಂದಿಗೂ ಕೇಳಿರುವುದೇ ಇಲ್ಲ ಎಂದರೆ ನಂಬುತ್ತೀರಾ? ಈ ಕಂಪನಿಗಳು ತಮ್ಮ ವ್ಯವಹಾರವನ್ನು ಮಾತ್ರವಲ್ಲ, ತಾವು ವ್ಯವಹರಿಸುವ ಆ ಇಡೀ ಉದ್ಯಮವನ್ನೇ ಅಡಿಯಿಂದ ಬುಡದವರೆಗೆ ಸಂಪೂರ್ಣವಾಗಿ ನಿಯಂತ್ರಿಸುತ್ತವೆ. ಆ ಇಡೀ ಕೈಗಾರಿಕೆಯಲ್ಲಿ ಒಂದೋ ಇವರದ್ದೇ ಏಕಸ್ವಾಮ್ಯವಿರುತ್ತದೆ, ಅಥವಾ ತೊಂಬತ್ತಕ್ಕೂ ಹೆಚ್ಚು ಶೇಕಡಾ ಹಿಡಿತವಿರುತ್ತದೆ. ಈ ಉದ್ಯಮದಲ್ಲಿ ಎರಡನೇ ಕಂಪನಿ ಇದ್ದರೂ ಇಲ್ಲದಿರುವಂತಾ ಪರಿಸ್ಥಿತಿ.

ಉದಾಹರಣೆಗೆ, ನಿಮ್ಮ ಪ್ಯಾಂಟುಗಳಲ್ಲಿರುವ ಜಿಪ್ಪರ್ ಇದೆಯೆಲ್ಲಾ, ಜಗತ್ತಿನ ಅಷ್ಟೂ ಪ್ಯಾಂಟುಗಳಲ್ಲಿರುವ ಜಿಪ್ಪರ್'ಗಳಲ್ಲಿ ಅರವತ್ತೈದಕ್ಕೂ ಹೆಚ್ಚು ಶೇಕಡಾ ಜಿಪ್ಪುಗಳು ಒಂದೇ ಕಂಪನಿಯಿಂದ ಬರುತ್ತದೆ ಎಂದರೆ ನಂಬುತ್ತೀರಾ? ಪ್ಯಾಂಟಿನದ್ದು ಮಾತ್ರವಲ್ಲ, ನಿಮ್ಮ ಹೆಗಲ ಬ್ಯಾಗ್ ಇರಬಹುದು, ಲ್ಯಾಪ್-ಟಾಪ್ ಬ್ಯಾಗಿರಬಹುದು, ಮಗಳ ಸ್ಕೂಲ್ ಬ್ಯಾಗ್, ಹೆಂಡತಿಯ ಡಿಸೈನರ್ ಬ್ಯಾಗಿರಬಹುದು, ಎಲ್ಲರ ಜಿಪ್'ಗಳದ್ದೂ ಪೂರೈಕೆ YKK ಎಂಬ ಒಂದೇ ಜಪಾನೀ ಕಂಪನಿಯ ಹಿಡಿತದಲ್ಲಿವೆ. ಜಗತ್ತಿನ ಅತ್ಯಾಧುನಿಕ ಕಂಪ್ಯೂಟರ್ ಚಿಪ್ ತಯಾರಿಕಾ ಕಂಪನಿಗಳು ಒಂದೇ ಒಂದು ಪೂರೈಕೆದಾರ ಕಂಪನಿಯನ್ನು ಅವಲಂಬಿಸಿವೆ. ಜಗತ್ತಿನ ಎಲ್ಲಾ ತಂಪುಕನ್ನಡಕಗಳು ಎರಡು ಅಥವಾ ಮೂರು ಸಂಸ್ಥೆಗಳಿಂದಲೇ ಬರುತ್ತವೆ. ಈ ಕಂಪನಿಗಳು ಯಾವಾಗಲೂ ಗೂಗಲ್, ಸ್ಯಾಮ್ಸಂಗ್, ಸೋನಿಯಷ್ಟು ಮನೆಮಾತಾಗಿಲ್ಲ. ಆದರೂ ಅವು ನಾವು ಏನನ್ನು ಧರಿಸುತ್ತೇವೆ, ನಾವು ಏನನ್ನು ಕುಡಿಯುತ್ತೇವೆ, ನಮ್ಮ ಮನರಂಜನೆ ಹೇಗಿರಬೇಕು ಮತ್ತು ಆಧುನಿಕ ನಾಗರಿಕತೆಗೆ ಶಕ್ತಿ ತುಂಬುವ ತಂತ್ರಜ್ಞಾನದ ಹೇಗಿರಬೇಕು ಎಂಬುದರ ಮೇಲೂ ಪ್ರಭಾವ ಬೀರುತ್ತವೆ.

ಇಂತಹ ಕಂಪನಿಗಳ ಅತ್ಯಂತ ಗಮನಾರ್ಹ ಉದಾಹರಣೆಗಳಲ್ಲೊಂದು ಡಚ್ ತಂತ್ರಜ್ಞಾನ ಕಂಪನಿಯಾದ ASML. ಇದು ವಿಶ್ವದ ಅತ್ಯಂತ ಮುಂದುವರಿದ ಅರೆವಾಹಕ ಅಂದರೆ ಸೆಮಿಕಂಡಕ್ಟರುಗಳನ್ನು ತಯಾರಿಸಲು ಬಳಸುವ ತೀವ್ರ ನೇರಳಾತೀತ (EUV) ಲಿಥೋಗ್ರಫಿ ಯಂತ್ರಗಳನ್ನು ಉತ್ಪಾದಿಸುತ್ತದೆ. ಈ ಯಂತ್ರಗಳು ಅದೆಷ್ಟು ಸಂಕೀರ್ಣ ಹಾಗೂ ಅತ್ಯುತ್ತಮವಾಗಿವೆಯೆಂದರೆ, ಸಧ್ಯಕ್ಕೆ ಬೇರೆ ಯಾವುದೇ ಕಂಪನಿಯು ಇವರ ಯಂತ್ರಗಳಿಗೆ ಪ್ರಸ್ತುತ ಪ್ರಮಾಣದಲ್ಲಿ ಹೋಲಿಸಬಹುದಾದ ಪರ್ಯಾಯವನ್ನು ನೀಡುವುದಿಲ್ಲ. ಇಡೀ ಜಗತ್ತು ಚಿಪ್ ಮತ್ತು ಸೆಮಿಕಂಡಕ್ಟರುಗಳಿಗೆ ಥವಾನ್ ಮೇಲೆ ಅವಲಂಬಿತವಾಗಿದ್ದರೆ, ಇಡೀ ತೈವಾನ್ ಈ ಡಚ್ ಕಂಪನಿಯ ಮೇಲೆ ಅವಲಂಬಿತವಾಗಿದೆ. TSMC, Samsung ಮತ್ತು Intel ನಂತಹ ದೈತ್ಯರು ಅತ್ಯಾಧುನಿಕ ಚಿಪ್‌ಗಳನ್ನು ಉತ್ಪಾದಿಸಲು ASMLನ ಉಪಕರಣಗಳನ್ನೇ ಅವಲಂಬಿಸಿವೆ. ASML ಇಲ್ಲದಿದ್ದರೆ, ಇಂದಿನ ಸ್ಮಾರ್ಟ್‌ಫೋನ್, ಕೃತಕ ಬುದ್ಧಿಮತ್ತೆ ಮತ್ತು ಕಂಪ್ಯೂಟಿಂಗ್ ಕ್ರಾಂತಿಯ ಬಹುಪಾಲು ಸ್ಥಗಿತಗೊಳ್ಳುತ್ತದೆ. ನಾಳೆ ಚೀನಾ, ತೈವಾನ್ ಅನ್ನು ಆಕ್ರಮಿಸಿದರೆ, ಅದು ಎಲೆಕ್ಟ್ರಾನಿಕ್ಸ್ ಚಿಪ್ ಪೂರೈಕೆ ವಿಷಯದಲ್ಲಿ ಮತ್ತೊಂದು ಹಾರ್ಮುಜ್ ಜಲಸಂಧಿಯಂತದ್ದೇ ಕಥೆಯಾಗಲಿದೆ. ಇದೇ ಕಾರಣಕ್ಕೆ, ಮೊನ್ನೆ ಮೋದಿಯವರು ತಮ್ಮ ನೆದರ್ಲ್ಯಾಂಡ್ ಭೇಟಿಯಲ್ಲಿ ಇದೇ ASML ಕಂಪನಿಯನ್ನು ಭಾರತಕ್ಕೆ ಆಹ್ವಾನಿಸಿ, ಟಾಟಾ ಎಲೆಕ್ಟ್ರಾನಿಕ್ಸ್ ಜೊತೆ ಕೈಗೂಡಿಸಲು ಒಪ್ಪಂದ ಮಾಡಿಕೊಂಡಿದ್ದಾರೆ. ಈ ಒಪ್ಪಂದ ಭಾರತದಲ್ಲಿ ಸೆಮಿಕಂಡಕ್ಟರ್ ಉದ್ಯಮದ ಹೊಸ ಶಕೆಗೆ ನಾಂದಿ ಹಾಡಲಿದೆ.

ಇಂತಹುದೇ ಮತ್ತೊಂದು ಅನಾಮಿಕ ದೈತ್ಯ ಕಂಪನಿಯೆಂದರೆ YKK ಎಂಬ ಜಪಾನಿನ ಜಿಪ್ಪರ್ ತಯಾರಿಕಾ ಕಂಪನಿ. ಜಿಪ್ಪರ್‌ಗಳು ಸರಳವಾಗಿ ಕಂಡುಬಂದರೂ, YKK ಪ್ರಪಂಚದ ಜಿಪ್ಪರ್ ಪೂರೈಕೆಯ ಸರಿಸುಮಾರು 65% ಭಾಗವನ್ನು ತಯಾರಿಸುತ್ತದೆ. ಉತ್ಪಾದನೆಯ ಬಹುತೇಕ ಪ್ರತಿಯೊಂದು ಹಂತವನ್ನು ನಿಯಂತ್ರಿಸುವ ಮೂಲಕ, ಅಸಾಧಾರಣ ಗುಣಮಟ್ಟ ಮತ್ತು ಬೆಲೆಯ ಸ್ಥಿರತೆಯನ್ನು ಉಳಿಸಿಕೊಳ್ಳುವ ಮೂಲಕ 1934ರಿಂದ ಇಂದಿನವರೆಗೆ ತನ್ನ ಯಶಸ್ಸನ್ನು ಉಳಿಸಿಕೊಂಡು ಬಂದಿದೆ.

ಇನ್ನು ಕನ್ನಡಕದ ಉದ್ಯಮಕ್ಕೆ ಬಂದರೆ, ಲಕ್ಸೋಟಿಕಾ ಎಂಬ ಒಂದೇ ಒಂದು ಕಂಪನಿ ತನ್ನ ಉತ್ಪಾದನೆ, ಚಿಲ್ಲರೆ ವ್ಯಾಪಾರ ಮತ್ತು ಪರವಾನಗಿ ಮೂರನ್ನೂ ಕಬಳಿಸಿಕೊಂಡು ಏಕಮೇವಾ ದ್ವಿತೀಯನಾಗಿ ತನ್ನ ಸಾಮ್ರಾಜ್ಯವನ್ನೇ ಸೃಷ್ಟಿಸಿಕೊಂಡಿದೆ. ತನ್ನದೇ ಆದ ರೇ-ಬ್ಯಾನ್ ಮತ್ತು ಓಕ್ಲಿಯಂತಹ ಪ್ರಸಿದ್ಧ ಬ್ರ್ಯಾಂಡ್‌ಗಳನ್ನು ಮಾತ್ರವಲ್ಲದೇ, ಅರ್ಮಾನಿ, ಫೆರಾರಿ, ಡೀಸೆಲ್, ಡಿಯೋರ್, ಪ್ರಾದಾ ಮುಂತಾದ ಹಲವಾರು ಐಷಾರಾಮಿ ಫ್ಯಾಷನ್ ಲೇಬಲ್‌ಗಳಿಗೆ ಕನ್ನಡಕಗಳನ್ನು ಉತ್ಪಾದಿಸುತ್ತದೆ. ಇಷ್ಟೇ ಅಲ್ಲದೇ, ಪ್ರಪಂಚದಾದ್ಯಂತ ಪ್ರಮುಖ ಚಿಲ್ಲರೆ ಮಾರಾಟದ ಅಂಗಡಿಗಳನ್ನೂ ಮತ್ತು ಆಪ್ಟಿಕಲ್ ಅಂಗಡಿಗಳನ್ನು ನಿರ್ವಹಿಸುತ್ತದೆ. ಫ್ಯಾಷನ್ ಜಗತ್ತಿನ ತಂಪುಕನ್ನಡಕಗಳನ್ನು ಇನ್ಯಾರೂ ತಯಾರಿಸುವ ಅಥವಾ ಮಾರಾಟ ಮಾಡುವ ಮೂಲಕ ಸೆಡ್ಡುಹೊಡೆಯಲು ಸಾಧ್ಯವೇ ಇಲ್ಲ ಎಂಬ ಹೆಗ್ಗಳಿಕೆಯ ಈ ಲಕ್ಸೋಟಿಕಾ, 2018ರಲ್ಲಿ ಆಪ್ಟಿಕಲ್ ಕನ್ನಡಕದ ಉದ್ಯಮದ ದೈತ್ಯನಾಗಿದ್ದ ಎಸ್ಸಿಲೋರ್ ಕಂಪನಿಯನ್ನೂ ತನ್ನದಾಗಿಸಿಕೊಂಡು EssilorLuxottica ಎಂಬ ಹದಿನೈದು ಬಿಲಿಯನ್ ಡಾಲರ್ ಮೌಲ್ಯದ ದೈತ್ಯ ಕಂಪನಿಯಾಗಿದೆ. ಫ್ಯಾಷನ್ ಮತ್ತು ಆಪ್ಟಿಕಲ್ ಎರಡೂ ಉದ್ಯಮಗಳನ್ನು ನಿಯಂತ್ರಿಸುತ್ತಾ, ಜಾಗತಿಕ ಕನ್ನಡಕ ಮಾರುಕಟ್ಟೆಯ ಮೇಲೆ ಅಸಾಧಾರಣ ಪ್ರಭಾವವನ್ನು ತನ್ನದಾಗಿಸಿಕೊಂಡು, ಕನ್ನಡಕ ಉದ್ಯಮದ ವಿಶ್ವನ್ ಪೇಂಟ್ಸ್ ಆಗಿ ನಿಂತಿದೆ.

ಪಾನೀಯ ವಲಯಕ್ಕೆ ಬಂದರೆ AB InBev ಮೂಲಕ ಮತ್ತೊಂದು ಗಮನಾರ್ಹ ಉದಾಹರಣೆಯನ್ನು ನೀವು ನೋಡಬಹುದು. ಹಲವಾರು ದೈತ್ಯ, ದೊಡ್ಡ ಮತ್ತು ಸಣ್ಣ ಕಂಪನಿಗಳ ವಿಲೀನಗಳ ಸರಣಿಯ ಮೂಲಕ ರೂಪುಗೊಂಡ ಈ ಕಂಪನಿ ಇವತ್ತು ಬಡ್‌ವೈಸರ್, ಕರೋನಾ, ಸ್ಟೆಲ್ಲಾ ಆರ್ಟೋಯ್ ಮತ್ತು ಅನೇಕ ಪ್ರಾದೇಶಿಕ ಬಿಯರ್ ಬ್ರ್ಯಾಂಡ್‌ಗಳನ್ನು ತನ್ನಾಗಿಸಿಕೊಂಡು, ಜಗತ್ತಿನ ಅತೀದೊಡ್ಡ ಬ್ರೂವರ್ ಎಂದು ಗುರುತಿಸಿಕೊಂಡಿದೆ. 61 ಬಿಲಿಯನ್ ಡಾಲರ್ ವ್ಯಾಪಾರದ ಮೂಲಕ ಜಗತ್ತಿನ ಜಾಗತಿಕ ಬಿಯರ್ ಮಾರಾಟದಲ್ಲಿ 32% ಪಾಲು ಇದೊಂದೇ ಕಂಪನಿಯದ್ದು. 34 ಬಿಲಿಯನ್ ಡಾಲರ್ ವ್ಯಾಪಾರ ಮಾಡುವ ಎರಡನೇ ಅತೀದೊಡ್ಡ ಬ್ರೂವರ್ ಹೈನಿಕೆನ್'ನ ಮಾರುಕಟ್ಟೆಯ ಪಾಲು 12% ಎಂದರೆ ಲೆಕ್ಕ ಹಾಕಿ!

ಇಪ್ಪತ್ತನೇ ಶತಮಾನದ ಬಹುಪಾಲು ಕಾಲ, ವಜ್ರಗಳಿಗೆ ಸಮಾನಾರ್ಥಕ ಪದವೆಂದರೆ ಡಿ ಬೀರ್ಸ್ ಎಂದಾಗಿತ್ತು. ಈ ಕಂಪನಿ ಕೇವಲ ವಜ್ರಗಳನ್ನು ಜಗಮಗಿಸುವ ಅಂಗಡಿಗಳಲ್ಲಿಟ್ಟು ಮಾರುವುದೊಂದೇ ಅಲ್ಲ, ಸಗಟು ಮಾರಾಟವಲ್ಲ, ವಜ್ರಗಳನ್ನು ಕಟ್ ಮಾಡಿ ಸುಂದರವಾಗಿಸುವುದಲ್ಲ, ಈ ಇಡೀ ವ್ಯಾಪಾರದ ಸರಪಳಿಯಲ್ಲಿ ಎಲ್ಲಕ್ಕಿಂತ ಮೊದಲ ಕೆಲಸವಾದ ಗಣಿಗಾರಿಕೆಯನ್ನೂ ತಾನೇ ನಡೆಸಿ, ವಿತರಣಾ ಮಾರ್ಗಗಳನ್ನೂ ತಾನೇ ನಿಯಂತ್ರಿಸಿ, ವಿಶ್ವದ ಬಹುಪಾಲು ವಜ್ರ ಪೂರೈಕೆಯನ್ನು ತಾನೇ ನಿರ್ವಹಿಸುತ್ತದೆ.

ಜಗತ್ತಿನ ಅತೀ ದೊಡ್ಡ ಲೈವ್-ಈವೆಂಟ್‌ಗಳ ಉದ್ಯಮ ಹೆಚ್ಚೂ ಕಮ್ಮಿ ಲೈವ್ ನೇಷನ್ ಎಂಟರ್‌ಟೈನ್‌ಮೆಂಟ್ ಎಂಬ ಒಂದೇ ಕಂಪನಿಯಿಂದ ನಡೆಸಲ್ಪಡುತ್ತದೆ. ಸಂಗೀತ ಕಚೇರಿ ನಡೆಸುವ ಸ್ಥಳಗಳು, ಕಾರ್ಯಕ್ರಮಗಳ ಪ್ರಚಾರ ಸೇವೆಗಳು ಮತ್ತು ಟಿಕೆಟ್ ದೈತ್ಯ ಟಿಕೆಟ್‌ಮಾಸ್ಟರ್.ಕಾಂ ಮಾಲೀಕತ್ವದ ಮೂಲಕ, ಕಂಪನಿಯು ವಿಶ್ವಾದ್ಯಂತ ಪ್ರಮುಖ ಸಂಗೀತ ಕಚೇರಿಗಳಿಗೆ ಟಿಕೆಟ್‌ಗಳನ್ನು ಆಯೋಜಿಸುವ ಮತ್ತು ಮಾರಾಟ ಮಾಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಜಾಗತಿಕ ಆರ್ಥಿಕತೆಯಲ್ಲಿ ಅತ್ಯಂತ ಶಕ್ತಿಶಾಲಿ ವ್ಯವಹಾರಗಳು ಯಾವಾಗಲೂ ದೊಡ್ಡದಾಗಿ ಕಾಣಲೇ ಬೇಕಿಲ್ಲ, ದೊಡ್ಡ ಭಾಷಣಗಳನ್ನೇ ಮಾಡಬೇಕಿಲ್ಲ ಎಂಬುದನ್ನು ಈ ಅನಾಮಿಕ ದೈತ್ಯ ಕಂಪನಿಗಳ ಕಥೆಗಳು ನಿರೂಪಿಸುತ್ತವೆ. ತೀರಾ ಸಾಮಾನ್ಯ ಜಿಪ್ಪರ್'ನಿಂದ ಹಿಡಿದು ಸಂಕೀರ್ಣ ಸೆಮಿಕಂಡಕ್ಟರ್‌ಗಳವರೆಗೆ, ನೂರು ರೂಪಾಯಿಯ ಬಿಯರ್'ನಿಂದ ಹಿಡಿದು ಲಕ್ಷ ರೂಪಾಯಿಯ ವಜ್ರದವರೆಗೆ ಈ ಸಂಸ್ಥೆಗಳು ಇಡೀ ಕೈಗಾರಿಕೆಗಳನ್ನೇ ತಮ್ಮ ಮೇಲೆ ಅವಲಂಬಿತವಾಗಿರುವಷ್ಟು ಬಲವಾದ ಸ್ಥಾನಗಳನ್ನು ನಿರ್ಮಿಸಿವೆ. ಹಾಗೂ ಈ ಕಥೆಗಳು ಆಧುನಿಕ ಜಗತ್ತನ್ನು ರೂಪಿಸುವ ಕಂಪನಿಗಳ ಪಟ್ಟಿಯಲ್ಲಿ, ಸದ್ದಿಲ್ಲದೇ ಕೆಲಸ ಮಾಡುವ ಕಂಪನಿಗಳ ಒಂದು ಸಣ್ಣ ಗುಂಪೇ ಇದೆ ಎಂಬುದನ್ನೂ ನಮಗೆ ನೆನಪಿಸುತ್ತವೆ.

ಅತ್ಯಂತ ಬುದ್ಧಿಶಾಲಿಗಳ ಸಮಸ್ಯೆ

ಅತ್ಯಂತಮತಿಮೇಧಾವೀ ತ್ರಯಾಣಾಮೇಕಮಶ್ನುತೇ ।
ಅಲ್ಪಾಯುರ್ವಾ ದರಿದ್ರೋ ವಾ ಹ್ಯನಪತ್ಯೋ ನ ಸಂಶಯಃ ॥

-ಸಮಯೋಚಿತ ಪದ್ಯಮಾಲಿಕಾ



ಅತ್ಯಂತ ಬುದ್ಧಿಶಾಲಿಯಾದವನು ಅಲ್ಪಾಯುಸ್ಸಿಗೋ, ಬಡತನಕ್ಕೋ ಅಥವಾ ಮಕ್ಕಳಿಲ್ಲದಿರುವುದಕ್ಕೋ - ಇವುಗಳಲ್ಲಿ ಯಾವುದಕ್ಕಾದರೂ ಒಂದಕ್ಕೆ ತುತ್ತಾಗುತ್ತಾನೆ. ಇದಕ್ಕೆ ಸಂಶಯವಿಲ್ಲ - ಎಂಬುದು ಶ್ಲೋಕಾರ್ಥ.

'ಪಾಪಿ ಚಿರಾಯು' ಎಂಬ ಲೋಕೋಕ್ತಿಯಿದೆ. ದಿನನಿತ್ಯವೂ ಪಾಪದ ಕೆಲಸವನ್ನೇ ಮಾಡುವವನು ಸುಖವಾಗಿರುತ್ತಾನೆ. ಚಟಗಳ ದಾಸನಾದವನು ಆರೋಗ್ಯದಿಂದಿರುತ್ತಾನೆ. ದುಷ್ಟನು ದೀರ್ಘಾಯುಷಿಯಾಗಿರುತ್ತಾನೆ. ನೆಮ್ಮದಿಯಿಂದಿರುತ್ತಾನೆ. ಗೌರವಾದಾರಗಳಿಗೂ ಪಾತ್ರನಾಗುತ್ತಾನೆ.

ಇದನ್ನು ನಿತ್ಯವೂ ಸಮಾಜದಲ್ಲಿ ಕಾಣುತ್ತೇವೆ. ನಮ್ಮೆಲ್ಲರ ಅನುಭವಕ್ಕೂ ಬಂದಿರುತ್ತದೆ. ಇದನ್ನೇ ತದ್ವಿರುದ್ಧವಾಗಿ ಮೇಧಾವಿ, ಸಜ್ಜನ, ಪರೋಪಕಾರಿ - ಇವರೆಲ್ಲ ಒಂದಲ್ಲ ಒಂದು ಬಗೆಯ ತೊಂದರೆಯನ್ನು ಅನುಭವಿಸುತ್ತಾರೆ, ನೆಮ್ಮದಿ ಎಂಬುದೇ ಇರುವುದಿಲ್ಲ ಎಂದು ಹೇಳಲಾಗುತ್ತದೆ. ಲೋಕಮುಖೀ ಕೆಲಸಗಳಲ್ಲಿ ತೊಡಗಿಕೊಂಡವರಿಗೆ ತೊಂದರೆ ತಪ್ಪಿದ್ದಲ್ಲ. ಸಮಾಜಕಾರ್ಯದಲ್ಲಿ ಸಂಪೂರ್ಣವಾಗಿ ಜೋಡಿಸಿಕೊಂಡವರಿಗೆ ಸಮಾಜದಲ್ಲಿರುವವರೆಲ್ಲ ಸಹಕಾರ ನೀಡುವುದಿಲ್ಲ. ಕೆಲವರು ಕೈಜೋಡಿಸುತ್ತಾರೆ. ಇನ್ನು ಕೆಲವರು ಸಂಶಯಿಸುತ್ತಾರೆ. ಮತ್ತೆ ಕೆಲವರು ಆಕ್ಷೇಪಿಸುತ್ತಾರೆ. ಕೆಲವು ಮಂದಿ ವಿರೋಧಿಸುತ್ತಾರೆ. ಅವರವರು ಪಡೆದ ಸಂಸ್ಕಾರಕ್ಕನುಗುಣವಾಗಿ ನಡೆ ಮತ್ತು ನುಡಿಯಿರುತ್ತದೆ. ಇದನ್ನು ಎಲ್ಲೆಡೆ ನೋಡುತ್ತೇವೆ. ಇಂತಹ ನಡತೆ ಇಂದು ಮಾತ್ರವಲ್ಲ. ಹಿಂದಿನಿಂದಲೂ ಕೃತಯುಗದಿಂದಲೂ ಇದೆ. ರಾಮಾದಿಗಳಿರುವಾಗ ಮಂಥರೆ ಮೊದಲಾದವರಿದ್ದರು. ಕೃಷ್ಣ, ಧರ್ಮರಾಜಾದಿಗಳಿರುವಾಗ ಶಕುನಿ ಮೊದಲಾದವರಿದ್ದರು. ಇಂದು ಇಂಥವರ ಸಂಖ್ಯೆ ಅಧಿಕವಾಗಿದೆ.

ಪ್ರಕೃತ ಶ್ಲೋಕದಲ್ಲಿ ಕವಿಯು ಹೇಳುವ ವಿಚಾರವೆಂದರೆ ಸತ್ಯವಂತರು, ಸಜ್ಜನರು, ಸಂತರು ಒಂದಲ್ಲ ಒಂದು ಬಗೆಯ ತೊಂದರೆಗೆ ಸಿಲುಕುತ್ತಾರೆ ಎನ್ನುತ್ತಾ ಪ್ರಧಾನವಾಗಿ ಮೂರು ವಿಷಯವನ್ನು ಪ್ರಸ್ತಾಪಿಸುತ್ತಾನೆ. ಅತ್ಯಂತ ಮೇಧಾವಿಗಳು ಎನಿಸಿಕೊಂಡವರು ಕವಿಯು ಹೇಳಿದ ಮೂರು ಸಂಕಷ್ಟಗಳಲ್ಲಿ ಒಂದರಲ್ಲಾದರೂ ಸಿಲುಕಿಕೊಳ್ಳುತ್ತಾರಂತೆ. ಆ ಮೂರು ಸಂಕಷ್ಟಗಳೆಂದರೆ ಅಲ್ಪಾಯುಷ್ಯ, ಬಡತನ ಅಥವಾ ಮಕ್ಕಳಿಲ್ಲದಿರುವಿಕೆ. ಈ ತನ್ನ ಹೇಳಿಕೆಯಲ್ಲಿ ಸಂಶಯವಿಲ್ಲ ಎಂಬುದಾಗಿ ಸಮರ್ಥಿಸುತ್ತಾನೆ.

ಈ ಮಾತು ಕವಿಯ ಅನುಭವದ ಹಿನ್ನೆಲೆಯಲ್ಲಿ ಸತ್ಯವಾಗಿರಬಹುದು. ಬಹುತೇಕರು ಹೀಗಿರಬಹುದು. ಆದರೆ ಇದನ್ನು ಸಾರ್ವತ್ರಿಕಗೊಳಿಸಬಹುದೆ? ಎಂಬ ಜಿಜ್ಞಾಸೆಯಿದೆ. 'ಸರ್ವೇ ನಿಯಮಾಃ ಸಾಪವಾದಾಃ' ಎಂಬ ನ್ಯಾಯವಿದೆ. ಎಲ್ಲ ನಿಯಮಕ್ಕೂ ಒಂದೆರಡಾದರೂ ಅಪವಾದವಿದ್ದೇ ಇರುತ್ತದೆ. ಹೀಗಿದ್ದರೂ ಕವಿಯ ಹೇಳಿಕೆಯಲ್ಲಿ ಸ್ವಲ್ಪ ಮಟ್ಟಿನ ಸತ್ಯಾಂಶವಿರುವುದು ಲೋಕದಲ್ಲಿ ಸಂಚರಿಸುವವರಿಗೆ ಗೊತ್ತು.

ಲೋಕವ್ಯವಹಾರ ನಡೆಯುವುದು ಬುದ್ಧಿವಂತಿಕೆಯ ಹಿನ್ನೆಲೆಯಿಂದ. ಬುದ್ಧಿವಂತರ ಯೋಗದಾನದಿಂದ. ಸ್ಪರ್ಧಾತ್ಮಕ ಯುಗದಲ್ಲಿ ಬುದ್ಧಿವಂತರಿರಬೇಕು. ಅವರು ಕೌಟುಂಬಿಕವಾಗಿ ನೆಮ್ಮದಿಯನ್ನು ಹೊಂದಿರಬೇಕು. ನ್ಯೂನತೆಯಿಂದ ಹೊರಬರಬೇಕು. ಈ ಕಾರಣಕ್ಕಾಗಿ ಕವಿಯ ಅನುಭವದ ಮಾತು ಮುಂದಿನ ದಿನಗಳಲ್ಲಿ ಸುಳ್ಳಾಗಲಿ ಎಂದು ಆಶಿಸೋಣ.

ಬಂಗಾಳದ ಹಿಂದೂಗಳಿಗೆ ಗೋವು ಭಾರವಾಗಿದೆಯಾ?

ಧರಣಿ ಮಂಡಲ
• ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com



ಪ್ರತಿವರ್ಷ ದೇಶಾದ್ಯಂತ ಬಕ್ರೀದ್‌ನಲ್ಲಿನ ಕುರ್ಬಾನಿಗಾಗಿ ಲಕ್ಷಾಂತರ ಗೋವುಗಳು ಹತ್ಯೆಯಾಗುತ್ತವೆ. ವಿಶೇಷವಾಗಿ ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ಈ ಹತ್ಯೆಯ ಪ್ರಮಾಣ ಹೆಚ್ಚಿರುತ್ತದೆ. ಆದರೆ ಈ ವರ್ಷ ಪಶ್ಚಿಮ ಬಂಗಾಳದಲ್ಲಿ ಪರಿಸ್ಥಿತಿ ಬೇರೆಯೇ ಇತ್ತು. ಹೊಸ ಸರ್ಕಾರ ಬಕ್ರೀದ್‌ನಲ್ಲಾಗುವ ಗೋಹತ್ಯೆಯನ್ನು ತಡೆಯಲು ಕಟ್ಟುನಿಟ್ಟಿನ ನಿಯಮಗಳನ್ನು ರೂಪಿಸಿದ್ದಷ್ಟೇ ಅಲ್ಲದೆ ಅಕ್ರಮ ಗೋಹತ್ಯೆ ಹಾಗೂ ಮಾರಾಟದಲ್ಲಿ ಸಿಕ್ಕಿಬಿದ್ದವರನ್ನು ಜೈಲಿಗೆ ಕಳುಹಿಸುವುದಾಗಿ ಎಚ್ಚರಿಸಿತ್ತು. ಹೀಗಾಗಿ ಈ ವರ್ಷ ಪಶ್ಚಿಮ ಬಂಗಾಳದಲ್ಲಿ ಬಕ್ರೀದ್‌ನಂದು ಗೋವುಗಳ ಹತ್ಯೆ ಅಷ್ಟಾಗಿ ಕಂಡುಬಂದಿಲ್ಲ.

ಪಶ್ಚಿಮ ಬಂಗಾಳದಲ್ಲಿ ಬೀಫ್ ಎಂಬುದು ಬಹು ಮುಖ್ಯ ಆಹಾರವಾಗಿದೆ. ಇಲ್ಲಿ ಕೇರಳ ಹೊರತುಪಡಿಸಿ ದೇಶದಲ್ಲೇ ಬಹುದೊಡ್ಡ ಗೋಮಾಂಸದ ವ್ಯವಹಾರ ನಡೆಯುತ್ತದೆ. ಪ್ರತಿವರ್ಷ ಪಶ್ಚಿಮ ಬಂಗಾಳ ಒಂದರಲ್ಲೇ ಬಕ್ರೀದ್‌ನಂದು 1500 ರಿಂದ 2000 ಕೋಟಿವರೆಗೂ ಅಕ್ರಮ ಗೋವುಗಳ ಹತ್ಯೆ, ಸಾಗಾಟ ಮತ್ತು ಮಾಂಸದ ವ್ಯವಹಾರ ನಡೆಯುತ್ತದೆ. ಇಲ್ಲಿಯ ನಾಡಿಯಾ, ಮುರ್ಷಿದಾಬಾದ್ ಮತ್ತು ಬಿರ್‌ಭೂಮ್ ಜಿಲ್ಲೆಗಳಲ್ಲಿ ಬಕ್ರೀದ್ ಸಮಯದಲ್ಲಿ ಗೋವಿನ ವಹಿವಾಟು ಹೆಚ್ಚಾಗಿ ನಡೆಯುತ್ತದೆ. ಹತ್ತರಿಂದ ಇಪ್ಪತ್ತೈದು ಸಾವಿರಕ್ಕೆ ಬೇರೆ ಸಮಯದಲ್ಲಿ ಮಾರಾಟವಾಗುವ ಒಂದೊಂದು ಗೋವುಗಳು ಬಕ್ರೀದ್‌ನಂದು ಒಂದು ಲಕ್ಷದಿಂದ ಐದು ಲಕ್ಷದವರೆಗೆ ಮಾರಾಟವಾಗುತ್ತವೆ. ಈ ಸಮಯದಲ್ಲಿ ಬೇಡಿಕೆ ಹೆಚ್ಚಿರುವುದರಿಂದ ಹೆಚ್ಚಿನ ರೈತರು ಈ ಸಮಯಕ್ಕಾಗಿಯೇ ಕಾದು ಮುಸ್ಲಿಮರಿಗೆ ಕುರ್ಬಾನಿಗೆಂದೇ ಗೋವು ಮಾರಾಟ ಮಾಡುತ್ತಾರೆ. ಇಂತಹ ರೈತರು ತಮ್ಮ ಮನೆಯಲ್ಲಿರುವ ವಯಸ್ಸಾದವರನ್ನು ಸಹ ಒಂದು ದಿನ ಹೀಗೆ ಮಾರುವುದಿಲ್ಲ ಎಂಬ ಗ್ಯಾರಂಟಿ ಖಂಡಿತಾ ಇಲ್ಲ.

ಈ ಬಾರಿ ಬಿಜೆಪಿ ಸರ್ಕಾರದ ಮುಖ್ಯಮಂತ್ರಿಯಾಗಿ ಆಯ್ಕೆಯಾದ ಸುವೇಂದು ಅಧಿಕಾರಿ ಒಂದಷ್ಟು ತುರ್ತಾಗಿ ಆಗಬೇಕಾದ ಕಾರ್ಯಸೂಚಿಗಳನ್ನು ಸಿದ್ಧಪಡಿಸಿಟ್ಟುಕೊಂಡು ಅದನ್ನೆಲ್ಲಾ ಜಾರಿಗೆ ತರುತ್ತಿದ್ದಾರೆ. ಅದರಲ್ಲಿ ಗೋವುಗಳ ರಕ್ಷಣೆಯೂ ಒಂದು. ಹೀಗಾಗಿ ಈ ವರ್ಷ ಪರಿಸ್ಥಿತಿ ಹಿಂದಿನಂತಿಲ್ಲ ಎಂಬುದು ಬಹುತೇಕ ಇಂತಹ ವ್ಯವಹಾರದಲ್ಲಿರುವವರಿಗೆ ಮನವರಿಕೆಯಾಗಿತ್ತು. ಹೀಗಾಗಿ ಇವರುಗಳು ಬಕ್ರೀದ್‌ಗಿಂತ ಮುಂಚಿತವಾಗಿ ಹೊಸದೊಂದು ನಾಟಕ ಪ್ರಾರಂಭಿಸಿದ್ದರು. ಅದು ಇಲ್ಲಿಂದ ದೇಶವ್ಯಾಪಿ ಹರಡುವಂತಾಯಿತು. ಅದೇನೆಂದರೆ ಈ ಬಾರಿ ಮುಸ್ಲಿಮರು ಕುರ್ಬಾನಿಯಲ್ಲಿ ಗೋವನ್ನು ಬಲಿ ಕೊಡುವುದಿಲ್ಲ. ಈ ಪ್ರಾಣಿ ನಿಮಗೆ ಪೂಜ್ಯ ತಾಯಿಯ ಸಮಾನವಾಗಿದ್ದರೆ, ಅದನ್ನು ನಿಮ್ಮ ಮನೆಗಳಲ್ಲಿ ಇಟ್ಟು ಸೇವೆ ಮಾಡಿ, ಪೂಜೆ ಮಾಡಿ, ವ್ಯಾಪಾರಕ್ಕಾಗಿ ಮಾರುಕಟ್ಟೆಗಳಿಗೆ ತರಬೇಡಿ. ಏಕೆಂದರೆ ಇಲ್ಲಿ ಅದನ್ನು ಕೇವಲ ಕುರ್ಬಾನಿಯ ಉದ್ದೇಶದಿಂದಲೇ ಖರೀದಿಸಲಾಗುತ್ತದೆ. ಆದ್ದರಿಂದ ಈ ಪ್ರಾಣಿಗಳನ್ನು ಗೌರವಪೂರ್ವಕವಾಗಿ ಹಿಂದಕ್ಕೆ ತೆಗೆದುಕೊಂಡು ಹೋಗಿ ಎಂಬುದಾಗಿ ಇಲ್ಲಿಯ ಮುಸ್ಲಿಮರು ಹೇಳುತ್ತಿದ್ದುದು ದೊಡ್ಡ ಸುದ್ದಿಯಾಗಿತ್ತು. ಇನ್ನು ಇಲ್ಲಿಯ ಮುಸ್ಲಿಮ್ ಮುಖಂಡರು ಪರಿಸ್ಥಿತಿಯನ್ನು ಅರಿತು ಬಕ್ರೀದ್‌ನಂದು ಗೋವುಗಳ ಹತ್ಯೆ ಮಾಡಬೇಡಿ. ಕುರ್ಬಾನಿಗೆ ಕುರಿ ಇಲ್ಲವೇ ಆಡು ಮೇಕೆಗಳನ್ನು ಬಲಿ ಕೊಡಿ. ಗೋಮಾಂಸವನ್ನು ತ್ಯಜಿಸಿ ಎಂಬುದಾಗಿ ಹೇಳುತ್ತಿದ್ದುದು ವರದಿಯಾಗಿತ್ತು.

ಒಂದರ್ಥದಲ್ಲಿ ಸ್ವತಃ ಹೊಸದಾಗಿ ಚುನಾಯಿತ ಬಿಜೆಪಿ ಶಾಸಕಿ ರೇಖಾ ಪಾತ್ರ, ಹಿಂಗಲ್‌ಗಂಜ್‌ನಲ್ಲಿ ಜಾನುವಾರು ತುಂಬಿದ ವಾಹನವನ್ನು ತಡೆದು ನಿಲ್ಲಿಸಿದ್ದು ಗೋರಕ್ಷಕರನ್ನು ಉತ್ತೇಜಿಸಿತ್ತು. ಹೀಗಾಗಿ ಮುಂದಾಗಬಹುದಾದ ಪರಿಸ್ಥಿತಿಯನ್ನು ಮನಗಂಡು ಯಾವೊಬ್ಬ ಮುಸಲ್ಮಾನನು ಗೋವುಗಳನ್ನು ಖರೀದಿಸಲು ಮುಂದೆ ಬರದಂತಾಗಿತ್ತು. ಏಕೆಂದರೆ ಒಂದೊಮ್ಮೆ ಖರೀದಿಸಿ ಸಾಗಾಟ ಮಾಡುವಾಗ ಪೊಲೀಸರು ಕೇಸ್ ದಾಖಲಿಸಬಹುದು ಎಂಬ ಭಯ ಒಂದು ಕಡೆಯಾದರೆ, ಗೋರಕ್ಷಕರು ನಮ್ಮ ಮೇಲೆ ಹಲ್ಲೆ ಮಾಡಬಹುದೆಂಬ ಭಯ ಮತ್ತೊಂದೆಡೆ ಇವರನ್ನು ಕಾಡಿತ್ತು.

ಇಲ್ಲಿಯ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸ್‌ವಾದಿ) ಮತ್ತು ಇತರೆ ವಿರೋಧ ಪಕ್ಷಗಳು ಬಿಜೆಪಿ ಸರ್ಕಾರವು ಬಕ್ರೀದ್‌ಗೆ ಮುಂಚಿತವಾಗಿ ಬೇಕಂತಲೆ ಗೋಹತ್ಯಾ ನಿಷೇಧದ ನಿಯಮಗಳನ್ನು ಜಾರಿಗೊಳಿಸಿ ಭಯದ ವಾತಾವರಣವನ್ನು ಸೃಷ್ಟಿಸುತ್ತಿದೆ ಎಂಬುದಾಗಿ ಹೇಳಿದ್ದವು. ಸಿಪಿಎಂನ ರಾಜ್ಯ ಕಾರ್ಯದರ್ಶಿ ಎಂ.ಡಿ.ಸಲೀಂ, ಈ ಕಾಯ್ದೆಯು ಸಣ್ಣ ದನದ ಮಾರಾಟಗಾರರು, ದನ ಸಾಕುವವರು ಮತ್ತು ಅಲ್ಪಸಂಖ್ಯಾತರಲ್ಲಿ ಭಯದ ವಾತಾವರಣವನ್ನು ಹುಟ್ಟುಹಾಕುವುದರೊಂದಿಗೆ ಸಾಮಾಜಿಕ ಸಾಮರಸ್ಯವನ್ನು ಹಾಳುಮಾಡುತ್ತಿದೆ ಎಂಬುದಾಗಿ ತಿಳಿಸಿದ್ದರು. ಮತ್ತೊಬ್ಬ ಕಾಂಗ್ರೆಸ್‌ನ ನಾಯಕ ಅಧೀರ್ ರಂಜನ್ ಚೌಧರಿ ಮುಖ್ಯಮಂತ್ರಿ ಸುವೇಂದು ಅಧಿಕಾರಿಗೆ ಪತ್ರವೊಂದನ್ನು ಬರೆದು, ಮುರ್ಷಿದಾಬಾದ್‌ನಂತಹ ಅಲ್ಪಸಂಖ್ಯಾತ ಪ್ರಾಬಲ್ಯದ ಜಿಲ್ಲೆಗಳಲ್ಲಿ ಗೋಹತ್ಯೆಗೆ ಸಂಬಂಧಿಸಿದಂತೆ ಸರ್ಕಾರ ಹೊರಡಿಸಿರುವ ಅಧಿಸೂಚನೆಯು ಗೊಂದಲ, ಅಸಮಾಧಾನ ಮತ್ತು ಆತಂಕವನ್ನು ಸೃಷ್ಟಿಸಿದೆ ಎಂದಿದ್ದರು. ಇನ್ನು ನಮ್ಮ ರಾಜ್ಯ ಕಾಂಗ್ರೆಸ್ ಸರ್ಕಾರ ಈ ಕ್ರಮವು ಅಲ್ಪಸಂಖ್ಯಾತರ ಧಾರ್ಮಿಕ ಆಚರಣೆಗಳಲ್ಲಿ ಸರ್ಕಾರದ ಹಸ್ತಕ್ಷೇಪ ಎಂಬುದಾಗಿ ಕೂಗಾಡಿತ್ತು. ಎಸ್‌ಯುಸಿಐ (ಕಮ್ಯುನಿಸ್ಟ್)ನ ಪ್ರಧಾನ ಕಾರ್ಯದರ್ಶಿ ಪ್ರಭಾಸ್ ಘೋಷ್ ಸರ್ಕಾರ ಹೊರಡಿಸಿರುವ ಈ ಅಧಿಸೂಚನೆಯು ಕೋಮು ಸೌಹಾರ್ದತೆಗೆ ಭಂಗವನ್ನುಂಟು ಮಾಡುತ್ತದೆ ಎಂಬುದಾಗಿ ಮೈ ಪರಚಿಕೊಂಡಿದ್ದರು. ಒಂದು ಹೆಜ್ಜೆ ಮುಂದೆ ಹೋದ ಇಂಡಿಯನ್ ಸೆಕ್ಯುಲರ್ ಫ್ರಂಟ್‌ನ ಶಾಸಕ ನೌಸಾದ್ ಸಿದ್ದಿಕ್, ಬಿಜೆಪಿ ಸರ್ಕಾರವು ಮುಸ್ಲಿಮರನ್ನು ಗುರಿಯಾಗಿಸಲು ಬಯಸುತ್ತದೆ. ಆದರೆ ದನ ಸಾಕಣೆಯಲ್ಲಿ ತೊಡಗಿರುವ ಶೇಕಡಾ 80ರಷ್ಟು ಜನರು ಮುಸ್ಲಿಮೇತರರು ಎಂಬುದಾಗಿ ತಿಳಿಸಿದ್ದ.

ಒಂದು ಕಡೆ ಇಷ್ಟೆಲ್ಲಾ ಹೋರಾಟ ಹಾರಾಟಗಳು ನಡೆಯುತ್ತಿದ್ದರೆ, ಮತ್ತೊಂದೆಡೆ ಜಮೀಯತ್ ಉಲಮಾ ಎ ಹಿಂದ್ ಸಂಘಟನೆಯ ಅಧ್ಯಕ್ಷರಾದ ಅರ್ಷದ್ ಮದನಿ ಹೇಳಿದ ಹೇಳಿಕೆಯೊಂದು ಭಾರಿ ವೈರಲ್ ಆಗಿತ್ತು. ಹಸುವನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸಬೇಕು, ಅದನ್ನು ಸಂಪೂರ್ಣವಾಗಿ ಸಂರಕ್ಷಿತ ಪ್ರಾಣಿ ಎಂದು ಪರಿಗಣಿಸಬೇಕು ಮತ್ತು ಹಸುವನ್ನು ಕೊಲ್ಲುವವರನ್ನು ಮಾತ್ರವಲ್ಲದೆ ಅದನ್ನು ಮಾರಾಟ ಮಾಡುವವರನ್ನು ಹಾಗೂ ಖರೀದಿಸುವವರನ್ನು ಕಾನೂನಿನ ಪ್ರಕಾರ ಅಪರಾಧಿಗಳನ್ನಾಗಿ ಮಾಡಬೇಕು ಎಂಬುದಾಗಿ ಈತ ಹೇಳಿದ್ದ. ಇವನಂತೆ ಮತ್ತೊಬ್ಬ ಕೋಲ್ಕತ್ತಾದ ಜಾಮಾ ಮಸೀದಿಯ ಇಮಾಮ್ ಸರ್ಕಾರದ ಗೋಹತ್ಯಾ ವಿರೋಧಿ ಕ್ರಮವನ್ನು ಕಂಡು ತಮ್ಮ ಸಮುದಾಯಕ್ಕೆ ಅತ್ಯಂತ ಜಾಣ್ಮೆಯ ಮತ್ತು ಶಾಂತಿಯುತವಾದ ಮನವಿಯೊಂದನ್ನು ಮಾಡಿದ್ದ. ಹಬ್ಬದ ಹೆಸರಿನಲ್ಲಿ ಯಾವುದೇ ರೀತಿಯ ಕಾನೂನು ಸಂಘರ್ಷ, ಗಲಭೆ ಅಥವಾ ಹಿಂಸಾಚಾರದಂತಹ ಘಟನೆಗಳಿಗೆ ಆಸ್ಪದ ಕೊಡಬೇಡಿ. ಈ ಬಾರಿ ಹಸುಗಳನ್ನು ಖರೀದಿಸಬೇಡಿ ಮತ್ತು ಹಸುಗಳ ಬಲಿಯನ್ನು ಕೊಡಬೇಡಿ ಎಂಬುದಾಗಿ ಕರೆ ನೀಡಿದ್ದ. ಇದರ ಹಿಂದೆ ತಮ್ಮ ಕೋಮಿನ ಯುವಕರು ಅನಗತ್ಯವಾಗಿ ಜೈಲು ಪಾಲಾಗುವುದನ್ನು ತಪ್ಪಿಸುವ ಉದ್ದೇಶ ಇವನದ್ದಾಗಿತ್ತು.

ಇವರುಗಳಂತೆ ಸಾಕಷ್ಟು ಮುಸ್ಲಿಮ್ ಮುಖಂಡರು ತಮ್ಮದೇ ವಾದವನ್ನು ಮಂಡಿಸುತ್ತಾ, ಭಾರತದಲ್ಲಿ ಹಸುವಿನ ಮಾಂಸ ತಿನ್ನುವ ವಿಷಯವನ್ನು ಕೇವಲ ಮುಸ್ಲಿಂ ಸಮುದಾಯಕ್ಕೆ ಜೋಡಿಸಿ ದೊಡ್ಡ ರಾಜಕೀಯ ಮಾಡಲಾಗುತ್ತಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಶೇಕಡಾ ತೊಂಬತ್ತಕ್ಕಿಂತ ಹೆಚ್ಚು ಮುಸ್ಲಿಮರಿದ್ದರೂ ಅಲ್ಲಿನ ಕಾಶ್ಮೀರಿ ಪಂಡಿತರ ಭಾವನೆಗಳಿಗೆ ಗೌರವ ನೀಡಿ ಮುಸ್ಲಿಮರು ಗೋಮಾಂಸ ತಿನ್ನುತ್ತಿರಲಿಲ್ಲ. ದೇಶದ ಜನಸಂಖ್ಯೆಯ ಶೇಕಡಾ ಎಪ್ಪತ್ತಕ್ಕಿಂತ ಹೆಚ್ಚು ಜನರು ಮಾಂಸಾಹಾರಿಗಳಾಗಿದ್ದಾರೆ. ಆದರೆ ದೇಶದಲ್ಲಿ ಮುಸ್ಲಿಮರ ಜನಸಂಖ್ಯೆ ಕೇವಲ ಶೇಕಡಾ ಹದಿನಾಲ್ಕರಷ್ಟಿದೆ. ಕೇವಲ ಮುಸ್ಲಿಮರು ಮಾತ್ರ ಮಾಂಸ ತಿನ್ನುತ್ತಿದ್ದರೆ ಮಾರುಕಟ್ಟೆಯಲ್ಲಿ ಮಾಂಸದ ಬೆಲೆ ಇಷ್ಟು ಹೆಚ್ಚಾಗುತ್ತಿರಲಿಲ್ಲ. ದೇಶದಲ್ಲಿ ಹಿಂದೂಗಳು, ಮುಸ್ಲಿಮರು, ಸಿಖ್ಖರು ಮತ್ತು ಕ್ರಿಶ್ಚಿಯನ್ನರು ಸೇರಿದಂತೆ ಎಲ್ಲಾ ಸಮುದಾಯದವರು ಮಾಂಸಾಹಾರ ಸೇವಿಸುತ್ತಾರೆ. ಆದರೆ ರಾಜಕೀಯ ಕಾರಣಗಳಿಗಾಗಿ ಕೇವಲ ಮುಸ್ಲಿಂ ಸಮುದಾಯವನ್ನು ಮಾತ್ರ ಗುರಿ ಮಾಡಲಾಗುತ್ತಿದೆ ಎಂಬುದಾಗೆಲ್ಲಾ ಬೊಬ್ಬೆ ಹೊಡೆದಿದ್ದರು.

ಇನ್ನು ಕೆಲವರು ವೀರ ಸಾವರ್ಕರ್ ಯಾವುದೋ ಪರಿಸ್ಥಿತಿಯಲ್ಲಿ ಎಂದೋ ಹೇಳಿದ್ದರು ಎನ್ನಲಾದ ಮಾತೊಂದನ್ನು ಎಳೆದು ತಂದು ನಾವು ಭಾರೀ ಸಭ್ಯರು ಎಂಬುದನ್ನು ಬಿಂಬಿಸುವ ಪ್ರಯತ್ನವನ್ನು ಮಾಡಿದ್ದರು. ಸಾವರ್ಕರ್ ತಮ್ಮ ಪುಸ್ತಕವೊಂದರಲ್ಲಿ ಹಸುವನ್ನು ಗೋಮಾತೆ ಎಂದು ಕರೆಯುವುದನ್ನು ಒಪ್ಪಿರಲಿಲ್ಲ. ಅವರು ಹಸುವಿಗಿಂತ ಕತ್ತೆ ಹೆಚ್ಚು ಉಪಯುಕ್ತ ಪ್ರಾಣಿ ಎಂದು ಬರೆದಿದ್ದರು. ಹಸುವಿನ ಹಾಲನ್ನು ಕುಡಿಯಿರಿ, ಆದರೆ ಅದನ್ನೇ ದೇವರೆಂದು ಪೂಜಿಸುವುದರಲ್ಲಿ ಅರ್ಥವಿಲ್ಲ ಎಂಬುದಾಗಿ ಹೇಳಿದ್ದರು ಎಂಬುದನ್ನು ಒತ್ತಿ ಹೇಳುವ ಪ್ರಯತ್ನವನ್ನು ಮಾಡಿದ್ದರು. ಇವರಂತೆ ಕೆಲ ಗಣ್ಯ ವ್ಯಕ್ತಿಗಳು, ಭಾರತೀಯ ಸಮಾಜದಲ್ಲಿ ಹಸು ಹಾಲು ಕೊಡುವವರೆಗೆ ಮಾತ್ರ ಅದನ್ನು ತಾಯಿ ಎಂದು ಪೂಜಿಸಲಾಗುತ್ತದೆ. ಆದರೆ ಅದು ಹಾಲು ಕೊಡುವುದನ್ನು ನಿಲ್ಲಿಸಿದ ತಕ್ಷಣ ಮತ್ತು ವಯಸ್ಸಾದ ತಕ್ಷಣ ಅದೇ ಜನರು ಆ ಹಸುವನ್ನು ಮಾರುಕಟ್ಟೆಗೆ ತಂದು ಮಾರಿಬಿಡುತ್ತಾರೆ. ಆ ಹಸುವನ್ನು ಕೊಳ್ಳುವವರು ಅದಕ್ಕೆ ಏನು ಮಾಡುತ್ತಾರೆ ಎಂಬುದು ಮಾರುವವರಿಗೂ ಗೊತ್ತಿರುತ್ತದೆ. ಆದರೂ ಹಣದಾಸೆಗಾಗಿ ಅದನ್ನು ಮಾರಿಬಿಡುತ್ತಾರೆ ಎಂಬುದಾಗಿ ಪುನರುಚ್ಚರಿಸಿದ್ದರು

ಇದೇನಿದು 'ಖಾತಾ' ಪರಿವರ್ತನೆ ಗೊಂದಲ?

ರಮಾನಂದ ಶರ್ಮಾ

ರಾಜ್ಯ ಸರ್ಕಾರದ 6ನೇ ಗ್ಯಾರಂಟಿ ಎಂದು ಕರೆಯಲಾಗುವ ಭೂ ಗ್ಯಾರಂಟಿ ಯೋಜನೆಗೆ ತಾರ್ಕಿಕ ಅಂತ್ಯ ಕಾಣಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಪ್ರಾರಂಭಿಸಿರುವ 'ನನ್ನ ಇ ಖಾತಾ ನನ್ನ ಹಕ್ಕು' ಅಭಿಯಾನ ಬೆಂಗಳೂರಿನಲ್ಲಿ ನಡೆಯುತ್ತಿದೆ. ನಗರದ 5 ಪಾಲಿಕೆಗಳ 52 ಸ್ಥಳಗಳಲ್ಲಿ ಪ್ರತಿ ಶನಿವಾರ ನಡೆಯುತ್ತಿರುವ ಈ ಅಭಿಯಾನದ ಮೂಲಕ 'ಇ ಖಾತಾ' ಸೇವೆಯನ್ನು ಜನತೆಯ ಮನೆಬಾಗಿಲಿಗೆ ತಲುಪಿಸುವ ಪ್ರಯತ್ನ ನಡೆದಿದ್ದು, ಇ ಖಾತಾ, ಮ್ಯುಟೇಷನ್, ಖಾತಾ ತಿದ್ದುಪಡಿ, ಹೊಸ ಇ ಖಾತಾ, ಬಿ ಟು ಎ ಖಾತಾ ಸೇರಿದಂತೆ ವಿವಿಧ ಸೇವೆಗಳಿಗಾಗಿ ದಾಖಲೆಗಳನ್ನು ಹಿಡಿದು ಜನರು ಭೇಟಿ ನೀಡುತ್ತಿದ್ದಾರೆ.

ಲಭ್ಯ ಮಾಹಿತಿ ಪ್ರಕಾರ ಬೆಂಗಳೂರು ನಗರದಲ್ಲಿ 23 ಲಕ್ಷ ಆಸ್ತಿಗಳಿದ್ದು, ಅವುಗಳಲ್ಲಿ 'ಎ' ಖಾತಾ ಹೊಂದಿದ ಆಸ್ತಿಗಳು 16 ಲಕ್ಷ ಇದ್ದರೆ, 'ಬಿ' ಖಾತೆ ಹೊಂದಿದ ಆಸ್ತಿಗಳು 7 ಲಕ್ಷಗಳು. ಸುಮಾರು 7000 ಪುಸ್ತಕಗಳಲ್ಲಿದ್ದ ಆಸ್ತಿಗಳ ಎಲ್ಲಾ ವಿವರಗಳನ್ನು ಡಿಜಿಟಲೈಸ್ ಮಾಡಲಾಗಿದೆಯಂತೆ. ನಿರೀಕ್ಷೆಯಂತೆ 'ನನ್ನ ಇ ಖಾತಾ, ನನ್ನ ಹಕ್ಕು' ಅಭಿಯಾನ ಸಂಪೂರ್ಣವಾಗಿ ಯಶಸ್ವಿಯಾದರೆ, ಜಿಬಿಎ ಸುಮಾರು 10000 ಕೋಟಿ ರೂ. ಆದಾಯವನ್ನು ನಿರೀಕ್ಷಿಸಬಹುದಂತೆ.

'ಖಾತಾ' ಎಂದರೆ, ಒಂದು ಆಸ್ತಿಯ ಮಾಲಿಕತ್ವವು ರೆವೆನ್ಯೂ ರೆಕಾರ್ಡ್‌ನಲ್ಲಿ ಸಂಬಂಧಪಟ್ಟ ಮಾಲಿಕನ ಹೆಸರಿನಲ್ಲಿ ದಾಖಲಾಗಿದೆ ಎಂದು ಸರಕಾರ ನೀಡುವ ಒಂದು ಪ್ರಮಾಣ ಪತ್ರ. ಇದು ಒಂದು ಆಸ್ತಿಯ ಮಾಲಿಕತ್ವದ ಬಗೆಗೆ ದೃಢವಾದ ಮತ್ತು ಅಂತಿಮ ದಾಖಲೆ. ಇದು ಆಸ್ತಿಯ ಕ್ರಯಪತ್ರ (ಸೇಲ್ ಡೀಡ್)ಕ್ಕಿಂತಲೂ ಹೆಚ್ಚು ನಿಖರವಾದ ಮತ್ತು ದೃಢವಾದ ದಾಖಲೆ ಎನ್ನಲಾಗುತ್ತದೆ. ಆಸ್ತಿ ವ್ಯವಹಾರಕ್ಕೆ ಸಂಬಂಧಪಟ್ಟ ಯಾವುದೇ ವ್ಯವಹಾರದಲ್ಲಿ ಇದು ಅತ್ಯಗತ್ಯ ದಾಖಲೆ ಎಂದು ಪರಿಗಣಿಸಲಾಗುತ್ತದೆ. ಈ ದಾಖಲೆ ಇಲ್ಲದ ವ್ಯವಹಾರವನ್ನು ಅಸಿಂಧು ಎನ್ನಲಾಗುತ್ತದೆ. ವಾಸ್ತವದಲ್ಲಿ ಒಂದು ಆಸ್ತಿಯ ಖರೀದಿ ಅಥವಾ ಮಾರಾಟವಾದ ತಕ್ಷಣ ಅದರ ನೋಂದಣಿ ಆಗುತ್ತಿರುವಂತೆ ಈ ಪ್ರಕ್ರಿಯೆ ಆಗಬೇಕು. ಆದರೆ, ಸದ್ಯದ ವ್ಯವಸ್ಥೆಯಲ್ಲಿ ಅದು ಸ್ವಯಂಪ್ರೇರಿತವಾಗಿ ಆಗದೆ, ಆಸ್ತಿಯ ಖರೀದಿದಾರ ಖಾತಾ ದಾಖಲೆಗೆ ಪುನಃ ಒಂದು ನಿರ್ದಿಷ್ಟ ಶುಲ್ಕವನ್ನು ನೀಡಿ ಸಂಬಂಧಪಟ್ಟ ಕಚೇರಿಗೆ ಹತ್ತಾರು ಬಾರಿ ಓಡಾಡಿ ಹಣ ವ್ಯಯಿಸಿ ಪಡೆಯಬೇಕಾಗುತ್ತದೆ. ಆಸ್ತಿ ಖರೀದಿದಾರನು ಆಸ್ತಿಯನ್ನು ಖರೀದಿಸಿದ ಬಳಿಕ ನಿಗದಿತ 7% ಸ್ಟ್ಯಾಂಪ್ ಡ್ಯೂಟಿ ನೀಡಿ ನೋಂದಣಿ ಮಾಡಿಸಿದ ಮೇಲೆ, ರೆವೆನ್ಯೂ ದಾಖಲೆಯಲ್ಲಿ ಹೆಸರು ನಮೂದಿಸಲು ಮತ್ತೇಕೆ ಶುಲ್ಕ ನೀಡಬೇಕು ಎಂದು ಜನಸಾಮಾನ್ಯರು ಪ್ರಶ್ನಿಸುತ್ತಾರೆ. ಅನುಭವಿಗಳ ಪ್ರಕಾರ ಈ 'ಬಿ' ಖಾತಾ ಪರಿಕಲ್ಪನೆ ದೇಶದಲ್ಲಿ ಬೇರಾವ ರಾಜ್ಯದಲ್ಲೂ ಇಲ್ಲ. 'ಬಿ' ಖಾತಾ ಪಡೆಯುವಾಗ ಆಸ್ತಿ ನೋಂದಣಿ ಸಮಯದಲ್ಲಿ ನೀಡಿದ ಸ್ಟ್ಯಾಂಪ್ ಡ್ಯೂಟಿಯ ಮೇಲೆ 2% ಶುಲ್ಕ ಪಡೆಯಲಾಗಿತ್ತು.

ಈಗ 'ಎ' ಖಾತಾ ಪಡೆಯಲು ಆಸ್ತಿಯ ಮಾರ್ಗದರ್ಶಿ ಮೌಲ್ಯದ 2% ಶುಲ್ಕ (ಆಸ್ತಿ ಮಾಲೀಕರ ಆಕ್ಷೇಪಣೆ, ಆಕ್ರೋಶ ಮತ್ತು ಪ್ರತಿರೋಧಕ್ಕೆ ಸ್ಪಂದಿಸಿ ಹಿಂದಿನ ಆದೇಶವನ್ನು ಮಾರ್ಪಡಿಸಿ 5% ನಿಂದ 2% ಗೆ ಇತ್ತೀಚೆಗೆ ಇಳಿಸಲಾಗಿದೆ) ವಿಧಿಸಲಾಗುತ್ತಿದ್ದು ಅದರ ಸಂಗಡ ಅಭಿವೃದ್ಧಿ ಶುಲ್ಕ ಬೇರೆ. ಆರಂಭಿಕ ವರದಿ ಪ್ರಕಾರ 'ಎ' ಖಾತಾ ಪಡೆಯಲು ಮಾರ್ಗದರ್ಶಿ ಬೆಲೆಯು ನೋಂದಣಿ ಮೌಲ್ಯವಾಗಿರದೇ, ಇಂದಿನ ಪರಿಷ್ಕೃತ ಮೌಲ್ಯವಾಗಿರುತ್ತದೆ. ಇತ್ತೀಚಿನ ವರದಿಗಳಲ್ಲಿ ಈ ಬಗೆಗೆ ಸ್ಪಷ್ಟೀಕರಣ ಕಾಣುತ್ತಿಲ್ಲ. 2016ರಲ್ಲಿ 50 ಲಕ್ಷ ಇದ್ದ ಮಾರ್ಗದರ್ಶಿ ಬೆಲೆ ಇಂದು ಸುಮಾರು 75 ಲಕ್ಷ ಇರಬಹುದು. ಸ್ಥಿರಾಸ್ತಿ ಮೌಲ್ಯವು ಸದಾ ಏರುತ್ತಲೇ ಇರುತ್ತದೆ ಮತ್ತು ಬೆಂಗಳೂರಿನಲ್ಲಿ ಇದು ಇನ್ನೂ ಹೆಚ್ಚು ಎನ್ನುವುದು ತಿಳಿದ ವಿಷಯ. ಈ ಎರಡೂ ಉದಾಹರಣೆಗಳಲ್ಲಿ ಆಸ್ತಿ ಮಾಲಿಕ 'ಎ' ಖಾತಾ ಪಡೆಯಲು ಕ್ರಮವಾಗಿ 1 ಮತ್ತು 1.50 ಲಕ್ಷ ಶುಲ್ಕ ನೀಡಬೇಕಾಗುತ್ತದೆ. ಇಂದಿನ ಪರಿಷ್ಕೃತ ಮಾರ್ಗದರ್ಶಿ ಬೆಲೆಯನುಸಾರ ಸುಮಾರು 50000 ರೂ.ನ್ನು ಹೆಚ್ಚಿಗೆ ನೀಡಬೇಕಾಗುತ್ತದೆ. ಇದರ ಮೇಲೆ ಅಭಿವೃದ್ಧಿ ಶುಲ್ಕ ಬೇರೆ. ಇಂದು ಬೆಂಗಳೂರಿನಲ್ಲಿ ಎಲ್ಲಿಯೇ ಆಗಿರಲಿ ಆಸ್ತಿಯ (ನಿವೇಶನದ ಬೆಲೆ) ಸಾಮಾನ್ಯ ನಿವೇಶನಕ್ಕೆ ಕಡಿಮೆ ಎಂದರೂ 40-50 ಲಕ್ಷ ಇರುತ್ತಿದ್ದು ಅದೆಷ್ಟು ಆಸ್ತಿ ಮಾಲಿಕರು ಇದನ್ನು ಭರಿಸಬಹುದು?

ಆಸ್ತಿಗಳು 'ಎ' ಖಾತಾಗೆ ಪರಿವರ್ತನೆಯಾದರೆ ಆಸ್ತಿಯ ಬೆಲೆ ಹೆಚ್ಚಾಗುವುದರಿಂದ ಮಾರಾಟ ಮಾಡಿದರೆ ಸಖತ್ ಲಾಭವಾಗುತ್ತದೆ ಎನ್ನುವ ಸಮರ್ಥನೆ ಕೇಳಿಬರುತ್ತದೆ. ಅದು ಸರಿ. ಆದರೆ, ಎಷ್ಟು ಜನ ಆಸ್ತಿಯನ್ನು ಮಾರಾಟ ಮಾಡುತ್ತಾರೆ? ಬಹುತೇಕರು ಮಾಲಿಕತ್ವದ ದೃಢೀಕರಣಕ್ಕಾಗಿ 'ಎ' ಖಾತೆಗೆ ಪರಿವರ್ತನೆ ಮಾಡಿಕೊಳ್ಳುತ್ತಿದ್ದಾರೆ. ಬಹುಶಃ ಇದೇ ಕಾರಣಕ್ಕೋ ಏನೋ 'ಎ' ಖಾತಾ ಪರಿವರ್ತನೆಗೆ ನಿರೀಕ್ಷೆಯಷ್ಟು ಆತುರತೆ ಕಾಣುತ್ತಿಲ್ಲ. ಹಾಗೆಯೇ ಫ್ಲ್ಯಾಟ್‌ಗಳಿಗೆ 'ಎ' ಖಾತಾ ನೀಡುವ ನಿಟ್ಟಿನಲ್ಲಿ ಸಾಫ್ಟ್‌ವೇರ್ ಇನ್ನೂ ಬಿಡುಗಡೆಯಾಗಿಲ್ಲ ಎನ್ನಲಾಗುತ್ತಿದೆ. ಇದು ಕೂಡಾ ಜನರ ನಿರುತ್ಸಾಹಕ್ಕೆ ಕಾರಣ ಇರಬಹುದು. ಒಂದು ಅಂದಾಜಿನ ಪ್ರಕಾರ ಬೆಂಗಳೂರಲ್ಲಿ ಸುಮಾರು 20000 ಅಪಾರ್ಟ್‌ಮೆಂಟ್‌ಗಳು ಮತ್ತು 2.50 ಲಕ್ಷ ಫ್ಲ್ಯಾಟ್‌ಗಳು ಇವೆ. ಬೆಂಗಳೂರು ಲಂಬಾಂತರವಾಗಿ ಬೆಳೆಯುತ್ತಿದ್ದು, ಫ್ಲ್ಯಾಟ್‌ಗಳ ಸಂಖ್ಯೆ ಗಮನಾರ್ಹವಾಗಿದೆ. ನಗರದಲ್ಲಿ 7 ಲಕ್ಷ 'ಬಿ' ಖಾತಾದಾರರು ಇದ್ದು, ಕೇವಲ 7000 ಅರ್ಜಿಗಳು ಪರಿವರ್ತನೆಗೆ ಬಂದಿವೆಯಂತೆ.

'ಬಿ' ಖಾತಾ ಪರಿಕಲ್ಪನೆ ಜನಸಾಮಾನ್ಯರಲ್ಲಿ ಗೊಂದಲವನ್ನು ಹುಟ್ಟುಹಾಕಿದೆ. ಈ ಪರಿಕಲ್ಪನೆ ಆರಂಭವಾಗಿದ್ದು ಹೇಗೆ ಮತ್ತು ಯಾಕೆ ಎನ್ನುವುದರ ಬಗೆಗೆ ಸರಿಯಾದ ಮಾಹಿತಿ ದೊರಕುತ್ತಿಲ್ಲ. ಕೆಲವು ಮೂಲಗಳ ಪ್ರಕಾರ ನಿಯಮಾವಳಿಯನ್ನು ಉಲ್ಲಂಘಿಸಿದ ಆಸ್ತಿಗೆ ತಾತ್ಕಾಲಿಕವಾಗಿ ನೀಡಿದ ಖಾತೆಯಿದು. ಇದರ ಮಾಲಿಕತ್ವವನ್ನು ಅಧಿಕೃತವೆಂದು ಹೇಳುವಂತಿಲ್ಲ. ಇದು ಒಂದು ರೀತಿಯಲ್ಲಿ ''ಅಂತಿಮ ಪರಿಶೀಲನೆ ಮತ್ತು ಒಪ್ಪಿಗೆ ಆಧಾರದ ಮೇಲೆ' ಎಂದು ಕೆಲವರು ಅರ್ಥೈಸುತ್ತಾರೆ. ಈ 'ಬಿ' ಖಾತೆಯ ಮೇಲೆ ಬ್ಯಾಂಕ್ ಸಾಲ ಮತ್ತಿತರ ಸೌಲಭ್ಯಗಳು ದೊರಕುವುದಿಲ್ಲ ಮತ್ತು ಆಸ್ತಿಯನ್ನು ಮಾರಾಟ ಮಾಡಲಾಗುವುದಿಲ್ಲ. ಇದನ್ನು ಹಣಕಾಸು ವ್ಯವಹಾರದಲ್ಲಿ ಭದ್ರತೆಯಾಗಿ ನೀಡಲಾಗುವುದಿಲ್ಲ.

'ಬಿ' ಖಾತಾದಿಂದ 'ಎ' ಖಾತಾಗೆ ಪರಿವರ್ತಿಸುವ ಸರ್ಕಾರದ ಉದ್ದೇಶ ಶ್ಲಾಘನೀಯ. ಆಸ್ತಿಯ ಮಾಲಿಕತ್ವದ ಬಗೆಗೆ ಜನರಿಗೆ ಖಾತರಿ ದೊರಕುತ್ತಿದೆ. 'ಜಿಬಿಎ' ಆದಾಯವನ್ನು ಹೆಚ್ಚಿಸುವ ಅಜೆಂಡಾ ಕೂಡಾ ಇದರ ಹಿಂದಿದೆ ಎನ್ನುವ ಆರೋಪವೂ ಇದೆ. ಅದು ಬೇರೆ ವಿಚಾರ. ಆದರೆ, ಈ ಪ್ರಕ್ರಿಯೆಗೆ ಜನತೆಯಿಂದ ವಸೂಲು ಮಾಡುವ ಶುಲ್ಕದ ಬಗೆಗೆ ಭಾರೀ ಆಕ್ರೋಶ ಇದೆ. ಈಗಾಗಲೇ ಆಸ್ತಿ ಖರೀದಿಯ ನೊಂದಣಿಗೆ ಮತ್ತು 'ಬಿ' ಖಾತಾಗೆ ಮತ್ತು ಅಭಿವೃದ್ಧಿ ಶುಲ್ಕಕ್ಕೆ ಲಕ್ಷಾಂತರ ವ್ಯಯಿಸಿದ್ದು, ಈಗ 'ಎ' ಖಾತಾಗೆ ಪರಿವರ್ತಿಸಲು ಮತ್ತೆ ಲಕ್ಷಾಂತರ ರೂ. ನೀಡುವುದು ಯಾವ ಮಾನದಂಡದಲ್ಲೂ ಸರಿಯೆನಿಸದು ಎನ್ನುವುದು ಜನರ ಭಾವನೆ. ಇದನ್ನು ಉಚಿತವಾಗಿ ಮಾಡಿ ಎಂದು ಅವರು ಕೇಳುವುದಿಲ್ಲ. ಒಂದು ನಾಮಿನಲ್ ಮೊತ್ತಕ್ಕೆ ಅಥವಾ 'ಬಿ' ಖಾತಾ ಮಾಡುವಾಗ ಶುಲ್ಕ ವಿಧಿಸಿದಂತೆ ನೋಂದಣಿ ಸಮಯದಲ್ಲಿ ನೀಡಿದ ಸ್ಟಾಂಪ್ ಡ್ಯೂಟಿಯ ಮೇಲೆ 1-2% ಶುಲ್ಕ ವಿಧಿಸಲಿ ಎನ್ನುತ್ತಾರೆ. ಈ ಅಭಿಯಾನ 100 ದಿನಗಳ ಕಾಲ ನಡೆಯುತ್ತಿದ್ದು ಆಗಸ್ಟ್ 23ಕ್ಕೆ ಅಂತ್ಯವಾಗುತ್ತದೆ. ಆಸ್ತಿಯ ಮಾರ್ಗದರ್ಶಿ ಬೆಲೆಯನ್ನು 5% ರಿಂದ 2% ಇಳಿಸಿದ್ದು ಕೇವಲ 100 ದಿನಗಳಿಗೆ ಮಾತ್ರವಾಗಿದೆ. ಜನತೆಯ ಸ್ಪಂದನೆಯನ್ನು ನೋಡಿ ಈ ಗಡುವನ್ನು ವಿಸ್ತರಿಸುವ ಸಾಧ್ಯತೆಯನ್ನು ತಳ್ಳಿಹಾಕಲಾಗದು.

ಅಮೆರಿಕ-ಇರಾನ್ ಶಾಂತಿ ಒಪ್ಪಂದ ಅಂತಿಮ

ಸಂಘರ್ಷಕ್ಕೆ ತೆರೆ



- ಬರೋಬ್ಬರಿ 107 ದಿನಗಳ ಯುದ್ಧಕ್ಕೆ ಅಂತ್ಯ
- ಜೂನ್ 19ರಂದು ಶಾಂತಿ ಒಪ್ಪಂದಕ್ಕೆ ಸಹಿ
- ಜಾಗತಿಕ ತೈಲ ಮಾರುಕಟ್ಟೆಗೆ ನೆಮ್ಮದಿ

ಇಸ್ಲಾಮಾಬಾದ್/ವಾಷಿಂಗ್ಟನ್: ಕಳೆದ 107 ದಿನಗಳಿಂದ ಜಾಗತಿಕ ರಾಜಕೀಯ ಮತ್ತು ತೈಲ ಮಾರುಕಟ್ಟೆಯನ್ನು ತಲ್ಲಣಗೊಳಿಸಿದ್ದ ಅಮೆರಿಕ-ಇರಾನ್ ಸಂಘರ್ಷಕ್ಕೆ ಅಂತ್ಯ ಹಾಡುವ ಮಹತ್ವದ ಶಾಂತಿ ಒಪ್ಪಂದ ಅಂತಿಮಗೊಂಡಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಈ ಒಪ್ಪಂದಕ್ಕೆ ಜೂ.19ರಂದು ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಅಧಿಕೃತವಾಗಿ ಸಹಿ ಹಾಕಲಾಗುವುದು ಎಂದು ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ತಿಳಿಸಿದ್ದಾರೆ. ಟ್ರಂಪ್ ತಮ್ಮ ಸಾಮಾಜಿಕ ಜಾಲತಾಣದಲ್ಲಿ, ಇರಾನ್ ಇಸ್ಲಾಮಿಕ್ ಗಣರಾಜ್ಯದೊಂದಿಗೆ ಒಪ್ಪಂದ ಪೂರ್ಣಗೊಂಡಿದೆ. ಎಲ್ಲರಿಗೂ ಅಭಿನಂದನೆಗಳು ಎಂದು ಬರೆದು ಶಾಂತಿ ಒಪ್ಪಂದದ ಸುದ್ದಿಯನ್ನು ಬಹಿರಂಗಪಡಿಸಿದ್ದಾರೆ. ಈ ಘೋಷಣೆಯ ಬಳಿಕ ಜಾಗತಿಕ ಇಂಧನ ಮಾರುಕಟ್ಟೆಯಲ್ಲಿ ನೆಮ್ಮದಿ ಕಂಡುಬಂದಿದೆ.

ಮತ್ತೆ ತೆರೆಯಲಿದೆ ಹಾರ್ಮುಜ್: ಒಪ್ಪಂದದ ಪ್ರಮುಖ ಅಂಶಗಳಲ್ಲಿ ಒಂದಾಗಿ ಜಾಗತಿಕ ತೈಲ ಸರಬರಾಜಿನ ಸುಮಾರು ಐದನೇ ಭಾಗ ಸಾಗುವ ಹಾರ್ಮುಜ್ ಜಲಸಂಧಿಯನ್ನು ಪುನಃ ತೆರೆಯಲು ನಿರ್ಧರಿಸಲಾಗಿದೆ. ಜತೆಗೆ ಇರಾನ್ ಬಂದರುಗಳ ಮೇಲಿನ ಅಮೆರಿಕದ ನೌಕಾ ನಿರ್ಬಂಧವನ್ನೂ ತೆಗೆದುಹಾಕಲಾಗುತ್ತದೆ. ಜಲಸಂಧಿಯನ್ನು ಟೋಲ್ ರಹಿತವಾಗಿ ತೆರೆಯಲು ಹಾಗೂ ನೌಕಾ ನಿರ್ಬಂಧವನ್ನು ತಕ್ಷಣವೇ ತೆರವುಗೊಳಿಸಲು ಅನುಮತಿ ನೀಡಿದ್ದೇನೆ. ವಿಶ್ವದ ಹಡಗುಗಳು ಮತ್ತೆ ಸಂಚಾರ ಆರಂಭಿಸಲಿ, ತೈಲ ಹರಿಯಲಿ ಎಂದು ಟ್ರಂಪ್ ಹೇಳಿದ್ದಾರೆ. ಆದರೆ ಜಲಸಂಧಿ ಅಧಿಕೃತ ಒಪ್ಪಂದಕ್ಕೆ ಸಹಿಯಾದ ಬಳಿಕವೇ ಕಾರ್ಯಾಚರಣೆಗೆ ತೆರೆಯಲಾಗುವುದು ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಕತಾರ್, ಪಾಕ್ ಮಧ್ಯಸ್ಥಿಕೆ: ಈ ಶಾಂತಿ ಪ್ರಕ್ರಿಯೆಯಲ್ಲಿ ಪಾಕಿಸ್ತಾನ ಮತ್ತು ಕತಾರ್ ಪ್ರಮುಖ ಮಧ್ಯವರ್ತಿಗಳಾಗಿ ಕಾರ್ಯನಿರ್ವಹಿಸಿವೆ. ಏ.8ರಂದು ಆರಂಭಿಕ ಕದನ ವಿರಾಮ ಒಪ್ಪಂದ ಸಾಧಿಸಲಾಗಿದ್ದು, ನಂತರ ಮಾತುಕತೆ ಪೂರ್ಣಗೊಳ್ಳುವವರೆಗೆ ಅದನ್ನು ವಿಸ್ತರಿಸಲಾಗಿತ್ತು. ಶೆಹಬಾಜ್ ಷರೀಫ್ ಈ ಒಪ್ಪಂದವನ್ನು ಐತಿಹಾಸಿಕ ಮೈಲಿಗಲ್ಲು ಎಂದು ಬಣ್ಣಿಸಿದ್ದು, ಅಮೆರಿಕ ಮತ್ತು ಇರಾನ್ ಎರಡೂ ರಾಷ್ಟ್ರಗಳು ರಾಜತಾಂತ್ರಿಕ ಪರಿಹಾರಕ್ಕೆ ಬದ್ಧತೆ ತೋರಿರುವುದನ್ನು ಶ್ಲಾಘಿಸಿದ್ದಾರೆ. ಕತಾರ್, ಟರ್ಕಿ ಮತ್ತು ಸೌದಿ ಅರೇಬಿಯಾದ ಸಹಕಾರಕ್ಕೂ ಅವರು ಕೃತಜ್ಞತೆ ಸಲ್ಲಿಸಿದ್ದಾರೆ.

ಇನ್ನೂ ಸಂಪೂರ್ಣ ಅಂತ್ಯವಾಗಿಲ್ಲ ಉದ್ವಿಗ್ನತೆ: ಏತನ್ಮಧ್ಯೆ, ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್, ದಕ್ಷಿಣ ಲೆಬನಾನ್‌ನಲ್ಲಿ ಇಸ್ರೇಲಿ ಸೇನೆ ಮುಂದುವರಿಯಲಿದೆ ಎಂದು ಹೇಳಿದ್ದು, ಇರಾನ್ ದಾಳಿ ನಡೆಸಿದರೆ ಭಾರೀ ಪ್ರತಿದಾಳಿ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ. ಆದಾಗ್ಯೂ, ಜೂ.19ರಂದು ನಡೆಯಲಿರುವ ಅಧಿಕೃತ ಸಹಿ ಸಮಾರಂಭದೊಂದಿಗೆ ಮಧ್ಯಪ್ರಾಚ್ಯದಲ್ಲಿ ಶಾಂತಿಯ ಹೊಸ ಅಧ್ಯಾಯ ಆರಂಭವಾಗುವ ನಿರೀಕ್ಷೆ ಮೂಡಿದೆ. ಈ ಒಪ್ಪಂದವು ಜಾಗತಿಕ ತೈಲ ಮಾರುಕಟ್ಟೆ, ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕತೆ ಹಾಗೂ ಪ್ರಾದೇಶಿಕ ಸ್ಥಿರತೆಗೆ ಮಹತ್ವದ ಉತ್ತೇಜನ ನೀಡುವ ಸಾಧ್ಯತೆ ಇದೆ.

ವಿಶ್ವನಾಯಕರಿಂದ ಸ್ವಾಗತ

ವಿಶ್ವಸಂಸ್ಥೆಯ ಮಹಾ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಈ ಒಪ್ಪಂದವನ್ನು ಸ್ವಾಗತಿಸಿದ್ದು, ಇದು ಶಾಂತಿಯುತ ಪರಿಹಾರದತ್ತ ಮಹತ್ವದ ಹೆಜ್ಜೆ ಎಂದಿದ್ದಾರೆ. ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್, ಭಾರತೀಯ ಮೂಲದ ಅಮೆರಿಕ ಸಂಸದ ರೋ ಖನ್ನಾ ಸೇರಿದಂತೆ ಹಲವು ನಾಯಕರು ಒಪ್ಪಂದವನ್ನು ಶ್ಲಾಘಿಸಿದ್ದಾರೆ.

ಇರಾನ್ ಷರತ್ತುಗಳೇನು?

ಇರಾನ್ ಉಪ ವಿದೇಶಾಂಗ ಸಚಿವ ಕಾಜೆಮ್ ಘರಿಬಬಾದಿ ಪ್ರಕಾರ, ಒಪ್ಪಂದಕ್ಕೆ ಸಹಿಯಾದ ನಂತರ 60 ದಿನಗಳ ವಿಶೇಷ ಮಾತುಕತೆ ನಡೆಯಲಿದ್ದು, ಅದು ಕೇವಲ ಅಣು ಕಾರ್ಯಕ್ರಮ ಮತ್ತು ನಿರ್ಬಂಧಗಳ ತೆರವು ಕುರಿತ ವಿಷಯಗಳ ಮೇಲೆ ಕೇಂದ್ರೀಕೃತವಾಗಿರುತ್ತದೆ. ಇರಾನ್ ತನ್ನ ಬದ್ಧತೆಗಳನ್ನು ಪರಸ್ಪರ ಸಹಕಾರ ಮತ್ತು ಒಪ್ಪಂದದ ಅನುಷ್ಠಾನದ ಆಧಾರದ ಮೇಲೆ ಮಾತ್ರ ಜಾರಿಗೊಳಿಸಲಿದೆ ಎಂದು ತಿಳಿಸಿದೆ. ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಕೂಡ ಒಪ್ಪಂದವನ್ನು ಜಾರಿಗೊಳಿಸುವ ಜವಾಬ್ದಾರಿ ಅಮೆರಿಕದ ಮೇಲಿದೆ ಎಂದು ಹೇಳಿದ್ದಾರೆ.

ಒಪ್ಪಂದ ಸ್ವಾಗತಿಸಿದ ಮೋದಿ



ಬ್ರಾಟಿಸ್ಲಾವಾ: ಪಶ್ಚಿಮ ಏಷ್ಯಾದ ಸಂಘರ್ಷವನ್ನು ಕೊನೆಗೊಳಿಸಲು ಅಮೆರಿಕ ಮತ್ತು ಇರಾನ್ ನಡುವೆ ನಡೆದಿರುವ ಒಪ್ಪಂದವನ್ನು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಸ್ವಾಗತಿಸಿದ್ದು, ಇದರಿಂದ ಪ್ರದೇಶದಲ್ಲಿ ಶಾಂತಿ ಮತ್ತು ಸ್ಥಿರತೆ ಪುನಃಸ್ಥಾಪನೆಯಾಗಲಿದೆ ಎಂಬ ನಿರೀಕ್ಷೆ ವ್ಯಕ್ತಪಡಿಸಿದ್ದಾರೆ. ಈ ಸಂಘರ್ಷ ವಿಶ್ವದಾದ್ಯಂತ ಆರ್ಥಿಕ ಆಘಾತಗಳನ್ನು ಉಂಟುಮಾಡಿದ್ದು, ಹಲವು ದೇಶಗಳಲ್ಲಿ ಜೀವಹಾನಿಗೂ ಕಾರಣವಾಗಿದೆ. ಒಪ್ಪಂದದ ಅನುಷ್ಠಾನದಿಂದ ನೌಕಾಯಾನದ ಮತ್ತು ವಾಣಿಜ್ಯ ಚಟುವಟಿಕೆಗಳಿಗೆ ಸ್ವಾತಂತ್ರ್ಯ ದೊರೆಯಲಿದ್ದು, ಅಂತಿಮ ಒಪ್ಪಂದಕ್ಕೆ ದಾರಿ ಸುಗಮವಾಗಲಿದೆ ಎಂದು ಮೋದಿ ಹೇಳಿದರು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಅಮೆರಿಕ ಮತ್ತು ಇರಾನ್ ನಡುವಿನ ಶತ್ರುತ್ವ ಕೊನೆಗೊಳಿಸಲು, ಹಾರ್ಮುಜ್ ಜಲಸಂಧಿಯನ್ನು ಪುನಃ ತೆರೆಯಲು ಹಾಗೂ ಅಮೆರಿಕದ ನೌಕಾ ನಿರ್ಬಂಧವನ್ನು ತೆಗೆದುಹಾಕಲು ಒಪ್ಪಂದ ಪೂರ್ಣಗೊಂಡಿದೆ ಎಂದು ಘೋಷಿಸಿದ ಬಳಿಕ ಮೋದಿ ಈ ಪ್ರತಿಕ್ರಿಯೆ ನೀಡಿದ್ದಾರೆ.

ಪ್ರಮುಖ ಯೋಜನೆಗಳಿಗೆ ಮಂಜೂರಾತಿ

ಸಿಂಧೂ ಬಳಿಕ ಚೆನಾಬ್ ಅಭಿವೃದ್ಧಿ

ಪಾಕಿಸ್ತಾನದೊಂದಿಗಿನ ಸಿಂಧೂ ಜಲ ಒಪ್ಪಂದವನ್ನು ಅಮಾನತುಗೊಳಿಸಿದ ಬೆನ್ನಲ್ಲೇ, ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಚೆನಾಬ್ ನದಿಗೆ ಸಂಬಂಧಿಸಿದ 2,600 ಕೋಟಿ ರೂ.ಗೂ ಅಧಿಕ ಮೊತ್ತದ ಎರಡು ಪ್ರಮುಖ ಮೂಲಸೌಕರ್ಯ ಯೋಜನೆಗಳಿಗೆ ಅನುಮೋದನೆ ನೀಡಿದೆ. ಇದರಲ್ಲಿ ಹಿಮಾಚಲ ಪ್ರದೇಶದ ಅತ್ಯಂತ ಮಹತ್ವಾಕಾಂಕ್ಷೆಯ ಚೆನಾಬ್-ಬಿಯಾಸ್ ಲಿಂಕ್ ಸುರಂಗ ಯೋಜನೆಯೂ ಸೇರಿದೆ.

ಕೇಂದ್ರ ಸರ್ಕಾರ ಚೆನಾಬ್ ನದಿ ವ್ಯವಸ್ಥೆಗೆ ಸಂಬಂಧಿಸಿದ ಎರಡು ಬೃಹತ್ ಯೋಜನೆಗಳನ್ನು ಅನುಮೋದಿಸಿದೆ. ಮೊದಲನೆಯದು ಹಿಮಾಚಲ ಪ್ರದೇಶದಲ್ಲಿ 2,352 ಕೋಟಿ ರೂ. ಅಂದಾಜು ವೆಚ್ಚದಲ್ಲಿ ನಿರ್ಮಾಣವಾಗಲಿರುವ ಚೆನಾಬ್-ಬಿಯಾಸ್ ಲಿಂಕ್ ಸುರಂಗ ಯೋಜನೆ. ಎರಡನೆಯದು ಜಮ್ಮು ಮತ್ತು ಕಾಶ್ಮೀರದ ಸಲಾಲ್ ಅಣೆಕಟ್ಟಿನಲ್ಲಿ 268 ಕೋಟಿ ರೂ. ವೆಚ್ಚದ ಹೂಳು ನಿರ್ವಹಣಾ ಯೋಜನೆ. ಈ ಯೋಜನೆಗಳು ಭಾರತದ ಸ್ವಂತ ಜಲಸಂಪನ್ಮೂಲಗಳ ಬಳಕೆಯನ್ನು ಬಲಪಡಿಸುವುದರ ಜತೆಗೆ ಜಲವಿದ್ಯುತ್ ಉತ್ಪಾದನೆ ಮತ್ತು ನೀರು ನಿರ್ವಹಣೆಗೆ ನೆರವಾಗಲಿವೆ. ಸಿಂಧೂ ಜಲ ಒಪ್ಪಂದವನ್ನು ಅಮಾನತುಗೊಳಿಸಿದ ನಂತರ ಈ ಅನುಮೋದನೆಗಳು ಸಿಕ್ಕಿವೆ. ಉದ್ದೇಶಿತ ಸುರಂಗ ಯೋಜನೆಯಲ್ಲಿ, ಚೆನಾಬ್ ಜಲಾನಯನ ಪ್ರದೇಶದ ನೀರನ್ನು ಬಿಯಾಸ್ ನದಿ ವ್ಯವಸ್ಥೆಗೆ ತಿರುಗಿಸಲಾಗುತ್ತದೆ. ಇದರಿಂದಾಗಿ ಭಾರತ ತನ್ನದೇ ಭೂಪ್ರದೇಶದ ಜಲಸಂಪನ್ಮೂಲಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳಲು ಸಾಧ್ಯವಾಗಲಿದೆ.



2,600 ಕೋಟಿ ರೂ. ಮೊತ್ತದ ಯೋಜನೆಗಳಿಗೆ ಹಸಿರು ನಿಶಾನೆ

ವಿದ್ಯುತ್ ಉತ್ಪಾದನೆ, ನೀರಿನ ಪ್ರಯೋಜನ

ಈ ಯೋಜನೆ, ಹಿಮಾಚಲ ಪ್ರದೇಶದಲ್ಲಿ ಜಲವಿದ್ಯುತ್ ಉತ್ಪಾದನೆಯನ್ನು ಗಣನೀಯವಾಗಿ ಹೆಚ್ಚಿಸಲಿದೆ. ಈ ನೀರು ತಿರುಗಿಸುವಿಕೆಯಿಂದಾಗಿ ಸುಮಾರು 4,000 ಮೆಗಾವ್ಯಾಟ್ ಹೆಚ್ಚುವರಿ ಜಲವಿದ್ಯುತ್ ಸಾಮರ್ಥ್ಯವನ್ನು ಪಡೆಯಬಹುದು. ಚಂದ್ರಭಾಗಾ ನದಿ ಜಲಾನಯನ ಪ್ರದೇಶ ಒಟ್ಟು 11,000 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯ ಹೊಂದಿದ್ದು, 700 ಮೀಟರ್ ಹೆಡ್‌ನಲ್ಲಿ 8 ಕಿಮೀ ಸುರಂಗವೊಂದರಿಂದಲೇ 3,000 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಬಹುದು. ಬೇಸಿಗೆಯ ತಿಂಗಳುಗಳಲ್ಲಿ ಹೆಚ್ಚಾಗಿ ನೀರಿನ ಮಟ್ಟ ಕುಸಿಯುವ ಬಿಯಾಸ್ ಜಲಾನಯನ ಪ್ರದೇಶದ ನೀರಿನ ಹರಿವನ್ನು ಹೆಚ್ಚಿಸಲು ಕೂಡ ಈ ಯೋಜನೆ ಸಹಕಾರಿಯಾಗಲಿದೆ. ಇದು ದೇಶದ ಹಲವಾರು ರಾಜ್ಯಗಳಲ್ಲಿನ ನೀರಿನ ಕೊರತೆಯನ್ನು ನೀಗಿಸಲು ಮತ್ತು ಬಿಯಾಸ್ ನದಿ ವ್ಯವಸ್ಥೆಗೆ ದೀರ್ಘಕಾಲೀನ ಬೆಂಬಲ ನೀಡಲು ಸಹಾಯ ಮಾಡುತ್ತದೆ ಎಂದು ನಂಬಲಾಗಿದೆ.

ಪಾಕಿಸ್ತಾನಕ್ಕೆ ಏಕೆ ಆತಂಕ?

ತನ್ನ ಸಂಪನ್ಮೂಲಗಳನ್ನು ಗರಿಷ್ಠಗೊಳಿಸಲು ಪ್ರಯತ್ನಿಸುತ್ತಿರುವ ಭಾರತವು ಸಿಂಧೂ ಜಲ ಒಪ್ಪಂದವನ್ನು ಉಲ್ಲಂಘಿಸಿದೆ ಎಂದು ಪಾಕಿಸ್ತಾನದ ಆರೋಪವಿದೆ. ಭಾರತ ಮತ್ತು ಪಾಕಿಸ್ತಾನ ಸೆಪ್ಟೆಂಬರ್ 19, 1960ರಂದು ಸಿಂಧೂ ಜಲ ಒಪ್ಪಂದಕ್ಕೆ ಸಹಿ ಹಾಕಿದ್ದವು. ಇದು ಸಿಂಧೂ ಜಲಾನಯನ ಪ್ರದೇಶದ ಆರು ನದಿಗಳನ್ನು ಎರಡು ದೇಶಗಳ ನಡುವೆ ವಿಭಜಿಸಿತು. ಅದರ ನಿಬಂಧನೆಗಳಲ್ಲಿ, ಪೂರ್ವದ ಮೂರು ನದಿಗಳಾದ ರಾವಿ, ಬಿಯಾಸ್ ಮತ್ತು ಸಟ್ಲೆಜ್‌ಗಳನ್ನು ಭಾರತಕ್ಕೆ ನೀಡಲಾಯಿತು. ಆದರೆ ಸಿಂಧೂ, ಝೇಲಂ ಮತ್ತು ಚೆನಾಬ್ ಸೇರಿದಂತೆ ಮೂರು ಪಶ್ಚಿಮ ನದಿಗಳನ್ನು ಪಾಕಿಸ್ತಾನಕ್ಕೆ ನೀಡಲಾಯಿತು. ಪಶ್ಚಿಮ ನದಿಗಳ ಮೇಲೆ ಭಾರತದ ಅಣೆಕಟ್ಟುಗಳು ಮತ್ತು ಜಲವಿದ್ಯುತ್ ಯೋಜನೆಗಳಿಂದ ಪಾಕಿಸ್ತಾನಕ್ಕೆ ನೀರಿನ ಅಭಾವ ಉಂಟಾಗುತ್ತದೆ ಎಂದು ಈ ಯೋಜನೆಗೆ ಪಾಕಿಸ್ತಾನ ಆಕ್ಷೇಪ ವ್ಯಕ್ತಪಡಿಸುತ್ತಲೇ ಬಂದಿದೆ. ಇದು ತನ್ನ ನೀರಿನ ಭದ್ರತೆಯ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಉಂಟುಮಾಡುತ್ತದೆ ಎಂಬುದು ನೆರೆ ರಾಷ್ಟ್ರದ ಆರೋಪ.



ದಶಕದ ಹಿಂದಿನ ಪ್ರಸ್ತಾವನೆಗೆ ಮರುಜೀವ

ಈ ಸುರಂಗ ಯೋಜನೆ, ಸುಮಾರು ಒಂದು ದಶಕದ ಹಿಂದೆ ಸುಸ್ಥಿರ ಅಭಿವೃದ್ಧಿ ಕೇಂದ್ರದ ಕಾರ್ಯನಿರ್ವಾಹಕ ನಿರ್ದೇಶಕ ಪ್ರವೀಣ್ ಶರ್ಮಾ ಮಂಡಿಸಿದ್ದ ಪರಿಕಲ್ಪನೆ ಎಂಬುದು ವಿಶೇಷ. ಶರ್ಮಾ, ಪ್ರಧಾನ ಮಂತ್ರಿ ಕಾರ್ಯಾಲಯ(ಪಿಎಂಒ) ಮತ್ತು ಜಲಸಂಪನ್ಮೂಲ ಸಚಿವಾಲಯಕ್ಕೆ ನಿರಂತರವಾಗಿ ಪತ್ರಗಳನ್ನು ಬರೆಯುವ ಮೂಲಕ ಸಿಂಧೂ ಜಲ ಒಪ್ಪಂದಕ್ಕೆ ಸಂಬಂಧಿಸಿದ ಬದಲಾವಣೆಗಳನ್ನು ತರಲು ಮತ್ತು ಚೆನಾಬ್‌ನ ಉಪನದಿ ಚಂದ್ರಭಾಗಾ ನದಿಯಿಂದ ನೀರನ್ನು ತಿರುಗಿಸಲು ಒತ್ತಾಯಿಸಿದ್ದರು. ಶರ್ಮಾ ಪ್ರಕಾರ, ಅವರು 2016ರಲ್ಲಿ ವಿವರವಾದ ಲೇಖನವೊಂದರ ಮೂಲಕ ಈ ವಿಷಯವನ್ನು ಮೊದಲು ಮುಂಚೂಣಿಗೆ ತಂದಿದ್ದರು.

ಚೆನಾಬ್-ಬಿಯಾಸ್ ಲಿಂಕ್ ಸುರಂಗ

ಚೆನಾಬ್-ಬಿಯಾಸ್ ಲಿಂಕ್ ಸುರಂಗ ಯೋಜನೆ, ಹಿಮಾಚಲ ಪ್ರದೇಶದ ಬುಡಕಟ್ಟು ಜಿಲ್ಲೆಯಾದ ಲಾಹೌಲ್-ಸ್ಪಿಟಿಯಲ್ಲಿ ಸ್ಥಾಪನೆಯಾಗಲಿದೆ. ನ್ಯಾಷನಲ್ ಹೈಡ್ರೋಎಲೆಕ್ಟ್ರಿಕ್ ಪವರ್ ಕಾರ್ಪೊರೇಷನ್ (ಎನ್‌ಎಚ್‌ಪಿಸಿ) ಮೂಲಕ ಅನುಷ್ಠಾನಗೊಳ್ಳಲಿರುವ ಈ ಯೋಜನೆ, 8.7 ಕಿಮೀ ಉದ್ದದ ಸುರಂಗ ನಿರ್ಮಾಣವನ್ನು ಒಳಗೊಂಡಿದೆ. ಇದು ಚೆನಾಬ್ ಜಲಾನಯನ ಪ್ರದೇಶದಿಂದ ಹೆಚ್ಚುವರಿ ನೀರನ್ನು ಬಿಯಾಸ್ ನದಿಗೆ ತಿರುಗಿಸುತ್ತದೆ. ಈ ಯೋಜನೆ, ಅಂತರ-ಜಲಾನಯನ ನದಿ ಜೋಡಣೆಯೆಂಬ ದೊಡ್ಡ ಯೋಜನೆಯ ಒಂದು ಭಾಗ. ಇದು ಸುರಂಗಗಳು ಮತ್ತು ಹೈಡ್ರಾಲಿಕ್ ರಚನೆಗಳ ಮೂಲಕ ಚಂದ್ರಭಾಗಾ ನದಿಯ ನೀರನ್ನು ಬಿಯಾಸ್ ಜಲಾನಯನ ಪ್ರದೇಶದ ಕಡೆಗೆ ತಿರುಗಿಸಲಿದೆ. ಮೊದಲ ಹಂತ, ಲಾಹೌಲ್ ಕಣಿವೆಯ ಕೋಕ್ಸರ್ ಗ್ರಾಮದ ಬಳಿ ಚಂದ್ರ ನದಿಗೆ 19 ಮೀಟರ್ ಎತ್ತರದ ಬ್ಯಾರೇಜ್ ನಿರ್ಮಾಣವನ್ನು ಒಳಗೊಂಡಿದೆ. ಅಲ್ಲಿಂದ ಮೇಲಿನ ಚೆನಾಬ್ ಜಲಾನಯನ ಪ್ರದೇಶದ ನೀರನ್ನು ಬಿಯಾಸ್ ವ್ಯವಸ್ಥೆಗೆ ಹರಿಸಲಾಗುತ್ತದೆ. ಮೇಲಿನ ಚೆನಾಬ್ ಅನ್ನು ರೂಪಿಸುವ ಚಂದ್ರ ಮತ್ತು ಭಾಗಾ ನದಿಗಳ ನೀರನ್ನು ಅಂತಿಮವಾಗಿ 113 ಕಿಮೀ ಉದ್ದದ ಕಾಲುವೆ ಜಾಲದ ಮೂಲಕ ವರ್ಗಾಯಿಸಲಾಗುತ್ತದೆ. ಚೆನಾಬ್ ನದಿಯ ಒಟ್ಟು ವಾರ್ಷಿಕ ಹರಿವು ಸುಮಾರು 35 ಮಿಲಿಯನ್ ಎಕರೆ-ಅಡಿಗಳಷ್ಟಿದ್ದರೂ, ಉದ್ದೇಶಿತ ತಿರುವು ಯೋಜನೆಗೆ ಕೇವಲ 1 ಮಿಲಿಯನ್ ಎಕರೆ-ಅಡಿಗಿಂತ ಕಡಿಮೆ ನೀರನ್ನು ಬಳಸಲಾಗುತ್ತದೆ.

ಕಿರುಸುದ್ದಿ

ಕೇರಳದಲ್ಲೂ ಮಹಿಳೆಯರಿಗೆ ಉಚಿತ ಬಸ್‌ಪ್ರಯಾಣ

ತಿರುವನಂತಪುರಂ: ಪ್ರಮುಖ ಚುನಾವಣಾ ಭರವಸೆಯನ್ನು ಈಡೇರಿಸಿದ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರ್ಕಾರವು ಸೋಮವಾರ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಯೋಜನೆಯನ್ನು ಜಾರಿಗೆ ತಂದಿದೆ. ಮುಖ್ಯಮಂತ್ರಿ ವಿ.ಡಿ. ಸತೀಶನ್ ಇದನ್ನು ಹೊಸ ಕೇರಳವನ್ನು ನಿರ್ಮಿಸುವ ನಿರ್ಣಾಯಕ ಹೆಜ್ಜೆ ಎಂದು ಕರೆದಿದ್ದಾರೆ. ಪ್ರಿಯದರ್ಶಿನಿ ಯೋಜನೆಯನ್ನು ಪ್ರಾರಂಭಿಸುವುದರೊಂದಿಗೆ, ಕೇರಳವು ಕಾಂಗ್ರೆಸ್ ಆಡಳಿತದ ಕರ್ನಾಟಕ ಮತ್ತು ತೆಲಂಗಾಣ ಸೇರಿದಂತೆ ಇತರ ದಕ್ಷಿಣದ ರಾಜ್ಯಗಳೊಂದಿಗೆ ಸೇರಿ, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣವನ್ನು ನೀಡಿದೆ. ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳು ಸಹ ಮಹಿಳೆಯರಿಗೆ ಇದೇ ರೀತಿಯ ಸವಲತ್ತುಗಳನ್ನು ನೀಡಿವೆ.

ಅಯೋಧ್ಯೆ ದೇಣಿಗೆ ಬಗ್ಗೆ ಎಸ್‌ಐಟಿಯಿಂದ ತನಿಖೆ

ಲಖನೌ: ಅಯೋಧ್ಯೆ ರಾಮಮಂದಿ ದೇಣಿಗೆ ಸಂಗ್ರಹದಲ್ಲಿ ಅಕ್ರಮಗಳು ನಡೆದಿವೆ ಎಂಬ ಆರೋಪಗಳ ಬಗ್ಗೆ ವಿಶೇಷ ತನಿಖಾ ತಂಡ(ಎಸ್‌ಐಟಿ) ತನಿಖೆ ಪ್ರಾರಂಭಿಸಿದೆ. ದೇವಾಲಯದ ಅರ್ಪಣೆಗಳಿಗೆ ಸಂಬಂಧಿಸಿದ ಕಳ್ಳತನ ಮತ್ತು ಹಣಕಾಸಿನ ದುರುಪಯೋಗದ ಆರೋಪಗಳು ಆಡಳಿತಾರೂಢ ಬಿಜೆಪಿ ಮತ್ತು ವಿರೋಧ ಪಕ್ಷ ಸಮಾಜವಾದಿ ಪಕ್ಷದ ನಡುವೆ ರಾಜಕೀಯ ಸಂಘರ್ಷವನ್ನು ಪ್ರಚೋದಿಸಿದ ನಂತರ ಈ ಬೆಳವಣಿಗೆ ಸಂಭವಿಸಿದೆ. ಎಸ್‌ಐಟಿ ಅಯೋಧ್ಯೆಗೆ ತಲುಪಿ ತನ್ನ ತನಿಖೆಯನ್ನು ಪ್ರಾರಂಭಿಸಿದೆ. ಮುಂದಿನ 15 ದಿನಗಳಲ್ಲಿ ತಂಡವು ತನ್ನ ಅಂತಿಮ ವರದಿಯನ್ನು ಸಲ್ಲಿಸುವ ನಿರೀಕ್ಷೆಯಿದೆ.

ಮೋದಿ ಕರೆಯ ಪ್ರೇರಣೆ ಚಿನ್ನ ಖರೀದಿಸದ ಕುಟುಂಬ

ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿಯವರ ಮನವಿಯಿಂದ ಪ್ರೇರಿತರಾಗಿ ಮಹಾರಾಷ್ಟ್ರದ ವಾರ್ಧಾದ ಕುಟುಂಬವೊಂದು ತಮ್ಮ ಮಗನ ಮದುವೆಗೆ ಚಿನ್ನದ ಆಭರಣಗಳನ್ನು ಖರೀದಿಸದಿರಲು ನಿರ್ಧರಿಸಿದೆ. ಚಿನ್ನದ ಕರಿಮಣಿ ಸರ ಬದಲಿಗೆ ತಮ್ಮ ಭಾವಿ ಸೊಸೆಗೆ ತಮ್ಮ ಮಡದಿಯಮಂಗಳಸೂತ್ರ ನೀಡಲು ನಿರ್ಧರಿಸಿದ್ದಾರೆ. ಮೋದಿಯವರನ್ನು ಉದ್ದೇಶಿಸಿ ಬರೆದ ಪತ್ರದಲ್ಲಿ ವಾರ್ಧಾದ ಪುಲ್ಗಾಂವ್‌ನಲ್ಲಿ ಪೂಜಾ ಸಾಮಗ್ರಿಗಳ ಅಂಗಡಿಯನ್ನು ನಡೆಸುತ್ತಿರುವ ಸತೀಶ್ ಗೌರಿಶಂಕರ್ ಚೌಬೆ, ರಾಷ್ಟ್ರದ ಹಿತದೃಷ್ಟಿಯಿಂದ ಜವಾಬ್ದಾರಿಯುತ ಖರ್ಚು ಮಾಡುವ ಪ್ರಧಾನ ಮಂತ್ರಿಯ ಕರೆಯಿಂದ ಪ್ರಭಾವಿತರಾಗಿ ವಧುವಿಗೆ ಹೊಸ ಕರಿಮಣಿ ಸರ ಖರೀದಿಸದಿರಲು ತಮ್ಮ ಕುಟುಂಬ ನಿರ್ಧರಿಸಿದೆ ಎಂದು ಹೇಳಿದ್ದಾರೆ.

ಹಾರ್ಮುಜ್ ದಾಟಿದ ಭಾರತ ಹಡಗು ದಿಶಾ


ಹೊಸದಿಲ್ಲಿ: ಭಾರತದ ಎಲ್‌ಎನ್‌ಜಿ ಕಾರ್ಗೋ ನೌಕೆ ದಿಶಾ ಸ್ಟ್ರೈಟ್ ಆಫ್ ಹಾರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿ ದಾಟಿದೆ. ಈ ಮೂಲಕ ಕಳೆದ ಮೂರು ತಿಂಗಳಿಗೂ ಹೆಚ್ಚು ಅವಧಿಯಲ್ಲಿ ಯುದ್ಧ ಪೀಡಿತ ವಲಯದಿಂದ ಯಶಸ್ವಿಯಾಗಿ ಹೊರಬಂದ ಭಾರತದ ಧ್ವಜ ಹೊಂದಿದ ಮೊದಲ ಎಲ್‌ಎನ್‌ಜಿ ನೌಕೆ ಎಂಬ ಹೆಗ್ಗಳಿಕೆಗೆ ಇದು ಪಾತ್ರವಾಗಿದೆ. ಶಿಪ್ಪಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ನೇತೃತ್ವದ ಒಕ್ಕೂಟದ ಉಸ್ತುವಾರಿಯಲ್ಲಿರುವ ಈ ನೌಕೆ, 62,370 ಮೆಟ್ರಿಕ್ ಟನ್ ಎಲ್‌ಎನ್‌ಜಿ ಸರಕನ್ನು ಹೊತ್ತು ಸಾಗುತ್ತಿದೆ. ಬಂದರು, ಹಡಗು ಮತ್ತು ಜಲಮಾರ್ಗ ಸಚಿವಾಲಯದ ನಿರ್ದೇಶಕ ಒಪೇಶ್ ಕುಮಾರ್ ಶರ್ಮಾ ಪ್ರಕಾರ, ಈ ನೌಕೆ ಜೂ.18ರಂದು ದಹೇಜ್ ಬಂದರು ತಲುಪುವ ನಿರೀಕ್ಷೆಯಿದೆ. ಭಾರತೀಯ ನಾವಿಕರ ಸುರಕ್ಷತೆ ಮತ್ತು ಕಲ್ಯಾಣವನ್ನು ಖಚಿತಪಡಿಸಿಕೊಳ್ಳಲಾಗುತ್ತಿದೆ.



ಕಳೆದ 96 ಗಂಟೆಗಳಲ್ಲಿ ಸಚಿವಾಲಯದ ನಿಯಂತ್ರಣ ಕೊಠಡಿ 12,737 ಕರೆಗಳನ್ನು ಮತ್ತು 28,299ಕ್ಕೂ ಹೆಚ್ಚು ಇಮೇಲ್‌ಗಳನ್ನು ನಿರ್ವಹಿಸಿದೆ. ಈ ನಿರ್ದಿಷ್ಟ ಅವಧಿಯಲ್ಲಿ 406 ಕರೆಗಳು ಮತ್ತು 784 ಇಮೇಲ್‌ಗಳನ್ನು ಸ್ವೀಕರಿಸಲಾಗಿದೆ ಎಂದು ಹಡಗು ಮತ್ತು ಜಲಮಾರ್ಗ ಸಚಿವಾಲಯ ತಿಳಿಸಿದೆ. ಇಲ್ಲಿಯವರೆಗೆ 3,587ಕ್ಕೂ ಹೆಚ್ಚು ಭಾರತೀಯ ನಾವಿಕರನ್ನು ಯಶಸ್ವಿಯಾಗಿ ಸ್ವದೇಶಕ್ಕೆ ಕರೆತರಲಾಗಿದ್ದು, ಇದರಲ್ಲಿ ಕಳೆದ 96 ಗಂಟೆಗಳಲ್ಲಿ ವಾಪಸಾದ 50 ನಾವಿಕರು ಸೇರಿದ್ದಾರೆ.

ದೇಶದಲ್ಲಿ ರಸಗೊಬ್ಬರ ಕೊರತೆಯಿಲ್ಲ: ಕೇಂದ್ರ

ಹೊಸದಿಲ್ಲಿ: ಪ್ರಸಕ್ತ ಮುಂಗಾರು ಋತುವಿನಲ್ಲಿ ರಸಗೊಬ್ಬರಗಳ ಕೊರತೆಯಿಲ್ಲ ಎಂದು ಕೇಂದ್ರ ಸರ್ಕಾರ ಸೋಮವಾರ ಹೇಳಿದೆ. ರೈತರು ಈಗಾಗಲೇ ನಿರೀಕ್ಷಿತ ಅಗತ್ಯದ ಶೇ.37ಕ್ಕಿಂತ ಹೆಚ್ಚು ಮತ್ತು ದೇಶಾದ್ಯಂತ ಲಭ್ಯವಿರುವ ಗಣನೀಯ ದಾಸ್ತಾನುಗಳನ್ನು ಖರೀದಿಸಿದ್ದಾರೆ. ರಸಗೊಬ್ಬರ ಇಲಾಖೆಯ ಪ್ರಕಾರ, ರೈತರು ಈ ಋತುವಿನಲ್ಲಿ ಈವರೆಗೆ 102.78 ಲಕ್ಷ ಟನ್ ರಾಸಾಯನಿಕ ರಸಗೊಬ್ಬರಗಳನ್ನು ಖರೀದಿಸಿದ್ದಾರೆ. ಕೃಷಿ ಸಚಿವಾಲಯವು ಖಾರಿಫ್‌ಗೆ ಒಟ್ಟು 383.9 ಲಕ್ಷ ಟನ್ ರಸಗೊಬ್ಬರದ ಅಗತ್ಯವನ್ನು ಮರುಮೌಲ್ಯಮಾಪನ ಮಾಡಿದೆ.



ಸೋಮವಾರದ ಹೊತ್ತಿಗೆ, ಸ್ಟಾಕ್‌ಗಳು 196.65 ಲಕ್ಷ ಟನ್‌ಗಳಷ್ಟಿವೆ. ಇದು ಸಾಮಾನ್ಯ ಬಫರ್ ಮಟ್ಟಕ್ಕಿಂತ ಗಮನಾರ್ಹವಾಗಿ ಹೆಚ್ಚಾಗಿದೆ. ಬಾಕಿ ಇರುವ ಬಳಕೆ 281.12 ಲಕ್ಷ ಟನ್ ಆಗಿದ್ದು, ಅದರಲ್ಲಿ ಇಂದು ನಮ್ಮ ಬಳಿ 196 ಲಕ್ಷ ಟನ್ ಲಭ್ಯವಿದೆ ಎಂದು ರಸಗೊಬ್ಬರ ಇಲಾಖೆಯ ಜಂಟಿ ಕಾರ್ಯದರ್ಶಿ ಬಂದನಾ ಪ್ರಿಯಶಿ ಸುದ್ದಿಗಾರರಿಗೆ ತಿಳಿಸಿದರು. ದೃಢವಾದ ದೇಶೀಯ ಉತ್ಪಾದನೆ ಮತ್ತು ಸಮಯೋಚಿತ ಆಮದುಗಳಿಂದಾಗಿ ಸ್ಟಾಕ್ ಸ್ಥಾನವು ಆರಾಮದಾಯಕವಾಗಿದೆ ಎಂದು ಅವರು ಹೇಳಿದರು. ಪ್ರಸ್ತುತ ಅವಧಿಯಲ್ಲಿ, ಸರ್ಕಾರವು 50 ಲಕ್ಷ ಟನ್‌ಗಳಿಗಿಂತ ಹೆಚ್ಚು ಯುರಿಯಾ ಮತ್ತು ಫಾಸ್ಫೇಟಿಕ್ ಮತ್ತು ಪೊಟಾಸಿಕ್(ಪಿ ಮತ್ತು ಕೆ) ರಸಗೊಬ್ಬರಗಳನ್ನು ಪಡೆದುಕೊಂಡಿದೆ. ಪೂರೈಕೆಯನ್ನು ಮತ್ತಷ್ಟು ಬಲಪಡಿಸಲು ಸರ್ಕಾರವು ಹೆಚ್ಚುವರಿ 17 ಲಕ್ಷ ಟನ್ ಯೂರಿಯಾವನ್ನು ಆಮದು ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿದೆ.

ವ್ಯವಹಾರವಾಗಿ ಮಾರ್ಪಟ್ಟ ಆರ್‌ಟಿಐ ಹೋರಾಟ: ಸುಪ್ರೀಂ

ಹೊಸದಿಲ್ಲಿ: ಮಾಹಿತಿ ಹಕ್ಕು (ಆರ್‌ಟಿಐ) ಹೋರಾಟ ಈಗ ಹೊಸ ವ್ಯವಹಾರವಾಗಿ ಮಾರ್ಪಟ್ಟಿದೆ ಎಂದು ಕಟುವಾಗಿ ಅಭಿಪ್ರಾಯಪಟ್ಟ ಸುಪ್ರೀಂ ಕೋರ್ಟ್, ರಸ್ತೆ ನಿರ್ಮಾಣ ಕಾಮಗಾರಿಗೆ ಅಡ್ಡಿಪಡಿಸಿದ ಆರೋಪ ಎದುರಿಸುತ್ತಿರುವ ಆರ್‌ಟಿಐ ಕಾರ್ಯಕರ್ತ ಹಾಗೂ ಮತ್ತೊಬ್ಬ ಆರೋಪಿಗೆ ನಿರೀಕ್ಷಣಾ ಜಾಮೀನು ನೀಡಲು ಸೋಮವಾರ ನಿರಾಕರಿಸಿದೆ. ನ್ಯಾಯಮೂರ್ತಿಗಳಾದ ಸಂದೀಪ್ ಮೆಹ್ತಾ ಹಾಗೂ ವಿಜಯ್ ಬಿಷ್ಣೋಯಿ ಅವರ ಪೀಠವು ಆರ್‌ಟಿಐ ಕಾರ್ಯಕರ್ತ ರಾಕೇಶ್ ಕುಮಾರ್ ಬೆಹ್ಲ್ ಮತ್ತು ಅವರ ಸಹಚರರ ಅರ್ಜಿಯನ್ನು ವಜಾಗೊಳಿಸಿತು. ರಸ್ತೆ ಕಾಮಗಾರಿಯ ಮೇಲ್ವಿಚಾರಣೆ ನಡೆಸಲು ಇವರಿಗೆ ಯಾವ ಅಧಿಕಾರವಿದೆ ಎಂದು ಪೀಠ ಪ್ರಶ್ನಿಸಿತು. ಆರ್‌ಟಿಐ ಕಾರ್ಯಕರ್ತರು ಎಂಬ ಹೆಸರಿನಲ್ಲಿ ಕೆಲವರು ಸಾರ್ವಜನಿಕ ಕಾಮಗಾರಿಗಳಿಗೆ ಅಡ್ಡಿಯಾಗುತ್ತಿದ್ದಾರೆ. ಕೇಂದ್ರ ಸರ್ಕಾರ ಹಣ ಮಂಜೂರು ಮಾಡಿದೆ. ರಸ್ತೆ ನಿರ್ಮಾಣದ ಜವಾಬ್ದಾರಿ ಸರ್ಕಾರದ್ದೇ. ನೀವು ಯಾರು? ಸ್ವಯಂ ಘೋಷಿತ ಆರ್‌ಟಿಐ ಕಾರ್ಯಕರ್ತರು ಎಂದು ನ್ಯಾಯಮೂರ್ತಿ ಮೆಹ್ತಾ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ನ್ಯಾಯಮೂರ್ತಿ ಬಿಷ್ಣೋಯಿ ಸಹ, ಎಲ್ಲ ರಸ್ತೆ ಕಾಮಗಾರಿಗಳ ಮೇಲ್ವಿಚಾರಣೆ ನಡೆಸಲು ನೀವು ಯಾವುದಾದರೂ ಉನ್ನತ ಅಧಿಕಾರಿಗಳೇ? ಎಂದು ಪ್ರಶ್ನಿಸಿದರು. ಪಂಜಾಬ್‌ನ ಗುರುದಾಸ್ಪುರ ಜಿಲ್ಲೆಯ ಬಟಾಲಾ ಪ್ರದೇಶದಲ್ಲಿ ನಡೆಯುತ್ತಿದ್ದ ರಸ್ತೆ ನಿರ್ಮಾಣ ಕಾಮಗಾರಿಗೆ ಅಡ್ಡಿಪಡಿಸಿದ, ಕಾರ್ಮಿಕರು ಮತ್ತು ಮೇಲ್ವಿಚಾರಕರಿಗೆ ಬೆದರಿಕೆ ಹಾಕಿದ ಹಾಗೂ ಹಲ್ಲೆ ನಡೆಸಿದ ಆರೋಪದಡಿ ಬೆಹ್ಲ್ ಮತ್ತು ಮತ್ತೊಬ್ಬರ ವಿರುದ್ಧ ಪ್ರಕರಣ ದಾಖಲಾಗಿತ್ತು.

ಆಧಾರ್ ಕೇವಲ ಗುರುತಿನ ಪುರಾವೆ; ಇಂದು ವಿಚಾರಣೆ

ಹೊಸದಿಲ್ಲಿ: ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರವು ನೀಡಿದ ಆಧಾರ್ ಕಾರ್ಡ್‌ಗಳನ್ನು ಪೌರತ್ವ, ವಾಸಸ್ಥಳ ಮತ್ತು ವಸತಿ ವಿಳಾಸದ ಪುರಾವೆಯಾಗಿ ದುರುಪಯೋಗಪಡಿಸಿಕೊಳ್ಳಲಾಗಿದೆ. ಗುರುತಿನ ಪರಿಶೀಲನೆಗಾಗಿ ಅದರ ಬಳಕೆಯನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಲು ನಿರ್ದೇಶನಗಳನ್ನು ಕೋರಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂಕೋರ್ಟ್ ಮಂಗಳವಾರ ನಡೆಸಲಿದೆ.



ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ವಿ.ಮೋಹನಾ ಅವರನ್ನೊಳಗೊಂಡ ಪೀಠವು ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸುವ ಸಾಧ್ಯತೆಯಿದೆ. ಪೌರತ್ವ, ವಾಸಸ್ಥಾನ, ವಿಳಾಸ ಮತ್ತು ಹುಟ್ಟಿದ ದಿನಾಂಕದ ಪುರಾವೆಯಾಗಿ ಅಲ್ಲ, ಗುರುತಿನ ಪುರಾವೆಯಾಗಿ ಆಧಾರವನ್ನು ಬಳಸುವುದನ್ನು ಖಚಿತಪಡಿಸಿಕೊಳ್ಳಲು ಅದು ಕೇಂದ್ರ, ರಾಜ್ಯಗಳು ಮತ್ತು ಚುನಾವಣಾ ಆಯೋಗಕ್ಕೆ ನಿರ್ದೇಶನಗಳನ್ನು ಕೋರಿದೆ.

ಅಟ್ಯಾಕ್ ಕ್ಷಿಪಣಿ ಪರೀಕ್ಷೆ ಯಶಸ್ವಿ

ಹೊಸದಿಲ್ಲಿ: ಒಡಿಶಾ ಕರಾವಳಿಯ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ದ್ವೀಪದಿಂದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ(ಡಿಆರ್‌ಡಿಒ) ಸೋಮವಾರ ಲಾಂಗ್ ರೇಂಜ್ ಲ್ಯಾಂಡ್ ಅಟ್ಯಾಕ್ ಕ್ರೂಸ್ ಕ್ಷಿಪಣಿ(ಎಲ್‌ಆರ್‌ಎಲ್‌ಎಸಿಎಂ) ಹಾರಾಟ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿದೆ. ಚಾಂದಿಪುರದ ಇಂಟಿಗ್ರೇಟೆಡ್ ಟೆಸ್ಟ್ ರೇಂಜ್ ನಿಯೋಜಿಸಿರುವ ವಿವಿಧ ಟ್ರ್ಯಾಕಿಂಗ್ ಉಪಕರಣಗಳಿಂದ ಸೆರೆಹಿಡಿಯಲಾದ ಮಾಹಿತಿಯ ಪ್ರಕಾರ, ಎಲ್ಲಾ ಪರೀಕ್ಷಾ ಉದ್ದೇಶಗಳನ್ನು ಸಂಪೂರ್ಣವಾಗಿ ಪೂರೈಸಲಾಗಿದೆ. ಎಲ್‌ಆರ್‌ಎಲ್‌ಎಸಿಎಂ ಸ್ಥಳೀಯವಾಗಿ ಅಭಿವೃದ್ಧಿಪಡಿಸಿದ ಕ್ಷಿಪಣಿಯಾಗಿದ್ದು, ವಿವಿಧ ಡಿಆರ್‌ಡಿಒ ಪ್ರಯೋಗಾಲಯಗಳು ಮತ್ತು ಭಾರತೀಯ ಕೈಗಾರಿಕಾ ಪಾಲುದಾರರು ಅಭಿವೃದ್ಧಿಪಡಿಸಿದ ಎಲ್ಲಾ ಉಪ-ವ್ಯವಸ್ಥೆಗಳನ್ನು ಹೊಂದಿದೆ. ಕ್ಷಿಪಣಿಯು ಎಲ್ಲಾ ಮಿಷನ್ ಉದ್ದೇಶಗಳನ್ನು ಸಾಧಿಸಿತು, ನಿರ್ಣಾಯಕ ತಂತ್ರಜ್ಞಾನಗಳನ್ನು ಮೌಲ್ಯೀಕರಿಸಿದೆ. ಭಾರತದ ಬೆಳೆಯುತ್ತಿರುವ ದೀರ್ಘ-ಶ್ರೇಣಿಯ ನಿಖರ ದಾಳಿ ಸಾಮರ್ಥ್ಯವನ್ನು ಪ್ರದರ್ಶಿಸಿದೆ. ಈ ಉಡಾವಣೆಗೆ ಡಿಆರ್‌ಡಿಒದ ಹಿರಿಯ ಅಧಿಕಾರಿಗಳು, ನೌಕಾಪಡೆ ಮತ್ತು ವಾಯುಪಡೆಯ ಪ್ರತಿನಿಧಿಗಳು ಸಾಕ್ಷಿಯಾದರು.

ಭಾರತವನ್ನು ಜೋಡಿಸಿದ್ದು ಋಷಿಗಳು ಮತ್ತು ಸಂತರು: ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್

ಭಾರತದ ಏಕತೆಯ ಪರಿಕಲ್ಪನೆ ಪ್ರಾಚೀನ ನಾಗರಿಕತೆಯ ವಾಸ್ತವ

ಹೊಸದಿಲ್ಲಿ: ಭಾರತದ ಏಕತೆಯ ಪರಿಕಲ್ಪನೆ ಹೊಸತಲ್ಲ, ಇದು ಪ್ರಾಚೀನ ಭಾರತೀಯ ನಾಗರಿಕತೆಯ ವಾಸ್ತವವಾಗಿದೆ. ಭಾರತವನ್ನು ನಿಜವಾಗಿಯೂ ಜೋಡಿಸಿದವರು ಋಷಿಗಳು ಮತ್ತು ಸಂತಶ್ರೇಷ್ಠರು ಎಂಬುದಾಗಿ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಸೋಮವಾರ ಹೇಳಿದರು. ಅವರು ದಿಲ್ಲಿಯ ಉಪರಾಷ್ಟ್ರಪತಿ ಭವನದಲ್ಲಿ ''ಅಗತ್ಯಾರ್-ದ ಯುನಿಫೈಯರ್'' ತಮಿಳು ಕೃತಿ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದರು. ಈಗಾಗಲೇ ಈ ಕೃತಿ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಭಾಷಾಂತರಗೊಂಡು ಬಿಡುಗಡೆಯಾಗಿರುವುದನ್ನು ಇಲ್ಲಿ ಸ್ಮರಿಸಬಹುದು. ಭಾರತೀಯ ನಾಗರಿಕ ಏಕತೆ ಅಥವಾ ರಾಷ್ಟ್ರೀಯ ಸಮಗ್ರತೆಯ ಬಗ್ಗೆ ಮಾತನಾಡುವ ವೇಳೆ ರಾಜರನ್ನು, ರಾಜಕೀಯ ಸಂಸ್ಥೆಗಳನ್ನು ಪದೆ ಪದೆ ಉಲ್ಲೇಖಿಸಲಾಗುತ್ತದೆ. ಆದರೆ ಭಾರತೀಯ ಏಕತೆಯ ನಿಜವಾದ ಶಿಲ್ಪಿಗಳೆಂದರೆ ಅದು ಋಷಿಗಳು ಮತ್ತು ಸಂತಶ್ರೇಷ್ಠರಾಗಿದ್ದಾರೆ. ಇಂತಹ ಋಷಿಗಡಣದಲ್ಲಿ ಅಗಸ್ತ್ಯರು ಭಾರತೀಯ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಏಕತೆಯ ಮಹಾನ್ ಸಂಕೇತಗಳಲ್ಲಿ ಒಬ್ಬರಾಗಿದ್ದಾರೆ ಎಂದು ಅವರು ನುಡಿದರು.

ಅಗಸ್ತ್ಯರು ಉತ್ತರ ಭಾರತ ಮತ್ತು ದಕ್ಷಿಣ ಭಾರತೀಯ ಪರಂಪರೆಗಳೆರಡರಲ್ಲೂ ಸಮಾನವಾಗಿ ಗೌರವಿಸಲ್ಪಟ್ಟ ಋಷಿ ಶ್ರೇಷ್ಠರು. ಅಗಸ್ತ್ಯರು ಹಿಮಾಲಯದಿಂದ ಹಿಂದು ಮಹಾಸಾಗರದವರೆಗೆ ವ್ಯಾಪಿಸಿರುವ ಭಾರತೀಯ ಏಕತೆಯ ಸಂಕೇತವಾಗಿದ್ದಾರೆ. ತಮಿಳ್ನಾಡಿನ ಪೊತಿಗಾಯಿ ಪರ್ವತಗಳು ಮತ್ತು ಕಾವೇರಿ ನದಿಯನ್ನು ಉಲ್ಲೇಖಿಸಿದ ಅವರು, ಇವು ಅಗಸ್ತ್ಯರ ಸ್ಮರಣೆಯನ್ನು ಶಾಶ್ವತವಾಗಿರಿಸುತ್ತದೆ. ತಮಿಳು ವ್ಯಾಕರಣದ ಅಭಿವೃದ್ಧಿ ಹಾಗೂ ತಮಿಳ್ ಸಂಗಮ್ ಪರಂಪರೆಗೆ ಅಗಸ್ತ್ಯರದು ಮಹತ್ವದ ಕೊಡುಗೆಯಾಗಿರುವುದನ್ನು ಎತ್ತಿ ತೋರಿದ ಅವರು , ಅಗಸ್ತ್ಯರು ಉತ್ತರ ಭಾರತ ಮತ್ತು ದಕ್ಷಿಣ ಭಾರತೀಯ ಸಂಸ್ಕೃತಿಗಳ ನಡುವಣ ಸೇತುವಾಗಿದ್ದಾರೆಎಂದು ಬಣ್ಣಿಸಿದರು. ಭಾರತೀಯ ಭಾಷೆಗಳಾವುವೂ ಸ್ಪರ್ಧಿಗಳಲ್ಲ, ಬದಲಿಗೆ ಸಹೋದರಿ ಭಾಷೆಗಳಾಗಿದ್ದು, ಅವು ಪರಸ್ಪರ ಗೌರವಿಸುವ ಮೂಲಕ ಒಂದು ಇನ್ನೊಂದನ್ನು ಸಮೃದ್ಧಗೊಳಿಸುವಂತ ಹವುಗಳಾಗಿವೆ. ಭಾರತೀಯ ಏಕತೆಯು ಇತ್ತೀಚಿನ ನಿರ್ಮಾಣವಲ್ಲ, ಬದಲಿಗೆ ಪ್ರಾಚೀನ ನಾಗರಿಕತೆಯ ವಾಸ್ತವವಾಗಿ ಸಾವಿರಾರು ವರ್ಷಗಳಿಂದ ಸಾಧು, ಸಂತ, ಋಷಿ ಮುನಿಗಳಿಂದ ಬೆಳೆದು ಬಂದಿರುವಂಥದ್ದು. ಅಗಸ್ತ್ಯರ ಬದುಕೇ ಇದಕ್ಕೆ ಸಾಕ್ಷಿ ಎಂದರು. ಭಾಷೆಯ ಹೆಸರಿನಲ್ಲಿ ಅನಗತ್ಯ ಚರ್ಚೆಗಳನ್ನು ಹುಟ್ಟುಹಾಕಿ ಜನರನ್ನು ವಿಭಜಿಸುವ ಕೆಲವು ಶಕ್ತಿಗಳ ಹುನ್ನಾರದ ವಿರುದ್ಧ ಜನತೆಯನ್ನು ಎಚ್ಚರಿಸಿ ಇಂತಹ ದುಷ್ಪ್ರವೃತ್ತಿಗಳಿಗೆ ಬಲಿಯಾಗಬೇಡಿ. ಯಾವುದೇ ಶಕ್ತಿಯೂ ಭಾರತದಲ್ಲಿ ವಿಭಜನೆ ಸೃಷ್ಟಿಸಲು ಸಾಧ್ಯವಿಲ್ಲ ಎಂದು ದೃಢವಾಗಿ ಸಾರಿದ ಅವರು, ಯುವಜನತೆಯಲ್ಲಿ ಭಾರತೀಯ ಸಂಸ್ಕೃತಿ ಮತ್ತು ನಾಗರಿಕತೆಯ ಪರಂಪರೆಯ ಬಗೆಗೆ ಸಕಾರಾತ್ಮಕ ಅರಿವು ಮೂಡಿಸುವಂತಹ ಚರ್ಚೆಗಳಿಗೆ ಕರೆ ನೀಡಿದರು.



ಸಮಾರಂಭದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಪ್ರಚಾರ ಪ್ರಮುಖ್ ಸುನೀಲ್ ಅಂಬೇಕರ್, ಪ್ರಕಾಶನ ಸಂಸ್ಥೆ ಕಲೈಮಗಳ್ ಸಾಪ್ತಾಹಿಕದ ಸಂಪಾದಕ ಕೀಲಂಬೂರ್ ಶಂಕರ ಸುಬ್ರಹ್ಮಣ್ಯನ್, ಹಿರಿಯ ಪತ್ರಕರ್ತ ಶ್ರೀ ಮಾಲನ್, ಲೇಖಕರಾದ ಕರ್ನಾಟಕದ ಓ.ಶ್ಯಾಮ್ ಭಟ್ ಮತ್ತು ಡಾ.ಎಂ.ಎಸ್.ಸುಧಾ , ಪುಸ್ತಕವನ್ನು ತಮಿಳಿಗೆ ಭಾಷಾಂತರಿಸಿದ ಪ್ರೊ.ಕಲ್ಯಾಣಿ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ಭೀಕರ ಅಪಘಾತ: ಇಬ್ಬರ ಸಾವು

• **ಚಡಚಣ:** ತಾಲೂಕಿನ ಮರಗೂರ ಸಕ್ಕರೆ ಕಾರ್ಖಾನೆ ಎದುರುರಾಷ್ಟ್ರೀಯಹೆದ್ದಾರಿ52(ಸೋಲಾಪುರ–ವಿಜಯಪುರ ರಸ್ತೆ) ಮೇಲೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದು, ಮತ್ತೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಹೈದರಾಬಾದ್ ಮೂಲದ ರತ್ನೇಶ ಯಾದವ್ ಚಾಲನೆ ಮಾಡುತ್ತಿದ್ದ ಟಿಪ್ಪರ್ ಲಾರಿ ನಿಯಂತ್ರಣ ತಪ್ಪಿ ರಸ್ತೆ ವಿರುದ್ಧ ದಿಕ್ಕಿನಲ್ಲಿ ಸಂಚರಿಸುತ್ತಿದ್ದ ವೇಳೆ ಎದುರು ಬರುತ್ತಿದ್ದ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಅಪಘಾತ ಸಂಭವಿಸಿದೆ.

ಅಪಘಾತದ ಪರಿಣಾಮವಾಗಿ ಧರ್ಮಣ್ಣ ಯಲ್ಲಪ್ಪ ಹೊಸಮನಿ (41) ಹಾಗೂ ಭೀರಪ್ಪ ಕಲ್ಲಪ್ಪ ಪೂಜಾರಿ (25), ಇಬ್ಬರೂ ಇಂಡಿ ತಾಲೂಕಿನ ಗೋರನಾಳ ಗ್ರಾಮದ ನಿವಾಸಿಗಳು, ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಇದೇ ವೇಳೆ ಗಾಯಗೊಂಡ ಸೋಮಯ್ಯ ಬಸಯ್ಯ ಹಿರೇಮಠ ಅವರನ್ನು ವಿಜಯಪುರದ ಸಂಜೀವಿನಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ಮುಂದುವರಿದಿದೆ ಎಂದು ಪೊಲೀಸ್ ಮೂಲಗಳಿಂದ ತಿಳಿದುಬಂದಿದೆ. ಅಪಘಾತದ ಮಾಹಿತಿ ತಿಳಿಯುತ್ತಿದ್ದಂತೆ ಹೆಚ್ಚುವರಿ ಪೊಲೀಸ್ ಅಧೀಕ್ಷಕ ರಾಮಣ್ಣಗೌಡ ಹಟ್ಟಿ, ಇಂಡಿ ಡಿಎಸ್ಪಿ ಸದಾಶಿವ ಕಟ್ಟಿಮನಿ, ಚಡಚಣ ಸಿಪಿಐ ಪರಶುರಾಮ ಮನಗೂಳಿ, ಝಳಕಿ ಪಿಎಸ್ಐ ಮಂಜುನಾಥ ತಿರಕನ್ನವರ, ಎಸ್.ಬಿ.ನಡವಿನಕೇರಿ ಸೇರಿದಂತೆ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂಬಂಧ ಝಳಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ಸುಮೊಟೊ ಪ್ರಕರಣ ದಾಖಲು

• **ಹುಬ್ಬಳ್ಳಿ:** ಮಹಿಳೆಯರಿಗೆ ತ್ರಿಶೂಲ ಆಕಾರದ ಆಯುಧ ನೀಡಿದ ಹಾಗೂ ದ್ವೇಷ ಭಾಷಣ ಮಾಡಿದ ಆರೋಪದ ಮೇಲೆ ಪ್ರಮೋದ ಮುತಾಲಿಕ್ ಸೇರಿ ಆರು ಮಂದಿ ವಿರುದ್ಧ ಉಪನಗರ ಠಾಣಾ ಪೊಲೀಸರು ಸುಮೊಟೊ ಪ್ರಕರಣ ದಾಖಲಿಸಿದ್ದಾರೆ.ಶ್ರೀರಾಮ ಸೇನೆ ಸಂಸ್ಥಾಪಕ ಅಧ್ಯಕ್ಷ ಪ್ರಮೋದ ಮುತಾಲಿಕ್ ಹಾಗೂ ಇತರರು ಪೂರ್ವಾನುಮತಿ ಪಡೆಯದೆ ಇಲ್ಲಿನ ಆರ್.ಎನ್. ಶೆಟ್ಟಿ ಕಲ್ಯಾಣ ಮಂಟಪದಲ್ಲಿ ಶ್ರೀರಾಮಸೇನೆಯ ಮಹಿಳಾ ಘಟಕದ ದುರ್ಗಾ ಸೇನೆಯಿಂದ ಭಾನುವಾರ ತ್ರಿಶೂಲ ದೀಕ್ಷಾ ಕಾರ್ಯಕ್ರಮ ನಡೆಯಿತು. ಈ ವೇಳೆ ಕಬ್ಬಿಣದ ಆಯುಧ ಪ್ರದರ್ಶಿಸಲಾಗಿದೆ. ಅಲ್ಲದೆ ತಮ್ಮ ಭಾಷಣದಲ್ಲಿ ಧರ್ಮಗಳ ನಡುವೆ ವೈರತ್ವ ಉಂಟಾಗುವ ರೀತಿ ಮಾತನಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಗಾಂಜಾ ಸೇವನೆ: ಪ್ರಕರಣ ದಾಖಲು

• **ಐಗಳಿ:** ಗ್ರಾಮದ ಸಂಗನಮಡ್ಡಿ (ಜಲನಗರ) ಪ್ರದೇಶದಲ್ಲಿ ಗಾಂಜಾ ಸೇವನೆ ಮಾಡುತ್ತಿದ್ದ ಯುವಕನ ವಿರುದ್ಧ ಪ್ರಕರಣ ದಾಖಲಾಗಿದೆ. ಸಾಗರ ಮನೋಹರ ಮಾದರ (19) ಸಾರ್ವಜನಿಕ ಸ್ಥಳದಲ್ಲಿ ಗಾಂಜಾ ಸೇವಿಸುತ್ತಿದ್ದ ವೇಳೆ ಪೊಲೀಸರು ಕಾರ್ಯಾಚರಣೆ ಮಾಡಿ ಯುವಕನ್ನು ವಶಕ್ಕೆ ಪಡೆದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಯುವಕ ಗಾಂಜಾ ಸೇವಿಸಿರುವುದು ದೃಢಪಟ್ಟಿದೆ. ಈ ಕುರಿತು ಐಗಳಿ ಪೊಲೀಸ್ ಠಾಣೆ ಯಲ್ಲಿ ಪ್ರಕರಣ ದಾಖಲಾಗಿದೆ.

ಕಾರ್ಯಾಚರಣೆಯಲ್ಲಿ ಪಿಎಸ್ಐ ಚಂದ್ರಸೇಖರ ಸಾಗನೂರ ಸಿಬ್ಬಂದಿ ಕುಮಾರ ವಾಘಮೋರೆ ಹಾಗೂ ಸಂಜು ಸನ್ನಗೊಂಡ ಭಾಗವಹಿಸಿದ್ದರು. ಗಾಂಜಾ ಪೂರೈಕೆ ಮಾಡುವವರ ವಿರುದ್ಧವೂ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಸಮುದ್ರ ಪಾಲಾದ ಯುವಕ

• **ಕುಮಟಾ:** ಸಮುದ್ರ ತೀರದಲ್ಲಿ ಗೆಳೆಯರೊಂದಿಗೆ ರೀಲ್ಸ್ ಮೊಬೈಲ್ ಚಿತ್ರೀಕರಣ ಮಾಡುತ್ತಿದ್ದ ಪ್ರವಾಸಿಗನೊಬ್ಬ ಪ್ರಕ್ಷುಬ್ಧ ಕಡಲ ಅಲೆಗಳ ಹೊಡೆತದಿಂದ



ಕೊಚ್ಚಿ ಹೋಗಿ ಸಮುದ್ರ ಪಾಲಾದ ಘಟನೆ ತಾಲೂಕಿನ ಕಡ್ಲೆ ಸಮುದ್ರ ತೀರದಲ್ಲಿ ಸಂಭವಿಸಿದೆ.ಮಹಾರಾಷ್ಟ್ರದ ಪೂಣಾ ಮೂಲದ ಜೀವನ ಭಟರಾಯಿ(26) ಸಮುದ್ರ ಪಾಲಾದ ಯುವಕನಾಗಿದ್ದು ರಜೆ ಕಳೆಯಲೆಂದು ಪೂಣಾದಿಂದ ಬಂದು ಮೂರು ದಿನಗಳಿಂದ ಕುಮಟದ ಕಡ್ಲೆಯ ರೆಸಾರ್ಟ್ ಒಂದರಲ್ಲಿ ವಾಸ್ತವ್ಯ ಮಾಡಿದ್ದ ಯುವಕರು ಸಮುದ್ರ ತೀರದಲ್ಲಿ ನೀರಿಗಿಳಿದು ರೀಲ್ಸ್ ಚಿತ್ರೀಕರಣ ಮಾಡುತ್ತಿದ್ದ ಸಂದರ್ಭದಲ್ಲಿ ದುರ್ಘಟನೆ ಸಂಭವಿಸಿದೆ. ಸಮುದ್ರದಲ್ಲಿ ಅಲೆಗಳ ಅಬ್ಬರ ಜೋರಾಗಿದ್ದು ಕರಾವಳಿ ಕಾವಲು ಪಡೆ,ಅಗ್ನಿಶಾಮಕ ಸಿಬ್ಬಂದಿಗಳು ಮೃತ ದೇಹದ ಹುಡುಗಾಟ ನಡೆಸುತ್ತಿದ್ದಾರೆ. ಕುಮಟಾ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಮಹಾರಾಣಾ ಪ್ರತಾಪಸಿಂಹ 486ನೇ ಜಯಂತಿ ಉತ್ಸವ ನಾಳೆ

• **ಧಾರವಾಡ:** ಕಾನ್ಯ ಕುಬ್ಜ ಬ್ರಾಹ್ಮಣ ರಜಪೂತ ಸಮಾಜ ಧಾರವಾಡ ಇವರ ಸಂಯುಕ್ತ ಆಶ್ರಯದಲ್ಲಿ ಜೂ.17ರಂದು ಬೆಳಗ್ಗೆ 11 ಗಂಟೆಗೆ ಸರಸ್ವತಿ ನಿಕೇತನ ದುರ್ಗಾದೇವಿ ಗುಡಿ ಹತ್ತಿರ ಮಹಾರಾಣಾ ಪ್ರತಾಪಸಿಂಹರವರ 486ನೇ ಜಯಂತಿ ಆಚರಣೆ ನಡೆಯಲಿದೆ.ಸಂಜೆ 4 ಗಂಟೆಗೆ ಮದಿಹಾಳದಿಂದ ರಾಷ್ಟ್ರವೀರ ಮಹಾರಾಣಾ ಪ್ರತಾಪಸಿಂಹರವರ ಮೆರವಣಿಗೆಯು ನಡೆಯಲಿದೆ. ಚನ್ನಪಟ್ಟಣ ರಜಪೂತಾನಿ ಹೌಸ್ ಅಧ್ಯಕ್ಷರಾದ ಆರ್.ಬಾಲಾಜಿ ಸಿಂಗ್‌ರವರು ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ಜೂ.17ರಂದು ನಡೆಯಲಿರುವ ಸಮಾರಂಭದಲ್ಲಿ ಸುಕ್ಷೇತ್ರ ನಯಾನಗರದ ಅಭಿನವ ಸಿದ್ದಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮಂಜುನಾಥ ಶಿವಪ್ಪ ಮಕ್ಕಳಗೇರಿ, ಪೊಲೀಸ್ ಆಯುಕ್ತರಾದ ಎನ್.ಶಶಿಕುಮಾರ್, ಅರವಿಂದ ಜಮಖಂಡಿ ಮತ್ತು ಸಮಾಜದ ಮುಖಂಡರಾದ ರಾಜೇಂದ್ರ ಸಿಂಗ್ ಕುಮಂದಾನ, ನಿವೃತ್ತ ಪೊಲೀಸ್ ಆಯುಕ್ತರಾದ ಟಿ.ಜಿ. ಸಂಗ್ರಾಮ್ ಸಿಂಗ್, ಡಾ.ಪ್ರತಾಪ್ ಸಿಂಗ್ ಉದಯ ಸಿಂಗ್ ರಜಪೂತ, ಡಾ.ಸಂಗಪ್ಪ ಎನ್ ಗಾಬಿ, ದಿಲೀಪ್ ಸಿಂಗ್ ಆರ್ ಸವಲೂರ್ ಆಗಮಿಸಲಿದ್ದಾರೆ. ಧಾರವಾಡಕೆಕೆಬಿ ರಜಪೂತ್ ಸಮಾಜದ ಅಧ್ಯಕ್ಷರಾದ ಜೈ ಸಿಂಗ್ ಡಿ ರಜಪೂತ ಅಧ್ಯಕ್ಷತೆ ವಹಿಸಲಿದ್ದಾರೆ. ದೊಡವಾಡದ ಲಕ್ಷ್ಮಣಸಿಂಗ್ ಹಜೇರಿ ಉಪನ್ಯಾಸಕರಾಗಿ ಆಗಮಿಸಲಿದ್ದಾರೆ ಎಂದು ಕಾನ್ಯ ಕುಬ್ಜ ಬ್ರಾಹ್ಮಣ ರಜಪೂತ್ ಸಮಾಜದ ಮುಖಂಡರಾದ ಪ್ರತಾಪ್ ಸಿಂಗ್ ಹಜೇರಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

CHANGE OF NAME

I, **DEEPA VISHAL KITTUR** have changed my minor daughter name from **GANAVI KITTUR** (Old Name) To **GANAVI VISHAL KITTUR** (New Name) Resident of HIG 1176/D SBM Colony Aravinda Nagara Mysore 570023 Karnataka, have henceforth I will be called and recognized by new name for all future purposes, dated: 15/06/2026.

CHANGE OF NAME

I, **KAVYASHREE** (Old Name) Resident of H No: 55/7 Basava Sadan Building 2nd Cross Left Side Hosur Hubballi 580021 Karnataka, have changed my name as **KAVYASHREE NIDASESI** (New Name) henceforth I will be called and recognized by new name for all future purposes, dated: 15/06/2026.

CHANGE OF NAME

I, **VISHAL KUMAR KITTUR** (Old Name) Resident of Sridevi Nivas Shivapet 5th Cross Ron Gadag 582209 Karnataka, have changed my name as **VISHAL VEERANNA KITTUR** (New Name) henceforth I will be called and recognized by new name for all future purposes, dated: 15/06/2026.

ಅಸಲ ದಾವಾ ನಂ.45/2026
ಮೇ॥ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ನರಗುಂದ

ವಾದಿಯರು:ಶ್ರೀಮತಿ ಅನ್ನಪೂರ್ಣ ಕೋಂ ಬಾಪುಗೌಡ ಪಾಟೀಲ

ವಿರುದ್ಧ

ಪ್ರತಿವಾದಿಯರು:ಮಾನ್ಯ ಜಿಲ್ಲಾಧಿಕಾರಿಗಳು, ಗದಗ ಹಾಗೂ ಇತರರು

ಸಾರ್ವಜನಿಕ ತಿಳುವಳಿಕೆ ನೋಟಿಸು

ಸದರ ದಾವೆಯು ವಾದಿ ನಂ 1 ಮತ್ತು 2 ರವರು ಮಾತ್ರ ಮೋಠಿ ಬಾಪುಗೌಡ ತಂ ಬಸನ ಗೌಡ ಪಾಟೀಲ ಇವರಿಗೆ ವಾದಿಯರು ಮಾತ್ರ ನೇರ ವಾರಸುದಾರರು ಇರುತ್ತಾರೆ ಅಂತಾ ಮಾನ್ಯ ನ್ಯಾಯಾಲಯದಿಂದ ಘೋಷಣೆಯ ಡಿಕ್ರೀ ಪಡೆದುಕೊಳ್ಳಲು ಮಾಡಿದ್ದು ಇರುತ್ತದೆ

ಸದರ ಪ್ರಕರಣವು ದಿನಾಂಕ:20/07/26ರಂದು ಇದ್ದು, ಮೇಲ್ಕಂಡ ಪ್ರಕರಣದಲ್ಲಿ ಯಾರಿಗಾದರು ಹಕ್ಕು ಹಿತಾಸಕ್ತಿ ಇದ್ದಲ್ಲಿ ತಕರಾರುಇದ್ದಲ್ಲಿ ಮಾನ್ಯ ನ್ಯಾಯಾಲಯವು ನಿಗದಿಪಡಿಸಿದ ದಿನದಂದು ಅಂದರೆ ದಿನಾಂಕ:20/07/26 ರಂದು ಬೆಳಿಗ್ಗೆ 10–30 ಘಂಟೆಗೆ ಸ್ವತಃ ನೀವಾಗಲಿ ಅಥವಾ ನಿಮ್ಮ ವಕೀಲರ ಮುಖಾಂತರವಾಗಲಿ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಬೇಕು. ಇಲ್ಲದಿದ್ದರೆ ನಿಮ್ಮ ಗೈರು ಹಾಜರಾತಿಯಲ್ಲಿ ಏಕಪಕ್ಷೀಯವಾಗಿ ವಿಚಾರಣೆ ನಡೆಸಿ ಮಾನ್ಯ ನ್ಯಾಯಾಲಯವುಕಾನೂನಿನ ಪ್ರಕಾರ ಮುಂದಿನ ಆದೇಶ ಮಾಡುತ್ತದೆ ಅಂತಾ ಕೊಟ್ಟ ಸಾರ್ವಜನಿಕ ನೋಟಿಸು.

ನ್ಯಾಯಾಲಯದ ಆದೇಶದ ಮೇರೆಗೆ
ನರಗುಂದ
15–06–2026

ಸಹಿ/–ಶಿರಸ್ತೇದಾರರು
ಜೆ.ಎಮ್.ಎಫ್.ಸಿ ನ್ಯಾಯಾಲಯ ನರಗುಂದ
ಸಹಿ/–ಎಂ.ಬಿ.ಕುಲಕರ್ಣಿ ವಕೀಲರು.
ವಿನಾಯಕನಗರ ನರಗುಂದ

G & W NO. 15 OF 2026
IN THE COURT OF THE PRINCIPAL SENIOR CIVIL JUDGE AND J.M.F.C COURT KUNDGOL

Petitioners: 1.Ningappa S/o Mahadevappa Konanavar and others.

VERSUS

Respondent : NIL

CITATION
NOTICE UNDER ORDER V RULE 20 OF CPC

The petitioner No.1 above named Ningappa S/o Mahadevappa Konanavar has filed a petition seeking permission to sell Agricultural property bearing Sy./Block No.30/9, measuring 00 Acres 26 Guntas, Assessed at Rs.1.93 ps, situated at Benakanhalli Gram/village, Saunshi Hobli Taluka Kundgol, District Dharwad , on behalf of Petitioner No.3 to 5.

In case anybody has got objection for the said transaction of the above said property may appear before this Hon 'ble Court on 30/06/2026 either personally or through authorized counsel. In case if no appears and file their objection on the said day the matter willbe heard and disposed off as ex-parte.

Given under my hand and seal of the court on this day of 11 June 2026 at Kundgol.

By order of the Court.
Sd/-Sheristedar,Senior Civil Judge,& JMFC Kundgol
Sd\-S.M.Neeralagi Advocate for Petitioners.

ಕ್ರಿ.ಮಿ.ನಂ: 556/2026
ರಾಣೇಬೆನ್ನೂರ ಪ್ರಿ.ಸೀನಿಯರ ಸಿವ್ಹಿಲ್ ಜಡ್ಜ ವ ಜೆ.ಎಮ್.ಎಫ್.ಸಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು:1)ಶ್ರೀಮತಿ ಲಲಿತವ್ವ ಕೋಂ ಆರ್ ದೇವರಾಜ ಸಾ:ಕೋಟೆ ರೋಡ ಅಪ್ಪಾಜಿ ರಾವ್ ಕಂಪೌಂಡ ಶಿವಮೊಗ್ಗ ಹಾಗು ಇತರರು

ವಿರುದ್ಧ

ಎದುರುಗಾರರು:1)ಉಪತಹಶೀಲ್ದಾರ.ಜನನ ಮತ್ತು ಮರಣ ನೋಂದಣಾಧಿಕಾರಿಗಳು ಮೇಡ್ಲೇರಿ ತಾ: ರಾಣೇಬೆನ್ನೂರ ಜಿ: ಹಾವೇರಿ

ಇಸ್ತಿಯಾರ ನಾಮೆ

ಇದರಲ್ಲಿ 1)ಶ್ರೀಮತಿ ಲಲಿತವ್ವ ಆರ್ ದೇವರಾಜ 2)ಶ್ರೀಮತಿ ರೇಣುಕಾ ಮಲ್ಲಿಕಾರ್ಜುನ ನಿಂಗಜ್ಜೇರ 3)ಹನುಮಂತಗೌಡ ಬಸನಗೌಡ ಮುದೇಗೌಡ್ರ 4)ಮಹಾದೇವಕ್ಕ ಮೋಹನಗೌಡ ಭಗವಂತಗೌಡ್ರ 5)ಶ್ರೀಕಾಂತ ಬಸನಗೌಡ ಮುದೇಗೌಡ್ರ6)ಶಶಿಕಾಂತ ಬಸನಗೌಡ ಮುದೇಗೌಡ್ರ 7)ಭೀಮನಗೌಡ ಬಸನಗೌಡ ಮುದೇಗೌಡ್ರ 8)ಶ್ರೀಮತಿ ಸುಜಾತಾ ಕೋಂ ಮಂಜುನಾಥ ಪೂಜಾರ ಇವರ ತಂದೆಯಾದ ಬಸನಗೌಡ ತಂದೆ ಭೀಮನಗೌಡ ಮುದೇಗೌಡ್ರ ಇವರು ದಿನಾಂಕ:26–10–2020ರಂದು ಚಿಕ್ಕಕುರವತ್ತಿ ಗ್ರಾಮದಲ್ಲಿ ಮರಣ ಹೊಂದಿದ್ದುಇರುತ್ತದೆ. ಸದರೆ ಮರಣ ದಿನಾಂಕವನ್ನು ಎದುರುಗಾರರು ತಮ್ಮ ಕಛೇರಿಯ ಜನನ ಮತ್ತುಮರಣ ರಜಿಸ್ಟರ್ ನಲ್ಲಿ ದಾಖಲಿಸಿಕೊಂಡು ಮರಣ ಪ್ರಮಾಣ ಪತ್ರವನ್ನು ಪೂರೈಸಬೇಕು ಅಂತಾ ನಿರ್ದೇಶನ ಪಡೆಯುವ ಕುರಿತು ಮೇಲ್ಕಂಡ ನ್ಯಾಯಾಲಯ ದಲ್ಲಿ ಪ್ರಕರಣ ದಾಖಲ್ ಮಾಡಿರುತ್ತಾರೆ. ಕಾರಣ ಯಾರಾದರು ಯಾವುದೇ ತಕರಾರು ವಗೈರೆ ಇದ್ದಲ್ಲಿ ದಿನಾಂಕ:21/07/2026ರಂದು ಬೆಳಗ್ಗೆ 10=30ಗಂಟೆಗೆ ಮಾನ್ಯ ನ್ಯಾಯಾಲಯಕ್ಕೆಖುದ್ದಾಗಿ ಅಥವಾ ತಮ್ಮ ಪರ ವಕೀಲರ ಮೂಲಕವಾಗಲೀ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದೇ ತಕರಾರು ಇಲ್ಲಾ ಅಂತಾ ಪರಿಗಣಿಸಿ ನ್ಯಾಯಾಲಯವು ಸೂಕ್ತ ಆದೇಶ ಮಾಡುತ್ತದೆ ತಿಳಿಯಿರಿ ಅಂತಾ ಕೊಟ್ಟ ಜಾಹೀರ ಪ್ರಕಟಣೆ.

ಈ ದಿನ:10/06/2026 ರಂದು ನ್ಯಾಯಾಲಯದ ಸೀಲು ಮತ್ತು ಸಹಿಯೊಂದಿಗೆ ನೀಡಲ್ಪಟ್ಟಿದೆ
ದಿ:10/06/2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/–ಶಿರಸ್ತೆದಾರರು.ಪ್ರಿ.ಸೀನೀಯರ ಸಿವಿಲ್ ಜಡ್ಜ ಮತ್ತು ಜೆ.ಎಮ್.ಎಫ್.ಸಿ ರಾಣೇಬೆನ್ನೂರ
ಸಹಿ/–ಟಿ.ಬಿ.ಚನ್ನಗೌಡ್ರ ಅರ್ಜಿದಾರರ ಪರ ವಕೀಲರು ರಾಣೇಬೆನ್ನೂರ

IN THE COURT OF THE 5th ADDITIONAL CIVIL JUDGE & JMFC AT BALLARI
Crl. M.C. No. 376/2026

Between:-

Petitioner: K.Anjinappa S/o Late. Eranna, aged about 56 years, R/o Thimmalapura village, Ballari taluk and District,

And

Respondent:1) The Register of Births & Death's, Thasildhar, Taluk office, Kurugodu 2)K.Siddaiah S/o Late. Eranna, aged about 60 years, R/o ward No.2, near Banni Mahankalamma Temple, Torangallu village, Sandur taluk, Ballari District. 3) Smt. K.Mallamma @ Malemma W/o Veereshappa, aged about 57 years, R/o Orvai village, Kurugodu taluk, Ballari District. **...Respondents**

NOTICE

WHEREAS, the above named petitioner has filed the above petition under section 13(2)of Birth and Deaths Act1969 against the respondent for the purpose of seeking date of death of Petitioner's mother by name **smt. siddamma w/o late.eranna** was died on 10-03-2017 at Thimmalapura village,Kurugodu taluk Ballari District in the above mentioned address.

Therefore, If any persons are interested you are hereby the directed to appear in this court in person or by a pleader on 20-7-2026 at about 11.00 am to show cause against the above suit, failing which the suit will be heard and determined ex-parte against you.

Given under my hand and seal of the court on this 15 june, 2026

By Order of the court.
sd/-Sherestedar. 5th additional civil and J.m.f.c. Court Ballari.
B.Hanumantha Reddy Advocates for the petitioners

ಕ್ರಿ.ಮಿ.ನಂ: 586/2026
ಮಾನ್ಯ 1ನೇ ಹೆಚ್ಚುವರಿ ದಿವಾಣಿ ನ್ಯಾಯಾದೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ರಾಣೇಬೆನ್ನೂರು ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು:–ಸುಂಕಪ್ಪ ಬಸವರಾಜ ಮಿರಾಲಿ ವಯಾ:47 ವರ್ಷ, ಉ:ಶೇತ್ಕಿ, ಸಾ:ರಟ್ಟಿಹಳ್ಳಿ ರೋಡ ಶಿವಾಜಿನಗರ, ತುಮ್ಮಿನಕಟ್ಟಿ ತಾ: ರಾಣೇಬೆನ್ನೂರು.ಜಿ:ಹಾವೇರಿ

ವಿರುದ್ಧ

ಎದುರುಗಾರರು:–ಉಪ ತಹಶೀಲ್ದಾರರು ವ ಜನನ ಮತ್ತು ಮರಣ ನೋಂದಣಾಧಿಕಾರಿಗಳು, ನಾಡಕಚೇರಿ, ಕುಪ್ಪೆಲೂರ, ತಾ: ರಾಣೇಬೆನ್ನೂರು ಜಿ: ಹಾವೇರಿ.

ಇಸ್ತಿಯಾರ ನಾಮೆ

ಇದರಲ್ಲಿ ಅರ್ಜಿದಾರರ ಪರ ವಕೀಲರು ಸಲ್ಲಿಸುವ ವಿನಂತಿ ಅರ್ಜಿ ಏನೇಂದರೆ, ಸದರಿ ಮೇಲ್ಕಂಡ ಪ್ರಕರಣದಲ್ಲಿನ 1ಮತ್ತು4ನೇ ಅರ್ಜಿದಾರರ ಆಸಾ ತಾಯಿಯು ಶ್ರೀಮತಿ ರುದ್ರಮ್ಮ ಕೋಂ ಬಸವರಾಜ ಮಿರಾಲಿ, ದಿ:23/06/1977 ರಂದು ಹಾವೇರಿ ಜಿಲ್ಲಾ ರಾಣೇಬೆನ್ನೂರು ತಾಲೂಕು ತುಮ್ಮಿನಕಟ್ಟಿ ಗ್ರಾಮದ ನಮ್ಮ ಮನೆಯಲ್ಲಿ ಮರಣ ಹೊಂದಿರುತ್ತಾರೆ.ಅಂತಾ ಎದುರುಗಾರರ ಮರಣನೋಂದಣಿ ದಾಖಲೆಯಲ್ಲಿ ಮರಣ ದಿನಾಂಕ ದಾಖಲಿಸಿಕೊಂಡು ಮರಣ ಪ್ರಮಾಣ ಪತ್ರ ಪಡೆಯಲು ಅರ್ಜಿ ಸಲ್ಲಿಸಿರುತ್ತಾರೆ.

ಕಾರಣ ಈ ಪ್ರಕರಣದಲ್ಲಿ ಯಾರಾದಾರೂ ಹಿತಾಸಕ್ತಿ ಯುಳ್ಳವರು ಇದ್ದಲ್ಲಿ ದಿನಾಂಕ:27/07 /2026. ರಂದು ಮುಂಜಾನೆ 11–00ಗಂಟೆಗೆ ನೀವಾಗಲೀ, ನಿಮ್ಮ ವಕೀಲರ ಮೂಲಕವಾಗಲೀ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು ಇಲ್ಲವಾದಲ್ಲಿ ಮುಂದಿನ ವಿಚಾರಣೆ ಮಾಡಿ ಪ್ರಕರಣ ಇತ್ಯರ್ಥ ಪಡಿಸಲಾಗುವುದು.

ಈ ದಿವಸ ದಿ:15/06/2026 ರಂದು ನ್ಯಾಯಾಲಯದ ಮೊಹರಿನೊಂದಿಗೆ ಕೊಡಲ್ಪಟ್ಟಿತು.
ಸ್ಥಳ:ರಾಣೆಬೆನ್ನೂರು
ದಿನಾಂಕ:15/6/2026
ಸದರಿಯವರ ಪರಿಚಯವಿದೆ.

ಸಹಿ/–ಶಿರಸ್ತೇದಾರರು ಮಾನ್ಯ 1ಹೆಚ್ಚುವರಿ ಹಿ.ದಿ.ನ್ಯಾಯಾದೀಶರು ರಾಣೆಬೆನ್ನೂರು
ಸಹಿ/–ಶ್ರೀ ಹೆಚ್.ಎನ್. ಬೆಳವಿಗಿ ವಕೀಲರು ರಾಣೇಬೆನ್ನೂರು ಅರ್ಜಿದಾರರ ಪರ ವಕೀಲರು

ಅಸಲ ದಾವಾ ನಂಬರ: 402/2025
ಮೇ॥ ಹಿರಿಯ ದಿವಾಣಿ ನ್ಯಾಯಾಧೀಶರು ಬಾದಾಮಿ ಇವರ ನ್ಯಾಯಾಲಯದಲ್ಲಿ

1)ಗಂಗವ್ವ @ಮಲ್ಲವ್ವ ಗಂಡ ಶಂಕ್ರಪ್ಪ ಹೊಸಗೌಡ್ರ,ಸಾ॥ ಹಂಗರಗಿ, ತಾಲೂಕ: ಗುಳೇದಗುಡ್ಡ. ....ವಾದಿ

–ವಿರುದ್ಧ–

1)ಶಾಂತವ್ವ ಗಂಡ ಷಣ್ಮುಖಪ್ಪ ರಂಗಣ್ಣವರ ಸಾ:ಹಂಗರಗಿ, ತಾಲೂಕ:ಗುಳೇದಗುಡ್ಡ ಹಾಗೂ ಇತರರು. ......ಪ್ರತಿವಾದಿಯರು

ನೋಟಿಸು ಕ್ರಮಾದೇಶ 5ನಿಯಮ 20(1ಅ) ಸಿಪಿಸಿ ಅಡಿಯಲ್ಲಿ

ಗೆ.:–

ಪ್ರತಿವಾದಿ ನಂಬರ7: ಲಕ್ಷ್ಮೀಬಾಯಿ ಗಂಡ ನಿಂಗಪ್ಪ ಜೈನಾಪೂರ ಸಾ:ವಿಜಯಪೂರ, ತಾಲೂಕ ಹಾಗೂ ಜಿಲ್ಲಾ:ವಿಜಯಪೂರ,

ಪ್ರತಿವಾದಿ ನಂಬರ9: ಭಾರತಿ ಗಂಡ ರಾಮಣ್ಣ ಕಲ್ಲಾರಿ,ಸಾ:ವಿಜಯಪೂರ, ತಾಲೂಕ ಹಾಗೂ ಜಿಲ್ಲಾ: ವಿಜಯಪೂರ,

ಇದರಲ್ಲಿ ಮೇಲ್ಕಾಣಿಸಿದ ವಾದಿಯು, ಪ್ರತಿವಾದಿಯರ ವಿರುದ್ಧ ದಾವಾ.ಆಸ್ತಿ ಗಂಗನಬೂದಿಹಾಳ ಗ್ರಾಮದ ಜಮೀನು ರಿ.ಸ.ನಂಬರ 12/1 ಇದರಲ್ಲಿ 6ಎಕರೆ 13ಗುಂಟೆ ಕ್ಷೇತ್ರಕ್ಕೆ ವಾದಿಯೇ ಮಾಲೀಕ ಹಾಗೂ ಕಬ್ಜಾದಾರನು ಅಂತಾ ಘೋಷಣಾತ್ಮಕ ಆದೇಶ ಹೊರಡಿಸಬೇಕು ಹಾಗೂ ದಾವಾ ಆಸ್ತಿಗಳಾದ ಸರ್ಜಾಪೂರ ಗ್ರಾಮದ ಜಮೀನುಗಳು ರಿ.ಸ.ನಂಬರ 54/1ಮತ್ತು54/4 ಹಾಗೂ ಜಲಗೇರಿ ಗ್ರಾಮದ ಜಮೀನು ರಿ.ಸ.ನಂಬರ30/5 ವಾದಿಯು ಕಾನೂನು ಬದ್ಧ ಹಿಸ್ಸೆಯ ಪಾಲು ವಾಟಣಿ ಪರಿಹಾರ ಕೋರಿ ಈ ದಾವೆಯನ್ನು ಮಾಡಿರುತ್ತಾರೆ. ಸದರಿ ದಾವೆಯಲ್ಲಿ ನೀವು ಪ್ರತಿವಾದಿ ನಂಬರ 7ಮತ್ತು9 ಇರುತ್ತೀರಿ. ಈಗ ಸದರಿ ದಾವೆಯನ್ನು ದಿನಾಂಕ 14–07–2026ರಂದು11–00 ಗಂಟೆಗೆ ನ್ಯಾಯಾಲಯಕ್ಕೆ ಹಾಜರಾಗುವ ಸಲುವಾಗಿ ನಿಗದಿ ಆಗಿರುತ್ತದೆ. ಆ ಕಾರಣ ಮೇಲ್ಕಾಣಿಸಿದ ದಿನಾಂಕ ದಂದು ನೀವು ಸದರಿ ದಾವೆಯಲ್ಲಿ ನೀವು ಸ್ವತಃ ಆಗಲಿ ಅಥವಾ ವಕೀಲರ ಮುಖಾಂತರವಾಗಲಿ ಹಾಜರಾಗಬೇಕು. ತಪ್ಪಿದಲ್ಲಿ ಸದರ ದಾವೆಯನ್ನು ನಿಮ್ಮ ಗೈರು ಹಾಜರಿಯಲ್ಲಿ ಎಕತರ್ಫಾ ಅಂತಾ ನಿಕಾಲಿ ಮಾಡಲಾಗುವದು ಅಂತಾ ಕೊಟ್ಟ ನೋಟಿಸು.

ಈ ದಿವಸ ತಾ:10–06–26 ರಂದು ಮೇ॥ ಕೋರ್ಟಿನ ಶೀಲು ಹಾಗೂ ಮೊಹಲನೊಂದಿಗೆ ಕೊಡಲ್ಪಟ್ಟಿತು.
ಸ್ಥಳ :ಬಾದಾಮಿ.
:ದಿನಾಂಕ:06–06–2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/–ಹಿರಿಯ ಶಿರಸ್ತೆದಾರರು
ಹಿರಿಯ ಸಿವಿಲ್ ನ್ಯಾಯಾಲಯ ಬಾದಾಮಿ
ಸಹಿ/–(ಕೆ.ವೈ.ಕೆರೂರ) ವಕೀಲರು, ಬಾದಾಮಿ

ಜಿ ಅಂಡ್ ಡಬ್ಲ್ಯೂ ನಂ:88/2026
ಮಾನ್ಯ ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಧೀಶರ ನ್ಯಾಯಾಲಯ ಧಾರವಾಡ. ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ ನವಲಗುಂದ ಇವರ ನ್ಯಾಯಾಲಯದಲ್ಲಿ, ನವಲಗುಂದ.

ಅರ್ಜಿದಾರಳು:1) ಕು.ಬಸನಗೌಡ ತಂದೆ ಚಂದ್ರಗೌಡ ಪಾಟೀಲ 2)ಶ್ರೀಮತಿ ಸವಿತಾ ಕೋಂ, ಚಂದ್ರಗೌಡ ಪಾಟೀಲ

ವಿರುದ್ಧ

ಎದುರುಗಾರ : ಯಾರೂ ಇಲ್ಲ

ಪತ್ರಿಕಾ ಪ್ರಕಟಣೆ

ಮೇಲ್ಕಾಣಿಸಿದ ಅರ್ಜಿಯಲ್ಲಿಯ ಅರ್ಜಿದಾರ ರು ನಾವು ಮಾನ್ಯ ಹಿರಿಯ ದಿವಾಣಿ ನ್ಯಾಯಾ ಧೀಶರ ನ್ಯಾಯಾಲಯದಲ್ಲಿ ಜಿ ಅಂಡ್ ಡಬ್ಲ್ಯೂ ನಂ. 88/2026 ನೇದ್ದನ್ನು ದಾಖಲಿಸಿದ್ದು ನನ್ನ ಗಂಡ ಚಂದ್ರಗೌಡ ತಂದೆ ಬಸನಗೌಡ ಪಾಟೀಲ ಇವರು ದಿನಾಂಕ:26.03.2012 ರಂದು ಮರಣ ಹೊಂದಿದ್ದು ಇರುತ್ತದೆ. ಸದರ ಪ್ರಕರಣವನ್ನು 1 ಮತ್ತು 2ನೇ ಅರ್ಜಿದಾರರು ದಾವಾ ಆಸ್ತಿಗಳಾದ ಧಾರವಾಡ ಜಿಲ್ಲಾ ನವಲಗುಂದ ತಾಲೂಕ ಪೈಕಿ ತಿರ್ಲಾಪೂರ ಗ್ರಾಮದ ರಿ ಸ ನಂ.60/3 ಕ್ಷೇತ್ರ 01ಎಕರೆ–22ಗುಂಟೆ ಆಕಾರ ರೂ02–52ಪೈ ಹಾಗೂ ಧಾರವಾಡ ಜಿಲ್ಲಾ ನವಲಗುಂದ ತಾಲೂಕ ಪೈಕಿ ತಿರ್ಲಾಪೂರ ಗ್ರಾಮಪಂಚಾಯತಿ ವ್ಯಾಪ್ತಿಯ ತಿರ್ಲಾಪೂರ ಗ್ರಾಮದ ಇ ಸ್ವತ್ತು ನಂ:ಪಿ 151300500800101231 ಸ್ವತ್ತಿನ ಸಂಖ್ಯೆ:839 ವಿಸ್ತೀರ್ಣ 908.59 ಚ.ಮೀ.ಪಡಜಾಗೆ ಆಸ್ತಿಗಳಿಗೆ ಸಂಬಂಧಿಸಿದಂತೆ 2ನೇ ಅರ್ಜಿದಾರಳು 1ನೇ ಅರ್ಜಿದಾರರ ಅಸದಾರ ನಾತೆಯಿಂದ ಸದರ ಆಸ್ತಿಗಳನ್ನು ಮಾರಾಟ ಮಾಡುವ ಪರವಾನಿಗೆ ಹುಕುಂ ಪಡೆಯಲು ಅರ್ಜಿಯನ್ನು ಸಲ್ಲಿಸಿದ್ದು, ಇದಕ್ಕೆ ಸಂಬಂಧಿಸಿದಂತೆ ಯಾರದಾದರೂ ಏನಾದರೂ ತಂಟೆ ತಕರಾರು ಇದ್ದಲ್ಲಿ ದಿನಾಂಕ 22/07/2026 ರಂದು ಮುಂಜಾನೆ 10:30 ಗಂಟೆಗೆ ಮಾ॥ಹಿರಿಯ ದಿವಾಣಿ ನ್ಯಾಯಾಧೀಶರು ನವಲಗುಂದ ಇವರ ನ್ಯಾಯಾಲಯದಲಿ ಖುದ್ದಾಗಿ ವ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರುಗಳನ್ನು ಸಲ್ಲಿಸತಕ್ಕದ್ದು. ಒಂದು ವೇಳೆ ಯಾರದೂ ತಕರಾರು ಬರದೆ ಇದ್ದಲ್ಲಿ ಸದರ ಪ್ರಕರಣವನ್ನು ಏಕತರ್ಫಿ ನಿಕಾಲ್ ಮಾಡಲಾಗುವದು ಅಂತಾ ಕೊಟ್ಟ ಸಾರ್ವಜನಿಕ ನೋಟಿಸ್ಸು.

ನ್ಯಾಯಾಲಯದ ಆದೇಶದ ಮೇರೆಗೆ
ನವಲಗುಂದ
ದಿನಾಂಕ :15/06/2026

ಸಹಿ/– ಶಿರಸ್ತೇದಾರರು, ಹಿರಿಯ ದಿವಾಣಿ ವ ಜೆ.ಎಮ್.ಎಫ್.ಸಿ ನ್ಯಾಯಾಲಯ ನವಲಗುಂದ ಜಿಲ್ಲಾ:ಧಾರವಾಡ.
ಸಹಿ/– ಶ್ರೀಎಚ್.ಎಸ್.ದೇವರಡ್ಡಿ ಅರ್ಜಿದಾರರ ಪರ ನ್ಯಾಯವಾದಿ ನವಲಗುಂದ.

ಪಿ.ಮತ್ತುಎಸ್.ಸಿ ನಂ:01/2026
ಮಾನ್ಯ ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಬ್ಯಾಡಗಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು:1)ಶ್ರೀಮತಿ ಶಾರದಾ ಕೋಂ ಶಶಿಕಾಂತ ಶೇಠಸಾ:10ನೇ ಕ್ರಾಸ್ ಗಾಂಧಿ ನಗರ ಧಾರವಾಡತಾ/ಜಿ:ಧಾರವಾಡ

ವಿರುದ್ಧ

ಎದುರುಗಾರರು: ಯಾರೂ ಇಲ್ಲ.

ಇಸ್ತಿಯಾರ್ ನಾಮಾ

ಇದರಲ್ಲಿ ಅರ್ಜಿದಾರರಾದ 1)ಶ್ರೀಮತಿ ಶಾರದಾ ಶಶಿಕಾಂತ ಶೇಠ ಸಾ:10ನೇ ಕ್ರಾಸ್ ಗಾಂಧಿ ನಗರ ಧಾರವಾಡ ತಾ/:ಜಿ:ಧಾರವಾಡ 2) ವಿಠ್ಠಲ ತಂದೆ ವಾಸುದೇವ ರಾಯ್ಕರ ಸಾ:ವಾರ್ಡ ನಂ:1 ಮುದೋಳ ತಾ:ಮುದೋಳ ಜಿ:ಬಾಗಲಕೋಟೆ. 3)ಶ್ರೀಮತಿ ಜ್ಯೋತಿ ಕೋಂ ಬಾಲಕೃಷ್ಣ ಶೇಜವಾಡಕರ ಸಾ:ವಿನಾಯಕ ನಗರ ರಾಣೆಬೇನ್ನೂರ ತಾ:ರಾಣೆಬೇನ್ನೂರ 4)ಸತೀಶ ತಂದೆ ವಾಸುದೇವ ರಾಯಕರ ಸಾ:ಅಭಿವೃದ್ಧಿ ಗಾರ್ಡನ್ ಸರ್ಕಲ ಹಾರ್ಟ ರಸ್ತೆ ಆಸಿಸ್ ಶಾಲೆ ಹತ್ತಿರ ಟಿಕೆ ಪಾಲ್ಯ ಕೆ.ಆರ್.ಪುರಂ ಬೆಂಗಳೂರ ನೇದ್ದರವರ ತಂದೆಯಾದ ವಾಸುದೇವ ತಂದೆ ವಿಷ್ಣುರಾಯ್ಕರ ಇವರು ದಿನಾಂಕ:08–10–2016 ರಂದು ಹಾಗೂತಾಯಿಯಾದ ಶ್ರೀಮತಿ ಸುಮನಾ ಕೋಂ ವಾಸುದೇವ ರಾಯ್ಕರ ದಿನಾಂಕ:13–09–2023 ರಂದು ಪೋತಿಯಾಗಿ ರುತ್ತಾರೆ.

ಸದರಿ ಪೋತಿಯವರಿಗೆ ಈ ಅರ್ಜಿದಾರರು ಮಾತ್ರ ವಾರಸುದಾರರು ಇರುತಾರೆ ಅಂತಾ ವಾರಸಾ ಪ್ರಮಾಣ ಪತ್ರವನ್ನು ಪಡೆದುಕೊಳ್ಳುವ ಸಲುವಾಗಿ ಮಾನ್ಯ ಯ ಸಿವಿಲ್ ನ್ಯಾಯಾಲಯ ಬ್ಯಾಡಗಿ ಇವರ ನ್ಯಾಯಾಲದಯಲ್ಲಿ ಪಿ.ಚ.ಎಸ್.ಸಿ ನಂ:01/2026 ನೇದ್ದನ್ನು ದಾಖಲ ಪಡಿಸಿ ಕನ್ನಡ ದೈನಂದಿನ ಪತ್ರಿಕೆಯಾದ "ಹೊಸದಿಗಂತ" ಇದರ ಮುಖಾಂತರ ಪ್ರಕಟಣೆಗೋಳಿಸಲು ಮಾನ್ಯ ನ್ಯಾಯಾಯದವರು ಆದೇಶವನ್ನು ಮಾಡಿ ದಿನಾಂಕ:01–06–2026ಕ್ಕೆ ಮುದ್ದತ್ತನ್ನು ನೇಮಿಸಿದ್ದು ಇರುತ್ತದೆ.ಯಾರಾದರೂ ತಕರಾರು ವ ಹೇಳಿಕೆ ಏನಾದರೂ ಇದ್ದಲ್ಲಿ ದಿನಾಂಕ:06–07–2026ರಂದು ಮಾನ್ಯ ನ್ಯಾಯಾಲಯಕ್ಕೆ ಹಾಜರಾಗಿ ತಾವಾಗಲಿ ವ ತಮ್ಮನ್ಯಾಯವಾದಿಗಳ ಮುಖಾಂತರವಾಗಲಿ ಮಾನ್ಯ ನ್ಯಾಯಾಲಯಕ್ಕೆ ಹಾಜರಾಗಿ ಸಲ್ಲಿಗೆ ತಕ್ಕದ್ದು.ಇಲ್ಲವಾದರೆ ಏಕತರ್ಫಿ ಹುಕಂನ್ನು ಮಾಡಲಾಗುವದು ಅಂತಾ ಕೊಟ್ಟ ನೋಟಿಸ್ ವ ಸಮನ್ಸ್ ಇವತ್ತು ಸನ್ 2026ನೇ ಇಸ್ವಿ ಜೂನ ತಿಂಗಳ 05ನೇ ದಿನಾಂಕದಂದು ನಮ್ಮ ಸಹಿ ಮೊಹರಿನೊಂದಿಗೆ ಕೊಡಲ್ಪಟ್ಟಿದೆ.

ಮಾನ್ಯ ನ್ಯಾಯಾಲಯದ ಆಜ್ಞೆಯ ಮೇರೆಗೆ
ಸಹಿ/–ಶ್ರೀ.ಜಿ.ಬಿ.ಬಾರ್ಕಿ
ಸಹಿ/ಶಿರಸ್ತೇದಾರರು ಹಿರಿಯ ಸಿವ್ಹಿಲ್ ನ್ಯಾಯಾಲಯ ಬ್ಯಾಡಗಿ
ಸಹಿ/– (ಶ್ರೀಮಾಲತೇಶ,ಬಿ.ಹಾವೇರಿ)
ಬಿ.ಎ.ಎಲ್.ಎಲ್.ಬಿ(ಸ್ಪೇ) ನ್ಯಾಯವಾದಿಗಳು ಬ್ಯಾಡಗಿ

ಜಿ.ಆ್ಯಂಡ.ಡಬ್ಲ್ಯೂ.ಸಿ ನಂ. 42/2025
ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ರಾಮದುರ್ಗ ಇವರ ನ್ಯಾಯಾಲಯದಲ್ಲಿ

1) ಶ್ರೀಮತಿ ರತ್ನವ್ವ ಕೋಂ. ಹನಮಂತಗೌಡ ಪಾಟೀಲ ಹಾಗೂ ಇತರರು .....ಅರ್ಜಿದಾರಳು

–ವಿರುದ್ಧ–

1) ಶ್ರೀ ಮಹಾದೇವ ತಂದೆ ಮರಿಗೌಡ ಪಾಟೀಲ .....ಎದುರುದಾರ

ಸಾರ್ವಜನಿಕ ನೋಟಿಸು

ಈ ಜಾಹೀರಾತು ನೋಟೀಸು ಮೂಲಕ ತಿಳಿಸುವದೇನೆಂದರೆ.

ಈ ಮೇಲಿನ ಪ್ರಕರಣವನ್ನು ಎದುರುದಾರನ ವಿರುದ್ಧ ಅರ್ಜಿದಾರ ನಂ. 2 ಮತ್ತು 3 ರವರ ಸಂರಕ್ಷಣಾ ಆದೇಶ ಮಂಜೂರ ಮಾಡುವ ಬಗ್ಗೆ ಪ್ರಸುತ್ತ ಪ್ರಕರಣವನ್ನು ಮಾಡಿಕೊಂಡಿದ್ದು ಇರುತ್ತದೆ. ಆದ್ದರಿಂದ ಈ ವಿಷಯಕ್ಕೆ ಸಂಬಂದಪಟ್ಟ ಹಾಗೆ ಎದುರುದಾರ ಶ್ರೀ ಮಹಾದೇವಪ್ಪ ತಂದೆ ಮರಿಗೌಡ ಪಾಟೀಲ, ವಯಾ: ವಯಸ್ಕ ಉದ್ಯೋಗ: ಶೇತ್ಕಿ ಸಾ॥ ಕಲ್ಲಾಪೂರ ತಾ॥ ಸವದತ್ತಿ ಜಿ॥ ಬೆಳಗಾವಿ. ರವರು ದಿನಾಂಕ:– 25/07/2026 ರಂದು ಮುಂಜಾನೆ 10–30 ಘಂಟೆಗೆ ಮೇಲೆ ಸೂಚಿಸಿದ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ತಮ್ಮ ಪರ ನ್ಯಾಯವಾದಿಗಳ ಮುಖಾಂತರ ದಾಖಲೆಗಳೊಂದಿಗೆ ಹಾಜರಾಗಿ ತಕರಾರನ್ನು/ಹೇಳಿಕೆಗಳನ್ನು ಸಲ್ಲಿಸತಕ್ಕದ್ದು. ಸದರ ತಾರೀಖಿನ ದಿನದಂದು ಯಾರು ತಕರಾರುಗಳನ್ನು ಸಲ್ಲಿಸದೇ ಇದ್ದ ಪಕ್ಷದಲ್ಲಿ ಪ್ರಕರಣವನ್ನು ದಾಖಲೆಗಳ ಆಧಾರದಿಂದ ತೀರ್ಮಾನಿಸಲಾಗುವುದು.

ಈ ದಿನ ದಿನಾಂಕ : 15/06/2026 ರಂದು ನ್ಯಾಯಾಲಯದ ಆದೇಶದ ಮೇರೆಗೆ ಸಹಿ ಶಿಕ್ಕಾದೊಂದಿಗೆ ಜಾರಿ ಮಾಡಿದೆ.
ರಾಮದುರ್ಗ
ದಿನಾಂಕ:– 10–06–2026

ಸಹಿ/– ಹಿರಿಯ ಶಿರಸ್ತೇದಾರರು
ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ರಾಮದುರ್ಗ
ಸಹಿ/– (ಎನ್.ಎನ್. ಸಂಗಳ)
ಅರ್ಜಿದಾರರ ಪರ ವಕೀಲರು

ಕ್ರಿ.ಮಿ.ನಂ: 537/2026
ರಾಣೇಬೆನ್ನೂರ 1ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಇವರ ನ್ಯಾಯಾಲಯದಲ್ಲಿ,

ಅರ್ಜಿದಾರರು: ಸೈಯದಲಿ ತಂದೆ ಫೀರಸಾಬ ಸಿರಗೇರಿ ವಯಾ:25ವರ್ಷ, ಉದ್ಯೋಗ:ಕೂಲಿ ಸಾ॥ಮುದೇನೂರು ತಾ॥ರಾಣೇಬೆನ್ನೂರು ಜಿ॥ ಹಾವೇರಿ

ವಿರುದ್ಧ

ಎದುರುಗಾರರು :1)ಉಪ ತಹಶೀಲ್ದಾರ ನಾಡಕಛೇರಿ ಕುಪ್ಪೆಲೂರು ತಾ॥ರಾಣೇಬೆನ್ನೂರ, ಜಿ॥ ಹಾವೇರಿ.

'ಇಸ್ತಿಯಾರ ನಾಮೆ'

ಇದರಲ್ಲಿ ಅರ್ಜಿದಾರರ ತಾಯಿಯಾದ ಆಶಾ ಕೋಂ ಫೀರಸಾಬ ಸಿರಗೇರಿ ಇವರು ದಿನಾಂಕ 03–08–2002ರಂದು ರಾಣೇಬೆನ್ನೂರ ತಾಲೂಕ ಮುದೇನೂರು ಗ್ರಾಮದಲ್ಲಿ ಮರಣಹೊಂದಿರುತ್ತಾರೆ. ಇವರ ಮರಣದ ದಿನಾಂಕವನ್ನು ಎದುರುಗಾರರ ಕಛೇರಿಯ ಜನನ–ಮರಣ ನೋಂದಣಿವಹಿಯಲ್ಲಿ ನೋಂದಣಿ ಮಾಡಿಕೊಳ್ಳುವುದು ಅತೀ ಅವಶ್ಯ ಇದ್ದು ಇದರ ಬಗ್ಗೆ ಸಾರ್ವಜನಿಕರ ತಂಟೆ ವ ತಕರಾರು ಇದ್ದಲ್ಲಿ ದಿನಾಂಕ:15/07/2026 ರಂದು ಬೆಳಿಗ್ಗೆ 10–30 ಗಂಟೆಗೆ ಮಾನ್ಯ ನ್ಯಾಯಾಲಯ ದಲ್ಲಿಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಮಾನ್ಯ ನ್ಯಾಯಾಲಯದವರು ಮುಂದಿನ ಆದೇಶ ಮಾಡುತ್ತಾರೆ ಅಂತಾ ಕೊಟ್ಟ ಸಾರ್ವಜನಿಕ ತಿಳುವಳಿಕೆ ನೋಟೀಸು

ಈ ಹೊತ್ತು ನ್ಯಾಯಾಲಯದ ಶೀಲು ವ ಮೋಹರು ಹಾಕಿ 15–06–2026 ಕೊಡಲ್ಪಟ್ಟಿದೆ
ಸ್ಥಳ:ರಾಣೇಬೆನ್ನೂರು
ದಿನಾಂಕ:15–06–2026

ನ್ಯಾಯಾಲಯದ ಆದೇಶದ ಮೇರಿಗೆ
ಸಹಿ/–ಶಿರಸ್ತೇದಾರರು ಮಾನ್ಯ 1ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ.ಎಮ್.ಎಫ್.ಸಿ.ರಾಣೇಬೆನ್ನೂರು
ಸದರಿಯವರ ಪರಿಚಯವಿದೆ
ಸಹಿ/–ಹೆಚ್.ಎನ್.ಬೆಳವಿಗಿ ವಕೀಲರು ರಾಣೆಬೆನ್ನೂರು

ಕ್ರಿಮಿನಲ್ ಮಿಸಲೇನಿಯಸ್ ನಂ :542/2026
ಮೇ॥ದಿವಾಣಿ ನ್ಯಾಯಾಧೀಶರು ವ ಜೆ.ಎಮ್.ಎಫ್.ಸಿ ಸವಣೂರ ಇವರ ನ್ಯಾಯಾಲಯಕ್ಕೆ

ಅರ್ಜಿದಾರರು:1)ಶ್ರೀಮತಿ ಶೇಕವ್ವ ಕೋಂ ಚನಬಸಪ್ಪ ಶಿಸುನಾಳಸಾ:ನಾಯಿಕೆರೂರ ತಾ:ಸವಣೂರ ಜಿ:ಹಾವೇರಿ ಹಾಗೂ ಇತರರು

ವಿರುದ್ಧ

ಎದುರುಗಾರರು: ಮೇ॥ತಹಶೀಲ್ದಾರರು ಸವಣೂರ ಜನನ ವ ಮರಣ ನೋಂದಣಿ ಅಧಿಕಾರಿಗಳು ಸವಣೂರ ತಾ:ಸವಣೂರ ಜಿ:ಹಾವೇರಿ

ಸಾರ್ವಜನಿಕ ನೋಟೀಸ್

ಅರ್ಜಿದಾರ ನಂ 1ನೇದವರ ಅಕ್ಕ ಹಾಗೂ ಅರ್ಜಿದಾರ ನಂ 2ರಿಂದ 4ನೇದವರ ತಾಯಿಯವರಾದ ಶ್ರೀಮತಿ ಕಾಶವ್ವ ಕೋಂ ಚನಬಸಪ್ಪ ಶಿಸುನಾಳಇವರು ಸವಣೂರ ತಾಲೂಕ ಪೈಕಿ ನಾಯಿಕೆರೂರ ಗ್ರಾಮದ ಅರ್ಜಿದಾರ ನಂ1 ರಿಂದ 4ನೇದವರ ಮನೆಯಲ್ಲಿ ದಿನಾಂಕ: 28–07–2002 ರಂದು ಮರಣ ಹೊಂದಿರುವುದಾಗಿ ಸದರ ಎದುರುಗಾರರು ತಮ್ಮ ಮರಣದ ನೋಂದಣೆ ಖಡತದಲಿ ಮರಣ ದಿನಾಂಕವನ್ನು ನೋಂದಾಯಿಸಿ ಕೊಳ್ಳುವಂತೆ ಎದುರುಗಾರರ ವಿರುದ್ಧ ಆದೇಶ ಪಡೆಯುವ ಕುರಿತು ಅರ್ಜಿಯನ್ನು ಮೇ॥ ಕೋರ್ಟಿಗೆ ಸಲ್ಲಿಸಿದ್ದು ಇರುತ್ತದೆ.

. ಕಾರಣ ಸದರ ಅರ್ಜಿಗೆ ಯಾರಾದರು ತಕರಾರು ವಗೈರೆ ಇದ್ದಲ್ಲಿ ಅಂತವರು ದಿನಾಂಕ:25–07–2026ರಂದು ಮುಂಜಾನೆ 10=30 ಗಂಟೆಗೆ ಮೇಲ್ಕಾಣಿಸಿದ ಪ್ರಕರಣದಲ್ಲಿ ತಾವಾಗಲಿ ವ ತಮ್ಮ ಪರ ವಕೀಲರ ಮೂಲಕ ವಾಗಲಿ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸತಕ್ಕದ್ದು. ಇಲ್ಲದೆ ಇದ್ದಲ್ಲಿ ಕಾನೂನು ಪ್ರಕಾರ ಮುಂದಿನ ಆದೇಶ ಮಾಡಲಾಗುತ್ತದೆ ಅಂತಾ ದಿನಾಂಕ:15–06–2026 ರಂದು ನ್ಯಾಯಾಲಯದ ಮೋಹರಿನೊಂದಿಗೆ ಆದೇಶ ಹೊರಡಿಸಲಾಗಿದೆ.
ಸ್ಥಳ:ಸವಣೂರ
ದಿನಾಂಕ:15–06–2026

ಸಹಿ/–ಶಿರಸ್ತೆದಾರರು ಮೇ॥ ದಿವಾಣಿ ವ ಜೆ.ಎಮ್.ಎಫ್.ಸಿ ನ್ಯಾಯಾಲಯ ಸವಣೂರ
ಸಹಿ/–ಶ್ರೀ ಎಮ್.ಎಸ್.ಮತ್ತೂರ
ಅರ್ಜಿದಾರರ ಪರ ವಕೀಲರು,ಸವಣೂರ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ ಸಾಮಾಜಿಕ ಅರಣ್ಯ ವಿಭಾಗ, ರಾಯಚೂರು

ಸಂಖ್ಯೆ:ಸಅಸಂ–ಸಾಅವಿರಾ– KPPP.ಪೋ.ಟೆಂಡರ– ಸಿಆರ್– /2026–27 ದಿನಾಂಕ:12–06–2026

ಸಂಕ್ಷಿಪ್ತ ಅಲ್ಪಾವಧಿ ಟೆಂಡರ ಪ್ರಕಟಣೆ

(**KPPP** ಎರಡನೇ ಆವೃತ್ತಿಯಲ್ಲಿನ ಪೋರ್ಟಲ್ ಮೂಲಕ) (ಮೊದಲನೇಯ ಬಾರಿಗೆ)

2026–27 ನೇ ಸಾಲಿನಲ್ಲಿ ರಾಯಚೂರು ಸಾಮಾಜಿಕ ಅರಣ್ಯ ವಿಭಾಗದ ವ್ಯಾಪ್ತಿಗೆ ಒಳಪಡುವ ರಾಯಚೂರು ಸಾಮಾಜಿಕ ಅರಣ್ಯ ವಲಯದಲ್ಲಿ 2026–27 ನೇ ಸಾಲಿನಲ್ಲಿ ಪ್ರಾದೇಶಿಕ ಅರಣ್ಯ ವಿಭಾಗದಲ್ಲಿ ನೊಂದಾಯಿತ ಅರಣ್ಯ ಗುತ್ತಿಗೆದಾರರಿಂದ ಮಹಾನಗರ ಪಾಲಿಕೆಯ 15 ಹಣಕಾಸು ಯೋಜನೆಯಡಿಯ ಲೆಕ್ಕಶೀರ್ಷಿಕೆಗಳಡಿಯಲ್ಲಿ ಅರಣ್ಯೀಕರಣ ಕಾಮಗಾರಿಗಳಿಗಾಗಿ :http://kppp.karnataka.gov.in) ಪೋರ್ಟಲ್ ನಲ್ಲಿ ದಿನಾಂಕ:12–06–2026 ರಿಂದ ದಿನಾಂಕ:22–06–2026 ರವರೆಗೆ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ ಕರೆಯಲಾಗಿದೆ. ದಿನಾಂಕ:23–06–2026 ರಂದು ತಾಂತ್ರಿಕ ಬಿಡ್. ಆರ್ಥಿಕ ಬಿಡ್ ದಿನಾಂಕ:24–06–2026 ರಂದು ತೆರೆಯಲಾಗುವುದು.

ಹೆಚ್ಚಿನ ವಿವರಗಳಿಗೆ ಕಛೇರಿಯ ನಾಮಫಲಕಕ್ಕೆ ಲಗತ್ತಿಸಿರುವ ಟೆಂಡರ ಪ್ರಕಟಣೆಯನ್ನು ಕಛೇರಿ ಸಮಯದಲ್ಲಿ ನೋಡಬಹುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು
ಸಾಮಾಜಿಕ ಅರಣ್ಯ ವಿಭಾಗ, ರಾಯಚೂರು

DIP/RCR/102/KSMC&A/104/2026-27

ಕರ್ನಾಟಕ ಸರಕಾರ
(ಜಲ ಸಂಪನ್ಮೂಲ ಇಲಾಖೆ)
ನೀರಾವರಿ ಯೋಜನೆಗಳು, ಕಾಡಾ ವಿಭಾಗ, ಕಲಬುರಗಿ
(ವಿಳಾಸ : ಪ್ಲಾಟ ನಂ.21, ಕೋಟನೂರ ಧರಿಯಾಪೂರ ರಸ್ತೆ, ಜಿ. ಡಿ. ಎ. ಲೇಔಟ್, 3ನೇ ಮುಖ್ಯ ರಸ್ತೆ, "ಬಿ" ಬ್ಲಾಕ್, ಕಲಬುರಗಿ–585102)

ಸಂ.ಕಾಡಾವಿಭಾಗ/ತಾ.ಶಾ–4/ಹೊರಗುತ್ತಿಗೆ & ವಾಹನ/2026–27/242&243 ದಿನಾಂಕ:15.06.2026

:: ಇ–ಪ್ರೊಕ್ಯೂರ್ಮೆಂಟ್ ಟೆಂಡರ ಪ್ರಕಟಣೆ ::

1) ಕಾಮಗಾರಿಯ ವಿವರ: 1. 2026–27ನೇ ಸಾಲಿನಲ್ಲಿ ಕಲಬುರಗಿ ಕಾಡಾ ಪ್ರಾಧಿಕಾರದ ವಿವಿಧ ಕಚೇರಿಗಳಿಗೆ 8 ಗ್ರೂಪ್–ಡಿ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಒದಗಿಸುವುದು. 2. 2026–27 ನೇ ಸಾಲಿನಲ್ಲಿ ಕಲಬುರಗಿ ಕಾಡಾ ಪ್ರಾಧಿಕಾರದ ವಿವಿಧ ಕಚೇರಿಗಳಿಗೆ ಬಾಡಿಗೆ ಆಧಾರದ ಮೇಲೆ ವಾಹನ ಪೂರೈಸುವುದು. 2) ಲೆಕ್ಕ ಶೀರ್ಷಿಕೆ: 2705–115 ಮತ್ತು 4705, 3) ಟೆಂಡರಿಗಿಟ್ಟ ಮೊತ್ತ : 1. ರೂ. **18,65,871.70** (ಜಿ.ಎಸ್.ಟಿ ರಹಿತ), 2.ಕನಿಷ್ಟ ರೂ. 35,000.00/ಪ್ರತಿ ತಿಂಗಳು ಗರಿಷ್ಟ ರೂ. 40,000/ಪ್ರತಿ ತಿಂಗಳು (ಜಿ.ಎಸ್.ಟಿ ರಹಿತ), 4 ಗುತ್ತಿಗೆದಾರರ ಅರ್ಹತೆ: 1. ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿತರಾಗಿರಬೇಕು. 2. ಹಳದಿ ಬೋರ್ಡ್ ನೋದಾಯಿತ ಇರುವ ವಾಹನಗಳ ಮಾಲಿಕರು, 5) ಈ–ಸಂಗ್ರಹಣೆ ಪೋರ್ಟಲ್‌ಗೆ ಪ್ರವೇಶಕ್ಕಾಗಿ ಕಾಲಾವಧಿ: **16.06.2026 ರಿಂದ 30.06.2026 ಸಾಯಂಕಾಲ 5.00 ಗಂಟೆ ವರೆಗೆ,** 6) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ: ಟೆಂಡರ್ ಫಾರಂ ಬೆಲೆ ಇ–ಪ್ರೊಕ್ಯೂರ್ಮೆಂಟ್ ನಲ್ಲಿ ನಮೂದಿಸಿದಂತೆ, 7) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: **30.06.2026 ಸಾಯಂಕಾಲ 5.00 ಗಂಟೆವರೆಗೆ,** 8) ಟೆಂಡರ್ ತೆರೆಯುವ ದಿನಾಂಕ: **02.07.2026 ಬೆಳಿಗ್ಗೆ 11.00 ಗಂಟೆಗೆ,** 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಹಕ ಅಭಿಯಂತರರು, ನೀರಾವರಿ ಯೋಜನೆಗಳು, ಕಾಡಾ ವಿಭಾಗ, ಕಲಬುರಗಿ, 10) ಅಂತರಜಾಲ ತಾಣದ ವಿಳಾಸ: https://kppp.karntaka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ನೀರಾವರಿ ಯೋಜನೆಗಳು ಕಾಡಾ ವಿಭಾಗ, ಕಲಬುರಗಿ,

ವಾ.ಸಾ.ಸಂ.ಇ/ಕಲಬುರಗಿ/216/ಕೆ.ಎಸ್.ಎಂ.ಸಿ.&ಎ/2026–27

CHANGE OF NAME

I, **DEEPA VISHAL KUMAR KITTUR** (Old Name) Resident of HIG 1176/D SBM Colony Aravinda Nagara Mysore 570023 Karnataka, have changed my name as **DEEPA VISHAL KITTUR** (New Name) henceforth I will be called and recognized by new name for all future purposes, dated: 15/06/2026.

CHANGE OF NAME

I, **AMEERBI MAQBOOL AHMED SAVANUR** (Old Name) Resident of H No: 367/2, At Post: Tilavalli Tluq: Hangal: 581120 in the Distrot of Haveri in Karnataka State, have changed my name as **AMEERABANU SAVANUR** (New Name) for all purposes, vide affidavit dated: 15/06/2026 before notary **T. G. Balannavar.**

CHANGE OF NAME

I, **PRANATH BAGMAR** (Old Name) Resident of 6672B3, K C Rani Road, 8th Cross, Gadag - 582101, Karnataka, India, have changed my name as **PRANATH SHAILESH BAGMAR** (New Name) henceforth I will be called and recognized by new name for all future purposes, dated: 15/06/2026.

CHANGE OF NAME

I, **REHANA SHAIK FAIROZ** (Old Name) R/o: No 1039 Pipeline C main Road 1stage 4 phase Yeshwathpura Bangalore 560022 , have changed my name as **REHANA FAIROZ SHAIKH** (New Name) henceforth I will be called and recognized by new name for all future purposes, dated: 15/06/2026.

CHANGE OF NAME

I, **KAUSAR BANU MOHAMMED ALI UMARA** (Old Name) R/o: 160 Noorani Mohalla Chandavar Honnavar 581323 Dist Uttara Kannada Karnataka, have changed my name as **KAUSAR BANU MOHAMMED KABEER SHAIKH** (New Name) henceforth I will be called and recognized by new name for all future purposes, dated: 15/06/2026.

CHANGE OF NAME

I, **RUKIYA FARHANA** (Old Name) R/o: Narmin, Azad Nagar 1st Cross, Bhatkal - 581320, Uttara Kannada, Karnataka, have changed my name as **RUKIYA FARHANA SIDDIQUE W/o: MOHAMMED FAHEEM** (New Name) henceforth I will be called and recognized by new name for all future purposes, dated: 15/06/2026.

CHANGE OF NAME

I, **NAGINA MOHAMMED RAFIQ PATHAN** (Old Name) Residing At #5th Cross Jannat Nagar, Dharwad, Dist Dharwad, have changed my name as **NAGINA NAZEER BIJAPUR** (New Name) for all purposes, vide affidavit dated: 08/06/2026 before notary **Esthar Rani.**

CHANGE OF NAME

I, **GOUSE SAB** (Old Name) Resident of 3rd Cross, Vivekanand Store Opp: S. N. Nagar, Sagar, Shivamogga, Karnataka 577401, have changed my name as **MOHAMMED GOUSE** (New Name) for all purposes affidavit Dtd.:15-06-2026 sworn before notary **S. G. Hedge.**

CHANGE OF NAME

I, **BI BI FATIMA ABDUL REHMAN SAB** (Old Name) Resident of Samshi, Taluk : Honnavar, Dist. : Uttara Kannada, Karnataka State, Pin code : 581334, India, have changed my name as **BIBI FATIMA MUSHRAF KHAN** (New Name) for all purposes affidavit Dtd.:15-06-2026 sworn before notary **S. G. Hedge.**

CHANGE OF NAME

I, **ABDULWAHAB JUNEDIPATEL** (Old Name) Resident of 1453, Bedkihal, Belagavi - 591214, have changed my name as **ABDULWAHAB ABDULKADAR JUNEDIPATEL** (New Name) henceforth I will be called and recognized by new name for all future purposes, dated: 15/06/2026.

CHANGE OF NAME

I, **KURUSIDABEGAM KHAJAMAINU VANTI (Old Name)**, have changed my name as **KHURASHIDABEGAM ONTI (New Name)** Henceforth I will be recognized and called by the new name for all purposes. Occ:Housewife, R/o Rajapoota Oni, Betageri, Gadag, Tq:/Dist:Gadag, State: Karnataka. Submitted an affidavit dated 15.06.2026 through M.M. Hiremath, Notary, Gadag.

CHANGE OF NAME

I, **KHAJAMAINU DAVALSAB VANTI (Old Name)** have changed my name as **KHAJAMAINU ONTI (New Name)** Henceforth I will be recognized and called by the new name for all purposes. R/o Rajapoot Oni, Betageri, Gadag, Tq:/Dist:Gadag, State: Karnataka. Submitted an affidavit dated 15.06.2026 through M.M. Hiremath, Notary, Gadag.

CHANGE OF NAME

I, **FARZANA BEGUM GARAG (old name)** R/o H. No 135/2, Pattar Phod Galli, Bhandiwad Base, Hubballi Dist: Dharwad, have changed my name to **FARZANA BEGUM HULBANNI (new name)** Vide Affidavit Sworn Before Notary Patil V.H. on 15-06-2026

CHANGE OF NAME

I, **NAJMA IMAMSAB HUNGUND (old name)** R/o #6/1, Mantur Road, Tabib Land, Hubli-580020 have changed my name to **NAJMA (new name)** Vide Affidavit Sworn Before Notary T.G. Balannavar on 15-06-2026

CHANGE OF NAME

I, **AMANULLAH TAILOR (old name)** R/o #23, Kakar Street Camp, Belgaum, Hukkeri, Belgavai-590001 have changed my name to **AMANULLAH MOHAMMED YUSUF SHAIKH (new name)** Vide Affidavit Sworn Before Notary T.G. Balannavar on 15-06-2026

CHANGE OF SURNAME

I, AJEET S/O NINGAPPA MURABATTI, aged 24 years, residing at Gothe Village, Taluk Jamkhandi, District Bagalkot, Karnataka, have changed my surname from "MURABATTI" to"MANTOOR" by way of an affidavit sworn before a Notary Public on 02/06/2026. Here after, I shall be known and called as AJEET NINGAPPA MANTOOR for all purposes.
Sd/-AJEET NINGAPPA

CHANGE OF SURNAME

I,JAYASHREE W/O NINGAPPA MURABATTI, aged 47 years, residing at Gothe Village, Taluk Jamkhandi, District Bagalkot, Karnataka, have changed my surname from "MURABATTI" to "MANTOOR" by way of an affidavit sworn before a Notary Public on 02/06/2026. Hereafter,I shall be known and called as JAYASHREE NINGAPPA MANTOOR for all purposes.
Sd/-JAYASHREE W/O NINGAPPA MANTOOR

CHANGE OF NAME

I, **SAMEENA BEGUM IMAM SAHEB HUNGUND (old name)** R/o #25, C/o B M Karajagi, Gayatri Colony, Keshwapur, Hubli-580023 have changed my name to **SAMEENA BEGUM RIYAJAHMAD BHUYAR (new name)** Vide Affidavit Sworn Before Notary T.G. Balannavar on 15-06-2026

CHANGE OF NAME

I, **MOHAMMAD YUSUF MOHAMMAD MUJAHED (old name)** R/o #23, Kakar Street Camp, Belgaum, Hukkeri, Belgavai-590001 have changed my name to **MOHAMMED MUJAHID MOHAMMED YUSUF SHAIKH (new name)** Vide Affidavit Sworn Before Notary T.G. Balannavar on 15-06-2026

ಕರ್ನಾಟಕ ಸರ್ಕಾರ

ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಹೊಸಪೇಟೆ

ಸಂಖ್ಯೆ:ಸಾಆಹೊ/ಹೊ.ಗು.ಟೆಂಡರು/834/2025-26 ದಿನಾಂಕ:11.06.2026

ಇ-ಟೆಂಡರ್ ಪ್ರಕಟಣೆ

2026-27 ನೇ ಸಾಲಿಗಾಗಿ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಹೊಸಪೇಟೆಯಲ್ಲಿ ಖಾಲಿ ಇರುವ 26 ಗ್ರೂಪ್ ಡಿ ಹುದ್ದೆಗಳಿಗೆ ಶೇ 40% ಗ್ರೂಪ್-ಡಿ ಮತ್ತು ಶೇ 40% 10 ನಾನ್‌ಕ್ಲಿನಿಕ್ ಒಟ್ಟು 20 ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಇ-ಪ್ರೋಕ್ಯೂರ್ಮೆಂಟ್ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಹಾಗೂ ಅರ್ಹವುಳ್ಳ ಟೆಂಡರುದಾರರು ನಿಗದಿತ ಸಮಯದೊಳಗೆ ಇ-ಪ್ರೋಕ್ಯೂರ್ಮೆಂಟ್ ವೇದಿಕೆ ಮೂಲಕ ಟೆಂಡರುಗಳನ್ನು ಸಲ್ಲಿಸಲು ಕೋರಿದೆ.

e-Tender No.: **GHH/TENDER/834 /2025-26.** E-Procurement Tender No: **DHFWS/2025-26/SE2085 CALL-3.** Commencement of downloading of e-Tender forms from website **: http:// kppp.karnataka.gov.in** ದಿನಾಂಕ:-11-06-2026 ರಿಂದ 30-06-2026 ರಂದು ಸಂಜೆ 4.30 ಗಂಟೆಯವರೆಗೆ. Last Date for seeking clarification if any: ದಿನಾಂಕ: 30-06-2026 ರಂದು ಬೆಳಗ್ಗೆ 11.00 ಗಂಟೆಯವರೆಗೆ Last date for uploading of Tender in e-procurement platform: ದಿನಾಂಕ:01-07-2026 ರಂದು ಸಂಜೆ 4.30 ಗಂಟೆಯವರೆಗೆ. Date, Time & Venue of Opening of Tenders: ದಿನಾಂಕ:02-07-2026 ರಂದು ಸಂಜೆ 04.30 ಗಂಟೆಗೆ, ಶಸ್ತ್ರಚಿಕಿತ್ಸಕರು, ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಹೊಸಪೇಟೆ ಇವರ ಕಛೇರಿಯಲ್ಲಿ ಇ-ಪ್ರೋಕ್ಯೂರ್ಮೆಂಟ್ ವೇದಿಕೆ ಮೂಲಕ ತೆರೆಯಲಾಗುವುದು. EMD : **Rs.1,20,000/-**. ವಾರ್ಷಿಕ ಟೆಂಡರ್ ಮೊತ್ತ: **60,00,000/-**

ಇ-ಪ್ರೋಕ್ಯೂರ್ಮೆಂಟ್‌ನಲ್ಲಿ ನೋಂದಾಯಿಸಿದ ಟೆಂಡರ್‌ದಾರರು ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಇ.ಎಂ.ಡಿ, ಟೆಂಡರು ಫಾರಂ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರೋಕ್ಯೂರ್ಮೆಂಟ್ ಪೋರ್ಟಲ್ ವೆಬ್‌ಸೈಟ್ **http:// kppp.karnataka.gov.in** ಮೂಲಕ ಮಾಹಿತಿ ಪಡೆಯಬಹುದು ಅಥವಾ ಕಛೇರಿಯ ಸಮಯದಲ್ಲಿ ಈ ಕೆಳಗೆ ಸಹಿ ಮಾಡಿದವರನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/-ಶಸ್ತ್ರಚಿಕಿತ್ಸಕರು, ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಹೊಸಪೇಟೆ.

ವಾ.ಸಾ.ಸಂ.ಇ/ವಿಜಯನಗರ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/140

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಮೇಕೆದಾಟು ಯೋಜನಾ ವಿಭಾಗ, ಹಾರೋಬೆಲೆ.
ಬೆಂಗಳೂರು ದಕ್ಷಿಣ ಜಿಲ್ಲೆ. ಇ-ಮೇಲ್ : eemekedatu@gmail.com

ಟೆಂಡರ್ ಪ್ರಕಟಣೆ ಸಂಖ್ಯೆ : 01/2026-27 ದಿನಾಂಕ : 12-06-2026

ಟೆಂಡರ್ ಪ್ರಕಟಣೆ

ಕಾವೇರಿ ನೀರಾವರಿ ನಿಗಮ ನಿಯಮಿತದ ಅಡಿಯಲ್ಲಿ ಅರ್ಹ ಗುತ್ತಿಗೆದಾರರಿಂದ **https://kppp.karnataka.gov.in** ಮುಖಾಂತರ ಕನಕಪುರ ತಾಲ್ಲೂಕು ವ್ಯಾಪ್ತಿಯಲ್ಲಿ 4701 ಲೆಕ್ಕ ಶೀರ್ಷಿಕೆಯಡಿಯಲ್ಲಿ ರಸ್ತೆ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ ಹಾಗೂ 2701 ಲೆಕ್ಕ ಶೀರ್ಷಿಕೆಯಡಿಯ ಮಾನವ ಸಂಪನ್ಮೂಲ ಒದಗಿಸುವ ಸೇವೆಗಾಗಿ ಟೆಂಡರ್ ಅನ್ನು ಆಹ್ವಾನಿಸಲಾಗಿರುತ್ತದೆ.

ಕಾಮಗಾರಿಗಳ ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ, ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ, ಇ.ಎಂ.ಡಿ. ಮುಂತಾದ ಇತರೆ ಮಾಹಿತಿಗಳನ್ನು **https://kppp.karnataka.gov.in** ಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಮೇಕೆದಾಟು ಯೋಜನಾ ವಿಭಾಗ,
ಬೆಂಗಳೂರು ದಕ್ಷಿಣ ಜಿಲ್ಲೆ, ಹಾರೋಬೆಲೆ.

ಡಿಐಪಿಆರ್/ರಾಮನಗರ/108/ಮಣಿಪಾಲ್/2026-27

ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿದ್ಯುತ್ ವಿಭಾಗ, ಕೆ.ಆರ್. ವೃತ್ತ, ಬೆಂಗಳೂರು.
ದೂರವಾಣಿ ಸಂಖ್ಯೆ: 080-22112809

ಸಂ.ಕಾ.ಇಂ(ವಿ)/ಲೋ.ಇ/ವಿದ್ಯುತ್/401/2026-27 ದಿನಾಂಕ: 10.06.2026

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು ಇವರ ವತಿಯಿಂದ ಈ ಕೆಳಕಂಡ ಕಾಮಗಾರಿಗಳನ್ನು **KW-1 STD** ಷರತ್ತುಗೊಳಪಟ್ಟಂತೆ ಟೆಂಡರ್‌ನ ಮೊದಲನೇ ಕರೆಯನ್ನು ಕೆ.ಪಿ.ಪಿ.ಪಿ ಮೂಲಕ ಆಹ್ವಾನಿಸಲಾಗಿದೆ. ಕಾಮಗಾರಿಯ ವಿವರ ಕೆಳಕಂಡಂತಿವೆ.

ಕ್ರಸಂ.	ಕಾಮಗಾರಿಯ ಹೆಸರು	ಕಾಮಗಾರಿಗೆ ಇಟ್ಟಿರುವ ಮೊತ್ತ (ರೂ. ಲಕ್ಷಗಳಲ್ಲಿ)
1	Electrification works to proposed class room secondary school at Doddalahalli, Kanakapura Taluk, Bengaluru South Dist. PWD/2025-26/EL/WORK_INDENT33572	7.46
2	Construction of Government Primary School at Doddalahalli, Kanakapura Taluk, Bengaluru South Dist. (Electrification Work) PWD/2025-26/EL/WORK_INDENT36073	5.23

ಮೇಲಿನ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ವೆಬ್‌ಸೈಟ್ **https://kppp.karnataka.gov.in** ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು **ದಿನಾಂಕ: 15.06.2026 ರಿಂದ 23.06.2026 16:00 ಗಂಟೆಯವರೆಗೆ** ಹಾಗೂ ಭರ್ತಿ ಮಾಡಿದ ಟೆಂಡರ್ ಹಿಂತಿರುಗಿಸುವ **ದಿನಾಂಕ: 23.06.2026 ರಂದೆ 16:00 ಗಂಟೆಯವರೆಗೆ** ನಿಗದಿಪಡಿಸಲಾಗಿದೆ. ಟೆಂಡರ್ ವಿವರಗಳನ್ನು **Karnataka Public Procurement Portal** ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು(ವಿ).

ವಾಸಾಸಂಇ/ಉನಿ-ಸಿ.ಪಿ/1157/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ

ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಸಮಗ್ರ ಶಿಕ್ಷಣ ಕರ್ನಾಟಕ

ನಂ. 205, ಜಿಲ್ಲಾ ಆಡಳಿತ ಭವನ, 2ನೇ ಮಹಡಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ
ದೂರವಾಣಿ : 08226-224429 ಇ-ಮೇಲ್ : dpocham@gmail.com

ಸಂಖ್ಯೆ : ಸಶಿಕ/ಸಿ3/ಕೆಕೆಜಿಬಿವಿ ಆ.ಪೂ.ಟೆಂ/01/2026-27 ದಿನಾಂಕ : 12.06.2026

: ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ :

ಸಮಗ್ರ ಶಿಕ್ಷಣ ಕರ್ನಾಟಕ ಕಾರ್ಯಕ್ರಮದಡಿಯಲ್ಲಿ ಕೆಕೆ.ಜಿ.ಬಿ.ವಿ ವಸತಿ ನಿಲಯ ಚಾಮರಾಜನಗರ ಟೌನ್, ಗುಂಡ್ಲುಪೇಟೆ(ನಿಟ್ರೆ), ಕೊಳ್ಳೇಗಾಲ (ಸಿಂಗನಲ್ಲೂರು) ಇಲ್ಲಿನ ವಿದ್ಯಾರ್ಥಿನಿಯರಿಗೆ ಆಹಾರ ಪೂರೈಕೆ ಸಂಬಂಧ ಒಟ್ಟು ಅಂದಾಜು ಮೊತ್ತ ರೂ. 41.25 ಲಕ್ಷಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್‌ನ್ನು ಕರೆಯಲಾಗಿದೆ. ಟೆಂಡರ್‌ನ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಮತ್ತು ತಿರಸ್ಕರಿಸುವ ಹಕ್ಕನ್ನು ಟೆಂಡರ್ ಪ್ರಾಧಿಕಾರಿಯು ಹೊಂದಿರುತ್ತಾರೆ. ಆಸಕ್ತ ಮತ್ತು ಅರ್ಹ ಬಿಡ್‌ದಾರರು ಆನ್‌ಲೈನ್ ಮೂಲಕ ದಿನಾಂಕ : 12.06.2026ರಿಂದ ದಿನಾಂಕ : 22.06.2026ರ ಸಾಯಂಕಾಲ 04.30 ಗಂಟೆಯೊಳಗೆ ಅಪ್‌ಲೋಡ್ ಮಾಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ **www.eproc.karnataka.gov.in** ನಲ್ಲಿ ನೋಡಬಹುದಾಗಿದೆ.

ಸಹಿ/- ಉಪನಿರ್ದೇಶಕರು ಹಾಗೂ ಪದನಿಮಿತ್ತ
ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು,
ಸಮಗ್ರ ಶಿಕ್ಷಣ ಕರ್ನಾಟಕ,
ಚಾಮರಾಜನಗರ ಜಿಲ್ಲೆ, ಚಾಮರಾಜನಗರ

ಸಂ : ವಾಸಾಸಂಇ:ಚಾನಗರ:174:2026-27

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)
ಗ್ರಾಮೀಣಾಭಿವೃದ್ಧಿ ಭವನ, 4 ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು - 560 009

ಸಂ: ಕೆಆರ್‌ಐಡಿಎಲ್/ಡಬ್ಲ್ಯೂಕೆಎಸ್/ಟಿಎನ್‌ಡಿ/ಕಂಪ್ಯೂಟರ್-ಐಟಂಗಳು/2026-27 ದಿ: 12.06.2026

ಆಸಕ್ತಿ ವ್ಯಕ್ತಪಡಿಸುವಿಕೆ (ಇಓಐ)ಗೆ ತಿದ್ದುಪಡಿ

ಪ್ರಕಟಣೆ ಸಂಖ್ಯೆ: ಕೆಆರ್‌ಐಡಿಎಲ್/ಡಬ್ಲ್ಯೂಕೆಎಸ್/ಟಿಎನ್‌ಡಿ/ಕಂಪ್ಯೂಟರ್-ಐಟಂಗಳು/2026-27 ದಿನಾಂಕ: 06.06.2026 ಮತ್ತು ಟೆಂಡರ್ ಸಂಖ್ಯೆ: ಕೆಆರ್‌ಐಡಿಎಲ್/2026-27/ಎಸ್‌ಇ-0095 ಮುಂದುವರೆದಂತೆ ಟೆಂಡರ್‌ಗಳನ್ನು ತಾಂತ್ರಿಕ ಕಾರಣದಿಂದಾಗಿ ರದ್ದುಪಡಿಸಲಾಗಿದೆ. ಈ ಕಾರಣದಿಂದಾಗಿ ಮರು ಟೆಂಡರ್ ಅನ್ನು ಕರೆಯಲಾಗಿದೆ. ಇ-ಆಡಳಿತ ಸಚಿವಾಲಯದ ಹೊಸ ವೆಬ್‌ಸೈಟ್ **www.kppp.karnataka.gov.in** ಮೂಲಕ ಮಾತ್ರ ಸಲ್ಲಿಸುವುದು. ಸಂಪರ್ಕಿಸಿ: +91 9240214000, +91 9240214001. ಇತರೆ ಬಿಡ್ ವಿವರಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

(1) ವಿಚಾರಣೆಗೆ ಕೊನೆಯ ದಿನಾಂಕ ಮತ್ತು ಸಮಯ: **19.06.2026, ಮಧ್ಯಾಹ್ನ 2.00 ಗಂಟೆವರೆಗೆ.** (2) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **22.06.2026, ಮಧ್ಯಾಹ್ನ 3.00 ಗಂಟೆವರೆಗೆ.** (3) ಹಣಕಾಸು ಬಿಡ್ ತೆರೆಯುವ ದಿನಾಂಕ: **24.06.2026, ಮಧ್ಯಾಹ್ನ 3.00 ಗಂಟೆಗೆ.**

ಹೆಚ್ಚಿನ ವಿವರಗಳಿಗೆ ದಯವಿಟ್ಟು ಸಂಪರ್ಕಿಸಿ:
ಕಾರ್ಯನಿರ್ವಾಹಕ ಅಭಿಯಂತರರು (ಐಟಿ), ಕೆಆರ್‌ಐಡಿಎಲ್, ಬೆಂಗಳೂರು
ದೂ.ಸಂಖ್ಯೆ: 080-28015639 ಇ-ಮೇಲ್: computer@kridl.net / tenderworks@kridl.net

ಸಹಿ/- ಮುಖ್ಯ ಅಭಿಯಂತರರು (ಬೆಂಗಳೂರು)

ಕರ್ನಾಟಕ ಸರ್ಕಾರ

ಆಯನೂರು ಉಪ ಅರಣ್ಯ ವಿಭಾಗ, ಶಿವಮೊಗ್ಗ.

ಸಂಖ್ಯೆ: ಸಅಸಂ/ಟೆಂಡರ್/ಸಿಆರ್-01/26-27 ದಿನಾಂಕ: 15.06.2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ (ಕಾಲ್-3)
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2026-27 ನೇ ಸಾಲಿಗೆ ಅನುದಾನ ನಿರೀಕ್ಷೆ ಮೇರೆಗೆ ವಿವಿಧ ಲೆಕ್ಕಶೀರ್ಷಿಕೆಯಡಿ ಮತ್ತು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಕಾಮಗಾರಿ ನಿರ್ವಹಿಸುವ ಸ್ಥಳಗಳ ಬದಲಾವಣೆ, ಮಾದರಿಗಳ ಬದಲಾವಣೆ ಒಳಗೊಂಡಂತೆ ಶಿವಮೊಗ್ಗ ಪ್ರಾದೇಶಿಕ ಅರಣ್ಯ ವಿಭಾಗದ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯಲ್ಲಿ "ಮಾನ್ಸೂನ್ ನೆಡುತೋಪು ರಚನೆ ಹಾಗೂ ಮುಂಗಡ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000ರ ಅನ್ವಯ 2026-27 ನೇ ಸಾಲಿಗೆ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ವಿವಿಧ ಅಳತೆಯ ಸಸಿಗಳನ್ನು ಬೆಳೆಸುವುದು, ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ವಲಯ ವ್ಯಾಪ್ತಿಯಲ್ಲಿ ಸಸ್ಯಕ್ಷೇತ್ರ ಹಾಗೂ ಸಸಿಗಳನ್ನು ಬೆಳೆಸಲು ಅಗತ್ಯ ಸೌಕರ್ಯ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಕಾಲ್-3 ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:23.06.2026 ರ ಸಂಜೆ 4.00 ಗಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ಹೆಚ್ಚಿನ ವಿವರಗಳನ್ನು ಅಧಿಕೃತ ವೆಬ್ ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಆಯನೂರು ಉಪ ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/65/06/373

ಕರ್ನಾಟಕ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಬೆಳಗಾವಿ ಉಪ ವಿಭಾಗ, ಬೆಳಗಾವಿ, ಹಳೇ ಪಿ. ಬಿ. ರಸ್ತೆ,
ಬೆಳಗಾವಿ - 590 016. ಇ-ಮೇಲ್ : acfbelagavi@gmail.com

ಸಂಖ್ಯೆ : ಸ.ಅ.ಸಂ./ಬೆ.ಉ.ವಿ./ವಿವಿಧ ಯೋಜನೆ/ಮರು ಟೆಂಡರ್/2026-27
ದಿನಾಂಕ : 12-06-2026

ಮರು ಟೆಂಡರ್ ಪ್ರಕಟಣೆ (ಕರೆ-3)

ಟೆಂಡರ್‌ದಾರರು ಹಾಗೂ ಬಿಡ್ಡರ್‌ಗಳ ಅವಗಾಹನೆಗಾಗಿ ಈ ಮೂಲಕ ಪ್ರಕಟಿಸುವುದೇನೆಂದರೆ, ಸನ್ ಬೆಳಗಾವಿ (ಪ್ರಾದೇಶಿಕ) ವಿಭಾಗದ, ಬೆಳಗಾವಿ ಉಪ ವಿಭಾಗದ ವ್ಯಾಪ್ತಿಯಲ್ಲಿ ಬರುವ ಬೆಳಗಾವಿ, ಕಾಕತಿ, ನೇಸರಗಿ, ಹುಕ್ಕೇರಿ ಹಾಗೂ ಗುಜನಾಳ ವಲಯಗಳಲ್ಲಿ ಸನ್ 2026-27 ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ ಕೈಗೊಳ್ಳುವ ಕಾಮಗಾರಿಗಳಿಗೆ.

Indent No. : KFD/2025-26/OW/WORK_INDENT37189/CALL-3, 37252/CALL-3, 37253/CALL-3, 37254/CALL-3, 37255/CALL-3, 37256/CALL-3, 37257/CALL-3, 37258/CALL-3, 37259/CALL-3, 37260/CALL-3, 37261/CALL-3, 37262/CALL-3, 37263/CALL-3, 37264/CALL-3, 37265/CALL-3, 37284/CALL-3, 37285/CALL-3, 37286/CALL-3, 37287/CALL-3, 37288/CALL-3, 37289/CALL-3, 37290/CALL-3, 37291/CALL-3, 37292/CALL-3, 37293/CALL-3, 37294/CALL-3, 37295/CALL-3, 37296/CALL-3, 37297/CALL-3, 37298/CALL-3, 37300/CALL-3, 37301/CALL-3, 37302/CALL-3, 37303/CALL-3, 37304/CALL-3, 37305/CALL-3, 37306/CALL-3, 37307/CALL-3, 37308/CALL-3, 37309/CALL-3, 37310/CALL-3, 37311/CALL-3, 37312/CALL-3, 37313/CALL-3, 37314/CALL-3, 38191/CALL-3, 38206/CALL-3, & 38221/CALL-3 ಗಳಿಗೆ ದಿನಾಂಕ : 24-06-2026 ರಂದು ಮರು ಟೆಂಡರ್‌ನ್ನು (CALL-3) ಕರೆಯಲಾಗಿದೆ.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಈ ಕೆಳ ಸಹಿದಾರರ ಕಛೇರಿಗೆ ರಜಾ ದಿನಗಳನ್ನು ಹೊರತುಪಡಿಸಿ ಸಂಪರ್ಕಿಸಬಹುದಾಗಿದೆ.

ಸಹಿ/- ಟೆಂಡರ್ ಆಹ್ವಾನಿಸುವ ಪ್ರಾಧಿಕಾರ,
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಳಗಾವಿ ವಿಭಾಗ, ಬೆಳಗಾವಿ ರವರ ತಾಂತ್ರಿಕ ಸಹಾಯಕರು.

ಡಿಐಪಿಆರ್/ಬೆಳಗಾವಿ/423/ಮಣಿಪಾಲ್/2026-27

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ ನಂ. 1
ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ 02/2026-27 ದಿನಾಂಕ:12/06/2026

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ನಂ.1 ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು ಹಾಸನ ಜಿಲ್ಲೆ, ಇವರಿಂದ ಕಾವೇರಿ ನೀರಾವರಿ ನಿಗಮದಲ್ಲಿ ನೊಂದಾಯಿತವಾಗಿರುವ ನಿಗಧಿತ ದರ್ಜೆಯ ಗುತ್ತಿಗೆದಾರರಿಂದ ಈ ಅಧಿಸೂಚನೆಯಲ್ಲಿ ತಿಳಿಸಿರುವಂತೆ ಒಟ್ಟು 05 ಕಾಮಗಾರಿಗಳಿಗೆ ಟೆಂಡರ್‌ಅನ್ನು ಕೆ ಪಿ ಪಿ ಪೋರ್ಟಲ್‌ನಲ್ಲಿ ಆಹ್ವಾನಿಸಲಾಗಿದೆ. ಈ ಕಾಮಗಾರಿಗೆ ಟೆಂಡರ್ ಸಲ್ಲಿಸುವ ಗುತ್ತಿಗೆದಾರರು ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ. 4.24 ಲಕ್ಷ ಮತ್ತು ಗರಿಷ್ಠ ಮೊತ್ತ ರೂ.21.10 ಲಕ್ಷಗಳಾಗಿರುತ್ತದೆ. ಅರ್ಜಿ ಬೆಲೆ ಕೆ ಪಿ ಪಿ-portal ನಂತೆ ಇರುತ್ತದೆ. ಕೆ ಪಿ ಪಿ ಪೋರ್ಟಲ್‌ನಲ್ಲಿ ಅರ್ಹ ಗುತ್ತಿಗೆದಾರರು ಅಂತರ್ಜಾಲದಲ್ಲಿ ದಿನಾಂಕ:15/06/2026 ರಂದು ಬೆಳಿಗ್ಗೆ 11.00 ಗಂಟೆಯಿಂದ ದಿನಾಂಕ:22/06/2026 ರ ಮಧ್ಯಾಹ್ನ 4.00 ಗಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು https:// kppp.karnataka.gov.in ನಲ್ಲಿ ಡೌನ್ ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗದಿತ ಇ.ಎಂ.ಡಿ. ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರ್‌ಅನ್ನು ದಿನಾಂಕ:23/06/2026 ರಂದು ನಂ.1 ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು ಕಚೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿ ಹಾಗೂ ಇತರೆ ನಿಬಂದನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್, ನಂ.1
ಹೇಮಾವತಿ ಬಲಮೇಲ್ದಂಡೆ ನಾಲಾವಿಭಾಗ, ಗೊರೂರು

ವಾಸಾಸಂಇ/ಹಿಸನಿ/ಹಾಸನ/238/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ಚಿತ್ರದುರ್ಗ

Pho: 08194-200329 Email:-eerdwsd.chd@gmail.com

ಸಂ:ಗ್ರಾಕುನೀ&ನೈವಿ/ಚಿದು/ತಾಂಶಾ/ಟೆಂಡರ್/2026-27
ದಿನಾಂಕ: 15.06.2026

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ನಿಬಂಧನೆಗೊಳಪಟ್ಟಂತೆ, ನೋಂದಣಿಯಾಗಿರುವ ಸಿವಿಲ್ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ ಏಕ-ಲಕೋಟೆ ಪದ್ಧತಿಯಲ್ಲಿ ಎಸ್.ಡಿ.ಪಿ. ಯೋಜನೆಯಡಿ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕು ವ್ಯಾಪ್ತಿಯ 04 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಒಟ್ಟು ಟೆಂಡರ್ ಮೊತ್ತ : ರೂ. 26.82 ಲಕ್ಷ, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 29.06.2026, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 30.06.2026 ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: 01.07.2026, ಕಾಮಗಾರಿಯನ್ನು https://kppp.karnataka.gov.in ವೆಬ್‌ಸೈಟ್ ನಲ್ಲಿ ಪ್ರಕಟಿಸಲಾಗಿದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಕುನೀ& ನೈವಿಭಾಗರವರನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸ ಬಹುದಾಗಿರುತ್ತದೆ.

DIPR/CTA/KSMCA/170/2026-27

ಸಹಿ/- ಕಾರ್ಯಪಾಲಕ ಅಭಿಯಂತರರು,
ಗ್ರಾ.ನೀ.ಸ & ನೈ ವಿಭಾಗ, ಚಿತ್ರದುರ್ಗ.

CHANGE OF NAME

I, **SHRISHAILA** (Old Name) Resident of #12, Mudgal (Rural), Mudgal, Raichur, Lingsugur, Karnataka 584125, have changed my name as **SHREESHAILA YARAGAL** (New Name) henceforth I will be called and recognized by new name for all future purposes, dated: 15/06/2026.

CHANGE OF NAME

I, **AASIYABI M JAMADAR** (Old Name) Resident of Islampur On Byadgi, Haveri - 581106, have changed my name as **AASIYABI YASEEN BALIGAR** (New Name) henceforth I will be called and recognized by new name for all future purposes, dated: 15/06/2026.

CHANGE OF NAME

I, **SAVITA VEERESH GOUDRA** (Old Name) Resident of House No: 1758, 4th Ward, Korkana Street, Mudukana Katte, Kudligi, Bellary, Karnataka, Pin Code: 583134, have changed my name as **SAVITA GOUDER** (New Name) henceforth I will be called and recognized by new name for all future purposes, dated: 15/06/2026.

CHANGE OF NAME

I, **SAVITA YALLAPPA AMARANNAVAR** (Old Name) Resident of 118/F/44, Ward No 05, Near APMC, Manjunath Nagar, Badami, Bagalkot, Karnataka, Pin Code: 587201, have changed my name as **SAVITA ANAND SAASVIHAAL** (New Name) henceforth I will be called and recognized by new name for all future purposes, dated: 15/06/2026.

CHANGE OF NAME

I, **SHWETA MALLIKARJUN BIRADAR** (Old Name) Resident of Padanur Tq: Indi, Dist: Vijayapura - 586211, have changed my name as **SHWETA BIRADAR** (New Name) henceforth I will be called and recognized by new name for all future purposes, dated: 15/06/2026.

CHANGE OF NAME

I, **ROSHAN BANU TINMEKAR** (Old Name) Resident of Ganesh Nagar 1st Cross Ranebennur - 581115 Dist: Haveri (address), have changed my name as **ROSHAN BANU MOHAMMED HANIF KARJAGI** (New Name) henceforth I will be called and recognized by new name for all future purposes, dated: 15/06/2026.

CHANGE OF NAME

I, **MANHA IMTIYAZ SHAIKH** (Old Name) Resident of H No: B50/3, 2nd Cross, Keshwapur, Hubli Dharwad, Karnataka, Pin Code: 580023, have changed my name as **MANHA SHAIKH** (New Name) henceforth I will be called and recognized by new name for all future purposes, dated: 15/06/2026.

CHANGE OF NAME

I, **ANNAPURNA MADAR** (Old Name) Resident of #342, Vrishambhavi, 2nd main 3rd Cross Narayanpur, Dharwad K.C.Park, Karnataka 580008, have changed my name as **ANNAPURNA ASUTI** (New Name) henceforth I will be called and recognized by new name for all future purposes, dated: 15/06/2026.

CHANGE OF NAME

I, **KARTHIK NOOLVI** (Old Name) Resident of H No: 42, Talawar Oni, Keshwapur Hubli - 580023, have changed my name as **KARTHIK KRISHNA NOOLVI** (New Name) henceforth I will be called and recognized by new name for all future purposes, dated: 15/06/2026.

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರ ರವರ ಕಚೇರಿ ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ,
ಬೆಳಗಾವಿ ಜಿಲ್ಲೆ-591302

ಸಂಖ್ಯೆ. ಕನೀನಿನಿ/ಕಯೋವಿ/ಖಾ/ಪಿಬಿ/ಅ.ಟೆಂ.ಪ್ರ/2026-27/483-485 ದಿನಾಂಕ:12.06.2026.

"ಅಲ್ಪಾವಧಿ ಶೇಕಡಾವಾರು ಟೆಂಡರ ಪ್ರಕಟಣೆ" (ಕೆಪಿಪಿ-ಪೋರ್ಟಲ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ ಕಚೇರಿ ಅಡಿಯಲ್ಲಿ ಬರುವ ಈ ಕೆಳಗಿನ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರಗಳನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಕೆಪಿಪಿ-ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ.

ಕ್ರ ಸಂ	ಕಾಮಗಾರಿಯ ಹೆಸರು	ಟೆಂಡರ್‌ಗೆ ಇಟ್ಟ ಮೊತ್ತ ಜಿ.ಎಸ್.ಟಿ. ಹೊರತುಪಡಿಸಿ (ರೂ. ಲಕ್ಷಗಳಲ್ಲಿ)	ಅರ್ಹ ಗುತ್ತಿಗೆ
1	Providing Infrastructure facility to KK Koppa, Kangarali KH, Savaganv villages coming under the jurisdiction of Bagewadi TFS in Belagavi Taluka Belagavi District. (W.I. No. KNNL/2026-27/RD/WORK_INDENT4541)	422.52	ದರ್ಜೆ 2 ಮತ್ತು ಮೇಲ್ಪಟ್ಟು
2	Construction/Improvements of connecting roads at Hirabagewadi Village coming under the jurisdiction of Belagavi Rural Constituency under Bagewadi TFS in Belagavi Taluka Belagavi District. (W.I. No. KNNL/2026-27/RD/ WORK_INDENT4542)	338.80	ದರ್ಜೆ 2 ಮತ್ತು ಮೇಲ್ಪಟ್ಟು
3	Providing Infrastructure facility to Benakanhalli and Hindalaga Gram Panchayat Limits coming under Hangaraga TFS in Belagavi. (for the year 2025-26) (W.I. No. KNNL/2026-27/RD/ WORK_INDENT4339/Call-2)	422.49	ದರ್ಜೆ 2 ಮತ್ತು ಮೇಲ್ಪಟ್ಟು

https://kppp.karnataka.gov.in ನಲ್ಲಿ ಅರ್ಜಿ ಡೌನಲೋಡ ಮಾಡಿಕೊಳ್ಳಬಹುದು/ ಭರ್ತಿಮಾಡಿದ ಟೆಂಡರಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 24.06.2026ರಂದು ಸಂಜೆ 4.00ಘಂಟೆ ವರೆಗೆ ಸಲ್ಲಿಸಬಹುದು. ಪ್ರಿ-ಬಿಡ್ ಸಭೆಯನ್ನು ದಿನಾಂಕ: 19.06.2026ರಂದು ಮುಂಜಾನೆ 11.00 ಘಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ, ಕನೀನಿನಿ, ಕಳಸಾ ಯೋಜನಾ ವಿಭಾಗ, ಖಾನಾಪೂರ ಕಚೇರಿಯಲ್ಲಿ ಆಯೋಜಿಸಲಾಗಿದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 25.06.2026 ಸಂಜೆ 4.30 ಘಂಟೆಗೆ. ಪೂರ್ವಾರ್ಹತೆ ಕುರಿತಂತೆ ಇ.ಎಂ.ಡಿ. ವಿವರ, ಟೆಂಡರ ಷರತ್ತುಗಳು ಹಾಗೂ ಇತರೆ ವಿವರಗಳನ್ನು ಕೆಪಿಪಿ-ಪೋರ್ಟಲ್ ಮುಖಾಂತರ https://kppp.karnataka.gov.in ಪಡೆಯಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ: 08336-222163 ಸಂಪರ್ಕಿಸುವದು.

ಸಹಿ/-ಕಾರ್ಯನಿರ್ವಾಹಕ ಇಂಜನೀಯರ
ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ

DIPR/BGM/RO-NO-428/KSMCA/2026-27

ಕರ್ನಾಟಕ ಸರ್ಕಾರ

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿ), ಕೊಪ್ಪಳ (ಕರ್ನಾಟಕ ಸರಕಾರದ ಸ್ವಾಯತ್ತ ಸಂಸ್ಥೆ)

ನೊಂದಣಿ ಸಂಖ್ಯೆ:KOL-S243-2012-13 ದಿನಾಂಕ:15-03-2013
Website: https://kimskoppal.karnataka.gov.in email :directorkimskoppal@gmail.com
Office : 08539 225522 Office : 08539-225523

ಸಂಖ್ಯೆ: ಕಿಮ್ಸ್/ಕೊಪ್ಪಳ/ನೇಮಕಾತಿ/2026-27/146 ದಿನಾಂಕ: 15 /06/2026

ನೇರ ಸಂದರ್ಶನ ಅಧಿಸೂಚನೆ

ವಿಷಯ: ಕೊಪ್ಪಳ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಗುತ್ತಿಗೆ ಆಧಾರದ ಮೇಲೆ ವಿವಿಧ ಬೋಧಕ ಹುದ್ದೆಗಳಿಗೆ ನೇಮಕಾತಿ ಅಧಿಸೂಚನೆ.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಕೊಪ್ಪಳ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಈ ಕೆಳಗಿನ ಬೋಧಕ ಹುದ್ದೆಗಳಿಗೆ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಮತ್ತು ಅರ್ಹ ಅಭ್ಯರ್ಥಿಗಳು ಕಾಲೇಜಿನ ವೆಬ್‌ಸೈಟ್ **https://kimskoppal.karnataka.gov.in** ನಿಂದ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ತಮ್ಮ ಅರ್ಜಿಯನ್ನು ಎಲ್ಲಾ ಸ್ವಯಂ ದೃಢೀಕರಿಸಿದ ದಾಖಲೆಗಳೊಂದಿಗೆ ದಿನಾಂಕ: 22.06.2026 ರಂದು ಅಥವಾ ಅದಕ್ಕೂ ಮೊದಲು ನಿರ್ದೇಶಕರು, ಕೊಪ್ಪಳ ವೈದ್ಯಕೀಯ ವಿಜ್ಞಾನ ಸಂಸ್ಥೆ, ಗಂಗಾವತಿ ರಸ್ತೆ ಕಿಮ್ಸ್ ಕೊಪ್ಪಳ ಇವರಿಗೆ ಮುದ್ದಾಂ ಅಥವಾ ಅಂಚೆ ಮೂಲಕ ಸಲ್ಲಿಸಬೇಕು. ಅರ್ಹ ಅಭ್ಯರ್ಥಿಗಳಿಗೆ ನೇರ-ಸಂದರ್ಶನ ದಿನಾಂಕವನ್ನು ನಂತರ ತಿಳಿಸಲಾಗುವುದು.

ಕ್ರ. ಸಂ	ವಿಭಾಗ	ಪ್ರೊಫೆಸರ್	ಅಸೋಸಿಯೇಟ್ ಪ್ರೊಫೆಸರ್	ಅಸಿಸ್ಟಂಟ್ ಪ್ರೊಫೆಸರ್	ಸಿನಿಯರ್ ರೆಸಿಡೆಂಟ್	ಟ್ಯೂಟರ್	ಒಟ್ಟು
		Qaualification : As Per NMC's latest TEQ				MBBS/MSc,Phd	
1	Anatomy	-	-	3	3	4	10
2	Physiology	-	1	-	3	1	5
3	Biochemistry	-	-	1	3	1	5
4	Pathology	-	-	2	2	5	9
5	Microbiology	-	-	2	3	2	7
6	Forensic Medicine	-	-	1	3	1	5
6	Community Medicine	1	-	1	2		4
7	Pharmacology	-	-	3	3	3	9
8	General Medicine				3		3
10	Dermatology		1	1	1		3
11	General Surgery			2	2		4
12	Ophthalmology	1			1		2
13	ENT		1				1
14	Psychiatry		1				1
15	Radiology		1		3		4
16	Anaesthesia			2	2		4
17	Clinical Psychologist						1
	Total	2	5	18	34	17	76

ಆಸಕ್ತ ಅಭ್ಯರ್ಥಿಗಳು ಅರ್ಹತಾ ಮಾನದಂಡಗಳು, ವೇತನ ಮತ್ತು ಇತರ ನಿಯಮಗಳು ಮತ್ತು ಷರತ್ತುಗಳ ಕುರಿತು ಹೆಚ್ಚಿನ ಮಾಹಿತಿಯನ್ನು ವೆಬ್‌ಸೈಟ್ https://kimskoppal.karnataka.gov.in ನಲ್ಲಿ ವೀಕ್ಷಿಸಬಹುದು.

ಸೂಚನೆ: 1. ಸರ್ಕಾರಿ ಆದೇಶದ ಪ್ರಕಾರ ರೋಸ್ಟರ್ ಅನ್ನು ನಿರ್ವಹಿಸಲಾಗುತ್ತದೆ ದಿನಾಂಕ:13/05/2026
2. ಮೀಸಲಾತಿಯು ಕಕ(ಎಚ್‌ಕೆ)/ಕಕ ಹೊರತುಪಡಿಸಿದ (ಎನ್‌ಎಚ್‌ಕೆ) ಆಧಾರದ ಮೇಲೆ ಇರುತ್ತದೆ.

ಸಹಿ/- ನಿರ್ದೇಶಕರು,
ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಕೊಪ್ಪಳ.

DIPR/Koppal/163/KSMCA/2026-27

ಕರ್ನಾಟಕ ಸರಕಾರ

ಸಹಾಯಕ ಕಾರ್ಯನಿರ್ವಾಹಕ ಇಂಜನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ, ಉಪವಿಭಾಗ ಕುಂದಾಪುರ

Email: pwdkun@gmail.com website: www.kpwd.gov.in

ನಂ. ಪಿಡಬ್ಲ್ಯೂಡಿ:ಕುಂ.ಉಪವಿಭಾಗ:ಎಸ್.ಐ.ಟಿ-3:2026-27:576: ದಿನಾಂಕ:15.06.2026

ಟೆಂಡರ್ ಪ್ರಕಟಣೆ

ಈ ಕೆಳಗಿನ ಕಾಮಗಾರಿಗಳಿಗಾಗಿ ಪ್ರತ್ಯೇಕ ಮೊಹರಾದ ಟೆಂಡರನ್ನು ಮ್ಯಾನ್ಯುವೆಲ್ ಮುಖಾಂತರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ ರೀತ್ಯಾ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲಾದ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಕಾಮಗಾರಿಯ ಹೆಸರನ್ನು ಮೊಹರಾದ ಲಕೋಟೆಯ ಮೇಲೆ ನಮೂದಿಸಿ, ನಿಯಮಿತ ಫಾರಂನಲ್ಲಿ ದ್ವಿಪ್ರತಿಯಲ್ಲಿ ಆಹ್ವಾನಿಸಲಾಗಿದೆ. ಸಹಾಯಕ ಕಾರ್ಯನಿರ್ವಾಹಕ ಇಂಜನಿಯರು, ಲೋಕೋಪಯೋಗಿ ಇಲಾಖೆ, ಉಪವಿಭಾಗ ಕುಂದಾಪುರ, ಇವರಿಂದ ಬೆಲೆ ನಿಗದಿಪಡಿಸಲಾದ ಖಾಲಿ ಟೆಂಡರ ಫಾರಂಗಳನ್ನು ಪಡೆದುಕೊಂಡು ಗೊತ್ತುಪಡಿಸಿದ ದಿನಾಂಕದಂದು ಟೆಂಡರ್ ಫಾರಂ ಭರ್ತಿಮಾಡಿ ಬಿಡ್ ಸಲ್ಲಿಸುವುದು.(ಖಾಲಿ ಟೆಂಡರ್ ಫಾರಂಗಳಿಗೆ ನೀಡಲಾದ ಮೊತ್ತವನ್ನು ಹಿಂದಿರುಗಿಸಲಾಗುವುದಿಲ್ಲ). ಜೊತೆಗೆ ಗುತ್ತಿಗೆದಾರರು ಅವರ ರಿಜಿಸ್ಟ್ರೇಶನ್ ಸರ್ಟಿಫಿಕೇಟ್ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. **"ಖಾಲಿ ಟೆಂಡರ್ ಫಾರಂಗಳಿಗೆ ಅರ್ಜಿ ಸ್ವೀಕರಿಸುವ ದಿನಾಂಕ:- 01.07.2026 ರ ಸಂಜೆ 5.00ರ ವರೆಗೆ ಖಾಲಿ ಟೆಂಡರ್ ಫಾರಂಗಳನ್ನು ವಿತರಿಸುವ ದಿನಾಂಕ:- 02.07.2026ರ ಸಂಜೆ 4.30ರ ವರೆಗೆ ಭರ್ತಿಮಾಡಿದ ಟೆಂಡರನ್ನು ಸ್ವೀಕರಿಸುವ ದಿನಾಂಕ:- 03.07.2026 ರ ಸಂಜೆ 4.30ರ ವರೆಗೆ"**

ಕ್ರ.ಸಂ.	ಕಾಮಗಾರಿಯ ಹೆಸರು	ಟೆಂಡರಿಗಿರಿಸಿದ ಅಂದಾಜು ಮೊಬಲಗು (ರೂ.ಗಳಲ್ಲಿ) (ಜಿ.ಎಸ್.ಟಿ ಹೊರತುಪಡಿಸಿ)	ಇ.ಎಂ.ಡಿ (ರೂ.ಗಳಲ್ಲಿ)	ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಮಿತಿ	ಟೆಂಡರ್ ಫಾರಂ ಸಂ	ಶೆಡ್ಯೂಲ್ ಬೆಲೆ ಜಿ.ಎಸ್.ಟಿ ಒಳಗೊಂಡಂತೆ	ಅರ್ಹ ಗುತ್ತಿಗೆದಾರರು
1	ಕುಂದಾಪುರ ತಾಲೂಕು ಕುಂದಾಪುರದಲ್ಲಿರುವ ಹಳೇ ನ್ಯಾಯಾಲಯ ಕಟ್ಟಡದ ಶೌಚಾಲಯಗಳ ದುರಸ್ತಿ	Rs. 419,152.00	10500/-	2 ತಿಂಗಳು	KW-1	Rs. 500.00	4ನೇ ದರ್ಜೆ ಮತ್ತು ಮೇಲ್ಪಟ್ಟು
2	ಕುಂದಾಪುರದಲ್ಲಿರುವ ಲೋಕೋಪಯೋಗಿ ಇಲಾಖೆ, ನಂ.2 ನೇ ಉಪವಿಭಾಗಕ್ಕೆ ಪೀಠೋಪಕರಣ ಒದಗಿಸುವುದು.	Rs. 416,580.00	10500/-	1 ತಿಂಗಳು	KW-1	Rs. 500.00	4ನೇ ದರ್ಜೆ ಮತ್ತು ಮೇಲ್ಪಟ್ಟು

ಕೆಲಸದ ಕುರಿತಾದ ಯಾವುದೇ ಇತರ ವಿವರಗಳನ್ನು ಕಛೇರಿಯ ವೇಳೆಯಲ್ಲಿ ಈ ಕಛೇರಿಯಲ್ಲಿ ಪಡೆಯಬಹುದಾಗಿದೆ.

ಸಹಿ/-ಸಹಾಯಕ ಕಾರ್ಯನಿರ್ವಾಹಕ ಇಂಜನಿಯರು,
ಲೋಕೋಪಯೋಗಿ ಇಲಾಖೆ, ನಂ.2ನೇ ಉಪವಿಭಾಗ
ಕುಂದಾಪುರ

ಮಂಗಳವಾರದ ಪಂದ್ಯಗಳು

- ಇರಾನ್-ನ್ಯೂಜಿಲೆಂಡ್ (ಬೆಳಗ್ಗೆ 6:30)
- ಫ್ರಾನ್ಸ್-ಸೆನೆಗಲ್ (ಮಧ್ಯರಾತ್ರಿ 12:30)
- ಇರಾಕ್-ನಾರ್ವೆ (ಬುಧವಾರ ಬೆಳಗ್ಗೆ 3:30)
- ಅರ್ಜೆಂಟೀನಾ-ಅಲ್ಜೀರಿಯಾ (ಬುಧವಾರ ಬೆಳಗ್ಗೆ 6:30)

ಕಿರುಸುದ್ದಿ

2ನೇ ಅತಿ ವೇಗದ ಗೋಲ್ ಹೊಡೆದ ಬದಲಿ ಆಟಗಾರ



ಮೊಂಟೆರೆ (ಮೆಕ್ಸಿಕೊ): ವಿಶ್ವಕಪ್ ಇತಿಹಾಸದಲ್ಲೇ ಸ್ವೀಡನ್‌ನ ಮತ್ತಿಯಾಸ್ ಸ್ವಾನ್‌ಬರ್ಗ್ ಎರಡನೇ ಅತಿ ವೇಗದ ಗೋಲ್ ದಾಖಲಿಸಿದ ಬದಲಿ ಆಟಗಾರನೆಂಬ ದಾಖಲೆಯನ್ನು ಸೋಮವಾರ ಬರೆದಿದ್ದಾರೆ. ಟ್ಯುನೀಶಿಯಾ ವಿರುದ್ಧದ ಪಂದ್ಯದಲ್ಲಿ ಬದಲಿ ಆಟಗಾರನಾಗಿ ಮೈದಾನಕ್ಕಿಳಿದ 27 ವರ್ಷದ ಸ್ವಾನ್‌ಬರ್ಗ್ 18 ಸೆಕೆಂಡಿನಲ್ಲಿ ಗೋಲ್ ದಾಖಲಿಸಿದ್ದಾರೆ. 2002ರ ವಿಶ್ವಕಪ್‌ನಲ್ಲಿ ಬದಲಿ ಆಟಗಾರನಾಗಿ ಇಳಿದ ಉರುಗ್ವೆಯ ರಿಚರ್ಡ್ ಮೊರೇಲ್ಸ್ 16 ಸೆಕೆಂಡುಗಳಲ್ಲಿ ಗೋಲ್ ಹೊಡೆದಿದ್ದರು.

ನೇಷನ್ಸ್ ಕಪ್ ಮಹಿಳಾ ಹಾಕಿ: ಅಮೆರಿಕ ಮಣಿಸಿದ ಭಾರತ

ಆಕ್ಲೆಂಡ್: ಎಫ್‌ಐಎಚ್ ನೇಷನ್ಸ್ ಕಪ್ ಹಾಕಿ ಪಂದ್ಯಾವಳಿಯ ಎ ಗುಂಪಿನ ಪಂದ್ಯದಲ್ಲಿ ಸೋಮವಾರ ಅಮೆರಿಕ ವಿರುದ್ಧ ಭಾರತೀಯ ವನಿತೆಯರು 3-2 ಗೋಲ್‌ಗಳ ಅಂತರದಿಂದ ಜಯ ಸಾಧಿಸಿದ್ದಾರೆ. ದೀಪಿಕಾ ಭಾರತದ ರೋಚಕ ಗೆಲುವಿನ ರೂವಾರಿ ಆಗಿದ್ದರು. ಭಾರತದ ಪರ ದೀಪಿಕಾ (17, 24ನೇ ನಿಮಿಷ) ಎರಡು ಗೋಲ್, ನವನೀತ್ ಕೌರ್(28ನೇ ನಿಮಿಷ) ಸ್ಕೋರ್ ಮಾಡಿದರು. ಅಮೆರಿಕ ಪರ ಆಶ್ಲೆ ಸೆಸ್ಸಾ(4ನೇ ನಿಮಿಷ) ಮತ್ತು ಮೇಡಿಲಿನ್ ಜಿಮ್ಮರ್(7ನೇ ನಿಮಿಷ) ಸ್ಕೋರ್ ಮಾಡಿದ್ದರು. ನೇಷನ್ಸ್ ಕಪ್ ಗೆಲ್ಲುವ ತಂಡ ಪ್ರೊ ಲೀಗ್‌ಗೆ ಪ್ರವೇಶ ಪಡೆಯುತ್ತದೆ. 2-2 ಸಮಬಲದ ಹೋರಾಟ ಇದ್ದಾಗ ದೀಪಿಕಾ 24ನೇ ನಿಮಿಷದಲ್ಲಿ ಗೋಲ್ ದಾಖಲಿಸಿದ್ದರು.

ಕಳರಿಪಯಟ್ಟು: ಪ್ರಣಿಕಾಗೆ 2 ಸ್ವರ್ಣ, ವರುಣ್‌ಗೆ ಬೆಳ್ಳಿ

ಬೆಂಗಳೂರು: ಬೆಂಗಳೂರು ಜಿಲ್ಲಾ ಕಳರಿಪಯಟ್ಟು ಕೌನ್ಸಿಲ್ ವತಿಯಿಂದ ಸ್ಪೈಡ್ ಬ್ಯಾಡ್ಮಿಂಟನ್ ಕೋರ್ಟ್‌ನಲ್ಲಿ ಹಮ್ಮಿಕೊಳ್ಳಲಾದ ಬೆಂಗಳೂರು ಜಿಲ್ಲಾ ಕಳರಿಪ್ಪಯಟ್ಟು ಚಾಂಪಿಯನ್‌ಶಿಪ್ 2026-27 ಜೂನಿಯರ್ ಇವೆಂಟ್‌ನಲ್ಲಿ ಪ್ರಣಿಕಾ



ರಜಿನಿ ಎರಡು ಸ್ವರ್ಣ ಪದಕ ಗೆದ್ದರೆ, ವರುಣ್ ಒಂದು ಬೆಳ್ಳಿ ಪದಕ ಗೆದ್ದಿದ್ದಾರೆ. ಜೂ.13 ಮತ್ತು 14ರಂದು ನಡೆದ ಜಿಲ್ಲಾಮಟ್ಟದ ಕಳರಿಪಯಟ್ಟು ಚಾಂಪಿಯನಶಿಪ್‌ನ ಜೂನಿಯರ್ ಇವೆಂಟ್‌ನಲ್ಲಿ ಪ್ರಣಿಕಾ ರಜಿನಿ ಚವುಟ್ಟುಪುಂಫಿ, ಚುವಾಡುಗಲ್‌ನಲ್ಲಿ ಚಿನ್ನದ ಪದಕ, ವರುಣ್ ಕೈ ಮುಚ್ಚನ್‌ನಲ್ಲಿ ಬೆಳ್ಳಿ ಪದಕ ಪಡೆದುಕೊಂಡಿದ್ದಾರೆ.

ಕೆರಳಿದ ಸೂರ್ಯವಂಶಿ!

ಡಾಂಬುಲ್ಲಾ: ಶ್ರೀಲಂಕಾ ಎ ವಿರುದ್ಧ ಸೂಪರ್ ಓವರ್ ಸೋಲಿನ ಬಳಿಕ ವೈಭವ್ ಸೂರ್ಯವಂಶಿ ಹಾಗೂ ಶ್ರೀಲಂಕಾ ಆಟಗಾರರ ಮಧ್ಯೆ ಮಾತಿನ ಚಕಮಕಿ ನಡೆದಿದ್ದು, ಸೂರ್ಯವಂಶಿ ತಮ್ಮ ತಾಳ್ಮೆ ಕಳೆದು



ಕೊಂಡು ಲಂಕಾ ಆಟಗಾರರೊಬ್ಬರನ್ನು ತಳ್ಳಿದ್ದಾರೆ. ಶ್ರೀಲಂಕಾ ಆಟಗಾರರು ಸೂರ್ಯವಂಶಿ ಅವರನ್ನು ಹಿಂದಕ್ಕೆ ತಳ್ಳಿದ್ದಾರೆ. ಶ್ರೀಲಂಕಾ ಬೌಲರ್ ಮತುಲನ್ ಸಂಭ್ರಮಿಸಿದ ಶೈಲಿ ವೈಭವ್‌ರನ್ನು ಟ್ರಿಗರ್ ಮಾಡಿದೆ. ಈ ವೇಳೆ ನಿರೋಶನ್ ಡಿಕೆವೆಲ್ಲಾ ಆಟಗಾರರ ಮಧ್ಯೆ ಪ್ರವೇಶಿಸಿ ಶಾಂತಗೊಳಿಸಿದ್ದಾರೆ. ಕಳೆದ ವರ್ಷ ಅ-19 ಏಷ್ಯಾ ಕಪ್ ಫೈನಲ್‌ನಲ್ಲಿ ಪಾಕಿಸ್ತಾನದ ಅಲಿ ರಾಜಾ ಮತ್ತು ವೈಭವ್ ಮಧ್ಯೆ ಮಾತಿನ ಚಕಮಕಿ ಏರ್ಪಟ್ಟಿತ್ತು.

ಸ್ವೀಡನ್ ಎದುರು 1-5ರಿಂದ ಸೋತ ಟ್ಯುನೀಶಿಯಾ

ಅವಳಿ ಗೋಲ್ ಅಯಾರಿ ಸ್ವೀಡನ್ ಗೆಲುವಿನ ಯಾರಿ

ಮೊಂಟೆರೆ (ಮೆಕ್ಸಿಕೊ): ಯಾಸಿನ್ ಅಯಾರಿ ಅವಳಿ ಗೋಲ್‌ಗಳ ನೆರವಿನಿಂದ ಟ್ಯುನೀಶಿಯಾವನ್ನು 5-1 ಅಂತರದಿಂದ ಪರಾಭವಗೊಳಿಸಿದ ಸ್ವೀಡನ್ 2026ರ ವಿಶ್ವಕಪ್‌ನಲ್ಲಿ ತನ್ನ ಅಭಿಯಾನವನ್ನು ಆರಂಭಿಸಿದೆ. ಸೋಮವಾರ ಬೆಳಗ್ಗೆ ನಡೆದ ಎಫ್ ಗುಂಪಿನ ಪಂದ್ಯದಲ್ಲಿ ಟ್ಯುನೀಶಿಯಾ ಮಣಿಸಿದ ಸ್ವೀಡನ್ ಅಗ್ರಸ್ಥಾನಕ್ಕೇರಿದೆ. ಅಲೆಗ್ಸಾಂಡರ್ ಇಸಾಕ್ ಮತ್ತು ವಿಕ್ಟರ್ ಗ್ಯೋಕೆರಸ್ ತಲಾ ಒಂದು ಗೋಲ್ ಅಸಿಸ್ಟ್ ಮಾಡಿದ್ದು, ಮತ್ತಿಯಾಸ್ ಸ್ವಾನ್‌ಬರ್ಗ್ ಸಹ ಸ್ವೀಡನ್‌ಗಾಗಿ ಒಂದು ಗೋಲ್ ಸ್ಕೋರ್ ಮಾಡಿದ್ದರು. ಟ್ಯುನೀಶಿಯಾ ಪರ ಒಮರ್ ರೆಕಿಕ್ ಏಕೈಕ ಗೋಲ್ ದಾಖಲಿಸಿದ್ದರು.

ಅಯಾರಿ ರಾಕೆಟ್: ಪಂದ್ಯ ಆರಂಭವಾದ 7ನೇ ನಿಮಿಷದೊಳಗೆ ರಾಕೆಟ್‌ನಂತೆ ದೂರದಿಂದ ನಿಖರವಾಗಿ ಗೋಲ್ ದಾಖಲಿಸಿದ ಅಯಾರಿ, ಸಂಭ್ರಮಾಚರಣೆ ನಡೆಸದೆ ಎರಡು ಕೈಗಳನ್ನೆತ್ತಿ ತಮ್ಮ ತಂದೆಯ ಜನ್ಮಭೂಮಿ ಟ್ಯುನೀಶಿಯಾಗೆ ಗೌರವ ಸಲ್ಲಿಸಿದರು. 30ನೇ ನಿಮಿಷದಲ್ಲಿ ಅಲೆಗ್ಸಾಂಡರ್ ಇಸಾಕ್ ತಮ್ಮ 18ನೇ ಅಂತಾರಾಷ್ಟ್ರೀಯ ಗೋಲ್ ಹೊಡೆದರು. ಸ್ವೀಡನ್ ಒಂದರ ಮೇಲೊಂದು ಗೋಲ್‌ಗಳನ್ನು ದಾಖಲಿಸುತ್ತಿದ್ದರೆ, ಟ್ಯುನೀಶಿಯಾ ಗೋಲಿ ಮೌಹಿಬ್ ಛಾಮಖ್ ಗೋಲ್ ತಡೆಯುವಲ್ಲಿ ವಿಫಲರಾಗಿ ಪರದಾಡಿದರು. 43ನೇ ನಿಮಿಷದಲ್ಲಿ ಟ್ಯುನೀಶಿಯಾ ಪರ ಒಮರ್ ರೆಕಿಕ್ ಗೋಲ್ ದಾಖಲಿಸುವ ಮೂಲಕ ಸ್ವೀಡನ್ ನಾಗಾಲೋಟವನ್ನು ತಡೆಯುವ ಪ್ರಯತ್ನ ಮಾಡಿದ್ದರು. ಆದರೆ ಇಸಾಕ್ ಮತ್ತು ಗ್ಯೋಕೆರಸ್ ಜತೆಗೂಡಿ ಸ್ವೀಡನ್ ಮೇಲುಗೈ ಸಾಧಿಸುವುದನ್ನು ಖಚಿತಪಡಿಸಿದರು. ಇಸಾಕ್ ಚೆಂಡನ್ನು ವಿಕ್ಟರ್ ಗ್ಯೋಕೆರೆಸ್‌ಗೆ ಪಾಸ್ ಮಾಡಿದ್ದು, ಅರ್ಸೆನಲ್ ಸ್ಟ್ರೈಕರ್ ಗ್ಯೋಕೆರೆಸ್ 59ನೇ ನಿಮಿಷದಲ್ಲಿ ತಮ್ಮ ಒಟ್ಟಾರೆ 21ನೇ ಗೋಲ್ ಹೊಡೆದಿದ್ದರು. ಇದರೊಂದಿಗೆ ಸ್ವೀಡನ್ ಪ್ರತಿನಿಧಿಸಿದ 15 ಪಂದ್ಯಗಳಲ್ಲಿ ಗ್ಯೋಕೆರಸ್ 16 ಗೋಲ್‌ಗಳನ್ನು ಹೊಡೆದಿದ್ದಾರೆ. 84ನೇ ನಿಮಿಷದಲ್ಲಿ ಮತ್ತಿಯಾಸ್ ಸ್ವಾನ್‌ಬರ್ಗ್ ಗೋಲ್ ಪ್ರಾಬಲ್ಯ ಹೆಚ್ಚಿಸಿತು. ವಿಡಿಯೋ ರಿವ್ಯೂ ಬಳಿಕ ಗೋಲ್ ನೀಡಲಾಗಿತ್ತು. ಪಂದ್ಯದ ಕೊನೆಯಲ್ಲಿ ಎಕ್ಸ್‌ಟ್ರಾ ಮಿನಿಟ್‌ನಲ್ಲಿ ಯಾಸಿನ್ ಅಯಾರಿ ಇನ್ನೊಂದು ಗೋಲ್ ಸ್ಕೋರ್ ಮಾಡುವ ಮೂಲಕ ಫಿನಿಶಿಂಗ್ ಟಚ್ ನೀಡಿದ್ದರು. ತಂಡದ ಐದನೇ ಗೋಲ್ ಅನ್ನು ಆಯಾರಿ ಸಂಭ್ರಮಿಸಿದರು.

ಎಂಟು ವರ್ಷಗಳ ಹಿಂದೆ ರಷ್ಯಾದಲ್ಲಿ ನಡೆದ 2022ರ ವಿಶ್ವಕಪ್‌ನಲ್ಲಿ ಕ್ವಾರ್ಟರ್ ಫೈನಲ್‌ವರೆಗೆ ತಲುಪಿದ್ದ ಸ್ವೀಡನ್, ಈ ಬಾರಿಯ ವಿಶ್ವಕಪ್‌ಗೆ 39ನೇ ರ‍್ಯಾಂಕ್‌ನಲ್ಲಿ ಪ್ರವೇಶಿಸಿದೆ. 45ನೇ ರ‍್ಯಾಂಕ್‌ನ ಟ್ಯುನೀಶಿಯಾ ಈವರೆಗೆ ವಿಶ್ವಕಪ್ ಗುಂಪಿನ ಹಂತ ದಾಟಿ ಮುಂದೆ ಹೋಗಿಲ್ಲ.



> ನನ್ನ ಪುತ್ರ ಸ್ವೀಡನ್ ಪ್ರತಿನಿಧಿಸುವುದನ್ನು ಬಯಸಿದ್ದೆ. ಆ ಮೂಲಕ ತನ್ನನ್ನು ಬೆಳೆಸಿದ ದೇಶಕ್ಕೆ ಸೇವೆ ಸಲ್ಲಿಸಿದ ಭಾವ ಆತನಿಗೆ ಇರಬೇಕು.
> ■ ಅರ‍್ಲೂಜ್ ಅಯಾರಿ, ಅಯಾರಿ ತಂದೆ

ಸ್ವೀಡನ್ 5-1 ಟ್ಯುನೀಶಿಯಾ

- 7ನೇ ನಿಮಿಷ - ಯಾಸಿನ್ ಅಯಾರಿ(ಸ್ವೀಡನ್)
- 30ನೇ ನಿಮಿಷ - ಅಲೆಗ್ಸಾಂಡರ್ ಇಸಾಕ್(ಸ್ವೀಡನ್)
- 43ನೇ ನಿಮಿಷ - ಒಮರ್ ರೆಕಿಕ್(ಟ್ಯುನೀಶಿಯಾ)
- 59ನೇ ನಿಮಿಷ - ವಿಕ್ಟರ್ ಗ್ಯೋಕೆರಸ್(ಸ್ವೀಡನ್)
- 84ನೇ ನಿಮಿಷ - ಮತ್ತಿಯಾಸ್ ಸ್ವಾನ್‌ಬರ್ಗ್(ಸ್ವೀಡನ್)
- 90+6ನೇ ನಿಮಿಷ - ಯಾಸಿನ್ ಅಯಾರಿ(ಸ್ವೀಡನ್)

ಮೊದಲ ಗೋಲ್ ಸಂಭ್ರಮಿಸದ ಅಯಾರಿ!

ಸ್ವೀಡನ್ ಆಟಗಾರ ಯಾಸಿನ್ ಅಯಾರಿ ಅವರ ತಂದೆ ಟುನೀಶಿ ಯಾದವರು ಹಾಗೂ ತಾಯಿ ಮೊರೊಕ್ಕೊ ದೇಶದವರು. ತಂದೆ ಸ್ವೀಡನ್‌ನಲ್ಲಿ ಫುಟ್ಬಾಲ್ ವೃತ್ತಿಜೀವನ ಕಟ್ಟಲು ಪ್ರಯತ್ನಿಸಿ ಯಶಸ್ವಿಯಾಗಲಿಲ್ಲ. ಬಾಲ್ಯದಲ್ಲೇ ಯಾಸಿನ್ ಪ್ರತಿಭೆಯನ್ನು ಫುಟ್ಬಾಲ್ ಪ್ರತಿಭಾನ್ವೇಷಕರೊಬ್ಬರು ಗುರುತಿಸಿದ ಕಾರಣ ಕುಟುಂಬವು ಸ್ವೀಡನ್‌ನಲ್ಲೇ ಉಳಿಯಲು ನಿರ್ಧರಿಸಿತು. ಟುನೀಶಿಯಾ ವಿರುದ್ಧ ವಿಶ್ವಕಪ್ ಗೋಲು ಗಳಿಸಿದರೂ ಯಾಸಿನ್ ಸ್ವೀಡನ್ ಪರ ಸಂಭ್ರಮಾಚರಣೆ ಮಾಡದಿರುವುದು, ಟ್ಯುನೀಶಿಯಾ ಮೇಲೆ ಅವರಿಗಿರುವ ಗೌರವ ಮತ್ತು ಸಾಂಸ್ಕೃತಿಕ ಬಾಂಧವ್ಯವನ್ನು ತೋರಿಸುತ್ತದೆ. ಈ ಬಾರಿಯ ವಿಶ್ವಕಪ್‌ನಲ್ಲಿ ವಿವಿಧ ದೇಶಗಳ ಮೂಲ ಹೊಂದಿರುವ ಆಟಗಾರರ ಸಂಖ್ಯೆ ಹೆಚ್ಚಿರುವುದನ್ನೂ ಇದು ಉಲ್ಲೇಖಿಸುತ್ತದೆ. ಒಟ್ಟಾರೆ ಸ್ವೀಡನ್ ಪರ 3 ಗೋಲ್ ದಾಖಲಿಸಿದ ಅಯಾರಿ, ಎರಡು ಗೋಲ್ ಈ ವಿಶ್ವಕಪ್ ಪಂದ್ಯದಲ್ಲೇ ಹೊಡೆದಿದ್ದಾರೆ. 22 ವರ್ಷದ ಅಯಾರಿ ಸ್ವೀಡನ್‌ನ ಸೊಲ್ನಾ ನಗರದಲ್ಲಿ ಜನಿಸಿದ್ದರು. ಯೂಥ್ ಮಟ್ಟದಲ್ಲಿ ಸ್ವೀಡನ್ ಪ್ರತಿನಿಧಿಸಿದ್ದ ಅಯಾರಿಗೆ 2022ರ ವಿಶ್ವಕಪ್‌ನಲ್ಲಿ ಟ್ಯುನೀಶಿಯಾ ಪ್ರತಿನಿಧಿಸಲು ಆಯ್ಕೆ ನೀಡಿದ್ದರೂ, ಅಯಾರಿ ತಿರಸ್ಕರಿಸಿದ್ದರು.



4 ಬಾರಿಯ ಚಾಂಪಿಯನ್ನರಿಗೆ 7-1 ಜಯ

ಜರ್ಮನ್ನರ ಆರ್ಭಟಕ್ಕೆ ಕುರಸಾವೊ ಕಂಗಾಲು

ಹ್ಯೂಸ್ಟನ್ (ಅಮೆರಿಕ): ಪದಾರ್ಪಣಾ ವಿಶ್ವಕಪ್ ಆಡುತ್ತಿರುವ ಕುರಸಾವೊ ವಿರುದ್ಧ ನಾಲ್ಕು ಬಾರಿಯ ಚಾಂಪಿಯನ್ ಜರ್ಮನಿ 7-1 ಗೋಲ್ ಅಂತರದ ಭರ್ಜರಿ ಜಯ ಸಾಧಿಸಿದೆ. ಜರ್ಮನಿ ಪರ ಕೈ ಹಾವರ್ಟ್ಸ್ ಅವಳಿ ಗೋಲ್ ದಾಖಲಿಸಿದರು. ಪಂದ್ಯ ನಾಲ್ಕನೇ ಮತ್ತು ಎಂಟನೇ ಗೋಲ್ ಹೊಡೆದು ಹಾವರ್ಟ್ಸ್ ಮಿಂಚಿದರು.

ಭಾನುವಾರ ಮಧ್ಯರಾತ್ರಿ ಟೆಕ್ಸಾಸ್‌ನ ಹ್ಯೂಸ್ಟನ್‌ನಲ್ಲಿ ನಡೆದ ಇ ಗುಂಪಿನ ಪಂದ್ಯದಲ್ಲಿ, ಪುಟ್ಟ ಕೆರೇಬಿಯನ್ ದ್ವೀಪ ರಾಷ್ಟ್ರವು ಚೊಚ್ಚಲ ಗೋಲ್ ದಾಖಲಿಸಿ ವಿಶ್ವಕಪ್‌ನಲ್ಲಿ ಐತಿಹಾಸಿಕ ಮೈಲಿಗಲ್ಲು ಬರೆದಿದೆ. ಆದರೆ ಮುಂದಿನ ಪಂದ್ಯಗಳಲ್ಲಿ ಜರ್ಮನಿ ಪೈಪೋಟಿ ನೀಡಬಲ್ಲ ಇಕ್ವಾಡೋರ್ ಮತ್ತು ಐವರಿಕೋಸ್ಟ್ ತಂಡಗಳನ್ನು ಎದುರಿಸಲಿದೆ.

ಪಂದ್ಯದ 6ನೇ ನಿಮಿಷದಲ್ಲೇ ಫೆಲಿಕ್ಸ್ ಎನ್‌ಮೇಚ ಜರ್ಮನಿ ಪರ ಗೋಲ್ ದಾಖಲಿಸಲು ಆರಂಭಿಸಿದರು. ಎನ್‌ಮೇಚ ಗೋಲು ದಾಖಲಿಸುತ್ತಲೇ ಬ್ಲೂ ವೇವ್ ಹೆಸರಿನ ಕುರಸಾವೊ ಅಭಿಮಾನಿಗಳಲ್ಲಿ ಆತಂಕ ಮನೆಮಾಡಿತ್ತು. ಆದರೆ ಜರ್ಮನಿ ಗೋಲ್ ಮಳೆ ಅಲ್ಲಿಗೇ ನಿಲ್ಲದೆ



ಮುಂದುವರಿಯಿತು. ಹಾವರ್ಟ್ಸ್ ಅವಳಿ ಗೋಲ್ ಹೊಡೆದರೆ, ನಿಕೊ, ಜಮಾಲ್, ಬ್ರೌನ್, ಡೆನಿಸ್ ಸ್ಕೋರ್ ಮಾಡುವ ಮೂಲಕ ಕುರಸಾವೊ ಎದ್ದೇಳಲು ಅವಕಾಶ ಇರಲಿಲ್ಲ. ತಂಡದ ಪ್ರದರ್ಶನಕ್ಕೆ ಟೂರ್ನಿಯ ಅತಿ ಕಿರಿಯ ಕೋಚ್ ಜೂಲಿಯನ್ ನೇಗೆಲ್ಸ್‌ಮನ್ ಸಂಭ್ರಮಿಸಿದರು.

ಅತಿ ಹಿರಿಯ ಜರ್ಮನಿ ಗೋಲ್‌ಕೀಪರ್ 40 ವರ್ಷದ ಮ್ಯಾನುಯೆಲ್ ನ್ಯೂಯರ್ ತಮ್ಮ 5ನೇ ವಿಶ್ವಕಪ್‌ನಲ್ಲಿ ಮೈದಾನಕ್ಕಿಳಿದಿದ್ದರು. ಹಾವರ್ಟ್ಸ್ ಒಟ್ಟಾರೆ ತಮ್ಮ 24ನೇ ಗೋಲ್ ದಾಖಲಿಸಿದ್ದರು. ಬದಲಿ ಆಟಗಾರ ಉಂಡವ್ ತಮ್ಮ ಸತತ 7ನೇ ಪಂದ್ಯದಲ್ಲಿ 7ನೇ ಗೋಲ್ ಹೊಡೆದಿದ್ದರು.



ಬ್ರೆಜಿಲ್ ದಾಖಲೆ ಮುರಿದ ಜರ್ಮನಿ!

ಫಿಫಾ ವಿಶ್ವಕಪ್‌ನಲ್ಲಿ ಅತ್ಯಧಿಕ ಗೋಲ್ ದಾಖಲಿಸುವ ಮೂಲಕ ಬ್ರೆಜಿಲ್ ದಾಖಲೆಯನ್ನು ಜರ್ಮನಿ ಮುರಿದಿದೆ. ಕಡೆಯದಾಗಿ 2014ರಲ್ಲಿ ವಿಶ್ವಕಪ್ ಗೆದ್ದ ಜರ್ಮನಿ, 2022ರ ಕತಾರ್ ವಿಶ್ವಕಪ್‌ನಲ್ಲಿ ಗುಂಪಿನ ಹಂತದಲ್ಲೇ ಹೊರಬಿದ್ದಿತ್ತು. 2026ರಲ್ಲಿ ಟೂರ್ನಿಯ ಅತಿ ಕಿರಿಯ ಕೋಚ್ ಜೂಲಿಯನ್ ಸಾರಥ್ಯದಲ್ಲಿ ಜರ್ಮನಿ ಗೆಲುವಿನ ಶುಭಾರಂಭ ಮಾಡಿದೆ. 2014ರ ಸೆಮಿಫೈನಲ್‌ನಲ್ಲಿ ಬ್ರೆಜಿಲ್ ವಿರುದ್ಧ 7 ಗೋಲ್ ಹೊಡೆದಿತ್ತು.

ಜರ್ಮನಿ 7-1 ಕುರಸಾವೊ

- 6ನೇ ನಿಮಿಷ-ಫೆಲಿಕ್ಸ್ ಎನ್‌ಮೇಚ (ಜರ್ಮನಿ)
- 21ನೇ ನಿಮಿಷ-ಲಿವಾನೊ ಕೊಮೆನೆನ್ಸಿಯಾ (ಕುರಸಾವೊ)
- 38ನೇ ನಿಮಿಷ-ನಿಕೊ ಸ್ಲೋಟರ್‌ಬೆಕ್ (ಜರ್ಮನಿ)
- 45+5ನೇ ನಿಮಿಷ(ಪೆ)-ಕೈ ಹಾವರ್ಟ್ಜ್ (ಜರ್ಮನಿ)
- 47ನೇ ನಿಮಿಷ-ಜಮಾಲ್ ಮ್ಯುಸಿಯಲ (ಜರ್ಮನಿ)
- 68ನೇ ನಿಮಿಷ-ನೇಥನೀಲ್ ಬ್ರೌನ್ (ಜರ್ಮನಿ)
- 78ನೇ ನಿಮಿಷ-ಡೆನಿಸ್ ಉಂಡಾವ್ (ಜರ್ಮನಿ)
- 88ನೇ ನಿಮಿಷ-ಕೈ ಹಾವರ್ಟ್ಜ್ (ಜರ್ಮನಿ)

ವಿಶ್ವಕಪ್ ಗೋಲ್ಸ್

ಜರ್ಮನಿ	239
ಬ್ರೆಜಿಲ್	238
ಅರ್ಜೆಂಟೀನಾ	152
ಫ್ರಾನ್ಸ್	136
ಇಟಲಿ	128

ವಿಶ್ವಕಪ್‌ನಲ್ಲಿ ನಾಲ್ಕು ಬಾರಿ 7+ ಗೋಲ್ ದಾಖಲಿಸಿದ ಜರ್ಮನಿ

ಕ್ರೀಡಾ ಕೇಂದ್ರ ಕಾಮಗಾರಿ ಆರಂಭ

▶ ವಿಜಯಕುಮಾರ ಬೆಳ್ಳೇರಿಮಠ

ಹುಬ್ಬಳ್ಳಿ: ಕಳೆದ ಮೂರು ವರ್ಷದಿಂದ ನನೆಗುದಿಗೆ ಬಿದ್ದಿದ್ದ ಇಲ್ಲಿಯ ರಾಜನಗರದಲ್ಲಿನ ಕರ್ನಾಟಕ ಕ್ರಿಕೆಟ್ ಸಂಸ್ಥೆಯ(ಕೆಎಸ್‌ಸಿಎ) ಕ್ರೀಡಾಂಗಣದಲ್ಲಿ ನಿರ್ಮಿಸಲಾಗುತ್ತಿರುವ ಕ್ರೀಡಾ ಕೇಂದ್ರ(ಕ್ಲಬ್‌ಹೌಸ್) ಕೊನೆಗೂ ಆರಂಭವಾಗಿದೆ.

ಅಗತ್ಯ ಮೂಲಸೌಕರ್ಯ ಕಲ್ಪಿಸಿ ಉತ್ತರ ಕರ್ನಾಟಕ ಭಾಗವನ್ನು ಕ್ರಿಕೆಟ್ ಹಬ್ ಮಾಡಲಾಗುವುದು ಎಂದು ಕೆಎಸ್‌ಸಿಎಯ ಈ ಹಿಂದಿನ ಆಡಳಿತ ಮಂಡಳಿ ಹೇಳಿತ್ತು. ಮುಂಬೈನ ವಾಸ್ತುಶಿಲ್ಪಿಯನ್ನು ಕರೆಸಿ ಕ್ರೀಡಾ ಕೇಂದ್ರಕ್ಕೆ ವಿನ್ಯಾಸ ರೂಪಿಸಲಾಗಿತ್ತು.

2015-16ನೇ ಸಾಲಿನಲ್ಲಿ 35 ಕೋಟಿ ಮೊತ್ತದಲ್ಲಿ ಯೋಜನೆ ಆರಂಭವಾಗಿತ್ತು. 2022ರ ನವೆಂಬರ್‌ನಿಂದ ಕಾಮಗಾರಿ ಸ್ಥಗಿತವಾಗಿತ್ತು. 30 ಕೋಟಿ ಮೊತ್ತದ ಕಾಮಗಾರಿ ಮಾತ್ರ ನಡೆದಿತ್ತು. ಆಟಗಾರರ ಡ್ರೆಸ್ಸಿಂಗ್ ಕೊಠಡಿ, ವೀಕ್ಷಕ ವಿವರಣೆಗಾರರ ಕೊಠಡಿ, ಈಜುಕೊಳ, ಆಟಗಾರರು ಉಳಿದುಕೊಳ್ಳಲು 60 ಬೆಡ್‌ಗಳ ಡಾರ್ಮೆಟರಿ, ಕ್ಲಬ್ ಸದಸ್ಯರಿಗಾಗಿ 22 ಕೊಠಡಿಗಳನ್ನು ನಿರ್ಮಿಸಲಾಗಿದೆ. ರೆಸ್ಟೋರೆಂಟ್, ಡೈನಿಂಗ್, ಕಿಚನ್, ಜಿಮ್, ಒಳವಿನ್ಯಾಸ ಸೇರಿದಂತೆ ಇನ್ನೂ ಕೆಲವು ಕಾಮಗಾರಿಗಳು ಬಾಕಿ ಉಳಿದಿದ್ದು, ಕಟ್ಟಡಕ್ಕೆ ಅಂತಿಮ ಸ್ಪರ್ಶ ನೀಡಬೇಕಿದೆ. ಹಿಂದಿನ ಆಡಳಿತ ಮಂಡಳಿ ಅವಧಿಯಲ್ಲಿ ಕಾಮಗಾರಿ ಆರಂಭಿಸಲು ಆಸಕ್ತಿ ವಹಿಸಿರಲಿಲ್ಲ, ಆದರೆ, ಹೊಸ ಆಡಳಿತ ಮಂಡಳಿ ಈಗ 30-40 ಲಕ್ಷ ರೂ. ಮೊತ್ತದಲ್ಲಿ ಕಾಮಗಾರಿ ಕೈಗೆತ್ತಿಕೊಂಡಿದೆ. ಪ್ಲಂಬಿಂಗ್, ಪಿಒಪಿ, ಪೇಂಟಿಂಗ್, ಎಲೆಕ್ಟ್ರಾನಿಕ್ಸ್ ಕಾಮಗಾರಿ ನಡೆಯುತ್ತಿದೆ. ಇದೇ ತಿಂಗಳು(ಜೂ.27ರಂದು) ಆರಂಭವಾಗುವ ಮಹಾರಾಜ ಟ್ರೋಫಿ ಟೂರ್ನಿಯ ಮುಂಚೆಯೇ ಕಾಮಗಾರಿಯು ಮುಗಿಯುವ ಸಾಧ್ಯತೆ ಇದೆ ಎನ್ನುತ್ತಾರೆ ಕೆಎಸ್‌ಸಿಎ ಸಿಬ್ಬಂದಿ. ಕೆಎಸ್‌ಸಿಎಗೆ ನೂತನ ಆಡಳಿತ ಮಂಡಳಿ ಅಧಿಕಾರ ವಹಿಸಿಕೊಂಡ ಬಳಿಕ ಸದಸ್ಯರು ಹಾಗೂ ತಾಂತ್ರಿಕ ತಂಡ ಹುಬ್ಬಳ್ಳಿ ಹಾಗೂ ಬೆಳಗಾವಿ ಮೈದಾನಕ್ಕೆ ಭೇಟಿ ನೀಡಿ ಕ್ರೀಡಾ ಕೇಂದ್ರ, ಆಗಬೇಕಾದ ಕೆಲಸಗಳ ಬಗ್ಗೆ ಪರಿಶೀಲಿಸಿತ್ತು. ಈ ವರದಿ ಪಡೆದು ಕಾಮಗಾರಿ ಆರಂಭಿಸುವುದಾಗಿ ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ತಿಳಿಸಿದ್ದರು. ಅದರಂತೆ ಮೊದಲ ಹಂತದಲ್ಲಿ 30-40 ಲಕ್ಷ ರೂ.ವೆಚ್ಚದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಚಾವಣಿಗೆ ಅಳವಡಿಸಿದ್ದ ಪಿಒಪಿ ಹಾಳಾಗಿದ್ದು, ಮಳೆ ನೀರು ಸೋರಿ ಗೋಡೆಗಳು ಪಾಚಿಗಟ್ಟಿದ್ದವು. ಸದ್ಯ ಪಿಒಪಿ ಕಾಮಗಾರಿ ಆರಂಭವಾಗಿದ್ದು, ಪೇಂಟಿಂಗ್ ಕೆಲಸ ನಡೆಯುತ್ತಿದೆ.

ಪಂದ್ಯಗಳು ನಡೆದಾಗ ಆಟಗಾರರು, ಸಿಬ್ಬಂದಿ ಉಳಿದುಕೊಳ್ಳಲು ಜಿಮ್ಖಾನ ಕ್ಲಬ್, ಹೋಟೆಲ್‌ಗಳಲ್ಲಿ ಕೊಠಡಿಗಳನ್ನು ಬಾಡಿಗೆಗೆ ಪಡೆಯಲಾಗುತ್ತಿದೆ. ಕ್ರೀಡಾಕೇಂದ್ರದ ಕಾಮಗಾರಿ ಪೂರ್ಣಗೊಂಡರೆ ಇಲ್ಲಿಯೇ ಆಟಗಾರರಿಗೆ ವ್ಯವಸ್ಥೆ ಕಲ್ಪಿಸಬಹುದು. ವೆಚ್ಚ ಸಹ ಉಳಿತಾಯವಾಗಲಿದೆ ಎನ್ನುತ್ತಾರೆ ಎಂದು ಕ್ರೀಡಾಪಟುಗಳು.



16.6 ಎಕರೆಯಲ್ಲಿ ಕ್ರೀಡಾಂಗಣ

ಕೆಎಸ್‌ಸಿಎ ಮೈದಾನ 16.5 ಎಕರೆ ಜಾಗ ಇದ್ದು, ಎಂಟು ಮುಖ್ಯ ಪಿಚ್, 10 ಅಭ್ಯಾಸ ಪಿಚ್ ಮತ್ತು 2 ಕಾಂಕ್ರೀಟ್ ಪಿಚ್‌ಗಳಿವೆ. ಸದ್ಯ ಎಲ್‌ಇಡಿ ಫ್ಲಡ್‌ಲೈಟ್ ಅಳವಡಿಸುವ ಕಾಮಗಾರಿ ನಡೆದಿದೆ. ಅನಿವಾರ್ಯ ಕಾರಣದಿಂದ ಇತ್ತೀಚೆಗೆ ಇಲ್ಲಿ ರಣಜಿ ಫೈನಲ್ ಪಂದ್ಯ ನಡೆದಿತ್ತು ಎನ್ನುತ್ತಾರೆ ಕ್ರೀಡಾಪಟುಗಳು.

> 30-40 ಲಕ್ಷ ರೂ.ಮೊತ್ತದಲ್ಲಿ ಕ್ಲಬ್ ಹೌಸ್‌ನ ವಿವಿಧ ಕಾಮಗಾರಿ ಆರಂಭವಾಗಿದೆ. ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಕಾಮಗಾರಿ ಪೂರ್ಣಗೊಳಿಸಲಾಗುವುದು.
> ■ ವೀರಣ್ಣ ಸವಡಿ, ನಿಮಂತ್ರಕ ಧಾರವಾಡ ವಲಯ ಕೆಎಸ್‌ಸಿಎ

ಐವರಿಕೋಸ್ಟ್ ಗೆಲ್ಲಿಸಿದ ಡಿಯಾಲೊ

- ಗೋಲ್‌ಲೆಸ್ ಡ್ರಾ ಫಲಿತಾಂಶ ನಿರೀಕ್ಷೆಯಿದ್ದ ಪಂದ್ಯ
- ಈಕ್ವೆಡಾರ್ ವಿರುದ್ಧ ಐವರಿಕೋಸ್ಟ್‌ಗೆ 1-0 ಜಯ

ಫಿಲೆಡೆಲ್ಫಿಯಾ(ಅಮೆರಿಕ): ಅಮದ್ ಡಿಯಾಲೊ 90ನೇ ನಿಮಿಷದಲ್ಲಿ ಚೊಚ್ಚಲ ವಿಶ್ವಕಪ್ ಗೋಲ್ ಹೊಡೆಯುವ ಮೂಲಕ ಐವರಿಕೋಸ್ಟ್‌ನ ರೋಚಕ ಗೆಲುವಿನ ರೂವಾರಿ ಆಗಿಬಿಟ್ಟರು. ಪಂದ್ಯವು ಈ ಬಾರಿಯ ವಿಶ್ವಕಪ್‌ನ ಮೊದಲ ಗೋಲ್‌ಲೆಸ್ ಡ್ರಾ ಫಲಿತಾಂಶ ಕಾಣುತ್ತದೆ ಎಂದೇ ನಿರೀಕ್ಷಿಸಲಾಗಿತ್ತು. ಆದರೆ ಡಿಯಾಲೊ ಡ್ರಾ ಆಗಬೇಕಿದ್ದ ಪಂದ್ಯವನ್ನು ಗೆಲ್ಲಿಸಿಕೊಟ್ಟರು.

ಸೋಮವಾರ ಬೆಳಗ್ಗಿನ ಪಂದ್ಯದಲ್ಲಿ ಈಕ್ವೆಡಾರ್ ಎದುರು 1-0 ಅಂತರದಿಂದ ಐವರಿಕೋಸ್ಟ್ ಗೆಲುವು ಸಾಧಿಸಿತು. ಸುಮಾರು ಹನ್ನೆರಡು ವರ್ಷಗಳ ಬಳಿಕ ವಿಶ್ವಕಪ್ ಅರ್ಹತೆ ಸಂಪಾದಿಸಿದ ಐವರಿಕೋಸ್ಟ್ ಮೊದಲ ಪಂದ್ಯದಲ್ಲೇ ಗೆಲುವಿನ ಕೇಕೆ ಹಾಕಿದೆ. 56ನೇ ನಿಮಿಷದಲ್ಲಿ ಬದಲಿ ಆಟಗಾರನಾಗಿ ಮೈದಾನಕ್ಕಿಳಿದ ಡಿಯಾಲೊ ಎಡಗಾಲಿನ ಮೂಲಕ ಅದೃಷ್ಟದ ಬಾಗಿಲು ತೆರೆದರು. ಚೆಂಡನ್ನು ಈಕ್ವೆಡಾರ್ ಗೋಲಿ ಹರ್ನನ್ ಗಾಲಿಂಡೆಜ್ ಅವರಿಗೆ ತಡೆಯಲು ಸಾಧ್ಯವಾಗಲಿಲ್ಲ. ವಿಲ್‌ಫ್ರೆಡ್ ಸಿಂಗೊ ಬಲದಿಂದ ಡಿಯಾಲೊಗೆ ಚೆಂಡನ್ನು ಪಾಸ್ ಮಾಡಿದ್ದರು. ವಿಶ್ವಕಪ್‌ನಲ್ಲಿ 2014ರ ಬಳಿಕ ಮೊದಲ ಬಾರಿ ಕಾಣಿಸಿಕೊಂಡರೂ ಐವರಿಕೋಸ್ಟ್‌ಗಿದು ನಾಲ್ಕನೇ ವಿಶ್ವಕಪ್. ಅಚ್ಚರಿಯ ಫಲಿತಾಂಶ ನೀಡಿದರೆ ಐವರಿಕೋಸ್ಟ್ ಇದೇ ಮೊದಲ ಬಾರಿಗೆ ನಾಕೌಟ್ ಹಂತವನ್ನು ಪ್ರವೇಶಿಸುವ ಅವಕಾಶ ಹೊಂದಿದೆ.

> ನಮಗೆ ಗೆಲುವಿನ ಅವಶ್ಯಕತೆ ಇತ್ತು. ನಾವಿಲ್ಲಿ ಇತಿಹಾಸ ಬರೆಯಲು ಬಂದಿದ್ದೇವೆ. ಇದು ನಮಗೆಲ್ಲರಿಗೂ ಮೊದಲ ಪ್ರಮುಖ ಟೂರ್ನಿ. ನಾವು ಉತ್ಸಾಹದಲ್ಲಿದ್ದೇವೆ.
> ■ ಅಮದ್ ಡಿಯಾಲೊ, ಗೆಲುವಿನ ರೂವಾರಿ



ತಪ್ಪಿದ ಈಕ್ವೆಡಾರ್ ಅವಕಾಶ

ಐದನೇ ವಿಶ್ವಕಪ್ ಆಡುತ್ತಿರುವ ಈಕ್ವೆಡಾರ್ ಎರಡನೇ ಬಾರಿಗೆ ನಾಕೌಟ್ ಹಂತ ಪ್ರವೇಶಿಸುವ ಅವಕಾಶ ಹೊಂದಿದೆ. ಡಿಯಾಲೊ ಗೋಲ್ ಹೊಡೆಯುವ ಮುನ್ನ ಪಂದ್ಯ ಸಂಪೂರ್ಣ ಈಕ್ವೆಡಾರ್ ಕೈಯಲ್ಲಿತ್ತು. 68ನೇ ನಿಮಿಷದಲ್ಲಿ ಇಕ್ವಾಡೋರ್ ಅತ್ಯುತ್ತಮ ಅವಕಾಶ ಹೊಂದಿತ್ತು. ದುರಾದೃಷ್ಟವಶಾತ್ ಗೊನ್ಜಾಲೊ ಪ್ಲಾಟಾ 25 ಯಾರ್ಡ್ ದೂರದಿಂದ ಹೊಡೆದ ಚೆಂಡನ್ನು ಐವರಿಕೋಸ್ಟ್ ಗೋಲಿ ಯಾಹಿಯಾ ಫೊಫಾನ ತಡೆದಿದ್ದರು.

ಐವರಿಕೋಸ್ಟ್ 1-0 ಇಕ್ವಾಡೋರ್
90ನೇ ನಿಮಿಷ - ಅಮದ್ ಡಿಯಾಲೊ (ಐವರಿಕೋಸ್ಟ್)

ಭಾರತಕ್ಕೆ ಸೂಪರ್ ಓವರ್ ಸೋಲು

ಶ್ರೀಲಂಕಾಗೆ ಜಯ

ಡಾಂಬುಲ್ಲಾ: ಶ್ರೀಲಂಕಾ ಎ ಹಾಗೂ ಭಾರತ ಎ ನಡುವಿನ ಏಕದಿನ ಪಂದ್ಯವು ರೋಚಕ ಟೈ ಆಗಿದ್ದು, ಸೂಪರ್ ಓವರ್‌ನಲ್ಲಿ ಶ್ರೀಲಂಕಾ ಗೆಲುವು ದಾಖಲಿಸಿದೆ. ಕೊನೆಯ ಓವರ್‌ನಲ್ಲಿ 5 ರನ್ ಹೊಡೆದು ಸುಲಭದಲ್ಲಿ ಗೆಲ್ಲುವ ಪಂದ್ಯವನ್ನು ಸೂಪರ್ ಓವರ್‌ವರೆಗೆ ಎಳೆದುತಂದ ಶ್ರೀಲಂಕಾ ಕೊನೆಗೂ ಗೆಲುವಿನ ನಗೆ ಬೀರಿತು. ಟೈ ಫಲಿತಾಂಶ ಬಂದಿದ್ದರಿಂದ ಸೂಪರ್ ಓವರ್ ಆಡಿಸಲಾಗಿದ್ದು, ಈಗ 16 ರನ್ ಬಿಟ್ಟುಕೊಟ್ಟು ದುಬಾರಿಯಾದರು. ಅವಿಷ್ಕಾ ಫೆರ್ನಾಂಡೊ 5ನೇ ಎಸೆತವನ್ನು ಸಿಕ್ಸರ್ ಗೆತ್ತಿದ್ದರು. 17 ರನ್ ಗುರಿ ಪಡೆದ ಭಾರತ ಎ ಪರ ಯುವ ಬ್ಯಾಟರ್ ವೈಭವ್ ಸೂರ್ಯವಂಶಿ ಕ್ರೀಸ್‌ಗಿಳಿದಿದ್ದು, ಭಾರತ ಎ ಗೆಲುವಿನ ವಿಶ್ವಾಸದಲ್ಲಿತ್ತು. ಆದರೆ ಮುತುಲನ್ ಬೌಲಿಂಗ್ ಉತ್ತಮವಾಗಿದ್ದು, ಸುರ್ಯಾಂಶ್ ಶೆಡ್ಗೆ ಮೂರು ಎಸೆತಗಳಲ್ಲಿ 3 ರನ್ ಅಷ್ಟೇ ಮಾಡಿದ್ದರು. ಉಳಿದ ಮೂರು ಎಸೆತಗಳಿಂದ ಸೂರ್ಯವಂಶಿ 1 ಬೌಂಡರಿ ಸಹಿತ 6 ರನ್ ಗಳಿಸಿದರು. ಭಾರತ ಸೋಲೊಪ್ಪಿತು.

ಸಂಕ್ಷಿಪ್ತ ಸ್ಕೋರ್

ಭಾರತ ಎ 265/10(49.2): ಸೂರ್ಯಾಂಶ್ 72, ವಿಪ್ರಜ್ 51. ವಿಜಯಕಾಂತ್ 26ಕ್ಕೆ 3, ಶಿರಾಜ್ 33ಕ್ಕೆ 3.
ಶ್ರೀಲಂಕಾ ಎ 265/9(50): ಸಮರವಿಕ್ರಮ 93, ನಿರೋಶನ್ 37. ಬಡೋನಿ 45ಕ್ಕೆ 2.

ಆಪದ್ಬಾಂಧವ ಕಮಾಡ!

ಅರ್ಲಿಂಗ್ಟನ್(ಅಮೆರಿಕ): ಇನ್ನೇನು ಜಪಾನ್ 2026ರ ವಿಶ್ವಕಪ್‌ನಲ್ಲಿ ತನ್ನ ಮೊದಲ ಸೋಲುಂಡಿತು ಎನ್ನುವಷ್ಟರಲ್ಲಿ 89ನೇ ನಿಮಿಷದಲ್ಲಿ ಇಕ್ವಿಲೈಸರ್ ಗೋಲ್ ದಾಖಲಿಸುವ ಮೂಲಕ ನೆದರ್‌ಲೆಂಡ್ಸ್ ವಿರುದ್ಧದ ಸೋಲನ್ನು ತಪ್ಪಿಸಿದರು. ಸೋಮವಾರ ಎಫ್ ಗುಂಪಿನ ಪಂದ್ಯದಲ್ಲಿ ಜಪಾನ್ ತನಗಿಂತ ಮೇಲಿನ ರ‍್ಯಾಂಕ್‌ನ ನೆದರ್‌ಲೆಂಡ್ಸ್‌ಗೆ ಉತ್ತಮ ಹೋರಾಟ ನೀಡಿದ್ದು, ಸೋಲೊಪ್ಪಲಿಲ್ಲ. ಸಹ ಆಟಗಾರ ಕೊಕಿ ಒಗಾವಾ ನೀಡಿದ ಹೆಡ್ಡರ್ ಬಳಸಿಕೊಂಡು ಕಮಾಡ ಸ್ಕೋರ್ ಮಾಡಿದ್ದರು. ನೆದರ್‌ಲೆಂಡ್ ಗೋಲಿ ಬಾರ್ಟ್ ವರ್‌ಬ್ರುಗೆನ್ ತಡೆಯುವಲ್ಲಿ ವಿಫಲರಾದರು. ಪಂದ್ಯ ಡ್ರಾ ಫಲಿತಾಂಶ ಕಂಡಿತು.




ನೆದರ್‌ಲೆಂಡ್ಸ್ 2-2 ಜಪಾನ್

- 51ನೇ ನಿಮಿಷ - ವಾನ್ ಡಿಜಿಕೆ (ನೆದರ್‌ಲೆಂಡ್ಸ್)
- 57ನೇ ನಿಮಿಷ - ಕೀಟೊ ನಕಮುರ (ಜಪಾನ್)
- 64ನೇ ನಿಮಿಷ - ಕ್ರಿಸೆನ್ಸಿಯೊ ಸಮ್ಮರ್‌ವಿಲ್ಲೆ (ನೆದರ್‌ಲೆಂಡ್ಸ್)
- 89ನೇ ನಿಮಿಷ - ಡೈಚಿ ಕಮಾಡ

ಪದಬಂಧ

▶ ರಾಜಾ ಸಂಗಮೇಶ ಹಿರೇಮಠ



6016

ಎಡದಿಂದ ಬಲಕ್ಕೆ
1.ನೋಡಲು ಆಕರ್ಷಕವಾಗಿರುವಂಥಾದ್ದು (4)
3.ಅನಿರೀಕ್ಷಿತ ಘಟನೆಯಿಂದ ಗಾಬರಿಯಾಗು (4)
6.ಪಕ್ಷಿಗಳ ಇಂಪಾದ ಶಬ್ದ (4)
7.ನಾಗರಹಾವು ಚಿತ್ರದ ಕೇಂದ್ರಪಾತ್ರ (4)
8.ಗರಿಯನ್ನು ಕಡೆಯಲ್ಲಿಟ್ಟುಕೊಂಡ ಕುಂಬಾರನ ಚಕ್ರ (3)
10.ವಾಣಿಜ್ಯ ವ್ಯವಹಾರ ಮಾಡುವವನು (3)
12.ಒಳ್ಳೆಯ ಮಗಳು-ಸುಪುತ್ರಿ (4)
13.ಬೆಲೆಯುಳ್ಳ ಮಣಿಗಳ ಗಣಿ-ಸಮುದ್ರ (4)
16.ಎಲ್ಲೆಯನ್ನು ಸೂಚಿಸಲು ನೆಟ್ಟ ಶಿಲೆ (4)
17.ರೋಗಿಗಳಿಗೆ ಚಿಕಿತ್ಸೆ ನೀಡುವ ಮನೆ (4)

ಮೇಲಿನಿಂದ ಕೆಳಕ್ಕೆ
1.ಈತ ಹಿರಿಯ ಸಹೋದರ (2)
2.ಚಿತ್ರದುರ್ಗದ ಪಾಳೆಗಾರರಲ್ಲಿ ಪ್ರಸಿದ್ಧ ನಾಯಕ (4)
4.ಸತ್ವಭಾವ ಹೊಂದಿರುವ ಸ್ತ್ರೀ (4)
5.ವಸ್ತು-ವಾಹನಗಳು ಪರಸ್ಪರ ಅಪ್ಪಳಿಸುವಿಕೆ (2)
7.ನೀಲಿ-ಕೆಂಪು ಬಣ್ಣದ ಸುಂದರ ಕಮಲ (3)
9.ಕೆಟ್ಟದ್ದನ್ನು ಕೆಲಸ ಮಾಡುವ ಸ್ಥಿತಿ ತರುವುದು (3)
11.ಹಳೆಯ ಕಾಲದ ಲೆಕ್ಕಪತ್ರ ಬರೆವ ಅಧಿಕಾರಿ (4)
12.ಕಲ್ಪವೃಕ್ಷವನ್ನು ಹೀಗೂ ಹೇಳುತ್ತೇವೆ (4)
14.ಪ್ರಾಣಿಯ ದೇಹದ ಒಂದು ಭಾಗ (2)
15.ಕಾಣದಾಗುವಿಕೆ-ಮರೆಯಾಗುವಿಕೆ (2)

6015 ಉತ್ತರ

ಎಡದಿಂದ ಬಲಕ್ಕೆ:
1.ಲುಪ್ತ 2.ಸಂನ್ಯಾಸ
4.ತಂಪು 6.ರಾಜದ್ರೋಹ
8.ಬಲಭಾಗ 11.ಕಡವರ
13.ಪಡಿತರ 15.ತೆಪ್ಪ
16.ಕವಲು 17.ಬಂಡಿ

ಮೇಲಿನಿಂದ ಕೆಳಕ್ಕೆ
: 1.ಬಡಕಲು
2.ಸಂಧ್ಯಾರಾಗ 3.ಸಹಾರಾ
5.ಪುರಹರ 7.ಜಡದೇಹ
9.ಭಾಗ್ಯವಂತ
10.ಸಂಪನ್ನತೆ
11.ಕಲ್ಲಿದ್ದಲು
12.ರಣಚಂಡಿ 14.ರಸಿಕ

ಕಿರುಸುದ್ದಿ

ವಿದ್ಯಾರ್ಥಿಗಳಿಗೆ ಸನ್ಮಾನ ಇಂದು

• **ಗದಗ:** ಭಾರತೀಯ ವೈದ್ಯಕೀಯ ಸಂಘ (ಐಎಂಎ) ಗದಗ ಘಟಕದ ಶತಮಾನೋತ್ಸವ ಆಚರಣೆ ಅಂಗವಾಗಿ 2026ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಜಿಲ್ಲೆಯಲ್ಲಿ ಅತ್ಯುತ್ತಮ ಸಾಧನೆಗೈದ ವಿದ್ಯಾರ್ಥಿಗಳ ಸನ್ಮಾನ ಸಮಾರಂಭ ಜೂ.16ರಂದು ಸಂಜೆ 4ಕ್ಕೆ ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಜಿಲ್ಲಾಡಳಿತ ಹಾಗೂ ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಜಿಲ್ಲೆಯಲ್ಲಿ ಅಗ್ರಸ್ಥಾನ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಪ್ರೋತ್ಸಾಹಿಸಲಾಗುವುದು. ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಉದ್ಘಾಟಿಸಲಿದ್ದು, ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕುಲಪತಿ ಹಾಗೂ ಕುಲಸಚಿವ ಪ್ರೊ. ಡಾ. ಸುರೇಶ್ ನಾಡಗೌಡರ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಆರ್.ಎಸ್. ಬುರಡಿ ಭಾಗವಹಿಸಲಿದ್ದಾರೆ. ಐಎಂಎ ಗದಗ ಶತಮಾನೋತ್ಸವ ಸಮಿತಿ ಅಧ್ಯಕ್ಷ ಡಾ. ಎಸ್.ಆರ್. ನಾಗನೂರ ಅಧ್ಯಕ್ಷತೆ ವಹಿಸುವರು. ಐಎಂಎ ಅಧ್ಯಕ್ಷ ಡಾ. ಶ್ರೀಧರ ಕುರಡಗಿ, ಶತಮಾನೋತ್ಸವ ಸಮಿತಿ ಕಾರ್ಯದರ್ಶಿ ಡಾ. ಪವನ್ ಪಾಟೀಲ ಹಾಗೂ ಐಎಂಎ ಕಾರ್ಯದರ್ಶಿ ಡಾ. ರಾಹುಲ್ ತೆರೋಳ ಕಾರ್ಯಕ್ರಮದ ಆಯೋಜನೆಯಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಜೂ.20ರಂದು ಕವಿಗೋಷ್ಠಿ

• **ಮುಂಡರಗಿ:** ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕದಿಂದ ತಾಲೂಕಿನ ಸಾಹಿತಿಗಳ ಕೃತಿಗಳ ಅವಲೋಕನ ಕಾರ್ಯಕ್ರಮವನ್ನು ಪ್ರತಿ 15 ದಿನಕ್ಕೊಮ್ಮೆ ಕಾರ್ಯಕ್ರಮ ಮಾಡುವ ಕುರಿತು ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಕಸಾಪ ಅಧ್ಯಕ್ಷ ಎಂ.ಜಿ.ಗಚ್ಚಣ್ಣವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಈ ಕಾರ್ಯಕ್ರಮದ ಅಡಿಯಲ್ಲಿ ಮೊದಲು ಕಾರ್ಯಕ್ರಮವಾಗಿ ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳು ಸಾಹಿತ್ಯ ಕ್ಷೇತ್ರದ ಅವಲೋಕನ ಕಾರ್ಯಕ್ರಮ ಜರುಗುವುದು. ಈ ಹಿನ್ನೆಲೆಯಲ್ಲಿ ಪೂಜ್ಯರ ಸಾಹಿತ್ಯ ಮತ್ತು ಅವರ ಸೇವೆ ಕುರಿತಾಗಿ ಕವಿಗೋಷ್ಠಿಯನ್ನು ಜೂ.20ರಂದು ಸಂಜೆ 4.30ಕ್ಕೆ ಶ್ರೀ ಜಗದ್ಗುರು ಅನ್ನದಾನೀಶ್ವರ ಕನ್ನಡ ಸಾಹಿತ್ಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಮುಂಡರಗಿ ತಾಲೂಕಿನ ಕವಿಗಳಿಗೆ ಮಾತ್ರ ಅವಕಾಶವಿದೆ. ಕವನದ ಸಾಲುಗಳು 15 ರಿಂದ 20 ಸಾಲುಗಳ ಮಿತಿಯಲ್ಲಿ ಇರಬೇಕು. ಸ್ವರಚಿತ ಕವನವಾಗಿರಬೇಕು ಎಲ್ಲಿಯೂ ಪ್ರಕಟವಾಗಿರಬಾರದು. ಕಡ್ಡಾಯವಾಗಿ ಹೆಸರು ನೋಂದಣಿ ಮಾಡಿದವರಿಗೆ ಮಾತ್ರ ಅವಕಾಶ ಮಾಡಲಾಗುವುದು. ಕವಿಗಳು ತಮ್ಮ ಹೆಸರನ್ನು ಜೂ.18ರಂದು ಮಧ್ಯಾಹ್ನ 4 ಗಂಟೆಯ ಒಳಗೆ ನೋಂದಾಯಿಸಬೇಕು. ಸ್ವರಚಿತ ಕವನ ಪ್ರತಿಯನ್ನು ತರಬೇಕು. ಕವನ ವಾಚನದ ನಂತರ ಕಸಾಪ ಘಟಕಕ್ಕೆ ಕೊಡಬೇಕು ಎಂದರು. ತಮ್ಮ ಹೆಸರನ್ನು ಶಂಕರ ಕುಕನೂರ (9845687427) ಮತ್ತು ಮಂಜುನಾಥ ಮುಧೋಳ (9741758688) ಇವರಲ್ಲಿ ನೋಂದಾಯಿಸಲು ತಿಳಿಸಲಾಗಿದೆ.

ಯೋಗ ತರಬೇತಿ

• **ಮುಂಡರಗಿ:** ಪಟ್ಟಣದ ರಾಮೇನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜೂ.21 ರ ವಿಶ್ವ ಯೋಗ ದಿನಾಚರಣೆಯ ಪೂರ್ವಾನ್ವಯವಾಗುವಂತೆ ಜೂ.15 ರಿಂದ ಆನ್ಲೈನ್ ಯೋಗ ಸಂಸ್ಥೆಯ ಸಹಕಾರದಲ್ಲಿ ಶಾಲಾ ಮಕ್ಕಳಿಗಾಗಿ ಏಳು ದಿನಗಳ ಯೋಗ ತರಬೇತಿ ಹಮ್ಮಿಕೊಳ್ಳಲಾಗಿದೆ. ಕೇಂದ್ರ ಆಯುಷ್ ಇಲಾಖೆಯ ಪ್ರೊಟೋಕಾಲ್ ಅನುಸರಿಸಿ ತರಬೇತಿ ನೀಡುತ್ತಿದೆ. ಬೆಳಗ್ಗೆ 6 ರಿಂದ 7 ರವರೆಗೆ ಒಂದು ಗಂಟೆ ನಡೆಯುವ ಈ ಶಿಬಿರವು ಉಚಿತವಾಗಿ ಮುಕ್ತವಾಗಿದೆ. ಕೇವಲ ನಮ್ಮ ಶಾಲಾ ಮಕ್ಕಳಿಗೆ ಮಾತ್ರವಲ್ಲದೇ ಬೇರೆ ಶಾಲೆಗೆ ಹೋಗುತ್ತಿರುವ ಮಕ್ಕಳು ಹಾಗೂ ಆಸಕ್ತಿ ಇರುವ ಇತರರು ಪಾಲ್ಗೊಂಡು ಪ್ರಯೋಜನ ಪಡೆಯಬಹುದು. ಜೂ.21ರಂದು ಬೆಳಗ್ಗೆ ಎಸ್‌ಡಿಎಂಸಿ ಅಧ್ಯಕ್ಷ ಉಮೇಶ ದಂಡಿನ ಅವರ ಅಧ್ಯಕ್ಷತೆಯಲ್ಲಿ ಸಾಮೂಹಿಕ ಯೋಗಾಸನ, ಮಕ್ಕಳಿಂದ ಕಲಾತ್ಮಕ ಯೋಗ ಪ್ರದರ್ಶನ, ಜರುಗಲಿದ್ದು ಅತಿಥಿಗಳಾಗಿ ನಿಯಮಿತ ಯೋಗಾಭ್ಯಾಸಿಗಳಾದ ಕೆ.ವಿ. ಹಂಚಿನಾಳ, ಡಾ.ಡಿ.ಸಿ. ಮಠದ, ಅಶೋಕ ಹುಲ್ಲಣ್ಣವರ, ಮಕ್ಕಳಿಗೆ ಯೋಗ ಉಡುಪುಗಳನ್ನು ಒದಗಿಸಿದ ಶಿಕ್ಷಣಪ್ರೇಮಿ ಆನಂದಗೌಡ ಪಾಟೀಲ ಭಾಗಿಯಾಗುವರು ಎಂದು ಶಾಲಾ ಮುಖ್ಯೋಪಾಧ್ಯಾಯ ಡಾ. ನಿಂಗು ಸೊಲಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉದ್ಘಾಟನೆ ಇಂದು

• **ಗದಗ:** ಜಿಲ್ಲಾ ಶಾಮಿಯಾನ ಸಪ್ಲಾಯರ್ಸ್ ಸಂಘದ ಸಹಯೋಗದಲ್ಲಿ ತಾಲೂಕು ಶಾಮಿಯಾನ ಸಪ್ಲಾಯರ್ ಸಂಘದ ಉದ್ಘಾಟನಾ ಸಮಾರಂಭ ನಗರದ ಕನಕ ಭವನದಲ್ಲಿ ಜೂ. 16ರಂದು ಬೆಳಗ್ಗೆ 9.30ಕ್ಕೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಸಂಘದ ಪ್ರಧಾನ ಕಾರ್ಯದರ್ಶಿ ರವೀಂದ್ರ ಬಾಬು ಮೇಹರವಾಡೆ ಹೇಳಿದರು. ನಗರದ ಪತ್ರಿಕಾ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2004ರಲ್ಲಿ ಆರಂಭವಾಗಿರುವ ಜಿಲ್ಲಾ ಶಾಮಿಯಾನ ಸಪ್ಲಾಯರ್ಸ್ ಸಂಘವು 22 ವರ್ಷಗಳನ್ನು ಪೂರೈಸಿದೆ ಎಂದರು. ಮುಖಂಡ ಸುರೇಶ ಕಲಬುರ್ಗಿ ಮಾತನಾಡಿ, ತಾಲೂಕು ಶಾಮಿಯಾನ ಸಪ್ಲಾಯರ್ ಸಂಘದ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಂಘದ ಜಿಲ್ಲಾಧ್ಯಕ್ಷ ಎನ್. ರಾಮರಾವ್ ಅಧ್ಯಕ್ಷತೆ ವಹಿಸುವರು. ಆಲ್ ಇಂಡಿಯಾ ಟೆಂಟ್ ಡೆಕೋರೇಶನ್ ಸಂಘದ ಉಪಾಧ್ಯಕ್ಷ ಜಿ. ಪರ್ವತಗುಂಡ್ರಾವ್ ಉದ್ಘಾಟಿಸುವರು. ಉತ್ತರ ಕರ್ನಾಟಕ ಶಾಮಿಯಾನ ಸಪ್ಲಾಯರ್ಸ್ ಸಂಘದ ಸಂಸ್ಥಾಪಕ ಅಧ್ಯಕ್ಷ ಶಿವಾನಂದ ಮಾನಕರ, ಖಜಾಂಚಿ ಪ್ರಸಾದ ಗಾಯಿ,ಧ್ಯಕ್ಷ ಅಮೇಶ್ವರ ಹಿರೇಮಠ ಪಾಲ್ಗೊಳ್ಳುವರು ಎಂದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಮೋಹನ ಗಜಾಕೋಶ, ಸಂಗಮೇಶ ಬೀಳಗಿ, ಮಂಜುನಾಥ ಗಜಾಕೋಶ, ಶಬ್ಬೀರಅಹ್ಮದ ಈಟಿ, ಅಬ್ದುಲ ಮುಳಗುಂದ ಇದ್ದರು.



ಮುಂಡರಗಿ: ಭೂತಾನ್‌ನಲ್ಲಿ ನಡೆದ 3ನೇ ಸೀನಿಯರ್ ಏಷ್ಯನ್ ಆಟ್ಯಾಪಟ್ಯಾ ಚಾಂಪಿಯನ್‌ಶಿಪ್‌ನಲ್ಲಿ ಭಾರತಕ್ಕೆ ಚಿನ್ನದ ಪದಕ ಗೆದ್ದ ತಾಲೂಕಿನ ಶಿಂಗಟರಾಯನಕೇರಿ ತಾಂಡಾ ಗ್ರಾಮದ ಕ್ರೀಡಾ ಸಾಧಕ ರಾಹುಲ್ ಶೇಖರ್ ಕಾರಭಾರಿ ಅವರನ್ನು ತಾಪಂ ಇಒ ವಿಜಯಕುಮಾರ ಬೆಣ್ಣೆ ಗ್ರಾಮದ ಪಂಚಾಯತ್ ಕಚೇರಿಯಲ್ಲಿ ಸನ್ಮಾನಿಸಿದರು. ಪಂಚಾಯತರಾಜ್ ಸಹಾಯಕ ನಿರ್ದೇಶಕ ಪ್ರವೀಣ ಗೋಣೆಮ್ಮನವರ, ಕ್ರೀಡಾ ಸಾಧಕರ ಪಾಲಕರು, ಮನೋಜ್ ರಾಠೋಡ, ಗ್ರಾಪಂ ಸಿಬ್ಬಂದಿ ಇದ್ದರು.

ರೈತರ ವಿವಿಧ ಬೇಡಿಕೆ ಈಡೇರಿಸಲು ಆಗ್ರಹ

• **ಗದಗ:** ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ನಗರದಲ್ಲಿ ಕರ್ನಾಟಕ ರಾಜ್ಯ ಬೆಳೆ ವಿಮಾ ಹೋರಾಟ ಸಮಿತಿ ವತಿಯಿಂದ ಜಂಟಿ ಕೃಷಿ ನಿರ್ದೇಶಕರಿಗೆ ಮನವಿ ಸಲ್ಲಿಸಿ ಒತ್ತಾಯಿಸಲಾಯಿತು. ಟೋಲ್ ಫ್ರೀ ಮುಖಾಂತರ ದೂರು ದಾಖಲಿಸಿದ ಕೆಂಪು ಮೆಣಸಿನಕಾಯಿ ರೈತರಿಗೆ ಓರಿಯಂಟಲ್ ಇನ್ಸುರನ್ಸ್ ಕಂಪನಿಯವರು ಅನ್ಯಾಯ ಮಾಡಿದ್ದಾರೆ. ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಲ್ಲಿ ಮುಂಗಾರು ಹಂಗಾಮಿನ ಕೆಂಪು ಮೆಣಸಿನಕಾಯಿ ಬೆಳೆಗೆ ಜಿಲ್ಲೆಯ ರೈತರು ವಿಮೆ ಮಾಡಿದ್ದಾರೆ. ಟೋಲ್ ಫ್ರೀ ಮುಖಾಂತರ ಕಂಪನಿಯವರಿಗೆ ದೂರು ದಾಖಲಿಸಿದ್ದು, ಸ್ಥಳೀಯ ಗಂಡಾಂತರದಡಿ ಒಟ್ಟು 38177 ಅರ್ಜಿಗಳು ಸ್ವೀಕೃತಗೊಂಡಿದ್ದು, ಸ್ವೀಕರಿಸಲಾದ ಎಲ್ಲಾ ಅರ್ಜಿಗಳನ್ನು ಪರಿಶೀಲಿಸದೆ, ತೋಟಗಾರಿಕೆ ಇಲಾಖೆ ಮತ್ತು ಕಂಪನಿಯವರು ಕೂಡಿ ಕೇವಲ ಪೀಲರ್ ಎ ಮತ್ತು ಗ್ರಾಮ ಲೆಕ್ಕಾಧಿಕಾರಿಗಳು ಮಾಡಿರುವ ಕ್ರಾಫ್ ಸರ್ವೆ ಮಾಹಿತಿ ಮೇಲೆ ಅವುಗಳ ಪೈಕಿ 9687 ಪ್ರಸ್ತಾವಣೆಗಳಲ್ಲಿ ಕೆಂಪು ಮೆಣಸಿನಕಾಯಿ ಬೆಳೆ ಲಭ್ಯವಿದೆ ಮತ್ತು 4755 ಪ್ರಸ್ತಾವಣೆಗಳ ಬೆಳೆ ಸಮೀಕ್ಷೆಯಲ್ಲಿ ಪಾಳೆಂದು ನಮೂದಿಸಿದ್ದಾರೆ. 1319 ಪ್ರಸ್ತಾವಣೆಗಳಿಗೆ ಬೆಳೆ ಸಮೀಕ್ಷೆ ಮಾಹಿತಿ ಲಭ್ಯವಿಲ್ಲ ಎಂದು ಇಲಾಖೆಯವರು ಮಾಹಿತಿ ನೀಡಿದ್ದಾರೆ. 15761 ಪ್ರಸ್ತಾವಣೆಗಳಿಗೆ ಕಂಪನಿಯವರು ತಮ್ಮ ಸಂದಾಯಿಸಿದ್ದಾರೆ. ಅಂದರೆ ಹೊಲದಲ್ಲಿ ಮೆಕ್ಕೆಜೋಳ, ಹೆಸರು, ಶೇಂಗಾ, ಈರುಳ್ಳಿ ಕಬ್ಬು ಜಿಪಿಎಸ್ ಆಗಿರುತ್ತದೆ. ಅಂತಹ ಹೊಲಗಳಿಗೆ ಓರಿಯಂಟಲ್ ಇನ್ಸುರನ್ಸ್ ಕಂಪನಿಯವರು ಹಣ ಸಂದಾಯಿಸಿದ್ದಾರೆ. ಉಳಿದ ರೈತರಿಗೆ ಅನ್ಯಾಯವಾಗಿದ್ದು, ಕಂಪನಿಯವರು ಅಂದರ 22356 ಪ್ರಸ್ತಾವಣೆಗಳಿಗೆ ಊಹ, ಪೋಹದ ಆದಾರದ ಮಾಹಿತಿ ಇಟ್ಟು ಕೊಂಡು ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನ ನಿಯಮಗಳನ್ನು ಕಂಪನಿಯವರು ಗಾಳಿಗೆ ತೂರಿದ್ದಾರೆ ಎಂದು ಆರೋಪಿಸಿದರು.



ಗದಗ: ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ನಗರದಲ್ಲಿ ಕರ್ನಾಟಕ ರಾಜ್ಯ ಬೆಳೆ ವಿಮಾ ಹೋರಾಟ ಸಮಿತಿ ವತಿಯಿಂದ ಜಂಟಿ ಕೃಷಿ ನಿರ್ದೇಶಕರಿಗೆ ಮನವಿ ಸಲ್ಲಿಸಿ ಒತ್ತಾಯಿಸಲಾಯಿತು. ರಾಜ್ಯಾಧ್ಯಕ್ಷ ಪರಮೇಶ್ವರಪ್ಪ ಜಂತ್ಲಿ, ಹನಮರೆಡ್ಡಿ ಮರಬರಡ್ಡಿ, ಎಫ್.ಎಸ್. ಪಾಟೀಲ, ಉಮೇಶ ಲಿಂಗರೆಡ್ಡಿ, ಬೂದೇಶ ಮೈಲಾರ, ರುದ್ರಯ್ಯ ಎಸ್. ಹಿರೇಮಠ, ಅಶೋಕ ಬಶೆಟ್ಟಿ, ಸತೀಶ ಗಿಡ್ಡಹನಮಣ್ಣವರ ಇದ್ದರು.

ಯೋಗ ದಿನಾಚರಣೆ ಅರ್ಥಪೂರ್ಣವಾಗಿರಲಿ



ಯೋಗ ಅವಶ್ಯ

ಇಂದಿನ ಒತ್ತಡಮಯ ಜೀವನಶೈಲಿಯಿಂದಾಗಿ ಪ್ರತಿಯೊಬ್ಬರಿಗೂ ಮಾನಸಿಕ ಹಾಗೂ ದೈಹಿಕ ಸಮಸ್ಯೆಗಳು ಉಂಟಾಗುವುದು ಸರ್ವೇ ಸಾಮಾನ್ಯವಾಗಿದೆ. ಹೀಗಾಗಿ ನಮ್ಮ ದೈನಂದಿನ ಜೀವನದಲ್ಲಿ ಯೋಗವನ್ನು ಅಳವಡಿಸಿಕೊಳ್ಳಬೇಕು ಎಂದು ಡಿಸಿ ಹೇಳಿದರು.

• **ಗದಗ:** 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಜೂ.21 ರಂದು ನಗರದ ಕೆ.ಎಚ್.ಪಾಟೀಲ ಕ್ರೀಡಾಂಗಣದಲ್ಲಿ ಅರ್ಥಪೂರ್ಣವಾಗಿ ಹಾಗೂ ಅಚ್ಚುಕಟ್ಟಾಗಿ ಆಚರಿಸಲು ಕ್ರಮ ವಹಿಸಬೇಕೆಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಆಯುಷ ಇಲಾಖೆಯ ವತಿಯಿಂದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ನಿಮಿತ್ತ ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ., ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಶರಣು ಗೋಗೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ರಾಧಾ ಮಣ್ಣೂರ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಸ್.ಬಿ.ಮಸನಾಯಕ, ಆಯುಷ ವೈದ್ಯಾಧಿಕಾರಿಗಳ ಸಂಘದ ಅಧ್ಯಕ್ಷ ಡಾ.ಸಂಜೀವ ನಾರಪ್ಪನವರ, ಕೆ.ಎಚ್. ಪಾಟೀಲ್ ಆಸ್ಪತ್ರೆ ವೈದ್ಯಾಧಿಕಾರಿ ಡಾ.ಸತೀಶ್ ಹೊಂಬಾಳಿ, ಬ್ರಹ್ಮಕುಮಾರಿ ಅಕ್ಕನವರು, ಆಯುಷ್ ವೈದ್ಯಾಧಿಕಾರಿಗಳ ಸಂಘದ ಕಾರ್ಯದರ್ಶಿ ಡಾ.ಬಿ.ಎಂ ಲೋಕಪುರಿ, ಡಾ.ಎಂ.ಎಂ ಹಾದಿಮನಿ, ಡಾ.ಸಾಯಿಪ್ರಕಾಶ ಇತರರಿದ್ದರು.

ಜೂ.21ರಂದು ಯೋಗ ದಿನಾಚರಣೆ

ಜೂ.21 ರಂದು ಬೆಳಗ್ಗೆ 6.15ಕ್ಕೆ ನಗರದ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ 12ನೇ ಅಂತಾಷ್ಟ್ರೀಯ ಯೋಗ ದಿನಾಚರಣೆ ಉದ್ಘಾಟನೆ ಜರುಗಲಿದೆ. ಬೆಳಗ್ಗೆ 7ರಿಂದ ಯೋಗಾಭ್ಯಾಸ ಕಾರ್ಯಕ್ರಮ ಜರುಗಲಿದೆ. ಜೂ.20 ರಂದು 12ನೇ ಯೋಗ ದಿನಾಚರಣೆ ನಿಮಿತ್ತ ಜಾಥಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜಾಥಾವು ಅಂದು ಬೆಳಗ್ಗೆ 9.30ಕ್ಕೆ ಗದಗ ಬೆಟಗೇರಿ ನಗರ ಆವರಣದಿಂದ ಹೊರಟು ಟಾಂಗಾ ಕೂಟ, ರೋಟರಿ ಸರ್ಕಲ್, ಗಾಂಧಿ ಸರ್ಕಲ್ ಮಾರ್ಗವಾಗಿ ನಗರಸಭೆ ಆವರಣಕ್ಕೆ ಬಂದು ತಲುಪಲಿದೆ ಎಂದು ಜಿಲ್ಲಾ ಆಯುಷ ಇಲಾಖೆಯ ಅಧಿಕಾರಿ ಡಾ.ಜುಬೇದಬೇಗಂ ತಿಳಿಸಿದರು.

- ಪ್ರತಿಯೊಬ್ಬರ ದೈಹಿಕ ಮತ್ತು ಮಾನಸಿಕ ಆರೋಗ್ಯ ರಕ್ಷಣೆಗಾಗಿ ದೈನಂದಿನ ಜೀವನದಲ್ಲಿ ಯೋಗ ಅಳವಡಿಸಿಕೊಳ್ಳಿ
- ಜಿಲ್ಲೆಯ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಶಾಲೆ ಹಾಗೂ ಕಾಲೇಜುಗಳಲ್ಲಿ ಯೋಗ ದಿನಾಚರಣೆ ಕಡ್ಡಾಯ ಎಂದ ಡಿಸಿ

ಮುಖ್ಯಮಂತ್ರಿಗಳ ನಿವಾಸದತ್ತ ಕಾರ್ಯಕರ್ತರ ಕಾಲ್ನಡಿಗೆ

• **ರೋಣ:** ಐದು ದಶಕಗಳಿಂದ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿ ಹಿರಿಯ ಶಾಸಕರಾಗಿ ಜಿಲ್ಲೆ ಸೇರಿದಂತೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಕಟ್ಟಿ ಬೆಳೆಸುವಲ್ಲಿ ಶ್ರಮ ಪಟ್ಟಿರುವ ಶಾಸಕ ಜಿ.ಎಸ್.ಪಾಟೀಲರಿಗೆ ಈ ಬಾರಿ ಸಚಿವ ಸ್ಥಾನ ನಿಡಬೇಕು ಆಗ್ರಹಿಸಿ ಮತಕ್ಷೇತ್ರದ ಸಾವಿರಾರು ಕಾರ್ಯಕರ್ತರು ತುಮಕೂರ ಸಿದ್ದಗಂಗಾ ಪುಣ್ಯಕ್ಷೇತ್ರದಿಂದ ಮುಖ್ಯಮಂತ್ರಿಗಳ ನಿವಾಸದತ್ತ ಕಾಲ್ನಡಿಗೆ ಹೊರಡುವ ಸಿದ್ಧತೆ ನಡೆಸಿದ್ದಾರೆ.

ಅಂದಿನ ಸಿಎಂ ಸಿದ್ದರಾಮಯ್ಯ ಹಾಗೂ ಇಂದಿನ ಸಿಎಂ ಡಿ.ಕೆ.ಶಿವಕುಮಾರ ಅವರು ರೋಣದಲ್ಲಿ ಜರುಗಿದ ಗ್ಯಾರಂಟಿ ಫಲಾನುಭವಿಗಳ ಸಮ್ಮುಖದಲ್ಲಿ ಜಿ.ಎಸ್ .ಪಾಟೀಲರು ಸಚಿವ ಸ್ಥಾನಕ್ಕೆ ಅತ್ಯಂತ ಅರ್ಹ ವ್ಯಕ್ತಿಯಾಗಿದ್ದು, ಅವರಿಗೆ ಅವಕಾಶ ಕಲ್ಪಿಸಲಾಗುವುದು ಎಂದಿದ್ದರು. ಹೀಗಾಗಿ ಮತಕ್ಷೇತ್ರದ ಕಾರ್ಯಕರ್ತರು ಈ ಬಾರಿ ಸಚಿವ ಸ್ಥಾನ ಕೊಡಲೇ ಬೇಕು ಎಂದು ಆಗ್ರಹಿಸಿ ಜೂ.16 ರಂದು ತುಮಕೂರ ಸಿದ್ದಗಂಗಾ ಮಠದಿಂದ ಸಿಎಂ ನಿವಾಸಕ್ಕೆ ಕಾಲ್ನಡಿಗೆ ಮೂಲಕ ಪ್ರತಿಭಟನೆಗೆ ಇಳಿದಿದ್ದಾರೆ.

ಜೂ.16 ರಂದು ಸಂಜೆ ಕಾಂಗ್ರೆಸ್‌ನ ಸಾವಿರಾರು ಕಾರ್ಯಕರ್ತರು ಸಿದ್ದಗಂಗಾ ಮಠದಲ್ಲಿ ಜಮಾವಣೆಗೊಂಡು ಶ್ರೀಮಠದಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಜೂ.17 ರ ಬೆಳಗ್ಗೆ ಸಿಎಂ ನಿವಾಸದತ್ತ ತಮ್ಮ ಕಾಲ್ನಡಿಗೆ ಆರಂಭಿಸಲಿದ್ದಾರೆ. ಕಾಲ್ನಡಿಗೆ ಜಾಥಾವು ಎರಡು ದಿನಗಳು ನಡೆಯುವುದರಿಂದ ಕಾಲ್ನಡಿಗೆಯ ಮೆರವಣಿಗೆಯಲ್ಲಿ ಅಂದಾಜು 8 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಪಾಲ್ಗೊಳ್ಳುವ ನಿರೀಕ್ಷೆಯನ್ನು ಸಂಘಟಕರು ಇಟ್ಟುಕೊಂಡಿದ್ದಾರೆ. ಮಹಿಳಾ ಕಾರ್ಯಕರ್ತರು ಮತ್ತು ಮುಖಂಡರುಗಳು ಕಾಲ್ನಡಿಗೆಯಲ್ಲಿ ಭಾಗವಹಿಸುವ ಸಂಭವವಿದೆ.



> ನಮ್ಮ ತಾಳ್ಮೆಗೂ ಮಿತಿಯಿದೆ. ಪಕ್ಷದ ವರಿಷ್ಠರು ಕಾರ್ಯಕರ್ತರ ಬೇಡಿಕೆಗೆ ಸ್ಪಂದಿಸಬೇಕು. ಜಿ.ಎಸ್.ಪಾಟೀಲ ಅವರಿಗೆ ಈ ಬಾರಿ ಸಚಿವ ಸ್ಥಾನ ಕೊಡಲೇ ಬೇಕು. ಇಲ್ಲದಿದ್ದರೆ ಮುಂದಿನ ಅನಾಹುತಗಳಿಗೆ ಪಕ್ಷದ ವರಿಷ್ಠರೇ ಕಾರಣರಾಗುತ್ತಾರೆ.
>
> ■ **ದುರ್ಗಪ್ಪ ಹಿರೇಮನಿ,** ಪುರಸಭೆ ಮಾಜಿ ಉಪಾಧ್ಯಕ್ಷ, ರೋಣ

> ಶಾಸಕ ಜಿ.ಎಸ್. ಪಾಟೀಲರ ಪಕ್ಷ ನಿಷ್ಠೆ ಅವರನ್ನು ಕಾಪಾಡುತ್ತದೆ ಎಂಬ ನಂಬಿಕೆ ನಾವು ಇಟ್ಟುಕೊಂಡಿದ್ದೇವೆ. ಪಕ್ಷದ ವರಿಷ್ಠರು ನಮಗೆ ಸಾಮಾಜಿಕ ನ್ಯಾಯ ಒದಗಿಸಲಿ.
>
> ■ **ದಾವಲಸಾಬ ಬಾಡಿನ,** ಪುರಸಭೆ ಮಾಜಿ ಸದಸ್ಯ, ರೋಣ



ನರಗುಂದ: ಪಟ್ಟಣದ ಪಂಚಗೃಹ ಗುಡ್ಡದ ಹಿರೇಮಠದ ಸಿದ್ಧಲಿಂಗ ಸ್ವಾಮೀಜಿ ಜನ್ಮದಿನದ ನಿಮಿತ್ತ ಶ್ರೀ ಸಿದ್ಧೇಶ್ವರ ಗೋಶಾಲೆ ಆವರಣದಲ್ಲಿ ಗೋಪಾಲಕರು ನಾಗಪುಷ್ಪ ಗಿಡಗಳನ್ನು ನೆಟ್ಟರು. ಈ ಸಂದರ್ಭದಲ್ಲಿ ಜಗನ್ನಾಥ ಹಂಚಿನಾಳ, ಶಾಂತಮ್ಮ ಹಂಚಿನಾಳ, ಕುಸುಮಕ್ಕ ಬೂಸಪ್ಪನವರ, ಭಾವನಾ ಮೋಟೆ, ಈರಣ್ಣ ಏಳರ್ಝುರಿ, ಸುಜಾತಾ ಅನೇಕರಿದ್ದರು.



ಲಕ್ಷ್ಮೇಶ್ವರ: ಎಸ್ ಟಿ ಪಿ ಎಂ ಬಿ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾರಂಭ ಹಾಗೂ ಅಕ್ಷರಾಭ್ಯಾಸ ನಡೆಯಿತು.

ಜಿಎಸ್‌ಪಾಗೆ ಸಚಿವ ಸಂಪುಟದಲ್ಲಿ ಸ್ಥಾನ ನೀಡಿ

• **ಗಜೇಂದ್ರಗಡ:** ರೋಣ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಎಸ್. ಪಾಟೀಲ್ ಅವರಿಗೆ ಸಚಿವ ಸಂಪುಟದಲ್ಲಿ ಸ್ಥಾನ ನೀಡಬೇಕು ಎಂದು ಎಸ್.ಎಸ್.ಕೆ. ಸಮಾಜದ ಮುಖಂಡ ಹಾಗೂ ಹಿರಿಯ ನ್ಯಾಯವಾದಿ ಆರ್.ಎಂ. ರಾಯಬಾಗಿ ಅವರು ಸರ್ಕಾರದ ಉನ್ನತ ನಾಯಕರಲ್ಲಿ ಒತ್ತಾಯಿಸಿದ್ದಾರೆ.

ನಗರದ ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಜಿ.ಎಸ್. ಪಾಟೀಲ್ ಅವರು ಹಿರಿಯ ಮತ್ತು ಅನುಭವಿ ರಾಜಕಾರಣಿಯಾಗಿದ್ದಾರೆ. ಕ್ಷೇತ್ರದ ಅಭಿವೃದ್ಧಿಗೆ ಅವರು ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಪಕ್ಷದ ಸಂಘಟನೆಯಲ್ಲಿ ಮತ್ತು ಸಾರ್ವಜನಿಕ ಸೇವೆಯಲ್ಲಿ ಅವರ ಕೊಡುಗೆ ಅಪಾರವಾಗಿದೆ. ಉತ್ತರ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿ ಹಾಗೂ ಗದಗ ಜಿಲ್ಲೆಯ ಪ್ರಗತಿಯ ದೃಷ್ಟಿಯಿಂದ ಅವರಿಗೆ ಸಚಿವ ಸ್ಥಾನ ನೀಡುವುದು ಅತ್ಯಗತ್ಯವಾಗಿದೆ. ಜಿ.ಎಸ್. ಪಾಟೀಲ ಅವರಿಗೆ ಸಚಿವ ಸ್ಥಾನ ನೀಡುವುದರಿಂದ ಈ ಭಾಗದ ಜನಸಾಮಾನ್ಯರ ಧ್ವನಿಗೆ ಮತ್ತಷ್ಟು ಬಲ ಸಿಗಲಿದೆ. ಅದ್ದರಿಂದ ಮುಖ್ಯಮಂತ್ರಿಗಳು ಹಾಗೂ ಪಕ್ಷದ ಹೈಕಮಾಂಡ್ ತಕ್ಷಣವೇ ಗಮನ ಹರಿಸಿ ಅವರಿಗೆ ಸಂಪುಟದಲ್ಲಿ ಸೂಕ್ತ ಸ್ಥಾನಮಾನ ನೀಡಬೇಕು ಎಂದರು.

ಕೇಶವ ರಾಯಬಾಗಿ ಮಾತನಾಡಿ, ಜಿ.ಎಸ್. ಪಾಟೀಲ್ ಅವರು ಗದಗ ಜಿಲ್ಲೆ ಹಾಗೂ ಉತ್ತರ ಕರ್ನಾಟಕ ಭಾಗದಲ್ಲಿ ಪಕ್ಷದ ಬಲವರ್ಧನೆಗೆ ಮತ್ತು ಸಾರ್ವಜನಿಕರ ಏಳಿಗೆಗೆ 4 ದಶಕಗಳಿಂದ ಶ್ರಮಿಸುತ್ತಾ ಬಂದಿದ್ದಾರೆ. ಅವರ ನಿಷ್ಠೆ, ಹಿರಿತನ ಹಾಗೂ ಅನುಭವವನ್ನು ಪರಿಗಣಿಸಿ ಅವರಿಗೆ ಸಚಿವ ಸಂಪುಟದಲ್ಲಿ ಸೂಕ್ತ ಸ್ಥಾನಮಾನ ನೀಡುವುದು ನ್ಯಾಯಸಮ್ಮತವಾಗಿದೆ. ಇದರಿಂದ ಈ ಭಾಗದ ಜನಸಾಮಾನ್ಯರ ಧ್ವನಿಗೆ ಮತ್ತು ಪ್ರಗತಿಗೆ ಮತ್ತಷ್ಟು ಶಕ್ತಿ ಸಿಗಲಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಅಶೋಕ ರಾಯಬಾಗಿ, ಕಾಶಿನಾಥ್ ಮಿಸ್ಕಿನ, ಕೇಶವ ರಾಯಬಾಗಿ, ಜ್ಞಾನುಸಾ ಆರ್., ಧ್ಯಾನೇಧರ ಭಾಂಡಗೆ, ಬಾಬನಸಾ ರಾಯಬಾಗಿ ,ಮಾಧುಸಾ ಪವಾರ, ರವೀಂದ್ರಸಾ ಚಾವಡಿಮನಿ, ಗುರುನಾಥಸಾ ರಾಯಬಾಗಿ, ಶಂಕರಸಾ ಆರ್., ಗೋವಿಂದಸಾ ರಾಜೋಳಿ, ವಾಸು ಮಲಜಿ, ದಶರಥ ,ರುಕಮಸಾ ಪವಾರ , ಶ್ರೀಧರ ಜಿತೂರಿ ಸೇರಿದಂತೆ ಅನೇಕರು ಇದ್ದರು.



ಜಿ.ಎಸ್.ಪಾಟೀಲಗೆ ಸಚಿವ ಸ್ಥಾನ ನೀಡಿ

• **ಮುಂಡರಗಿ:** ರೋಣ ವಿಧಾನಸಭಾ ಮತಕ್ಷೇತ್ರದ ಹಿರಿಯ ಶಾಸಕ ಜಿ.ಎಸ್.ಪಾಟೀಲ ಅವರಿಗೆ ಈ ಬಾರಿಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕು ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ತಾಲೂಕು ಘಟಕದ ಅಧ್ಯಕ್ಷ ಮಂಜುನಾಥ ಮುಂಡವಾಡ ಒತ್ತಾಯಿಸಿದ್ದಾರೆ.

ಈ ಕುರಿತು ಸೋಮವಾರ ಪ್ರಕಟಣೆ ನೀಡಿರುವ ಅವರು, ಜಿ.ಎಸ್.ಪಾಟೀಲ ಅವರು ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದು ಜನಪರ ಕೆಲಸಗಳನ್ನು ಮಾಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷದ ಗದಗ ಜಿಲ್ಲಾಧ್ಯಕ್ಷರಾಗಿ ಪಕ್ಷವನ್ನು ಜಿಲ್ಲೆಯಲ್ಲಿ ಹೆಚ್ಚು ಮಟ್ಟದಲ್ಲಿ ಸಂಘಟಿಸುವಲ್ಲಿ ಉತ್ತಮ ಸೇವೆ ಸಲ್ಲಿಸಿದ್ದಾರೆ. ಎಲ್ಲ ವರ್ಗದ ಸಮುದಾಯಗಳವರ ಜೊತೆಗೆ ಅತ್ಯುತ್ತಮವಾಗಿರುವಂತ ಬಾಂಧವ್ಯ ಹೊಂದಿದ್ದಾರೆ. ಸರ್ವ ಜನಾಂಗದವರ ಏಳ್ಗೆಗೆ ಸದಾ ಶ್ರಮಿಸುತ್ತಾರೆ. ಇಂತಹ ಜನಪರ ನಾಯಕರು ಸಚಿವರಾದರೆ ಈ ಭಾಗದಲ್ಲಿ ಮತ್ತು ರಾಜ್ಯದಲ್ಲಿ ಉತ್ತಮ ಸೇವೆ ದೊರೆಯಲಿದ್ದು, ಹೆಚ್ಚೆಚ್ಚು ಅಭಿವೃದ್ಧಿ ಕೆಲಸಗಳು ನಡೆಯಲಿವೆ. ಕಾಂಗ್ರೆಸ್ ಹೈಕಮಾಂಡ್ ಹಾಗೂ ರಾಜ್ಯ ನಾಯಕರು ಗುರುತಿಸಿ ಸಚಿವ ಸಂಪುಟದಲ್ಲಿ ಜಿ.ಎಸ್.ಪಾಟೀಲ ಅವರಿಗೆ ಸಚಿವ ಸ್ಥಾನ ಕಲ್ಪಿಸಬೇಕು ಎಂದು ಆಗ್ರಹಿಸಿದ್ದಾರೆ.

ಎಚ್‌ಕೆಪಾ ಡಿಸಿಎಂ, ಜಿಎಸ್‌ಪಾ ಸಚಿವರಾಗಲಿ

• **ಲಕ್ಷ್ಮೇಶ್ವರ:** ಗದಗ ಜಿಲ್ಲೆಯ ರಾಜಕೀಯದಲ್ಲಿ ಎಚ್.ಕೆ.ಪಾಟೀಲ ಹಾಗೂ ಜಿ.ಎಸ್. ಪಾಟೀಲ ಇಬ್ಬರೂ ಕಾಂಗ್ರೆಸ್ ಪಕ್ಷದ ಹಿರಿಯ ಮತ್ತು ಪ್ರಭಾವಿ ನಾಯಕರಾಗಿದ್ದಾರೆ. ಉತ್ತರ ಕರ್ನಾಟಕದ ಅಭಿವೃದ್ಧಿಗೆ ಈ ನಾಯಕರ ಕೊಡುಗೆ ಅಪಾರ ಎಂದು ಆನಂದಸ್ವಾಮಿ ಗಡ್ಡದೇವರಮಠ ಹೇಳಿದ್ದಾರೆ.



ಈ ಕುರಿತು ಪ್ರಕಟಣೆಗೆ ನೀಡಿರುವ ಅವರು, ಜಿಲ್ಲೆಗೆ ಮಹತ್ವದ ಕೊಡುಗೆ ನೀಡಿರುವ ಎಚ್.ಕೆ.ಪಾಟೀಲ ಅವರು ಆಲಮಟ್ಟಿ ಸೇರಿದಂತೆ ಹಲವು ಅಭಿವೃದ್ಧಿ ಯೋಜನೆಗಳ ಮೂಲಕ ತಮ್ಮ ಛಾಪು ಮೂಡಿಸಿದ್ದಾರೆ. ಅವರನ್ನು ಉಪಮುಖ್ಯಮಂತ್ರಿಯನ್ನಾಗಿ ಮಾಡಬೇಕು. ಸಾವಿರ ಕೆರೆಗಳ ಸರದಾರ ಎಂದೇ ಖ್ಯಾತಿ ಪಡೆದಿರುವ ಜಿ.ಎಸ್.ಪಾಟೀಲರು ದೀರ್ಘಕಾಲದಿಂದ ಜನಸೇವೆ ಹಾಗೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಸಂಘಟನೆಗೆ ದುಡಿದಿದ್ದಾರೆ. ಅವರ ಕುಟುಂಬದ ಸೇವೆ ಮತ್ತು ಪ್ರಭಾವ ಗದಗ ಜಿಲ್ಲೆಯಷ್ಟೇ ಅಲ್ಲದೇ ಹಾವೇರಿ, ಧಾರವಾಡ ಹಾಗೂ ಬಾಗಲಕೋಟೆ ಭಾಗಗಳಲ್ಲಿಯೂ ಇದೆ. ಹೀಗಾಗಿ ಅವರಿಗೆ ಸಚಿವ ಸ್ಥಾನ ನೀಡಿದಲ್ಲಿ ಪಕ್ಷದ ಸಂಘಟನೆ ಮತ್ತಷ್ಟು ಬಲಗೊಳ್ಳಲಿದೆ ಎಂದಿದ್ದಾರೆ.

ಎಚ್‌ಕೆಪಾಗೆ ಸಚಿವ ಸ್ಥಾನ ನೀಡಲು ಆಗ್ರಹ

• **ಗದಗ:** ಶಾಸಕ ಎಚ್.ಕೆ. ಪಾಟೀಲ ಅವರಿಗೆ ಸಚಿವ ಸ್ಥಾನ ನೀಡುವಂತೆ ವಿವಿಧ ಸಂಘಟನೆಗಳ ಮುಖಂಡರು ಆಗ್ರಹಿಸಿದರು.

ಕಾಂಗ್ರೆಸ್ ಮಹಿಳಾ ಘಟಕದಿಂದ ನಡೆದ ಸುದ್ದಿಗೋಷ್ಠಿಯಲ್ಲಿ, ಎಚ್. ಕೆ. ಪಾಟೀಲ ಅವರನ್ನು ಸಚಿವ ಸಂಪುಟಕ್ಕೆ ಸೇರ್ಪಡೆ ಮಾಡಿಕೊಂಡು ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಒತ್ತಾಯಿಸಲಾಯಿತು. ದ್ರಾಕ್ಷಾಯಿಣಿ, ಶಕುಂತಲಾ ಮೂಲಿಮನಿ, ಮೀನಾಕ್ಷಿ ಬೆನಕಣ್ಣವರ, ಶಕುಂತಲಾ ಅಕ್ಕಿ, ವೀಣಾ ಕಟ್ನಳ್ಳಿ, ಲಕ್ಷ್ಮೀ ಸಿದ್ಧಮ್ಮನಹಳ್ಳಿ, ಮುಸ್ಕಾನ್ ಸೈಯದ್, ಯಲ್ಲಮ್ಮ ಜಡಿ, ರುದ್ರಮ್ಮ, ಲಲಿತಾ, ವಾಣಿ ಹಿರೇಮಠ ಇದ್ದರು. ಕೆ.ಎಚ್. ಪಾಟೀಲ ಬಡಾವಣೆಯ ಗಂಗಾಮಡಿ ಅಪಾರ್ಟ್‌ಮೆಂಟ್ ನಿವಾಸಿಗಳು ನಡೆಸಿದ ಪತ್ರಿಕಾಗೋಷ್ಠಿಯಲ್ಲಿ, ಬಡಜನರ ಅಭಿವೃದ್ಧಿಗೆ ಎಚ್. ಕೆ. ಪಾಟೀಲರು ಅವಶ್ಯ. ಅವರಿಗೆ ಸಚಿವ ಸ್ಥಾನ ನೀಡದಿದ್ದರೆ ಉಪವಾಸ ಸತ್ಯಾಗ್ರಹ ಮಾಡುತ್ತೇವೆ ಎಂದು ಎಚ್ಚರಿಸಿದರು. ಕಸ್ತೂರಿಬಾಯಿ ಬಾಕಳೆ, ರಮೇಶ್ ಕಾಗದಗಾರ, ಸುನಿತಾ ಕೌಜಗೇರಿ, ಹಸೀನ ಅಣ್ಣಿಗೇರಿ, ಅನ್ನಪೂರ್ಣ ಚಲವಾದಿ, ಜ್ಯೋತಿ ಲಮಾಣಿ, ಉಮಾ ಭಜಂತ್ರಿ, ಗೀತಾ ವಾಲ್ಮೀಕಿ, ಲಕ್ಷ್ಮೀಪಲ್ಲೇದ , ಮಂಜುಳ ಬಳ್ಳಾರಿ, ರೂಪಾ ಕುರುಗೋಡು, ರೇಣುಕಾ ನಗರಾಳ ಇದ್ದರು. ಕಾರ್ಮಿಕರ ಕಲ್ಯಾಣ ಸಂಸ್ಥೆ, ಕಟ್ಟಡ ನಿರ್ಮಾಣ ಕಾರ್ಮಿಕರ ಮಹಾಸಂಘ, ಎಚ್.ಕೆ.ಪಾಟೀಲರನ್ನು ಸಚಿವರನ್ನಾಗಿ ಮಾಡುವಂತೆ ಒತ್ತಾಯಿಸಿ ಬೆಂಗಳೂರಿಗೆ ತೆರಳಿ, ವಿಧಾನಸೌಧದ ಮುಂದೆ ಧರಣಿ ನಡೆಸುತ್ತೇವೆ. ಜೂ. 16ರಂದು ನಗರದಲ್ಲಿ ನಡೆಯುವ ಪ್ರತಿಭಟನೆಗೆ ಕಾರ್ಮಿಕರ ಬೆಂಬಲವಿದೆ ಎಂದು ಮುಖಂಡರು ಹೇಳಿದರು. ಗೌಸ್ ಬಳ್ಳಾರಿ, ಭೀಮಪ್ಪ ಪೂಜಾರ್, ಮೋತಿಲಾಲ್ ಮಾಳಗಿಮನಿ, ಮೊಹಮ್ಮದ್ ಇರ್ಫಾನ್ ಡಂಬಳ, ಮೆಹಬೂಬ್ ಖಾನ್ ಫರಾಣ್, ಮೊಹಮದ್ ಇಸ್ಮಾಯಿಲ್ ರೋಣ, ಯೂಸುಫ್ ಸಾಬ್ ಕೊಟ್ಟೂರು, ಶಿವಶಂಕರಗೌಡ, ಲಿಂಗಪ್ಪ ಕಟ್ಟಿಮನಿ ಇದ್ದರು.

ಎಚ್.ಕೆ. ಪಾಟೀಲರಿಗೆ ಸಚಿವ ಸ್ಥಾನ ನೀಡದಿದ್ದರೆ ಕಾಂಗ್ರೆಸ್ ಅಲ್ಪಸಂಖ್ಯಾತರ ಶಹರ ಘಟಕದ ಪದಾಧಿಕಾರಿಗಳು ಸಾಮೂಹಿಕ ರಾಜೀನಾಮೆ ನೀಡಲಿದ್ದೇವೆ ಎಂದು ಪತ್ರಿಕಾಗೋಷ್ಠಿಯಲ್ಲಿ ಎಚ್ಚರಿಕೆ ನೀಡಲಾಯಿತು. ಬಾಷಾ ಸಾಬ್, ಉಮರ್ ಫಾರೂಕ್ ಹುಬ್ಬಳ್ಳಿ, ಬಾಬಾಜಾನ್ ಬಳಗಾನೂರು, ನಿಜಾಮುದ್ದೀನ್ ಕಾಟಾಪುರ್, ಮೊಹ್ಮದ್ ಯೂಸುಫ್ ನಮಾಜ್, ಅಲ್ತಾಫ್, ಇರ್ಫಾನ್ ಡಂಬಳ, ಎಂ.ಎಂ. ಮಾಳಕೊಪ್ಪ ಇದ್ದರು. ಬಣಜಿಗ ಸಮಾಜದ ಕೆ.ಎಚ್.ಪಾಟೀಲ ಅಭಿಮಾನಿ ಬಳಗದಿಂದಲೂ ಸುದ್ದಿಗೋಷ್ಠಿ ನಡೆಸಿ, ಸಚಿವ ಸ್ಥಾನ ನೀಡುವವರೆ ಹೋರಾಟ ಮಾಡುವುದಾಗಿ ತಿಳಿಸಲಾಯಿತು. ಶಿವಯೋಗಿ ಅಗಡಿ, ವಿಶ್ವನಾಥ ರಾಮನಕೊಪ್ಪ, ವಿರೂಪಾಕ್ಷಪ್ಪ ಅಕ್ಕಿ, ಚನ್ನಬಸಪ್ಪ ಅಕ್ಕಿ, ಲಲಿತಾ ಇಂಗಳಹಳ್ಳಿ, ಬಸವರಾಜ ರಾಮನಕೊಪ್ಪ, ಸಿದ್ರಾಮಪ್ಪ, ರವಿ ಪಟ್ಟಣಶೆಟ್ಟಿ, ಈಶ್ವರಪ್ಪ ದಿನ್ನಿ, ಸುರೇಶ್ ನಿಲುಗಲ್ಲು, ಬಸವರಾಜ ಉಮಚಗಿ ಇದ್ದರು.

ಕಾಮಗಾರಿ ಆರಂಭಗೊಳ್ಳದಿದ್ದರೆ ಹೋರಾಟ

• **ಲಕ್ಷ್ಮೇಶ್ವರ:** ಬಾಳೆಹೊಸೂರ ರಸ್ತೆ ಅಭಿವೃದ್ಧಿ ಕಾಮಗಾರಿ ಶುರುವಾಗದಿದ್ದರೆ ಗ್ರಾಮದವರೆಲ್ಲರೂ ಹೋರಾಟ ಹಮ್ಮಿಕೊಳ್ಳಲಿದ್ದೇವೆ ಎಂದು ಬಾಲೆಹೊಸೂರ ಗ್ರಾಪಂ ಮಾಜಿ ಅಧ್ಯಕ್ಷ ಯಲ್ಲಪ್ಪ ಸೂರಣಗಿ ಹಾಗೂ ತಾಲೂಕ ಯುವ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ರಾಜು ಬೆಂಚಳ್ಳಿ ಹೇಳಿದರು.

ಅವರು ಈ ಕುರಿತು ಪತ್ರಿಕಾ ಹೇಳಿಕೆ ನೀಡಿ, ತಾಲೂಕಿನಿಂದ ಕೊನೆಯ ಗ್ರಾಮದ ಬಾಲೆಹೊಸೂರು ಗದಗ ಜಿಲ್ಲೆಗೆ ಮತ್ತು ತಾಲೂಕಿಗೆ ಕೊನೆಯ ಗ್ರಾಮವಾಗಿದೆ. ಶಾಲಾ ಕಾಲೇಜು, ಆಸ್ಪತ್ರೆ, ಉದ್ಯೋಗ ಮತ್ತು ವ್ಯಾಪಾರ, ದೈನಂದಿನ ವಹಿವಾಟುಗಳಿಗೆ ಪ್ರತಿದಿನ ಲಕ್ಷ್ಮೇಶ್ವರಕ್ಕೆ ಹೋಗುತ್ತಾರೆ. ಗ್ರಾಮಸ್ಥರಿಗೆ ಸಂಪರ್ಕ ಮಾಡಲು ಸರಿಯಾದ ರಸ್ತೆ ಇಲ್ಲ ಎಂದು ಆರೋಪಿಸಿದ್ದಾರೆ. ಈ ರಸ್ತೆಯು ಸೂರಣಗಿ ಗ್ರಾಮದಿಂದ ಸಾಕಷ್ಟು ತಗ್ಗು ಗುಂಡಿಗಳಿಂದ ರಸ್ತೆ ಹದಗೆಟ್ಟು ಸುಮಾರು ದಶಕಗಳು ಕಳೆದಿದ್ದು, ಕಳೆದ ಒಂದುವರೆ ವರ್ಷದ ಹಿಂದೆಯೇ ಸುಮಾರು ಏಳು ಕೋಟಿ ರೂಪಾಯಿ ಅನುದಾನ ರಸ್ತೆಗಾಗಿ ಬಿಡುಗಡೆಯಾಗಿದ್ದರೂ ಸಹ ಕಾರಣಾಂತರಗಳಿಂದ ರಸ್ತೆ ಕಾಮಗಾರಿ ನಡೆಯುತ್ತಿಲ್ಲ ಗುತ್ತಿಗೆದಾರರು ಕಾಮಗಾರಿ ಮಾಡಲು ಮೀನಾಮೇಷ ಎಣಿಸುತ್ತಿದ್ದಾರೆ. ಹದಗೆಟ್ಟ ರಸ್ತೆಯಿಂದ ಸರ್ಕಾರಿ ಸಾರಿಗೆ ಬಸ್ ಬಸ್ಸುಗಳು ಬಂದರೂ ಪದೇ ಪದೇ ಕೆಟ್ಟು ನಿಲ್ಲುತ್ತಿವೆ ಎಂದು ಸಾರಿಗೆ ಅಧಿಕಾರಿಗಳು ಬಸ್ ಬಿಡುವುದಿಲ್ಲ ಎಂದು ಸಾಕಷ್ಟು ಬಾರಿ ಬಸ್ ಬಂದ್ ಮಾಡಿದ್ದಾರೆ. ಬಾಲೆಹೊಸೂರು ಗ್ರಾಪಂ ಮಾಜಿ ಅಧ್ಯಕ್ಷ ಯಲ್ಲಪ್ಪ ಸೂರಣಗಿ, ಕೋಟೆಪ್ಪ ಪೆದ್ದರ, ನಾಗರಾಜ ಬಂಡಿ,ಶಿವಪ್ಪ ಮುದಿಯಮ್ಮನವರ, ಮಲ್ಲೇಶ ಚಪ್ಪರಮನಿ ಇತರರಿದ್ದರು.



ಮೂಲಸೌಲಭ್ಯ ಕಲ್ಪಿಸಲು ನಿವಾಸಿಗಳ ಆಗ್ರಹ

• **ಶಿರಹಟ್ಟಿ:** ಕಪ್ಪತ್ತನವರ ಬಡಾವಣೆಯ ನಿವಾಸಿಗಳು ಸೋಮವಾರ ಪಟ್ಟಣ ಪಂಚಾಯಿತಿ ಎದುರು ಪ್ರತಿಭಟಿಸಿ, 18ನೇ ವಾರ್ಡ ಸಮಸ್ಯೆ ಶೀಘ್ರ ಪರಿಹಾರಕ್ಕೆ ಕ್ರಮ ಕೈಗೊಳ್ಳುವಂತೆ ಮುಖ್ಯಾಧಿಕಾರಿ ಸವಿತಾ ತಾಂಬ್ರೆ ಅವರಿಗೆ ಮನವಿ ಸಲ್ಲಿಸಿದರು.

ಬಡಾವಣೆ ನಿವಾಸಿ ಚನ್ನಪ್ಪ ಮರಿಗೌಡ್ರ ಮಾತನಾಡಿ, ಕುಡಿಯುವ ನೀರಿಗಾಗಿ ಹಾಹಾಕಾರ ಉಂಟಾಗಿದೆ. ಮಹಿಳೆಯರಿಗೆ, ಮಕ್ಕಳಿಗೆ ಮನೆಗೆ ನೀರು ತರುವುದು ಒಂದು ಉದ್ಯೋಗವಾಗುತ್ತಿದೆ. ಮೊದಲು 8-10 ದಿನಕ್ಕೊಮ್ಮೆ ಅರ್ಧ ಗಂಟೆಯಷ್ಟೇ ಕುಡಿಯುವ ನೀರು ಬಿಡುತ್ತಿದ್ದರು. ಈಗ 15 ದಿನವಾದರೂ ನೀರು ಪೂರೈಕೆ ಮಾಡುತ್ತಿಲ್ಲ. ವಾರ್ಡ್‌ನಲ್ಲಿ ನೀರಿನ ಸಮಸ್ಯೆ ಅಷ್ಟೇ ಅಲ್ಲದೇ ರಸ್ತೆ, ವಿದ್ಯುತ್ ದೀಪ, ಚರಂಡಿ ವ್ಯವಸ್ಥೆಯಿಲ್ಲ, ಮುಳ್ಳಿನ ಗಿಡಗಳಿಂದ ರಸ್ತೆಗಳು ಆವೃತ್ತವಾಗಿವೆ. ರಾತ್ರಿ ವಿದ್ಯುತ್ ದ್ವೀಪವಿಲ್ಲದೆ ಜನರಿಗೆ ಓಡಾಡಲು ಕಷ್ಟವಾಗುತ್ತಿದೆ. ಮಳೆಗಾಲದಲ್ಲಿ ಹುಳಾಪುಡಿಗಳ ಕಾಟವಿದೆ. ಆದರೂ ಅಧಿಕಾರಿಗಳು ನಮ್ಮ ಬಡಾವಣೆಗೆ ಮೂಲಭೂತ ಸೌಲಭ್ಯ ಕಲ್ಪಿಸಲು ಮೀನಾಮೇಷ ಎಣಿಸುತ್ತಿದ್ದಾರೆ. ಶೀಘ್ರ ಸಮಸ್ಯೆ ಇತ್ಯರ್ಥಕ್ಕೆ ಪ್ರಯತ್ನಿಸದಿದ್ದರೆ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ಕುಳಿತುಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಮಲ್ಲಪ್ಪ ವಗ್ಗರ, ಪರಸಪ್ಪ ಬಕ್ಸದ, ಕವಿತಾ ಭಜಮ್ಮನವರ, ಭರಮವ್ವ ಕುದುರಿ, ದುರಗಪ್ಪ ಮೋಡಿಕಾರ, ಹನುಮಂತ ಮೋಡಿಕಾರ, ಮಜ್ಜಪ್ಪ ಹುಲಕಡ್ಡಿ, ಇಸ್ಮಾಯಿಲ್ ಹಾಫಿಜ, ಮಮತಾಜ ಬಡಿಗೇರ, ಗೌರಮ್ಮ ಸುಂಕದ, ಲಕ್ಷ್ಮಿ ಬಾರಕೇರ, ನಿಂಗಪ್ಪ ಮಾನೆಗಾರ ಇದ್ದರು.



ಔಷಧಿ ಸಸ್ಯಗಳ ಕಾಶಿ ಕಪ್ಪತ್ತಗುಡ್ಡ: ಮೇಗಲಮನಿ



• **ಮುಂಡರಗಿ:** 400ಕ್ಕೂ ಹೆಚ್ಚಿನ ಔಷಧಿ ಸಸ್ಯಗಳು, ಪ್ರಾಣಿ-ಪಕ್ಷಿಗಳಿರುವ, ಉತ್ತರ ಕರ್ನಾಟಕದ ಸಹ್ಯಾದ್ರಿ ಎಂದೇ ಖ್ಯಾತವಾಗಿರುವ ಔಷಧಿ ಸಸ್ಯಗಳ ಕಾಶಿ ಕಪ್ಪತ್ತಗುಡ್ಡ ನಮ್ಮ ನಿಮ್ಮೆಲ್ಲರ ಸಂಪತ್ತು. ಅದನ್ನು ಉಳಿಸಿ ಬೆಳೆಸುವ ಬಹುದೊಡ್ಡ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಹೀಗಾಗಿ ಕಪ್ಪತ್ತಗುಡ್ಡದ ಉಳುವಿಗಾಗಿ ಎಲ್ಲರೂ ಕಂಕಣಬದ್ಧರಾಗಿರೋಣ ಎಂದು ಕಪ್ಪತ್ ಹಿಲ್ಸ್ ವಲಯ ಅರಣ್ಯಾಧಿಕಾರಿ ಮಂಜುನಾಥ ಮೇಗಲಮನಿ ಹೇಳಿದರು.

ಅವರು ಗದಗ ಜಿಲ್ಲಾ ಶ್ಯಾಮಿಯಾನ್ ಸಪ್ಲಾಯರ್ಸ್ ಸಂಘ ಹಾಗೂ ಮುಂಡರಗಿ ತಾಲೂಕು ಶ್ಯಾಮಿಯಾನ್ ಸಪ್ಲಾಯರ್ಸ್ ಸಂಘದಿಂದ ತಾಲೂಕಿನ ಬಾಗೇವಾಡಿ ವ್ಯಾಪ್ತಿಯ ಕಪ್ಪತ್ತಗುಡ್ಡದಲ್ಲಿ ತಾಲೂಕು ಶ್ಯಾಮಿಯಾನ್ ಸಪ್ಲಾಯರ್ಸ್ ಸಂಘದ 6ನೇ ವಾರ್ಷಿಕೋತ್ಸವದ ಅಂಗವಾಗಿ ವಿವಿಧ ಶಾಲಾ ವಿದ್ಯಾರ್ಥಿಗಳಿಂದ ಕೋಟಿ ಬೀಜ ಬಿತ್ತುವ ಹಸಿರೋತ್ಸವ ಹಾಗೂ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಾಜಿ ಸಹಕಾರ ಹಾಗೂ ಅರಣ್ಯ ಸಚಿವ ಎಸ್.ಎಸ್.ಪಾಟೀಲ ಮಾತನಾಡಿ, ಇಂದು ಕಪ್ಪತ್ತಗುಡ್ಡ ಉಳಿದಿದ್ದರೆ ಅದಕ್ಕೆ ಈ ಹಿಂದೆ ಕುತ್ತು ಬಂದಾಗ ಗದುಗಿನ ಲಿಂಗೈಕ್ಯ ಜ.ಡಾ.ತೋಂಟದ ಸಿದ್ಧಲಿಂಗ ಸ್ವಾಮೀಜಿ ಹಾಗೂ ಜಿಲ್ಲೆಯ ಇತರೆ ಸ್ವಾಮೀಜಿ ಹಾಗೂ ಪರಿಸರವಾದಿಗಳ ಹೋರಾಟದ ಫಲವಾಗಿದೆ ಎಂದರು. ನಂದಿವೇರಿ ಮಠದ ಶಿವಕುಮಾರ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಸಿ.ಆರ್.ಪಿ. ಎಂ.ಸಿ.ಮರಡೂರಮಠ ಉಪನ್ಯಾಸ ಮಾಡಿದರು. ತಾಲೂಕು ಶ್ಯಾಮಿಯಾನ್ ಸಪ್ಲಾಯರ್ಸ್ ಸಂಘದ ಅಧ್ಯಕ್ಷ ರಾಜು ಹಟ್ಟಿ ಅಧ್ಯಕ್ಷತೆ ವಹಿಸಿದ್ದರು. ಉತ್ತರ ಕರ್ನಾಟಕ ಶ್ಯಾಮಿಯಾನ್ ಸಪ್ಲಾಯರ್ಸ್ ಸಂಘದ ಅಧ್ಯಕ್ಷ ಅಮರೇಶ್ವರ ಹಿರೇಮಠ, ಚೆನ್ನಬಸವ ಗಸ್ತಿ, ಶಂಕರ ಮಗಜಿ, ಬಸವರಾಜ ದಾಸರ್, ರಾಜು ಚೂರಿ, ಗವಿಸಿದ್ದಪ್ಪ ಜಂಗನವಾರಿ, ಶರೀಫ್ ನದಾಪ ಇತರರಿದ್ದರು.

ವೃತ್ತಿಜೀವನದಲ್ಲಿ ಸತ್ಯವಾದಿಗಳಾಗಿ

• **ಮುಂಡರಗಿ:** ಪರಿಸರ ಸಂರಕ್ಷಣೆಯಲ್ಲಿ ತೊಡಗಿಕೊಳ್ಳಿ, ನ್ಯಾಯವಾದಿಗಳಾಗಿ ವೃತ್ತಿಜೀವನ ಆರಂಭಿಸಲಿರುವ ನೀವು ಮೊದಲು ಸತ್ಯವಾದಿಗಳಾಗಬೇಕು ಎಂದು ನ್ಯಾಯವಾದಿ ಎಸ್.ಎ. ಜಮದಾರ್ ಹೇಳಿದರು. ಅವರು ತಾಲೂಕಿನ ಡೋಣಿ ಸಮೀಪದ ಕಪ್ಪತಗುಡ್ಡದ ಮಡಿಲಿನಲ್ಲಿರುವ ಶ್ರೀ ನಂದಿವೇರಿ ಸಂಸ್ಥಾನಮಠದ ಆವರಣದಲ್ಲಿ ಹುಬ್ಬಳ್ಳಿ ಕೆಎಲ್ಇ ಸಂಸ್ಥೆಯ ಕೋತಂಬರಿ ಕಾನೂನು ಕಾಲೇಜಿನ ವಿದ್ಯಾರ್ಥಿಗಳು ಸಸಿ ನೆಟ್ಟು ಕಪ್ಪತಗುಡ್ಡದ ವೀಕ್ಷಣೆ ಕಾರ್ಯಕ್ರಮದ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು.

ಆಶೀರ್ವಚನ ನೀಡಿದ ಶಿವಕುಮಾರ ಸ್ವಾಮೀಜಿ ಮಾತನಾಡಿ, ಸಂರಕ್ಷಣೆಗಾಗಿ ಹಾಗೂ ಕಪ್ಪತಗುಡ್ಡದೊಂದಿಗೆ ಜನಸಾಮಾನ್ಯರ ಭಾವ ಬಂಧ ಬೆಸೆಯಲು ಪ್ರತಿ ತಿಂಗಳ ಎರಡನೇ ಭಾನುವಾರದಂದು ಪರಿಸರಾನುಭವ ಮತ್ತು ಶಿವಾನುಭವ ಎಂಬ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದ್ದು, ಇದು 25ನೇ ಸಂಚಿಕೆ ಎಂದರು.

ಹುಬ್ಬಳ್ಳಿ ಹಾಗೂ ಬದಾಮಿ ಇಂದ ಆಗಮಿಸಿದ ಅಭಿಯಂತರರುಗಳಿಗೆ ಪಾರಿಜಾತ ಸಸಿಯನ್ನು ನೀಡಿ ಆಶೀರ್ವದಿಸಿದರು. ಬಾಲಚಂದ್ರ ಜಾಬಶೆಟ್ಟಿ,ಡಾ.ಇಂಚಲ್, ನವೀನ್ ಮುಂತಾದವರಿದ್ದರು. ಡಾ. ಶಾರದಾ ಪಾಟೀಲ್ ವಂದಿಸಿದರು.



ಮಿರಗ ಮಿಂಚಿದರೂ ಸುರಿಯದ ವರ್ಷಧಾರೆ | ಅನ್ನದಾತ ಕಂಗಾಲು

ಕಲ್ಯಾಣಕ್ಕೆ ಮುಂಗಾರು ಮುನಿಸು

ಲಕ್ಷ್ಮೀಕಾಂತ್ ಕುಲಕರ್ಣಿ



ದಿಗಂತ ವಿಶೇಷ

ಯಾದಗಿರಿ: ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಮುಂಗಾರು ಹಂಗಾಮು ಆರಂಭಗೊಂಡು ಎರಡು ವಾರ ಕಳೆದರೂ ಇನ್ನೂ ಮಳೆ ಬಾರದ ಕಾರಣ ಕೃಷಿಯನ್ನೇ ನಂಬಿಕೊಂಡು ಕುಳಿತ ಅನ್ನದಾತರು ಆತಂಕ ಪಡುವಂತಾಗಿದೆ.

ಇನ್ನೂ ದರ್ಶನ ಕೊಡದ ಮೃಗಶಿರ: ವಾಡಿಕೆಯಂತೆ ಪ್ರತಿವರ್ಷ ಕಲ್ಯಾಣ ಕರ್ನಾಟಕ ಭಾಗದಲ್ಲಿ ಮೇ ಕೊನೆ ವಾರ ಅಥವಾ ಜೂನ್ ಮೊದಲ ವಾರದಲ್ಲಿ ಮುಂಗಾರು ಪ್ರವೇಶವಾಗುತ್ತದೆ. ವರ್ಷದ ಮೊದಲ ಮಳೆ ಮೃಗಶಿರ (ಮಿರಗ್)ನ್ನು ರೈತರು ಅತ್ಯಂತ ಉತ್ಸಾಹದಿಂದ ಕಾಯುತ್ತಿರುತ್ತಾರೆ. ಅಲ್ಲದೆ, ಮೇ ಮೊದಲ ವಾರದಲ್ಲಿ ಅಕಾಲಿಕ ಮಳೆ ಸುರಿದರೆ ಭೂಮಿ ಹದ ಮಾಡಲು ಮುಂದಾಗುತ್ತಾರೆ. ಆದರೆ, ಈ ವರ್ಷ ಬೇಸಿಗೆಯಲ್ಲಿ ಅಕಾಲಿಕ ಮಳೆ ಪ್ರಮಾಣ ಸಹ ಸಂಪೂರ್ಣ ಕಡಿಮೆಯಾಗಿದೆ.

ಜೂನ್ ಮೊದಲ ವಾರದಲ್ಲಿ ಬಿದ್ದ ಅಲ್ಪ ಮಳೆಗೆ ರೈತರು ತಮ್ಮ ಭೂಮಿಯನ್ನು ಹದಗೊಳಿಸಿ ಹತ್ತಿ, ಹೆಸರು ಬೀಜ ಬಿತ್ತಲು ಮುಂದಾಗಿದ್ದಾರೆ.

ಕಲ್ಯಾಣ ಭಾಗದ ಬಿತ್ತನೆ ವಿವರ: ಕಲಬುರಗಿ ಜಿಲ್ಲೆಯಲ್ಲಿ ಸುಮಾರು 8.90 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಲಾಗಿದೆ. ರಾಯಚೂರು ಜಿಲ್ಲೆಯಲ್ಲಿ 5.87 ಲಕ್ಷಕ್ಕೂ ಹೆಚ್ಚು ಹೆಕ್ಟೇರ್ ಪ್ರದೇಶದ, ಬೀದರ್ ಜಿಲ್ಲೆಯಲ್ಲಿ ಈ ವರ್ಷ 4.13 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿಗೆ 4.02 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿಯನ್ನು ಕೃಷಿ ಇಲಾಖೆ ಮೂಲಗಳು ತಿಳಿಸಿವೆ.

ಬಿತ್ತನೆ ಕಾರ್ಯ ಪೂರ್ಣ: ಇನ್ನೂ ಯಾದಗಿರಿ ಜಿಲ್ಲೆಯಲ್ಲಿ ಪ್ರತಿವರ್ಷದಂತೆ ಈ ಬಾರಿಯೂ ಸಹ ಹತ್ತಿ ಬೆಳೆಯನ್ನು ರೈತರು ಹೆಚ್ಚಿನ ಪ್ರಮಾಣದಲ್ಲಿ ಬಿತ್ತನೆ ಮಾಡಿದ್ದಾರೆ. ಈಗಾಗಲೇ ಜಿಲ್ಲೆಯ ಬಹುತೇಕ ಭಾಗದಲ್ಲಿ ಬಿತ್ತನೆ ಕಾರ್ಯ ಪೂರ್ಣಗೊಂಡಿದ್ದು ಒಂದು ಬಾರಿ ಮಳೆಯಾದರೆ ಬೀಜ ಭೂಮಿಯನ್ನು ಗಟ್ಟಿಯಾಗಿ ನೆಲೆಯೂರಲು ಅನುಕೂಲವಾಗುತ್ತದೆ ಎಂಬುದು ರೈತರ ಅಭಿಪ್ರಾಯ. ಇನ್ನೂ ರೈತರು ಹೆಸರು ಬೀಜ ಬಿತ್ತಲು ತುದಿಗಾಲಲ್ಲಿ ನಿಂತಿದ್ದಾರೆ. ಉತ್ತಮ ಮಳೆಯಾದರೆ 40 ದಿನಗಳಲ್ಲಿ ಹೆಸರು ರಾಶಿಯಾಗಿ ರೈತರ ಕೈಯಲ್ಲಿ ಹಣ ಸಿಗಲಿದೆ. ಇದರಿಂದ ಹತ್ತಿ, ತೊಗರಿ ಬೆಳೆ ಬೆಳೆಯಲು ಅನುಕೂಲವಾಗಲಿದೆ.

ರಸಗೊಬ್ಬರ ಜಿಲ್ಲೆಯಲ್ಲಿ ಲಭ್ಯ: ಜಿಲ್ಲೆಯಲ್ಲಿ 27 ಲಕ್ಷ ಕ್ವಿಂಟಲ್‌ನಷ್ಟು ಪ್ರಮುಖ ಬೆಳೆಗಳಾದ ತೊಗರಿ, ಭತ್ತ, ಸಜ್ಜೆ, ಉದ್ದು, ಹೆಸರು ಬೀಜಗಳ ಬೇಡಿಕೆ ಇದ್ದು, ಮೊದಲ ಹಂತ ಬಿತ್ತನೆಗೆ ಮುಂಗಾರು ಹಂಗಾಮಿನಲ್ಲಿ ಕೆ.ಎಸ್.ಎಸ್.ಪಿ ಸಂಸ್ಥೆಯಿಂದ 3 ಲಕ್ಷ ಕ್ವಿಂಟಲ್‌ನಷ್ಟು ಬಿತ್ತನೆ ಬೀಜ ಲಭ್ಯತೆಯಿದೆ. 43 ಲಕ್ಷ ಕ್ವಿಂಟಲ್ ನಷ್ಟು ರಸಗೊಬ್ಬರ ಬೇಡಿಕೆಯಿದ್ದು 15 ಲಕ್ಷ ಕ್ವಿಂಟಲ್ ನಷ್ಟು ರಸಗೊಬ್ಬರ ಜಿಲ್ಲೆಯಲ್ಲಿ ಲಭ್ಯತೆಯಿದೆ ಎಂದು ಕೃಷಿ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕಳೆದ ವರ್ಷ ಸುರಿದ ಅತಿಯಾದ ಮಳೆ ಹಾಗೂ ಈ ವರ್ಷದ ಬೇಸಿಗೆಯ ಬರು ಬಿಸಿಲಿನ ಪ್ರಖರತೆ ಹಿನ್ನೆಲೆಯಲ್ಲಿ ಪ್ರಸಕ್ತ ಸಾಲಿನ ಮುಂಗಾರು ಮಂಕಾಗಿದ್ದು ಅನ್ನದಾತನ ಆತಂಕಕ್ಕೆ ಕಾರಣವಾಗಿದೆ. "ಮಳೆ ಬರಲಿಲ್ಲಂದ್ರೆ ಮತ್ ನಾವ್ ಹೊಟ್ಟಿ ಪಾಡಿಗಾಗಿ ಊರ್ ಬಿಟ್ಟ ಹೋಗ್ಬೇಕ್ರೀ ಯಪ್ಪಾ, ಸಾಲ ಮಾಡಿ ಬೀಜ, ಎಣ್ಣೆ ತಂದೀವ್ರಿ. ಈ ಮಳಿ ನೋಡಿದ್ರಾ ಬರಾವಲ್ಲ" ಎಂದು ರೈತರು ಅಳಲು ತೋಡಿಕೊಳ್ಳುತ್ತಿದ್ದಾರೆ.

ಈ ಬಾರಿ ವಾಡಿಕೆ ಮಳೆ ತಡವಾಗಿ ಸುರಿಯುವ ಸಾಧ್ಯತೆಗಳಿವೆ ಎಂದು ಹವಾಮಾನ ಇಲಾಖೆ ತಿಳಿಸಿದ್ದು, ರೈತರು ಹಸಿ ಭೂಮಿಯಲ್ಲಿ ಬೀಜ ಬಿತ್ತನೆ ಮಾಡಿದರೆ ಅನುಕೂಲ. ಒಣಭೂಮಿಯಲ್ಲಿ ಬಿತ್ತನೆ ಮಾಡಿದರೆ ಬೆಳೆ ನಾಟಲು ಸಮಸ್ಯೆಯಾಗಲಿದ್ದು, ಈ ಬಗ್ಗೆ ರೈತರಿಗೆ ತಿಳಿವಳಿಕೆ ಮೂಡಿಸಲಾಗಿದೆ.

■ ರತೇಂದ್ರನಾಥ ಸೂಗೂರು, ಜಂಟಿ ಕೃಷಿ ನಿರ್ದೇಶಕ ಯಾದಗಿರಿ

ಗುವಿವಿ ವಸತಿ ನಿಲಯದಲ್ಲಿ ಆತಂಕಕಾರಿ ಘಟನೆ

ಹಲ್ಲಿ ಬಿದ್ದಿರುವ ನೀರು ಸೇವಿಸಿ ವಿದ್ಯಾರ್ಥಿಗಳು ಅಸ್ವಸ್ಥ



ಕಲಬುರಗಿ: ಗುಲ್ಬರ್ಗ ವಿಶ್ವವಿದ್ಯಾಲಯದ ಆವರಣದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹಳೆಯ ಬಾಲಕರ ವಸತಿ ನಿಲಯದ ನೀರಿನ ಟ್ಯಾಂಕ್‌ನಲ್ಲಿ ಹಲ್ಲಿ ಬಿದ್ದ ನೀರು ಸೇವಿಸಿ 15ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಸ್ವಸ್ಥಗೊಂಡಿರುವ ಆತಂಕಕಾರಿ ಘಟನೆ ಸೋಮವಾರ ನಡೆದಿದೆ.

ಜಿಲ್ಲೆಯ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಸಾಲು ಸಾಲು ಅವಾಂತರಗಳು ಸೃಷ್ಟಿಯಾಗುತ್ತಿದ್ದರೂ ಜಿಲ್ಲೆಯಿಬ್ಬರು ಸಚಿವರು ತುಟಿಬಿಚ್ಚದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ನೀರು ಸೇವಿಸಿದ ವಿದ್ಯಾರ್ಥಿಗಳಲ್ಲಿ ತೀವ್ರ ವಾಂತಿ ಹಾಗೂ ಎದೆ ಉರಿ ಕಾಣಿಸಿಕೊಂಡಿದ್ದು, ಸಮಾಜಶಾಸ್ತ್ರ ವಿಭಾಗದ ಅರುಣಕುಮಾರ್ ನಾಯ್ಕೋಡಿ ಹಾಗೂ ಇತಿಹಾಸ ವಿಭಾಗದ ಮಲ್ಲಿಕಾರ್ಜುನ ಜೇವರ್ಗಿ ಅವರನ್ನು ಜಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಕಳೆದ ಎರಡು ದಿನಗಳಿಂದ ನೀರು ಕುಡಿಯುವಾಗ ತೀವ್ರ ದುರ್ವಾಸನೆ ಬಂದ ಹಿನ್ನೆಲೆಯಲ್ಲಿ ಟ್ಯಾಂಕ್ ಪರಿಶೀಲಿಸಿದಾಗ ಅದರಲ್ಲಿ ಎರಡು ಹಲ್ಲಿಗಳು ಸತ್ತು ಬಿದ್ದಿರುವುದು ಪತ್ತೆಯಾಗಿದೆ. ಹಾಸ್ಟೆಲ್ ವಾರ್ಡನ್ ನವೀನ್ ಮೂರು ತಿಂಗಳಿಗೊಮ್ಮೆ ಮಾತ್ರ ಇತ್ತ ಬರುತ್ತಾರೆ ಎಂದು 90ಕ್ಕೂ ಹೆಚ್ಚು ನಿವಾಸಿ ವಿದ್ಯಾರ್ಥಿಗಳು ದೂರಿದ್ದಾರೆ.

ಟ್ಯಾಂಕ್‌ನಲ್ಲಿ ಎರಡು ಹಲ್ಲಿ ಪತ್ತೆ: ಕಳೆದ ಎರಡು ದಿನಗಳಿಂದ ಕುಡಿಯುವ ನೀರಿನಿಂದಾಗಿ ಹಾಸ್ಟೆಲ್‌ನಲ್ಲಿ ಹಲವರಿಗೆ ಆರೋಗ್ಯ ಸಮಸ್ಯೆ ಕಾಣಿಸಿಕೊಂಡಿತ್ತು. ನೀರು ಕುಡಿಯುವಾಗ ತೀವ್ರ ದುರ್ವಾಸನೆ ಬಂದ ಹಿನ್ನೆಲೆಯಲ್ಲಿ ಅನುಮಾನಗೊಂಡು ನೀರಿನ ಟ್ಯಾಂಕ್ ಪರಿಶೀಲಿಸಿದಾಗ ಅದರಲ್ಲಿ ಎರಡು ಹಲ್ಲಿಗಳು ಸತ್ತು ಬಿದ್ದಿರುವುದು ಪತ್ತೆಯಾಗಿದೆ.

ಹಲ್ಲಿ ಬಿದ್ದ ನೀರು ಕುಡಿದು ಅಸ್ವಸ್ಥರಾದವರನ್ನು ಕೂಡಲೇ ಜಿಲ್ಲಾಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಯಿತು ಎಂದು ವಿದ್ಯಾರ್ಥಿ ನಂದಕುಮಾರ್ ಪವಾರ್ ಅಳಲು ತೋಡಿಕೊಂಡರು.

ಇಲ್ಲಿ ಕನಿಷ್ಠ ಸ್ವಚ್ಛತೆ ಮತ್ತು ಆರೋಗ್ಯಕರ ವಾತಾವರಣದ ಕೊರತೆಯಿದೆ. ವಾರ್ಡನ್ ಹಾಗೂ ಅಡುಗೆ ಸಿಬ್ಬಂದಿಯವರ ಇಂತಹ ಬೇಜವಾಬ್ದಾರಿತನವೇ ಈ ಘಟನೆಗೆ ನೇರ ಕಾರಣವಾಗಿದೆ ಎಂದು ವಿದ್ಯಾರ್ಥಿಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಘಟನಾ ಸ್ಥಳಕ್ಕೆ ಸಂಬಂಧಪಟ್ಟ ಹಿರಿಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಬೇಕು, ಕುಡಿಯುವ ನೀರು ಮತ್ತು ಆಹಾರದ ಮಾದರಿಗಳನ್ನು ಪ್ರಯೋಗಾಲಯದ ಪರೀಕ್ಷೆಗೆ ಕಳುಹಿಸಬೇಕು ಹಾಗೂ ಕರ್ತವ್ಯ ಲೋಪ ಎಸಗಿರುವ ಸಿಬ್ಬಂದಿ ವಿರುದ್ಧ ಕಠಿಣ ಕ್ರಮಕೈಗೊಳ್ಳಬೇಕೆಂದು ವಿದ್ಯಾರ್ಥಿಗಳು ಒತ್ತಾಯಿಸಿದರು.

ತುರ್ತು ಸ್ವಚ್ಛತೆಗೆ ಆಗ್ರಹ

ಘಟನೆಯ ಬೆನ್ನಲ್ಲೇ ವಿಶ್ವವಿದ್ಯಾಲಯದ ಇತರೆ ವಸತಿ ನಿಲಯಗಳಲ್ಲೂ ತೀವ್ರ ಆತಂಕ ಎದುರಾಗಿದ್ದು, ಎಲ್ಲಾ ಹಾಸ್ಟೆಲ್‌ಗಳ ನೀರಿನ ಟ್ಯಾಂಕ್‌ಗಳನ್ನು ತಕ್ಷಣವೇ ಸ್ವಚ್ಛಗೊಳಿಸಬೇಕು ಎಂದು ವಿದ್ಯಾರ್ಥಿ ಸಂಘಟನೆಗಳು ಆಗ್ರಹಿಸಿವೆ.



ಕುಡಿಯುವ ನೀರಿನ ಟ್ಯಾಂಕ್‌ನಲ್ಲಿ ಹಲ್ಲಿ ಬಿದ್ದು ಎರಡು ದಿನ ಆಗಿತ್ತು. ಮೊದಲೇ ಜ್ವರ, ವಾಂತಿ ಲಕ್ಷಣಗಳಿದ್ದವು. ಸೋಮವಾರ ಗೆಳೆಯರು ನೋಡಿದಾಗ ಹಲ್ಲಿ ಪತ್ತೆಯಾಗಿದೆ. ಹಾಸ್ಟೆಲ್‌ನಲ್ಲಿ ವ್ಯವಸ್ಥೆ ಹಾಳಾಗಿದೆ. ವಾರ್ಡನ್ ಎರಡು ತಿಂಗಳಿಗೊಮ್ಮೆ ಬರ್ತಾರೆ. ಅಡುಗೆ ಸಿಬ್ಬಂದಿ ನಿರ್ಲಕ್ಷ್ಯವೇ ಈ ಘಟನೆಗೆ ಕಾರಣ.

■ ಅರುಣಕುಮಾರ್ ನಾಯ್ಕೋಡಿ, ಅಸ್ವಸ್ಥಗೊಂಡ ವಿದ್ಯಾರ್ಥಿ

ಕಿರುಸುದ್ದಿ

ಕರಡಿ ದಾಳಿ: ರೈತನಿಗೆ ತೀವ್ರ ಗಾಯ

ವಿಜಯನಗರ: ಬೆಳೆ ರಕ್ಷಣೆಗೆಂದು ಮಧ್ಯರಾತ್ರಿ ಹೊಲಕ್ಕೆ ಹೋಗಿದ್ದ ರೈತರೊಬ್ಬರ ಮೇಲೆ ಕರಡಿ ಏಕಾಏಕಿ ದಾಳಿ ನಡೆಸಿ, ತೀವ್ರವಾಗಿ ಗಾಯಗೊಳಿಸಿರುವ ಘಟನೆ ಹರಪನಹಳ್ಳಿ ತಾಲೂಕಿನ ಹುಲಿಕಟ್ಟಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ಯಂಕಪ್ಪ (60) ಕರಡಿ ದಾಳಿಗೆ ಒಳಗಾದವರು. ವನ್ಯಪ್ರಾಣಿಗಳಿಂದ ಬೆಳೆಯನ್ನು ರಕ್ಷಿಸುವ ಸಲುವಾಗಿ ಇವರು ಮಧ್ಯರಾತ್ರಿ ಹೊಲದಲ್ಲಿದ್ದಾಗ ಕರಡಿಯೊಂದು ದಿಢೀರ್ ದಾಳಿ ಮಾಡಿದೆ. ಕರಡಿಯು ಯಂಕಪ್ಪ ಅವರ ತಲೆ, ಮುಖ ಹಾಗೂ ಕೈಗಳಿಗೆ ಕಚ್ಚಿ ತೀವ್ರವಾಗಿ ಗಾಯಗೊಳಿಸಿದೆ. ಸದ್ಯ ಗಾಯಾಳುವನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನೆಗೆ ಸಂಬಂಧಿಸಿದಂತೆ ಹರಪನಹಳ್ಳಿ ಅರಣ್ಯ ಇಲಾಖೆಯಲ್ಲಿ ಪ್ರಕರಣ ದಾಖಲಾಗಿದೆ.

ಕರ್ನಾಟಕ ಸಂಘಕ್ಕೆ ನೂತನ ಪದಾಧಿಕಾರಿಗಳ ಆಯ್ಕೆ



ಅಂಕೋಲಾ: ನಾಡಿನ ಪ್ರತಿಷ್ಠಿತ ಸಾಂಸ್ಕೃತಿಕ ಸಂಸ್ಥೆಗಳಲ್ಲಿ ಒಂದಾದ, ತನ್ನ ಸಾರ್ಥಕ ಸೇವೆಯ 74 ವರ್ಷಗಳನ್ನು ಪೂರೈಸಿ ಅಮೃತ ಮಹೋತ್ಸವ ವರ್ಷಕ್ಕೆ ಕಾಲಿರಿಸುತ್ತಿರುವ ಅಂಕೋಲೆಯ ಕರ್ನಾಟಕ ಸಂಘದ ನೂತನ ಪದಾಧಿಕಾರಿಗಳ ಆಯ್ಕೆಯಾಗಿದ್ದು, ಗೌರವಾಧ್ಯಕ್ಷರಾಗಿ ಪ್ರೊ.ಕೆ.ವಿ. ನಾಯಕ, ಅಧ್ಯಕ್ಷರಾಗಿ ವಿಠ್ಠಲದಾಸ ಕಾಮತ, ಉಪಾಧ್ಯಕ್ಷರಾಗಿ ಶ್ರೀಧರ ನಾಯಕ, ಕಾರ್ಯದರ್ಶಿಯಾಗಿ ಮಹೇಶ ನಾಯಕ, ಸಹಕಾರ್ಯದರ್ಶಿಯಾಗಿ ಸುಕದ ನಾಯಕ, ಖಜಾಂಚಿಗಳಾಗಿ ಜಿ.ಬಿ. ನಾಯಕ ಆಯ್ಕೆಯಾಗಿದ್ದಾರೆ.

ಕರ್ನಾಟಕ ಸಂಘದ ಕನ್ನಡ ಭವನದಲ್ಲಿ ಪ್ರೊ.ಕೆ.ವಿ ನಾಯಕ ಅಧ್ಯಕ್ಷತೆಯಲ್ಲಿ ಜರುಗಿದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ ಅವಿರೋಧವಾಗಿ ಜರುಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಗೌರವಾಧ್ಯಕ್ಷ ಪ್ರೊ. ಕೆ.ವಿ.ನಾಯಕ, ಕರ್ನಾಟಕ ಸಂಘವು ನಾಡಿನಲ್ಲಿ ತನ್ನದೇ ಆದ ಛಾಪು ಮೂಡಿಸಿದ್ದು ಸಂಘದ ಅಮೃತ ಮಹೋತ್ಸವವನ್ನು ಅದ್ದೂರಿಯಾಗಿ ನಡೆಸಲು ಹೊಸ ಸಮಿತಿ ಸಕ್ರಿಯವಾಗಿ ಶ್ರಮಿಸಬೇಕು ಎಂದರು.

ನೂತನ ಅಧ್ಯಕ್ಷ ವಿಠ್ಠಲದಾಸ ಕಾಮತ್ ಮಾತನಾಡಿ, ಅಮೃತ ಮಹೋತ್ಸವದ ಸಂದರ್ಭದಲ್ಲಿ ಅಧ್ಯಕ್ಷ ಸ್ಥಾನದ ಹೊಣೆ ವಹಿಸಿದ ಎಲ್ಲರಿಗೂ ಧನ್ಯವಾದ ಅರ್ಪಿಸಿ, ಎಲ್ಲರ ಸಹಕಾರದೊಂದಿಗೆ 75ನೇ ವರ್ಷವನ್ನು ಸ್ಮರಣೀಯವಾಗಿಸೋಣ ಎಂದರು.

ಮಾಜಿ ಅಧ್ಯಕ್ಷ ಮಹಾಂತೇಶ ರೇವಡಿ ಕರ್ನಾಟಕ ಸಂಘದ ನೂತನ ಸಮಿತಿಗೆ ಶುಭ ಹಾರೈಸಿದರು. ಕಾರ್ಯದರ್ಶಿ ಬಾಲಚಂದ್ರ ನಾಯಕ ಸ್ವಾಗತಿಸಿದರು. ನೂತನ ಕಾರ್ಯದರ್ಶಿ ಮಹೇಶ ನಾಯಕ ವಂದಿಸಿದರು.

ಗ್ಯಾರಂಟಿ ಯೋಜನೆಗಳಿಂದ ರಾಜ್ಯ ಆರ್ಥಿಕ ದಿವಾಳಿ: ಕಾಗೇರಿ



ಶಿರಸಿ: ರಾಜ್ಯದ ಕಾಂಗ್ರೆಸ್ ಸರ್ಕಾರವು ತನ್ನ ಗ್ಯಾರಂಟಿ ಯೋಜನೆಗಳ ಅಸಮರ್ಪಕ ಹಾಗೂ ಅದಕ್ಷ ನಿರ್ವಹಣೆಯಿಂದಾಗಿ ಇಡೀ ಕರ್ನಾಟಕವನ್ನು ಆರ್ಥಿಕ ದಿವಾಳಿತನದ ಪ್ರಪಾತಕ್ಕೆ ತಳ್ಳಿದೆ ಎಂದು ಉತ್ತರ ಕನ್ನಡ ಲೋಕಸಭಾ ಕ್ಷೇತ್ರದ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ತೀವ್ರವಾಗಿ ವಾಗ್ದಾಳಿ ನಡೆಸಿದ್ದಾರೆ.

ತಮ್ಮ ಆಡಳಿತಾತ್ಮಕ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಹತಾಶೆಗೊಂಡಿರುವ ಆಡಳಿತಾರೂಢರು, ಈಗ ಒಂದೊಂದೇ ಕುಂಟು ನೆಪಗಳನ್ನು ಒಡ್ಡುತ್ತಾ ಬಡವರ ಮತ್ತು ಅರ್ಹ ಫಲಾನುಭವಿಗಳ ಹಕ್ಕನ್ನೇ ಕಸಿದುಕೊಳ್ಳುವ ಅವಿವೇಕದ ಪರಮಾವಧಿಗೆ ಕೈ ಹಾಕಿದ್ದಾರೆ ಎಂದು ಅವರು ಪ್ರಕಟಣೆಯಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅರ್ಹರಿದ್ದವರಿಗೆ ಯೋಜನೆಯ ಸೌಲಭ್ಯ ತಲುಪಬೇಕು ಎಂಬುದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಆದರೆ, ಕೇವಲ ರಾಜಕೀಯ ಸ್ವಾರ್ಥ ಹಾಗೂ ವೋಟಿನ ಲಾಲಸೆಯಿಂದ ಯೋಜನೆಗಳನ್ನು ಜಾರಿಗೊಳಿಸುವಾಗ ಕಣ್ಣುಮುಚ್ಚಿ ಕುಳಿತಿದ್ದ ಸರ್ಕಾರ, ಈಗ ರಾಜ್ಯದ ಖಜಾನೆ ಬರಿದಾಗುತ್ತಿದ್ದಂತೆ ಅತ್ಯಂತ ಕ್ರೂರವಾಗಿ ಬಡವರ ಹೊಟ್ಟೆಯ ಮೇಲೆ ಹೊಡೆಯಲು ಹೊರಟಿದೆ. ಆರಂಭದಲ್ಲೇ ಯಾವುದೇ ವ್ಯವಸ್ಥಿತ ಯೋಜನೆ ಅಥವಾ ಪಾರದರ್ಶಕತೆ ಇಲ್ಲದೆ, ಈಗ ಏಕಾಏಕಿ ಪುನಃ ಸಮೀಕ್ಷೆ ಎಂಬ ನಾಟಕವಾಡಿ ಬಡವರನ್ನು ವಂಚಿಸುತ್ತಿರುವುದು ಅತ್ಯಂತ ಖಂಡನೀಯ ಎಂದು ಅವರು ಟೀಕಿಸಿದ್ದಾರೆ.

ಕೋಟಿಗಟ್ಟಲೆ ಸಾರ್ವಜನಿಕ ಹಣ ಲೂಟಿಯಾಗಿರುವುದನ್ನು ಸ್ವತಃ ಸರ್ಕಾರವೇ ಒಪ್ಪಿಕೊಂಡಿದೆ. ಮೂರು ವರ್ಷ ಕುಂಭಕರ್ಣ ನಿದ್ದೆಯಲ್ಲಿದ್ದ ಸರ್ಕಾರ, ಬೊಕ್ಕಸ ಖಾಲಿಯಾಗುತ್ತಿದ್ದಂತೆ ಏಕಾಏಕಿ ಪರಿಷ್ಕರಣೆಯ ನಿರ್ಧಾರ ಮಾಡಿರುವುದು ಅದರ ಆಡಳಿತಾತ್ಮಕ ಅಪ್ರಬುದ್ಧತೆಗೆ ಸಾಕ್ಷಿಯಾಗಿದೆ. ಚುನಾವಣಾ ಲಾಭಕ್ಕಾಗಿ ಗ್ಯಾರಂಟಿ ಕಾರ್ಡ್ ಹಂಚಿ, ಅಧಿಕಾರಕ್ಕೆ ಬಂದ ಮೇಲೆ ಖಜಾನೆ ಲೂಟಿ ಮಾಡಿ, ಈಗ ಪರಿಷ್ಕರಣೆಯ ನೆಪದಲ್ಲಿ ಬಡವರ ತಟ್ಟೆಗೆ ಕೈಹಾಕುತ್ತಿರುವ ಈ ದಿವಾಳಿ ಕಾಂಗ್ರೆಸ್ ಸರ್ಕಾರವನ್ನು ಕರ್ನಾಟಕದ ಜನತೆ ಯಾವುದೇ ಕಾರಣಕ್ಕೂ ಕ್ಷಮಿಸುವುದಿಲ್ಲ ಎಂದು ಸಂಸದ ಕಾಗೇರಿ ಪ್ರಕಟಣೆಯಲ್ಲಿ ಎಚ್ಚರಿಸಿದ್ದಾರೆ.

ಅನೈತಿಕ ಸಂಬಂಧಕ್ಕೆ ಅಡ್ಡಿಯಾದ ಪತ್ನಿ ಹತ್ಯೆ: ಪತಿ ಬಂಧನ

ಜೀರಾ ಸೋಡಾದಲ್ಲಿ ವಿಷ, ಗಾಜಿನ ಪುಡಿ ಬೆರೆಸಿ ಪ್ರಾಶನ ನಂತರ ಕತ್ತು ಹಿಸುಕಿ ಕೊಲೆ

ಬೆಳಗಾವಿ: ಅನೈತಿಕ ಸಂಬಂಧಕ್ಕೆ ಪತ್ನಿ ಅಡ್ಡಿಯಾಗಿದ್ದಾಳೆ ಎಂಬ ಕಾರಣಕ್ಕೆ ಪತಿಯೊಬ್ಬ ಅತ್ಯಂತ ಅಮಾನವೀಯವಾಗಿ ಆಕೆಯನ್ನು ಕೊಲೆಗೈದಿರುವ ಘಟನೆ ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಶೀತಲಿಬಾವಿ ಸಮೀಪ ಬೆಳಕಿಗೆ ಬಂದಿದೆ.

ಜೀರಾ ಸೋಡಾದಲ್ಲಿ ವಿಷ ಮತ್ತು ಗಾಜಿನ ಪುಡಿ ಬೆರೆಸಿ ಕುಡಿಸಿದ ಬಳಿಕ ಕುತ್ತಿಗೆ ಹಿಸುಕಿ ಪತ್ನಿಯ ಜೀವ ತೆಗೆದು, ಅದನ್ನು ರಸ್ತೆ ಅಪಘಾತವೆಂದು ಬಿಂಬಿಸಲು ಯತ್ನಿಸಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಸೋಮವಾರ ಪೊಲೀಸ್ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅವರು, ಗೋಕಾಕ ತಾಲೂಕಿನ ಘಟಪ್ರಭಾ ಶಿಂಧಿಕುರಬೇಟ ಗ್ರಾಮದ ನಿವಾಸಿ ಸಂತೋಷ ರೇವಪ್ಪ ಪಟಾಯಿತ್ (33) ಬಂಧಿತ ಆರೋಪಿ ಎಂದು ತಿಳಿಸಿದ್ದಾರೆ. ಕೊಲೆಯಾದ ಮಹಿಳೆ ಆತನ ಪತ್ನಿ ಸಾವಕ್ಕಾ ಪಟಾಯಿತ್ (32) ಎಂದು ಗುರುತಿಸಲಾಗಿದೆ.

ಪೊಲೀಸರ ಪ್ರಾಥಮಿಕ ತನಿಖೆಯಲ್ಲಿ ಹೊರಬಂದಿರುವ ಮಾಹಿತಿಯ ಪ್ರಕಾರ, ಸಂತೋಷಗೆ ವಿವಾಹೋತ್ತರ ಅನೈತಿಕ ಸಂಬಂಧವಿದ್ದು, ಇದಕ್ಕೆ ಪತ್ನಿ ಸಾವಕ್ಕಾ ವಿರೋಧ ವ್ಯಕ್ತಪಡಿಸುತ್ತಿದ್ದಳು. ಇದೇ ಕಾರಣಕ್ಕೆ ಆಕೆಯನ್ನು ದಾರಿ ತಪ್ಪಿಸುವ ಉದ್ದೇಶದಿಂದ ಹಲವು ದಿನಗಳಿಂದ ಸಂಚು ರೂಪಿಸಿದ್ದ ಎಂಬ ಮಾಹಿತಿಯು ಲಭ್ಯವಾಗಿದೆ.

ಜೂನ್ 12ರಂದು ದಂಪತಿಗಳು ಮರಕುಂಬಿ ದೇವಸ್ಥಾನಕ್ಕೆ ತೆರಳಿ ಮರಳುವ ಸಂದರ್ಭದಲ್ಲಿ ಮುರಗೋಡ ಪಟ್ಟಣದಲ್ಲಿ ಸಂತೋಷ ಜೀರಾ ಸೋಡಾ ಖರೀದಿಸಿದ್ದ, ಈ ವೇಳೆ ಪತ್ನಿಗೆ ಗೊತ್ತಾಗದಂತೆ ಆಕೆಯ ಸೋಡಾ ಬಾಟಲಿಯಲ್ಲಿ ಇಲಿ ಪಾಷಾಣ ಹಾಗೂ ಗಾಜಿನ ಪುಡಿಯನ್ನು ಬೆರೆಸಿದ್ದಾನೆ ಎಂದು ತನಿಖೆಯಲ್ಲಿ ತಿಳಿದುಬಂದಿದೆ.

ಸೋಡಾ ಸೇವಿಸಿದ ಕೆಲವೇ ಸಮಯದಲ್ಲಿ ಸಾವಕ್ಕಾಳ ಆರೋಗ್ಯದಲ್ಲಿ ತೀವ್ರ ಏರುಪೇರು ಕಾಣಿಸಿಕೊಂಡಿದೆ. ಶೀತಲಿಬಾವಿ ಸಮೀಪ ತಲುಪುವಷ್ಟರಲ್ಲಿ ಆಕೆ ಅಸ್ವಸ್ಥಳಾಗಿದ್ದಳು. ಇದೇ ವೇಳೆ ಬೈಕ್ ನಿಲ್ಲಿಸಿದ ಸಂತೋಷ, ಪರಿಸ್ಥಿತಿಯನ್ನು ಸದುಪಯೋಗಪಡಿಸಿಕೊಂಡು ಪತ್ನಿಯ ಕುತ್ತಿಗೆ ಹಿಸುಕಿ ಕೊಲೆಗೈದಿದ್ದಾನೆ ಎಂದು ಪೊಲೀಸರ ತನಿಖೆಯಲ್ಲಿ ತಿಳಿದು ಬಂದಿದೆ.

ಕೊಲೆ ಮಾಡಿದ ಬಳಿಕ ತನ್ನ ಮೇಲಿನ ಅನುಮಾನ ತಪ್ಪಿಸಲು ಆರೋಪಿ ಅಪಘಾತದ ನಾಟಕವಾಡಿದ್ದಾನೆ. ತಾನೇ ಗೋಕಾಕ ಗ್ರಾಮೀಣ ಪೊಲೀಸ್ ಠಾಣೆಗೆ ಕರೆ ಮಾಡಿ, ಬೈಕ್ ಸ್ಕಿಡ್ ಆಗಿ ಅಪಘಾತ ಸಂಭವಿಸಿದೆ ಎಂದು ಮಾಹಿತಿ ನೀಡಿದ್ದಾನೆ. ಆದರೆ, ಘಟನೆಯ ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಹಾಗೂ ಆಸ್ಪತ್ರೆಯಲ್ಲಿ ಮೃತದೇಹ ಪರಿಶೀಲಿಸಿದ ವೈದ್ಯರು ಹಲವು ಅನುಮಾನಾಸ್ಪದ ಅಂಶಗಳನ್ನು ಗಮನಿಸಿದ್ದಾರೆ.

ಅಪಘಾತ ಸಂಭವಿಸಿದೆ ಎಂದು ಹೇಳಿದ್ದರೂ ಮೃತ ಮಹಿಳೆಯ ದೇಹದ ಮೇಲಿದ್ದ ಗಾಯಗಳ ಸ್ವರೂಪ ಹಾಗೂ ಪತಿ ಸಂತೋಷಗೆ ಯಾವುದೇ ಗಂಭೀರ ಗಾಯಗಳಿಲ್ಲದಿರುವುದು ಪೊಲೀಸರ ಅನುಮಾನಕ್ಕೆ ಕಾರಣವಾಯಿತು. ಬಳಿಕ ಪೊಲೀಸರು ಪ್ರಕರಣವನ್ನು ವಿವಿಧ ಆಯಾಮಗಳಲ್ಲಿ ತನಿಖೆ ನಡೆಸಿದಾಗ ಕೊಲೆಯ ಸಂಚು ಬಹಿರಂಗಗೊಂಡಿದೆ. ಕಠಿಣ ವಿಚಾರಣೆಯ ವೇಳೆ ಆರೋಪಿ ತನ್ನ ಕೃತ್ಯವನ್ನು ಒಪ್ಪಿಕೊಂಡಿದ್ದು, ಪತ್ನಿಯನ್ನು ಕೊಲೆ ಮಾಡಿದ ವಿಚಾರ ಬೆಳಕಿಗೆ ಬಂದಿದೆ. ಸದ್ಯ ಆರೋಪಿಯನ್ನು ಬಂಧಿಸಲಾಗಿದ್ದು, ಗೋಕಾಕ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಹೆಚ್ಚಿನ ತನಿಖೆ ಕೈಗೊಂಡಿದ್ದಾರೆ.

ಬಿಟಿಡಿಎ ಕಚೇರಿ ನೌಕರನ ಮೇಲೆ ಹಲ್ಲೆ | ವ್ಯಕ್ತಿ ಬಂಧನಕ್ಕೆ ಒತ್ತಾಯ

ಕಚೇರಿ ಕೆಲಸ ಬಿಟ್ಟು ಸಿಬ್ಬಂದಿ ಪ್ರತಿಭಟನೆ



ಬಾಗಲಕೋಟೆ: ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಕಚೇರಿಯ ಆವರಣದಲ್ಲಿರುವ ಬಿಟಿಡಿಎ ಅಧ್ಯಕ್ಷರ ಕೊಠಡಿಯಲ್ಲಿ ಅಧಿಕಾರಿಯ ಮೇಲೆ ದೈಹಿಕವಾಗಿ ಹಲ್ಲೆ ಮಾಡಿ, ನಿಂದಿಸಿದ ವ್ಯಕ್ತಿಯನ್ನು ಕೂಡಲೇ ಬಂಧಿಸಿ ಕ್ರಮ ವಹಿಸಬೇಕು ಎಂದು ಒತ್ತಾಯಿಸಿ ಬಿಟಿಡಿಎ ಕಚೇರಿಯ ಸಿಬ್ಬಂದಿ, ಅಧಿಕಾರಿಗಳು ಪ್ರತಿಭಟನೆ ನಡೆಸಿದರು.

ಬಿಟಿಡಿಎ ಕಚೇರಿಯ ಗೇಟ್ ಮುಂದೆ ತಮ್ಮ ನಿತ್ಯದ ಕಚೇರಿಯ ಕೆಲಸದಿಂದ ದೂರವಿದ್ದು, ಪ್ರತಿಭಟನೆ ನಡೆಸಿದ ಅಧಿಕಾರಿಗಳು, ಸಿಬ್ಬಂದಿ ಕೂಡಲೇ ಬಿಟಿಡಿಎ ಅಧಿಕಾರಿ ನೀಲಕಂಠ ಅಂಕದ ಮೇಲೆ ಹಲ್ಲೆ ಮಾಡಿರುವ ವ್ಯಕ್ತಿಯನ್ನು ಬಂಧಿಸಬೇಕು ಎಂದು ಘೋಷಣೆ ಕೂಗಲಾಯಿತು.

ಪ್ರತಿಭಟನೆ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಹಲ್ಲೆಗೊಳಾದ ನೌಕರ ನೀಲಕಂಠ ಅಂಕದ ಮಾತನಾಡಿ, ಬಿಟಿಡಿಎ ಕಚೇರಿಯಲ್ಲಿ ಬಸಪ್ಪ ದೊಡ್ಡಮನಿಯ ಕೆಲಸಕ್ಕೆ ನನಗೆ ಯಾವುದೇ ಸಂಬಂಧ ಇಲ್ಲ, ಅವನ ಫೈಲ್ ಕೂಡ ಯಾವುದೆಂದು ನೋಡಿಲ್ಲ. ಪದೇ ಪದೇ ನನ್ನ ಮೇಲೆ ಹಲ್ಲೆ ಮಾಡಲು ಮುಂದಾಗಿದ್ದಾನೆ. ಪ್ರಾಧಿಕಾರದ ಕಚೇರಿಯ ನೌಕರರಿಗೆ ವಿನಾಕಾರಣ ಚಿತ್ರಹಿಂಸೆ ನೀಡುತ್ತಿರುವ ಬಸಪ್ಪ ದೊಡ್ಡಮನಿಯವರನ್ನು ಬಂಧಿಸಿ ಕಠಿಣ ಶಿಕ್ಷೆ ನೀಡಬೇಕು ಎಂದು ಒತ್ತಾಯಿಸಿದರು.

ಬಿಟಿಡಿಎ ಕಚೇರಿಯ ಅಧಿಕಾರಿಯ ಮೇಲೆ ನಡೆದ ಹಲ್ಲೆ ಕುರಿತು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಜಿಲ್ಲಾಧಿಕಾರಿಗಳನ್ನು ಭೇಟಿಯಾದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಬಿಟಿಡಿಎ ಅಧ್ಯಕ್ಷ ಪ್ರಕಾಶ ತಪಶೆಟ್ಟಿ, ಪಂಕಾ ಮಸೀದಿ ಬಳಿ ಒಂದು ಕಡೆ ಕಲ್ಲು ಹೊಡೆದರೆ ಎಂಟು ಜನರನ್ನು ತಕ್ಷಣಕ್ಕೆ ಬಂಧಿಸುವ ಪೊಲೀಸ್ ಇಲಾಖೆಯವರು ಅಮಾಯಕ ಅಧಿಕಾರಿಯ ಮೇಲೆ ಚಪ್ಪಲಿಯಿಂದ ಹೊಡೆದ ವ್ಯಕ್ತಿಯನ್ನು ಬಂಧನ ಮಾಡಲಿಲ್ಲ. ಚಪ್ಪಲಿಯಿಂದ ಹೊಡೆದ ಬಗ್ಗೆ ಸಾಕ್ಷ್ಯ ಇದ್ದರೂ ಪೊಲೀಸರು ಬಂಧಿಸುತ್ತಿಲ್ಲ ಎಂದು ದೂರಿದರು.

ನಮಗೆ ನ್ಯಾಯ ಸಿಕ್ಕಿಲ್ಲ ಜಿಲ್ಲಾಧಿಕಾರಿಗಳಿಗೆ ಬೇಡಿಕೆ ಕೊಟ್ಟಿದ್ದೇವೆ ಎರಡ್ಮೂರು ದಿನದಲ್ಲಿ ಕ್ರಮದ ಭರವಸೆ ನೀಡಿದ್ದಾರೆ. ಸಂತ್ರಸ್ತರಿಗೆ ಒಂದೆರಡು ದಿನ ಸಮಸ್ಯೆಯಾದರೂ ಅದನ್ನು ಹೆಚ್ಚಿನ ಸಮಯವನ್ನು ಅಧಿಕಾರಿಗಳಿಗೆ ನೀಡಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುತ್ತೇವೆ. ಆದರೆ ನಮ್ಮ ಅಧಿಕಾರಿಗಳಿಗೆ ಕೆಲಸ ಮಾಡುವಾಗ ರಕ್ಷಣೆ ಇಲ್ಲವೆಂದರೆ ರಕ್ಷಣೆ ಮಾಡುವವರು ಯಾರು ಎಂದು ಪ್ರಶ್ನಿಸಿದರು.

ನೀಲಕಂಠ ಅಂಕದ ಪತ್ನಿ ಸುಜಾತ, ಸರ್ಕಾರಿ ನೌಕರ ಸಂಘದ ಅಧ್ಯಕ್ಷ ಬಳ್ಳಾರಿ, ಬಿಟಿಡಿಎ ಮುಖ್ಯ ಅಭಿಯಂತರ ಚಂದ್ರಹಾಸ ಬಂಡಿ ಸೇರಿದಂತೆ ಹಲವರಿದ್ದರು.

ಲಂಚ ನೀಡಲು ಯತ್ನ: ಆರೋಪಿಗಳಿಬ್ಬರ ಬಂಧನ



ಕಲಬುರಗಿ: ಎಸ್ಸಿ, ಎಸ್ಟಿ ಪ್ರಕರಣವೊಂದರ ವಿಚಾರಣೆಗೆ ಸಂಬಂಧಿಸಿದಂತೆ ಸರ್ಕಾರಿ ಅಭಿಯೋಜಕರಿಗೆ ಲಂಚ ನೀಡಲು ಯತ್ನಿಸಿದ ಇಬ್ಬರು ಆರೋಪಿಗಳನ್ನು ಕರ್ನಾಟಕ ಲೋಕಾಯುಕ್ತ ಅಧಿಕಾರಿಗಳು ಬಲೆಗೆ ಬೀಳಿಸಿ ಬಂಧಿಸಿರುವ ಘಟನೆ ಕಲಬುರಗಿಯಲ್ಲಿ ನಡೆದಿದೆ.

ಆರೋಪಿತರಾದ ಆಳಂದ ತಾಲೂಕಿನ ಕೊತನ ಹಿಪ್ಪರಗಾ ಗ್ರಾಮದ ಸಂಜೀವನ್ ದತ್ತಾಜಿ ಪಾಟೀಲ (80) ಹಾಗೂ ಅವರ ಪುತ್ರ ಸುರೇಶ್ ಸಂಜೀವನ್ ಪಾಟೀಲ್ (44) ಅವರು, ಆಳಂದ ಪೊಲೀಸ್ ಠಾಣೆ ವ್ಯಾಪ್ತಿಯ ಎಸ್ಸಿ, ಎಸ್ಟಿ ಪ್ರಕರಣದಲ್ಲಿ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುವ ಪ್ರಕರಣವನ್ನು ತಮ್ಮ ಪರವಾಗಿ ಸಾಗಿಸಲು ಹಾಗೂ ಆರೋಪಿತನಿಗೆ ಸಹಾಯವಾಗುವ ಉದ್ದೇಶದಿಂದ ಸರ್ಕಾರಿ ಅಭಿಯೋಜಕರಿಗೆ 5,000 ರೂ.ಲಂಚ ನೀಡಲು ಯತ್ನಿಸಿದ್ದಾರೆ ಎನ್ನಲಾಗಿದೆ.

ದೂರುದಾರರಾದ ಪ್ರಾಣೇಶ ಸಿದ್ದಪ್ಪ ಭರತನೂರ, ಹಿರಿಯ ಕಾನೂನು ಅಧಿಕಾರಿ ಹಾಗೂ ಸರ್ಕಾರಿ ಅಭಿಯೋಜಕರ ದೂರಿನ ಮೇರೆಗೆ ಲೋಕಾಯುಕ್ತ ಅಧಿಕಾರಿಗಳು ಕಾರ್ಯಾಚರಣೆ ನಡೆಸಿದರು. ಆರೋಪಿತರು ಕವರಿನಲ್ಲಿ 5,000 ನಗದು ಇಟ್ಟು ಒತ್ತಾಯ ಪೂರ್ವಕವಾಗಿ ನೀಡಲು ಮುಂದಾದ ವೇಳೆ ಅವರನ್ನು ವಶಕ್ಕೆ ಪಡೆದು ತನಿಖೆ ಆರಂಭಿಸಲಾಗಿದೆ.

ಕರ್ನಾಟಕ ಲೋಕಾಯುಕ್ತ ಕಲಬುರಗಿ ಪೊಲೀಸ್ ಅಧೀಕ್ಷಕ ಸಿದ್ದರಾಜು ಸಿ. ಅವರ ಮಾರ್ಗದರ್ಶನದಲ್ಲಿ, ಲೋಕಾಯುಕ್ತ ಪೊಲೀಸ್ ಇನ್ಸ್‌ಪೆಕ್ಟರ್ ರಾಜಶೇಖರ ಬಡದೇಸಾರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆದಿದ್ದು, ಸ್ಥಳದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್‌ಗಳಾದ ಅರುಣ್ ಕುಮಾರ್ ಹಾಗೂ ರವಿ ಪವಾರ್ ಸೇರಿದಂತೆ ಸಿಬ್ಬಂದಿ ಉಪಸ್ಥಿತರಿದ್ದರು.

ತನಿಖೆ ಪೂರ್ಣಗೊಂಡ ಬಳಿಕ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗುವುದು ಎಂದು ಲೋಕಾಯುಕ್ತ ಅಧಿಕಾರಿಗಳು ತಿಳಿಸಿದ್ದಾರೆ.

ತಮ್ಮ ಇಲಾಖೆ ನಿವೃತ್ತ ಸಿಬ್ಬಂದಿಗೆ ಲಂಚಕ್ಕೆ ಬೇಡಿಕೆ

ಎಫ್‌ಡಿಎ ಸಿಬ್ಬಂದಿ ಲೋಕಾ ಬಲೆಗೆ



ಹಾವೇರಿ: ಗುಂಪು ವಿಮೆ ಮೊತ್ತದ (ಜಿ.ಐ.ಎಸ್) ಬಿಲ್ ಮಾಡಿಕೊಡಲು 3 ಸಾವಿರ ರೂ.ಲಂಚಕ್ಕೆ ಬೇಡಿಕೆ ಇಟ್ಟು, ಹಣ ಪಡೆಯುವಾಗ ಹಾವೇರಿ ಸಹಕಾರ ಸಂಘಗಳ ಉಪನಿಬಂಧಕರ ಕಚೇರಿಯ ಎಫ್‌ಡಿಎ ಸಿಬ್ಬಂದಿ ಸೋಮವಾರ ಲೋಕಾಯುಕ್ತ ಬಲೆಗೆ ಸಿಕ್ಕಿಬಿದ್ದಿದ್ದಾರೆ.

ಹಾವೇರಿಯ ಸಹಕಾರ ಸಂಘಗಳ ಉಪನಿಬಂಧಕರ ಕಚೇರಿಯ ಅಕ್ಕಮ್ಮ ಬಿದರೇರ್ ಲೋಕಾ ಬಲೆಗೆ ಬಿದ್ದ ಪ್ರಥಮ ದರ್ಜೆ ಸಹಾಯಕಿ. ಕಳೆದ 2026 ಮೇ 31ರಂದು ವಯೋನಿವೃತ್ತಿ ಹೊಂದಿದ ತಮ್ಮದೇ ಇಲಾಖೆಯ ಸಹಕಾರ ಸಂಘಗಳ ಉಪನಿಬಂಧಕರ ಕಚೇರಿ ನಿವೃತ್ತ ಎಫ್‌ಡಿಎ ಮಹದೇವ ಹನುಮಂತಪ್ಪ ಜೇಕಿನಕಟ್ಟಿ ಎಂಬ ದೂರುದಾರರು ಗುಂಪು ವಿಮೆ ಮೊತ್ತದ ಬಿಲ್ ಮಾಡಿಕೊಡಲು ತಿಳಿಸಿದ್ದಾರೆ.

ಜಿ.ಐ.ಎಸ್ ಬಿಲ್ ಮಾಡಿಕೊಡಲು ಆರೋಪಿತೆ 3 ಸಾವಿರ ರೂ.ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ. ಸೋಮವಾರ ಬೆಳಗ್ಗೆ ಹಾವೇರಿ ಜಿಲ್ಲಾಡಳಿತ ಭವನದಲ್ಲಿರುವ ಸಹಕಾರ ಸಂಘಗಳ ಉಪನಿಬಂಧಕರ ಕಚೇರಿಯಲ್ಲಿ ಹಣವನ್ನು ಪಡೆದುಕೊಳ್ಳುವಾಗ ಲೋಕಾಯುಕ್ತ ಅಧಿಕಾರಿಗಳು ಯಶಸ್ವಿಯಾಗಿ ಟ್ರ್ಯಾಪ್ ಮಾಡಿದ್ದಾರೆ. ಆರೋಪಿತರನ್ನು ವಶಕ್ಕೆ ಪಡೆದು, ತನಿಖೆಯನ್ನು ಮುಂದುವರಿಸಿದ್ದಾರೆ.

ದಾವಣಗೆರೆಯ ಕರ್ನಾಟಕ ಲೋಕಾಯುಕ್ತ ಎಸ್‌ಪಿ ಎಂ.ಎಸ್.ಕೌಲಾಪುರೆ ಮಾರ್ಗದರ್ಶನದಲ್ಲಿ ಕಾರ್ಯಾಚರಣೆಯನ್ನು ಕೈಗೊಳ್ಳಲಾಗಿತ್ತು. ತನಿಖಾಧಿಕಾರಿಗಳಾದ ಲೋಕಾಯುಕ್ತ ಡಿವೈಎಸ್‌ಪಿ ಸಿ.ಮಧುಸೂದನ್ ಸೇರಿದಂತೆ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ರೌಡಿಶೀಟರ್‌ಗಳಿಬ್ಬರ ಗಡಿಪಾರು: ಎಸ್ಪಿ ಆದೇಶ





ಬೀದರ್: ಮಾದಕ ವಸ್ತು ಮಾರಾಟ ದಂಧೆಯಲ್ಲಿ ಭಾಗಿಯಾಗಿ ಸಾರ್ವಜನಿಕರ ಶಾಂತಿ, ನೆಮ್ಮದಿಗೆ ಕಂಟಕವಾಗಿದ್ದ ಇಬ್ಬರು ರೌಡಿಗಳನ್ನು ರಾಜ್ಯದ ಪ್ರತ್ಯೇಕ ಜಿಲ್ಲೆಗಳಿಗೆ ಗಡಿಪಾರು ಮಾಡಿ ಬೀದರ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟಿ ಅವರು ಆದೇಶ ಹೊರಡಿಸಿದ್ದಾರೆ.

ಬೀದರ್ ನಗರದ ಮಾಂಗರವಾಡಿ ಗಲ್ಲಿಯ ಸಹೋದರರಾದ ವಿಕಾಸ ಈಶ್ವರ ಕಸಬೆ ಮತ್ತು ಸುದೇಶ ಈಶ್ವರ ಕಸಬೆ ಗಡಿಪಾರಾದ ರೌಡಿಶೀಟರ್‌ಗಳು.

ವಿಕಾಶ ಕಸಬೆ ರಾಯಚೂರು ಜಿಲ್ಲೆ ಮತ್ತು ಸುದೇಶ ಕಸಬೆಗೆ ಕೊಪ್ಪಳ ಜಿಲ್ಲೆಗೆ ಗಡಿಪಾರು ಮಾಡಲಾಗಿದೆ ಎಂದು ಎಸ್ಪಿ ಪ್ರದೀಪ ಗುಂಟಿ ಸೋಮವಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾರ್ಕೆಟ್ ಪೊಲೀಸ್ ಠಾಣೆಯ ನಿವಾಸಿಗಳಾದ ವಿಕಾಸ ಕಸಬೆ ಹಾಗೂ ಸುದೇಶ ಕಸಬೆ ಅವರು ಬೀದರ್ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಮಾದಕ ವಸ್ತು ಹಾಗೂ ಸಿರಪ್‌ಗಳನ್ನು ಕಾಲೇಜು ವಿದ್ಯಾರ್ಥಿಗಳಿಗೆ, ಯುವಕರಿಗೆ ಹಾಗೂ ಸಾರ್ವಜನಿಕರಿಗೆ ಮಾರಾಟ ಮಾಡಿ ಕಾನೂನು ವಿರುದ್ಧ ಕೃತ್ಯ ಎಸಗುತ್ತಿದ್ದರು. ಅಪರಾಧಿಕ ಕೃತ್ಯ ತಡೆಯಲು ನಗರದ ಮಾರ್ಕೆಟ್, ಗಾಂಧಿಗಂಜ ಹಾಗೂ ಅಬಕಾರಿ ಠಾಣೆಗಳಲ್ಲಿ ವಿಕಾಶ ವಿರುದ್ಧ ವಿವಿಧ ಠಾಣೆಗಳಲ್ಲಿ 4 ಹಾಗೂ ಸುದೇಶ ವಿರುದ್ಧ ಮಾರ್ಕೆಟ್, ಗಾಂಧಿ ಗಂಜ ಠಾಣೆಯಲ್ಲಿ 3 ಎನ್‌ಡಿಪಿಎಸ್ ಕಾಯ್ದೆ ಅಡಿಯಲ್ಲಿ ಪ್ರಕರಣಗಳು ದಾಖಲಿಸಲಾಗಿತ್ತು. ಆದರೆ, ಇಬ್ಬರು ತಮ್ಮ ಹಳೆ ಚಾಳಿ ಬಿಡದೆ ಅಪರಾಧಿಕಲಾದರೆ, ಇಬ್ಬರು ತಮ್ಮ ಹಳೆ ಚಾಳಿ ಬಿಡದೆ ಅಪರಾಧಿಕ ಕೃತ್ಯಗಳನ್ನು ಮುಂದುವರೆಸಿದ ಹಿನ್ನೆಲೆ ಸಮಾಜದ ಶಾಂತಿ ಪಾಲನೆ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಬೀದರ್ ಜಿಲ್ಲೆಯಿಂದ ಅನ್ಯ ಜಿಲ್ಲೆಗಳಿಗೆ ಗಡಿಪಾರು ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಕಾನೂನು ವಿರುದ್ಧ ಚಟುವಟಿಕೆಯಲ್ಲಿ ಭಾಗಿಯಾಗಿ, ಕಾನೂನು ಮತ್ತು ಸುವ್ಯವಸ್ಥೆಯಲ್ಲಿ ಅಡೆತಡೆಯನ್ನುಂಟು ಮಾಡುವವರ ವಿರುದ್ಧ ಕಠಿಣ ಕಾನೂನುಕ್ರಮ ಜರುಗಿಸಲಾಗುವುದು ಹಾಗೂ ಗಡಿಪಾರು ಮಾಡಲಾಗುವುದು. ಜಿಲ್ಲೆಯ ನಾಗರಿಕರು ಯಾವುದೇ ಕಾನೂನು ವಿರುದ್ಧ ಚಟುವಟಿಕೆಯಲ್ಲಿ ಭಾಗಿಯಾಗಿ ಕಾನೂನು ಸಂಘರ್ಷದಲ್ಲಿ ಅಮೂಲ್ಯವಾದ ತನ್ನ ಹಾಗೂ ತನ್ನ ಕುಟುಂಬದ ಜೀವನವನ್ನು ಹಾಳುಮಾಡಿಕೊಳ್ಳಬೇಡಿ ಎಂದು ಜಿಲ್ಲೆಯ ಸಾರ್ವಜನಿಕರಲ್ಲಿ ಜಿಲ್ಲಾ ಪೊಲೀಸ್ ಕಚೇರಿ ಕೋರಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಜನಜಾಗೃತಿ ಸಭೆ

ಮುಂಡಗೋಡ: ತಾಲೂಕಿನ ಸನವಳ್ಳಿ ಗ್ರಾಮದ ಶ್ರೀಮಾರಿಕಾಂಬಾ ದೇವಸ್ಥಾನದಲ್ಲಿ ಪಟ್ಟಣದ ಪೊಲೀಸ್ ಠಾಣೆಯ ಸಿಬ್ಬಂದಿ ಅಣ್ಣಪ್ಪ ಶಿಗ್ಗಾವಿ ಸೋಮವಾರ ಜನಜಾಗೃತಿ ಸಭೆ ನಡೆಸಿದರು.ಗ್ರಾಮಸ್ಥರಿಗೆ ಬಾಲ್ಯ ವಿವಾಹದಿಂದ ಆಗುವ ಸಮಸ್ಯೆಗಳ ಬಗ್ಗೆ ತಿಳಿಸಿ ಹೇಳಿದರು. ಧೂಮಪಾನ, ಮದ್ಯಪಾನ, ಜೂಜಾಟಗಳ ಪರಿಣಾಮಗಳ ಬಗ್ಗೆ ಅರಿವು ಮೂಡಿಸಿದರು. ಪಾಲಕರು ಶಾಲಾ-ಕಾಲೇಜುಗಳಿಗೆ ತಮ್ಮ ಮಕ್ಕಳು ತಪ್ಪದೆ ಹಾಜರ ಆಗುತ್ತಿದ್ದಾರೋ ಇಲ್ಲವೋ ಎಂದು ಖಾತ್ರಿಪಡಿಸಿಕೊಳ್ಳಬೇಕು. ದುಶ್ಚಟಗಳಿಗೆ ಬಲಿಯಾಗದಂತೆ ನೋಡಿಕೊಳ್ಳಬೇಕು ಎಂದು ತಿಳಿಸಿ ಹೇಳಿದ ಅವರು ಸಂಚಾರಿ ನಿಯಮಗಳ ಬಗ್ಗೆ ತಿಳಿಸಿಕೊಟ್ಟರು. ಈ ವೇಳೆ ಗ್ರಾಮಸ್ಥರಾದ ರಾಜು ಗುಬ್ಬಕ್ಕನವರ, ಮಂಜು ಕೋಣನಕೇರಿ, ಕುಮಾರಸ್ವಾಮಿ ಹಿರೇಮಠ, ದೇವರಾಜ ಹುನಗುಂದ ಸಂತೋಷ ಪೂಜಾರ, ಶ್ರೀಕಾಂತ ಜಮಕನ್ನವರ, ಅನಿಲ ಕೆರಿಹೊಲದವರ, ಫಕ್ಕೀರಪ್ಪ ಆರೆಗೊಪ್ಪ, ವಿನಾಯಕ ಬೋಕಿಯವರ, ಶಿವರಾಮ ಮಟ್ಟಿಮನಿ, ಸುನೀಲ ಜಮಕನ್ನವರ ಇತರರು ಇದ್ದರು.

ಸ್ವರಚಿತ ಚುಟುಕು ವಾಚಿಸಿದ ದೀಕ್ಷಾ

ಕುಮಟಾ: ಇಲ್ಲಿನ ಚುಟುಕು ಸಾಹಿತ್ಯ ಸಮ್ಮೇಳನದಲ್ಲಿ ಮೊದಲ ಬಾರಿಗೆ ಸಾಹಿತ್ಯ ವೇದಿಕೆ ಏರಿದ ಗೋಕರ್ಣದ ಮಾಡರ್ನ್ ಎಜುಕೇಷನ್ ಸ್ಕೂಲ್‌ನ 9ನೇ ತರಗತಿ ವಿದ್ಯಾರ್ಥಿನಿ ದೀಕ್ಷಾ ಮಂಜುನಾಥ್ ತಮ್ಮ ಸ್ವರಚಿತ ಚುಟುಕುಗಳ ವಾಚನದ ಮೂಲಕ ಸಭಿಕರ ಮೆಚ್ಚುಗೆಗೆ ಪಾತ್ರರಾದರು.ಸಾಹಿತ್ಯ ಕ್ಷೇತ್ರದ ಹಿರಿಯರ ಸಮ್ಮುಖದಲ್ಲಿ ಆತ್ಮವಿಶ್ವಾಸದಿಂದ ಚುಟುಕುಗಳನ್ನು ವಾಚಿಸಿದ ದೀಕ್ಷಾ, ತಮ್ಮ ಪ್ರತಿಭೆ ಮತ್ತು ಅಭಿವ್ಯಕ್ತಿಯ ಮೂಲಕ ಸಭಾಧ್ಯಕ್ಷರು ಹಾಗೂ ಸಭಿಕರ ಮನಗೆದ್ದರು. ಅವರ ಚುಟುಕುಗಳಲ್ಲಿ ಕಂಡುಬಂದ ಸಾಹಿತ್ಯಾಸಕ್ತಿ, ಭಾಷಾ ಪಾಂಡಿತ್ಯ ಮತ್ತು ಭಾವಪ್ರಕಾಶನೆಯನ್ನು ಪ್ರಶಂಸಿಸಿದ ಸಾಹಿತ್ಯಾಸಕ್ತರು, ಭವಿಷ್ಯದಲ್ಲಿ ಅವರು ಉತ್ತಮ ಕವಯತ್ರಿಯಾಗಿ ಬೆಳೆಯುವ ಎಲ್ಲ ಲಕ್ಷಣಗಳೂ ಇವೆ ಎಂದು ಅಭಿಪ್ರಾಯಪಟ್ಟರು. ಮೊದಲ ಪ್ರಯತ್ನದಲ್ಲೇ ಸಾಹಿತ್ಯ ವೇದಿಕೆಯಲ್ಲಿ ಯಶಸ್ವಿಯಾಗಿ ಗುರುತಿಸಿಕೊಂಡ ದೀಕ್ಷಾ ಮಂಜುನಾಥ್ ಅವರ ಸಾಧನೆ ಯುವ ಸಾಹಿತ್ಯಾಸಕ್ತರಿಗೆ ಪ್ರೇರಣೆಯಾಗಿದೆ. ಅವರ ಸಾಹಿತ್ಯ ಪಯಣ ಇನ್ನಷ್ಟು ಉಜ್ವಲವಾಗಲಿ ಎಂದು ಸಮ್ಮೇಳನದ ಗಣ್ಯರು ಶುಭ ಹಾರೈಸಿದರು.

ನಾಳೆ ವಿವಿಧ ಬೆಳೆಗಳ ಮಾಹಿತಿ ಕಾರ್ಯಾಗಾರ

ಸಿದ್ದಾಪುರ: ತಾಲೂಕಿನ ತಾರೇಹಳ್ಳಿ-ಕಾನಸೂರು ಸೇವಾ ಸಹಕಾರಿ ಸಂಘದಲ್ಲಿ ಜೂ.17ರಂದು ಮಧ್ಯಾಹ್ನ 3.30ಕ್ಕೆ ರೈತರಿಗಾಗಿ ಅಡಕೆ, ಕಾಫಿ, ಕಾಳುಮೆಣಸು ಬೆಳೆಗಳ ಕುರಿತು ಮಾಹಿತಿ ಕಾರ್ಯಾಗಾರ ಸಂಘಟಿಸಲಾಗಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಗುರುನಾಥ ಗೋಪಾಲಕೃಷ್ಣ ಹೆಗಡೆ ದೇವಿಸರ ವಹಿಸಲಿದ್ದಾರೆ. ಸಂಪನ್ಮೂಲ ವ್ಯಕ್ತಿಗಳಾಗಿ ಪ್ರಗತಿಪರ ಕೃಷಿಕ ಮಾದೇವ ಹೆಗಡೆ ಗಡಿಕ್ಕೈ, ಸುಜಯ ಭಟ್ಟ ಹೊಸಳ್ಳಿ, ಸೀಮಾ ಭಟ್ಟ ಹೊಸಳ್ಳಿ ಪಾಲ್ಗೊಳ್ಳಲಿದ್ದಾರೆ. ಕೃಷಿಕ ಬಾಂಧವರು ಮಾಹಿತಿ ಕಾರ್ಯಾಗಾರದಲ್ಲಿ ಪಾಲ್ಗೊಂಡು ಸದುಪಯೋಗ ಮಾಡಿಕೊಳ್ಳುವಂತೆ ಸಂಘದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	61199	68699
ಬಿಳಿಗೋಟು	23600	34681
ಕೆಂಪುಗೋಟು	28499	36099
ಬೆಟ್ಟೆ	38561	47969
ರಾಶಿ	50000	52200
ಚಾಲಿ	44549	48760

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	55179	55179
ರಾಶಿ	46299	53009
ಬೆಟ್ಟೆ	37166	47899
ಕೆಂಪುಗೋಟು	16899	38111
ಬಿಳಿಗೋಟು	22899	34369
ಚಾಲಿ	36499	47801
ಕೋಕಾ	14099	28499
ಕಾಳುಮೆಣಸು	58005	65555



ಮುಂಡಗೋಡ: ತಾಲೂಕಿನ ಸನವಳ್ಳಿ ಗ್ರಾಮದ ಶ್ರೀಮಾರಿಕಾಂಬಾ ದೇವಸ್ಥಾನದಲ್ಲಿ ಪಟ್ಟಣದ ಪೊಲೀಸ್ ಠಾಣೆಯ ಸಿಬ್ಬಂದಿ ಅಣ್ಣಪ್ಪ ಶಿಗ್ಗಾವಿ ಸೋಮವಾರ ಜನಜಾಗೃತಿ ಸಭೆ ನಡೆಸಿದರು.ಗ್ರಾಮಸ್ಥರಿಗೆ ಬಾಲ್ಯ ವಿವಾಹದಿಂದ ಆಗುವ ಸಮಸ್ಯೆಗಳ ಬಗ್ಗೆ ತಿಳಿಸಿ ಹೇಳಿದರು. ಧೂಮಪಾನ,ಮದ್ಯಪಾನಗಳ ಪರಿಣಾಮಗಳ ಬಗ್ಗೆ ಅರಿವು ಮೂಡಿಸಿದರು.

ವನಮಹೋತ್ಸವಕ್ಕೆ ಶಾಸಕ ಚಾಲನೆ

ಶಿರಸಿ: ಪರಿಸರ ಸಂರಕ್ಷಣೆಯಿಂದ ಮಾತ್ರ ಭವಿಷ್ಯದ ನೀರಿನ ಸಮಸ್ಯೆ ನಿವಾರಿಸಲು ಸಾಧ್ಯ ಎಂದು ಶಾಸಕ ಭೀಮಣ್ಣ ಟಿ. ನಾಯ್ಕ ಹೇಳಿದರು. ಕೆನರಾ ವೃತ್ತ ಹಾಗೂ ಶಿರಸಿ ಅರಣ್ಯ ವಿಭಾಗದ ವತಿಯಿಂದ ನಗರದ ಶಾಲ್ಮಲಾ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ವನಮಹೋತ್ಸವ ಹಾಗೂ ಗ್ರಾಮ ಅರಣ್ಯ ಸಮಿತಿಗಳ ಲಾಭಾಂಶ ಹಂಚಿಕೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಗ್ರಾಮ ಅರಣ್ಯ ಸಮಿತಿಗಳ ಲಾಭಾಂಶವು ಜನರ ಪರಿಸರ ಕಾಳಜಿಗೆ ಸಂದ ಗೌರವವಾಗಿದೆ. ಜಿಲ್ಲೆಯ ಪರಿಸರ ವೈವಿಧ್ಯತೆ ಉಳಿಸಲು ಸಾರ್ವಜನಿಕರು ಹಾಗೂ ಅರಣ್ಯ ಇಲಾಖೆ ಒಟ್ಟಾಗಿ ಕೈಜೋಡಿಸಬೇಕು ಎಂದರು.ಪರಿಸರ ಬರಹಗಾರ ಶಿವಾನಂದ ಕಳವೆ ಮಾತನಾಡಿ, ಇನ್ನು ಮುಂದೆ ಅಕೇಶಿಯಾ ಬದಲಿಗೆ ಸ್ಥಳೀಯ ಹಾಗೂ ದೇಶೀ ತಳಿಗಳ ಸಂರಕ್ಷಣೆಗೆ ಒತ್ತು ನೀಡಬೇಕು ಎಂದರು. ಸಸ್ಯ ಔಷಧೀಯ ಗಿಡಮೂಲಿಕೆಗಳ ಪ್ರಾಧಿಕಾರದ ಸಿಇಒ ಅರ್ಸನಾಲ್, ಗುಣಮಟ್ಟದ ಗಿಡಮೂಲಿಕೆಗಳ ಉತ್ಪಾದನೆಗೆ ಸಲಹೆ ನೀಡಿದರು. ಡಿಎಫ್‌ಒ ಸಂದೀಪ್ ಎಸ್. ಸೂರ್ಯವಂಶಿ ಪ್ರಾಸ್ತಾವಿಕವಾಗಿ ಮಾತನಾಡಿ, ವಿಭಾಗದ 125 ಸಮಿತಿಗಳ ಉತ್ಪನ್ನಗಳಿಗೆ ಮಾರುಕಟ್ಟೆ ಕಲ್ಪಿಸಲು ಇಲಾಖೆ ಬದ್ಧವಾಗಿದೆ ಎಂದರು.ಕಾರ್ಯಕ್ರಮದಲ್ಲಿ ವಿವಿಧ ಸಮಿತಿಗಳಿಗೆ ಒಟ್ಟು 90 ಲಕ್ಷಕ್ಕೂ ಅಧಿಕ ರೂ. ಲಾಭಾಂಶದ ಚೆಕ್ ವಿತರಿಸಲಾಯಿತು. ವೇದಿಕೆಯಲ್ಲಿ ರೋಟರಿ ಅಧ್ಯಕ್ಷ ಶ್ರೀನಿವಾಸ ನಾಯ್ಕ, ಪ್ರಮುಖರಾದ ಎಸ್.ಎಸ್. ನಿಂಗಾಣಿ, ಹರೀಶ್ ಸಿ.ಎನ್. ಹಾಗೂ ವಿವಿಧ ಸಮಿತಿಗಳ ಅಧ್ಯಕ್ಷರು ಉಪಸ್ಥಿತರಿದ್ದರು. ಪಾವನಾ ಹೆಗಡೆ ಪ್ರಾರ್ಥಿಸಿದರು, ಗಿರೀಶ್ ನಾಯ್ಕ ಸ್ವಾಗತಿಸಿ, ನಿರೂಪಿಸಿದರು.



ಶಿರಸಿ: ಕೆನರಾ ವೃತ್ತ ಹಾಗೂ ಶಿರಸಿ ಅರಣ್ಯ ವಿಭಾಗದ ವತಿಯಿಂದ ನಗರದ ಶಾಲ್ಮಲಾ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ವನಮಹೋತ್ಸವ ಹಾಗೂ ಗ್ರಾಮ ಅರಣ್ಯ ಸಮಿತಿಗಳ ಲಾಭಾಂಶ ಹಂಚಿಕೆ ಕಾರ್ಯಕ್ರಮವನ್ನು ಶಾಸಕ ಭೀಮಣ್ಣ ಟಿ. ನಾಯ್ಕ ಉದ್ಘಾಟಿಸಿದರು.

ಬೇಡ್ತಿ-ವರದಾ ನದಿ ತಿರುವು ಯೋಜನೆ ಕೈಬಿಡಲು ಒತ್ತಾಯ

ಶಿರಸಿ: ಪ್ರಸ್ತಾಪಿತ ಬೇಡ್ತಿ-ವರದಾ ಹಾಗೂ ಅಘನಾಶಿನಿ-ವೇದಾವತಿ ನದಿ ತಿರುವು ಯೋಜನೆಗಳನ್ನು ಸಂಪೂರ್ಣವಾಗಿ ಕೈಬಿಡಬೇಕೆಂದು ಆಗ್ರಹಿಸಿ ಜಿಲ್ಲೆಯ ಸಾವಿರಾರು ನಾಗರಿಕರು ಸೋಮವಾರ ಇಲ್ಲಿನ ಸಹಾಯಕ ಆಯುಕ್ತರ ಕಚೇರಿಗೆ ತೆರಳಿ ಮುಖ್ಯಮಂತ್ರಿಗೆ ಬರೆದ 10 ಸಾವಿರಕ್ಕೂ ಅಧಿಕ ಪತ್ರಗಳನ್ನು ಸಲ್ಲಿಸಿದರು.

ಬೇಡ್ತಿ-ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ನೇತೃತ್ವದಲ್ಲಿ ನಡೆದ ಬೃಹತ್ ಪತ್ರ ಚಳವಳಿಯಲ್ಲಿ, ನದಿ ತಿರುವು, ಶರಾವತಿ ಪಂಪ್ಡ್ ಸ್ಟೋರೇಜ್ ಮತ್ತು ಕೈಗಾ ಅಣು ಸ್ಥಾವರ ಯೋಜನೆಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಲಾಯಿತು. ಈ ಯೋಜನೆಗಳಿಂದ ಜೀವವೈವಿಧ್ಯ, ಕೃಷಿ ಭೂಮಿ ನಾಶವಾಗಿ 3 ಲಕ್ಷಕ್ಕೂ ಅಧಿಕ ಜನ ನಿರಾಶ್ರಿತರಾಗಲಿದ್ದಾರೆ. ಸರ್ಕಾರ ಕೆರೆಗಳ ಪುನರುಜ್ಜೀವನದಂತಹ ಪರ್ಯಾಯ ಮಾರ್ಗ ಬಳಸಬೇಕು ಎಂದು ಒತ್ತಾಯಿಸಲಾಯಿತು.

ಸ್ವರ್ಣವಲ್ಲೀ ಮಠದ ಅಧ್ಯಕ್ಷ ವಿ.ಎನ್.ಹೆಗಡೆ ಬೊಮ್ಮನಳ್ಳಿ, ಜಿಪಂ ಮಾಜಿ ಸದಸ್ಯ ಎಸ್.ಆರ್.ಹೆಗಡೆ ಕುಂಬಾರಕುಳಿ, ಟಿಎಸ್‌ಎಸ್ ಅಧ್ಯಕ್ಷ ಗೋಪಾಲಕೃಷ್ಣ ವೈದ್ಯ, ವೇದಾ ಹೆಗಡೆ ನೀರ್ನಳ್ಳಿ, ಎನ್.ಜಿ.ಹೆಗಡೆ ಭಟ್ರಕೇರಿ ಮುಂತಾದವರು ಸ್ವರ್ಣವಲ್ಲೀ ಶ್ರೀಗಳ ಮಾರ್ಗದರ್ಶನದಲ್ಲಿ ಹೋರಾಟ ನಿರಂತರ ಎಂದರು.



> ಈ ಮಾರಕ ಯೋಜನೆಗಳನ್ನು ಕೈ ಬಿಡುವಂತೆ ಸಿಎಂ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿಯಾಗಿ ಒತ್ತಾಯಿಸುವುದಾಗಿ ತಿಳಿಸಿದರು.
> ■ ಭೀಮಣ್ಣ ನಾಯ್ಕ, ಶಾಸಕ

> ಯೋಜನೆಯ ಡಿಪಿಆರ್ ರದ್ದಾಗುವವರೆಗೆ ಹೋರಾಟ ನಿಲ್ಲದು.
> ■ ಅನಂತ ಹೆಗಡೆ ಅಶೀಸರ, ಸಮಿತಿ ಅಧ್ಯಕ್ಷ

ಪ್ರಮುಖರಾದ ಶ್ರೀಪಾದ ರಾಯ್ಸದ್, ನರಸಿಂಹ ಸಾತೊಡ್ಡಿ, ಆರ್.ಎಸ್.ಹೆಗಡೆ ಭೈರುಂಬೆ, ಶಿವಾನಂದ ಕಳವೆ ಸೇರಿದಂತೆ ಸಾವಿರಾರು ಸಾರ್ವಜನಿಕರು ಉಪಸ್ಥಿತರಿದ್ದರು.

'ಬ ಖರಾಬ' ನಮೂದನೆ ರದ್ದುಗೊಳಿಸಲು ಒತ್ತಾಯ

ಶಿರಸಿ: ಇಲ್ಲಿನ ಉಪವಿಭಾಗ ವ್ಯಾಪ್ತಿಯ ಬೆಟ್ಟದ ಜಮೀನುಗಳನ್ನು ಪಹಣಿ ಪತ್ರಿಕೆಯಲ್ಲಿ 'ಬ ಖರಾಬ' ಎಂದು ನಮೂದಿಸಿರುವುದನ್ನು ತಕ್ಷಣ ರದ್ದುಪಡಿಸಿ, 2012ಕ್ಕೂ ಮುಂಚಿನಂತೆ ಮೂಲ ದಾಖಲೆಗಳನ್ನು ಮರುಸ್ಥಾಪಿಸಬೇಕು ಎಂದು ವಿವಿಧ ರೈತ ಹಾಗೂ ಕೃಷಿ ಸಂಘಟನೆಗಳು ಸಹಾಯಕ ಆಯುಕ್ತ ಚಂದ್ರಶೇಖರ ಜಿ.ಆರ್. ಅವರಿಗೆ ಮನವಿ ಸಲ್ಲಿಸಿವೆ.ಹಿಂದಿನ ಮುಂಬೈ ಪ್ರಾಂತ್ಯದ ಕೆನರಾ ಪ್ರಿವಿಲೇಜ್ ಆಯಕ್ಟ್ ವ್ಯವಸ್ಥೆಯಡಿ ಶತಮಾನಗಳಿಂದ ಅಡಿಕೆ ಮತ್ತು ಸಾಂಬಾರ ಬೆಳೆಗಳ ಅಭಿವೃದ್ಧಿಗಾಗಿ ಬೆಟ್ಟದ ಜಮೀನುಗಳನ್ನು ನಿರ್ದಿಷ್ಟ ಭಾಗಾಯತ ಜಮೀನುಗಳಿಗೆ ಲಾಗೂ ಮಾಡಲಾಗಿತ್ತು. ಈ ಜಮೀನುಗಳ ಕಂದಾಯವನ್ನು 1869ರಿಂದಲೂ ಭಾಗಾಯತದೊಂದಿಗೆ ಸೇರಿಸಿ ಆಕರಿಸಲಾಗುತ್ತಿದ್ದು, ರೈತರಿಗೆ ಇದರ ಕಾನೂನುಬದ್ಧ ಹಕ್ಕು ಇಂದಿಗೂ ಇದೆ. ಆದರೆ, 2012ರ ಕಂದಾಯ ಇಲಾಖೆಯ ಸುತ್ತೋಲೆಯನ್ವಯ ದಾಖಲೆಗಳ ಸಮನ್ವಯ ಪ್ರಕ್ರಿಯೆ ವೇಳೆ ಸಮಗ್ರ ಪರಿಶೀಲನೆ ನಡೆಸದೇ ಇವುಗಳನ್ನು ಬ ಖರಾಬ ಎಂದು ದಾಖಲಿಸಲಾಗಿದೆ. ಇದರಿಂದ ಬೆಟ್ಟದ ಜಮೀನು ಸಾರ್ವಜನಿಕ ಆಸ್ತಿಯಾಗಿ ಬದಲಾಗಿ, ರೈತರು ತಮ್ಮ ಹಕ್ಕನ್ನು ಕಳೆದುಕೊಳ್ಳುವ ಅಪಾಯವಿದೆ ಎಂದು ಮನವಿಯಲ್ಲಿ ಆತಂಕ ವ್ಯಕ್ತಪಡಿಸಲಾಗಿದೆ. ಆದ್ದರಿಂದ ಪಹಣಿಯ ಮೂರನೇ ಕಾಲಂ ಹಾಗೂ ಆಕಾರಬಂದ ರಿಜಿಸ್ಟರ್‌ನಲ್ಲಿ ತಿದ್ದುಪಡಿ ಮಾಡಿ, ಹಳೇ ದಾಖಲೆಗಳನ್ನು ಮರುಸ್ಥಾಪಿಸಬೇಕೆಂದು ಒತ್ತಾಯಿಸಲಾಗಿದೆ.ಕೃಷಿ ಶ್ರೇಯೋಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ರಾಮಕೃಷ್ಣ ಹೆಗಡೆ ಕಡವೆ, ಕೃಷಿಕರ ಹಿತರಕ್ಷಣಾ ಸಮಿತಿ ಅಧ್ಯಕ್ಷ ಎಂ.ಎನ್. ಹೆಗಡೆ ಮುಂಡಿಗೇಸರ, ಕಾರ್ಯದರ್ಶಿ ಸತ್ಯನಾರಾಯಣ ಭಟ್ಟ ವರ್ಗಾಸರ, ಸ್ವರ್ಣವಲ್ಲೀ ಕೃಷಿ ಪ್ರತಿಷ್ಠಾನದ ಕಾರ್ಯಾಧ್ಯಕ್ಷ ಆರ್.ಎನ್. ಹೆಗಡೆ ಉಳ್ಳಿಕೊಪ್ಪ, ಕಾರ್ಯದರ್ಶಿ ಸುರೇಶ ಹೆಗಡೆ ಹಕ್ಕಿಮನೆ, ಟಿ.ಎಸ್.ಎಸ್ ಅಧ್ಯಕ್ಷ ಗೋಪಾಲಕೃಷ್ಣ ವೈದ್ಯ ಹಾಗೂ ಮಹಾಗಣಪತಿ ಬ್ಯಾಂಕ್ ಅಧ್ಯಕ್ಷ ಶ್ರೀಪಾದ ರಾಯ್ಸದ್ ಉಪಸ್ಥಿತರಿದ್ದರು.

> ಮಲೆನಾಡಿನಲ್ಲಿ ಅಡಿಕೆ ತೋಟಕ್ಕೆ ಮೀಸಲಿಟ್ಟ ಬೆಟ್ಟ ಭೂಮಿ 'ಬ ಖರಾಬ' ಆಗಿದೆ. ಇದನ್ನು ಬಳಸಿಕೊಂಡು ಸಮಾಜದಲ್ಲಿ ತಾನೊಬ್ಬ ದೊಡ್ಡ ಮನುಷ್ಯ ಎಂದು ಗುರುತಿಸಿಕೊಳ್ಳಬೇಕು ಎಂದು ನಾಟಕ ಆಡುತ್ತಿದ್ದಾರೆ. ಇದು ಸರಿಹೋಗದಿದ್ದಲ್ಲಿ ಹೋರಾಟ ತೀವ್ರಗೊಳ್ಳಲಿದೆ.
> ■ ಗೋಪಾಲಕೃಷ್ಣ ವೈದ್ಯ, ಟಿಎಸ್‌ಎಸ್ ಅಧ್ಯಕ್ಷ



ಕುಮಟಾ: ಇಲ್ಲಿನ ಚುಟುಕು ಸಾಹಿತ್ಯ ಸಮ್ಮೇಳನದಲ್ಲಿ ಮೊದಲ ಬಾರಿಗೆ ಸಾಹಿತ್ಯ ವೇದಿಕೆ ಏರಿದ ಗೋಕರ್ಣದ ಮಾಡರ್ನ್ ಎಜುಕೇಷನ್ ಸ್ಕೂಲ್‌ನ 9ನೇ ತರಗತಿ ವಿದ್ಯಾರ್ಥಿನಿ ದೀಕ್ಷಾ ಮಂಜುನಾಥ್ ತಮ್ಮ ಸ್ವರಚಿತ ಚುಟುಕುಗಳ ವಾಚನದ ಮೂಲಕ ಸಭಿಕರ ಮೆಚ್ಚುಗೆಗೆ ಪಾತ್ರರಾದರು.ಸಾಹಿತ್ಯ ಕ್ಷೇತ್ರದ ಹಿರಿಯರ ಸಮ್ಮುಖದಲ್ಲಿ ಆತ್ಮವಿಶ್ವಾಸದಿಂದ ಚುಟುಕುಗಳನ್ನು ವಾಚಿಸಿದ ದೀಕ್ಷಾ, ತಮ್ಮ ಪ್ರತಿಭೆ ಮತ್ತು ಅಭಿವ್ಯಕ್ತಿಯ ಮೂಲಕ ಸಭಾಧ್ಯಕ್ಷರು ಹಾಗೂ ಸಭಿಕರ ಮನಗೆದ್ದರು.



ನಾವೀನ್ಯ ವಿನ್ಯಾಸ ಚಿಂತನೆ ತರಬೇತಿ ಕಾರ್ಯಾಗಾರ

ಹಳಿಯಾಳ: ಆಂತರಿಕ ಗುಣಮಟ್ಟ ಭರವಸೆ ಕೋಶ (ಐಕ್ಯುಎಸಿ) ಕೆಎಲ್‌ಎಸ್ ವಿಡಿಐಟಿ ಹಳಿಯಾಳ ಹಾಗೂ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಬೆಂಗಳೂರಿನ ಶ್ರೇಷ್ಠತಾ ಕೇಂದ್ರದ ಜಂಟಿ ಸಹಯೋಗದಲ್ಲಿ 'ನಾವೀನ್ಯ ವಿನ್ಯಾಸ ಚಿಂತನೆ' ಕುರಿತಾಗಿ ಪ್ರಾಧ್ಯಾಪಕರಿಗಾಗಿ ಕಾರ್ಯಾಗಾರವನ್ನು ಆಯೋಜಿಸಲಾಗಿದೆ. ಸೋಮವಾರ ಉದ್ಘಾಟನೆಗೊಂಡ ಐದು ದಿನದ ಈ ಕಾರ್ಯಾಗಾರವು ಪ್ರಾಧ್ಯಾಪಕರಿಗೆ ವಿದ್ಯಾರ್ಥಿಗಳಲ್ಲಿ ನಾವೀನ್ಯ ವಿನ್ಯಾಸ ಚಿಂತನೆಯನ್ನು ಹೆಚ್ಚಿಸುವ ತರಬೇತಿಯನ್ನು ನೀಡುವ ಗುರಿಯನ್ನು ಹೊಂದಿದೆ.

ಸಂಪನ್ಮೂಲ ವ್ಯಕ್ತಿಯಾಗಿ ಭಾರತೀಯ ವಿಜ್ಞಾನ ಸಂಸ್ಥೆ, ನಾವೀನ್ಯ ವಿನ್ಯಾಸ ಶ್ರೇಷ್ಠತಾ ಕೇಂದ್ರ, ಬೆಂಗಳೂರಿನ ಹನ್ನಿ ಬಿದ್ದಾನ್ ಹಾಗೂ ಬೆನೆಟ್ ಬೆನ್ನಿ ವಿದ್ಯಾರ್ಥಿಗಳಲ್ಲಿ ವಿನ್ಯಾಸ ಚಿಂತನೆಯನ್ನು ಹೆಚ್ಚಿಸಲು ಶಿಕ್ಷಕರು ತಮ್ಮಲ್ಲಿ ಮಾಡಿಕೊಳ್ಳಬಹುದಾದ ಮಾರ್ಪಾಡುಗಳನ್ನು ತಿಳಿಸಿದರು. ತಾಂತ್ರಿಕ ಕ್ಷೇತ್ರದಲ್ಲಿನ ಸವಾಲುಗಳಿಗೆ ಪರಿಹಾರ ಒದಗಿಸಲು ವಿನ್ಯಾಸ ಚಿಂತನೆಯು ಅಗತ್ಯವಾಗಿದೆ.

ನೂತನ ತಂತ್ರಜ್ಞಾನಗಳ ಮೂಲಕ ವಿನ್ಯಾಸ ಚಿಂತನೆಗೆ ಹೊಸ ಆಯಾಮವನ್ನು ನೀಡಲಾಗಿದೆ ಎಂದು ಹೇಳಿದರು. ಐದು ದಿನಗಳ ಕಾಲ ಜರುಗುವ ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಲ್ಲಿ ಚಿಂತನೆಯ ಮನೋಭಾವವನ್ನು ಹೆಚ್ಚಿಸಲು ಶಿಕ್ಷಕರಿಗೆ ತರಬೇತಿ ನೀಡಲಾಗುವುದು. ಮಹಾವಿದ್ಯಾಲಯದ ಪ್ರಾಧ್ಯಾಪಕರುಗಳಿಗೆ ಅನುಭವಿ ಉಪನ್ಯಾಸಕರಿಂದ ವಿನ್ಯಾಸ ಚಿಂತನೆಯ ಕುರಿತಾಗಿ ಹೆಚ್ಚಿನ ಮಾಹಿತಿ ನೀಡಿ ವಿದ್ಯಾರ್ಥಿಗಳಲ್ಲಿ ಆವಿಷ್ಕಾರ ಚಿಂತನೆಯನ್ನು ಹೆಚ್ಚಿಸಲು ಈ ಕಾರ್ಯಕ್ರಮವನ್ನು, ಕೆಎಲ್‌ಎಸ್ ಆಡಳಿತ ಮಂಡಳಿ ಮಾರ್ಗದರ್ಶನದಲ್ಲಿ ಆಯೋಜಿಸಲಾಗಿದೆ ಎಂದು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಪ್ರಾಚಾರ್ಯ ಡಾ. ವಿ.ಎ ಕುಲಕರ್ಣಿ ಹೇಳಿದರು.

ಐಕ್ಯುಎಸಿ ಸಂಚಾಲಕಿ, ಪ್ರೊ. ಲಕ್ಷ್ಮಿ ಹಟ್ಟಿಹೋಳಿ ಸ್ವಾಗತಿಸಿದರು. ಪ್ರೊ.ರೋಹಿಣಿ ಕಲ್ಲೂರ್ ವಂದಿಸಿದರು. ಐದು ದಿನಗಳ ಕಾಲ ಜರುಗುವ ಈ ಕಾರ್ಯಾಗಾರದಲ್ಲಿ 40 ಪ್ರಾಧ್ಯಾಪಕರು ಭಾಗವಹಿಸುತ್ತಿದ್ದಾರೆ.



ಆರೋಗ್ಯ, ಶಿಕ್ಷಣ, ಸ್ವಚ್ಛತೆಗೆ ಆದ್ಯತೆ ನೀಡಿ: ಶಾಸಕ ಭೀಮಣ್ಣ

ಶಿರಸಿ: ವಿದ್ಯಾರ್ಥಿಗಳ ಸರ್ಕಾರಿ ವಸತಿ ನಿಲಯ ಹಾಗೂ ವಸತಿ ಶಾಲೆಗಳಲ್ಲಿ ಆರೋಗ್ಯ, ಶಿಕ್ಷಣ ಮತ್ತು ಸ್ವಚ್ಛತೆಗೆ ಮೊದಲ ಆದ್ಯತೆ ನೀಡಬೇಕು. ಇತ್ತೀಚೆಗೆ ನಡೆದ ಎರಡು ಅಹಿತಕರ ಘಟನೆಗಳನ್ನು ಯಾವುದೇ ಕಾರಣಕ್ಕೂ ಸಹಿಸಲು ಸಾಧ್ಯವಿಲ್ಲ ಎಂದು ಶಾಸಕ ಭೀಮಣ್ಣ ನಾಯ್ಕ ಅಧಿಕಾರಿಗಳಿಗೆ ತೀಕ್ಷ್ಣ ಎಚ್ಚರಿಕೆ ನೀಡಿದರು.

ಮಿನಿವಿಧಾನಸೌಧದಲ್ಲಿ ನಡೆದ ಶಿರಸಿ-ಸಿದ್ದಾಪುರ ತಾಲೂಕಿನ ವಸತಿ ನಿಲಯಗಳ ಸುರಕ್ಷತೆಯ ತುರ್ತು ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಲೋಪ ಎಸಗಿದ ಸಿಬ್ಬಂದಿ ವಿರುದ್ಧ ಕ್ರಮ ಜರುಗಿಸಲಾಗುವುದು. ಇನ್ನುಮುಂದೆ ಪ್ರವೇಶಕ್ಕೂ ಮುನ್ನ ವಿದ್ಯಾರ್ಥಿಗಳ ವೈದ್ಯಕೀಯ ತಪಾಸಣೆ ಕಡ್ಡಾಯ. ಬಾಡಿಗೆ ಕಟ್ಟಡಗಳ ದುರಸ್ತಿಗೆ ಮಾಲೀಕರು ಸ್ಪಂದಿಸದಿದ್ದರೆ ಪರ್ಯಾಯ ಕಟ್ಟಡ ಗುರುತಿಸಿ. ಸಹಾಯಕ ಆಯುಕ್ತರ ಅಧ್ಯಕ್ಷತೆಯ ಸಮಿತಿ ವಸತಿ ನಿಲಯಗಳ ಸಮಗ್ರ ವರದಿ ನೀಡಬೇಕು ಎಂದು ಸೂಚಿಸಿದರು.



> ವಸತಿ ಶಾಲೆಗಳಲ್ಲಿ 24 ಗಂಟೆ ಭದ್ರತೆ. 3 ತಿಂಗಳ ಬ್ಯಾಕಪ್ ಇರುವ ಸಿಸಿಟಿವಿ ಇರಲಿ

ಸಭೆಯಲ್ಲಿ ಅಧಿಕಾರಿಗಳಾದ ಪ್ರಸಾದ ಆಲದಕಟ್ಟಿ, ಆಶಾ ಬೇಗಂ ಹಾಗೂ ಕೇಶವಮೂರ್ತಿ ಇಮ್ಮಡಿ ಮಾತನಾಡಿ, ಸಾಲ್ಕಣಿ, ಗಾಂಧಿನಗರ, ದೊಡ್ನನೆ, ಕವಂಚೂರು, ಕೋಲಸಿರ್ಸಿ, ಕೊಂಡ್ಲಿ ನಿಲಯಗಳು ಶಿಥಿಲಾವಸ್ಥೆಯಲ್ಲಿದ್ದು, ತಡೆಗೋಡೆ, ಶೌಚಾಲಯ, ಬೆಡ್‌ಗಳ ಕೊರತೆ ಹಾಗೂ ನಾಯಿಗಳ ಕಾಟವಿದೆ ಎಂದು ಶಾಸಕರ ಗಮನಕ್ಕೆ ತಂದರು.

ಡಿವೈಎಸ್ಪಿ ಗೀತಾ ಪಾಟೀಲ ಮಾತನಾಡಿ, ವಸತಿ ಶಾಲೆಗಳಲ್ಲಿ 24 ಗಂಟೆ ಭದ್ರತೆ ಹಾಗೂ 3 ತಿಂಗಳ ಬ್ಯಾಕಪ್ ಇರುವ ಸಿಸಿಟಿವಿ ಇರಬೇಕು. ಪೊಲೀಸ್ ಇಲಾಖೆಯಿಂದ ವಿಶೇಷ ತಂಡ ರಚಿಸಿ ಭೇಟಿ ನೀಡಲಾಗುವುದು ಎಂದರು. ಸಭೆಯಲ್ಲಿ ಎಸಿ ಚಂದ್ರಶೇಖರ ಆರ್.ಜಿ, ತಹಸೀಲ್ದಾರ್ ಪಟ್ಟರಾಜ ಗೌಡ, ಪ್ರಭಾರ ತಹಸೀಲ್ದಾರ್ ರಮೇಶ ಹೆಗಡೆ, ಸಿಪಿಐ ಇ.ಸಿ.ಸಂಪತ್, ಪಿಐ ರಮೇಶ ಹೂಗಾರ ಹಾಗೂ ಆಸ್ಪತ್ರೆ ಆಡಳಿತಾಧಿಕಾರಿ ನೇತ್ರಾವತಿ ಸಿರ್ಸಿಕರ ಉಪಸ್ಥಿತರಿದ್ದರು.

ಹನುಮಂತ ಬೊಮ್ಮಗೌಡರಿಗೆ ಸನ್ಮಾನ

ಅಂಕೋಲಾ: ಸ್ನೇಹಿತ ಹಾಗೂ ಸಮಾನ ಮನಸ್ಕರ ಬಳಗ, ಅಂಕೋಲಾ ಇವರ ಆಶ್ರಯದಲ್ಲಿ ಪ್ರತಿಷ್ಠಿತ ಪ್ರಶಸ್ತಿಯಾದ ಪರಿಸರ ಮತ್ತು ಜೀವ ವೈವಿಧ್ಯ ಸಂರಕ್ಷಣೆ ಪ್ರಶಸ್ತಿ ಪಡೆದ ನಾಟಿ ವೈದ್ಯರು ಶ್ರೀಯುತ ಹನುಮಂತ ಬೊಮ್ಮಗೌಡ ಇವರ ಮನೆಯಲ್ಲಿ ಮನೆ ಅಂಗಳ ಕಾರ್ಯಕ್ರಮವನ್ನು ಹಮ್ಮಿಕೊಂಡು ಸನ್ಮಾನಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಮನೆ ಅಂಗಳ ಕಾರ್ಯಕ್ರಮದ ಸದಸ್ಯರಾದ ಶ್ರೀ ಲಕ್ಷ್ಮಣ್ ವಿ. ಗೌಡ, ಶ್ರೀ ಬೊಮ್ಮಯ್ಯ ಪಿ ಗೌಡ, ಸಾತು ಗೌಡ ಬಡಿಗೇರಿ, ಬೊಮ್ಮಗೌಡ, ಉಮೇಶ್ ಗೌಡ, ತುಳಸು ಗೌಡ, ಮಹಾಬಲೇಶ್ವರ್ ಗೌಡ, ಚಂದ್ರಹಾಸ್ ಗೌಡ,ರಮಕಾಂತ ಗೌಡ, ತುಳಸು ಗೌಡ,ಕೆ, ಎಂ, ಗೌಡ ಚಂದ್ರು, ಗೌಡ, ವಸಂತಗೌಡ, ಬಲಿಂದ್ರ ಗೌಡ, ಏಕಾದಶಿ ಗೌಡ,



ಮಹಾಂತೇಶ್ ಭರೇವಡಿ ಪತ್ರಕರ್ತರು ಅಂಕೋಲಾ, ಶ್ರೀ ಗಣಪತಿ ಗೌಡ ಉಪಸ್ಥಿತರಿದ್ದರು.

ದೇವಾಲಯ ಸೋರಿಕೆ ದುರಸ್ತಿ ಕಾರ್ಯ ಇಂದಿನಿಂದ ಆರಂಭ

ಬನವಾಸಿ: ಭಕ್ತರ ಬಹುದಿನಗಳ ಬೇಡಿಕೆ ಮಧುಕೇಶ್ವರ ಈಡೇರಿಸಿದ್ದಾನೆ. ಪುರಾಣ ಪ್ರಸಿದ್ಧ ಬನವಾಸಿಯ ಮಧುಕೇಶ್ವರ ದೇವಸ್ಥಾನ ಸೋರಿಕೆಗೆ ಇನ್ನು ಫುಲ್ ಸ್ಟಾಪ್. ಸುಮಾರು ಹನ್ನೆರಡು ವರ್ಷಗಳಿಂದ ಸೋರುತ್ತಿರುವ ದೇವಸ್ಥಾನ ಶಿಖರ ಹಾಗೂ ಮೇಲ್ಭಾಗದಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ಟ್ರಾನ್ಸ್‌ಪರೆಂಟ್ ವಾಟರ್ ಪ್ರೂಫ್ ಪೇಂಟಿಂಗ್ ಆರಂಭಿಸಿದೆ.

ಶಿಖರದ ಹಾಗೂ ದೇವಸ್ಥಾನ ಮೇಲ್ಭಾಗದಲ್ಲಿ ಮೂರು ಹಂತಗಳಲ್ಲಿ ಇದನ್ನ ಹಚ್ಚಲಾಗುವದು ಎಂದು ಇಲಾಖೆಯಿಂದ ಬಂದ ಕ್ಲಾಸ್ ಒನ್ ಗುತ್ತಿಗೆದಾರರಾದ ವಿನೋದ ಅವರು ಬನವಾಸಿ ನೂತನ ತಾಲೂಕು ರಚನಾ ಹೋರಾಟ ಸಮಿತಿ ಪದಾಧಿಕಾರಿಗಳಿಗೆ ವಿವರಣೆ ನೀಡಿದರು. ಸಮಿತಿ ಅಧ್ಯಕ್ಷ ಉದಯಕುಮಾರ್ ಕಾನಳ್ಳಿ, ಗೌರವಾಧ್ಯಕ್ಷ ಸಿ.ಎಫ್ ನಾಯಕ ಮಾಳಂಜಿ, ಕಾರ್ಯದರ್ಶಿ ವಿಶ್ವನಾಥ್ ಒಡೆಯರ್ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು ಮೊದಲು ಜೈಕೋಸಿಲ್ ಮ್ಯಾಕ್ಸ್ ಫಡ್ಜಟಿರಜ್ಞಿಖಿಬ್ಬಿ)ಅನ್ನು ಒಂದು ಲೀಟರ್ ಕೆಮಿಕಲ್‌ಗೆ ನಲವತ್ತು ಲೀಟರ್ ಕುಡಿಯಲು ಯೋಗ್ಯ ನೀರಿನಲ್ಲಿ ಬೆರೆಸಿ 800ಸ್ಕ್ವೇರ್‌ಫೀಟ್ ನಷ್ಟು ಜಾಗದಲ್ಲಿ ಸಿಂಪಡಿಸುತ್ತೇವೆ, ಇದು ಆ ಜಾಗದಲ್ಲಿ ಬಿರುಕು ಬಿಟ್ಟ ಸಂದಿನಲ್ಲೆಲ್ಲ ಹೋಗಿ ಭದ್ರಪಡಿಸಿ ಕೊಳ್ಳುತ್ತದೆ. ನಂತರ ಬೇಸಿಕ್ ಪ್ರೈಮರ್ ಅನ್ನು ಸಿಂಪಡಿಸಲಾಗುತ್ತದೆ. ನಂತರ ಮೂರನೇ ಹಂತದ ಎಲ್ಯಾಸ್ಟೋಮರಿಕ್ ಪ್ರಾಪರ್ಟಿ ಸಿಂಪಡಿಸುವುದರಿಂದ ಮೇಲ್ಭಾಗದಲ್ಲಿ ಪ್ಲಾಸ್ಟಿಕ್ ಲೇಯರ್ ಸೃಷ್ಟಿ ಮಾಡುತ್ತದೆ. ಇಷ್ಟು ಕೆಲಸ ಆದರೆ ಯಾವದೇ ಕಾರಣಕ್ಕೂ ನೀರು ಒಳಗೆ ಬಾರದಂತೆ




ತಡೆಯುತ್ತದೆ ಎಂದು ಹೇಳಿದರು.

ಇಲಾಖೆಯ ಅಧೀಕ್ಷಕ ಪುರಾತತ್ವ ವಿಧರು ರಮೇಶ್ ಮೂಲಿಮನಿ ಅವರ ನಿರ್ದೇಶನದಲ್ಲಿ ಉಪ ಅಧೀಕ್ಷಕ ಇಂಜಿನಿಯರ್ ಕೆಂಪೇಗೌಡ ಅವರ ಮಾರ್ಗದರ್ಶನದಲ್ಲಿ, ಕನ್ಸರ್ವೇಷನ್ ಅಸಿಸ್ಟೆಂಟ್ ರಾಕೇಶ್ ಅವರು ಕಾರ್ಯಪ್ರವತ್ತರಾಗಿದ್ದಾರೆ.

ಹೋರಾಟ ಸಮಿತಿ ಹರ್ಷ: ಸೋಮವಾರ ದಿನವೇ ಕೆಲಸ ಆರಂಭವಾಗಿದೆ, ಬಹಳ ವರ್ಷಗಳಿಂದ ಸೋರುತ್ತಿರುವ ಬನವಾಸಿ ಮಧುಕೇಶ್ವರ ದೇವಸ್ಥಾನ ಸೋರಿಕೆಗೆ ಫುಲ್ ಸ್ಟಾಪ್ ಬಿದ್ದಿದೆ ಎಂದು ಹೋರಾಟ ಸಮಿತಿ ಅಧ್ಯಕ್ಷ ಉದಯಕುಮಾರ್ ಕಾನಳ್ಳಿ, ಗೌರವಾಧ್ಯಕ್ಷ ಸಿ ಎಫ್.ನಾಯಕ ಮಾಳಂಜಿ, ಕಾರ್ಯದರ್ಶಿ ವಿಶ್ವನಾಥ್ ಒಡೆಯರ್ ಮಾತನಾಡಿ, ನಾವು ಅನೇಕ ವರ್ಷಗಳಿಂದ ಸಾರ್ವಜನಿಕ ಕೆಲಸ ಮಾಡಿದರೂ, ದೇವಸ್ಥಾನದ ಈ ಕೆಲಸ ಸಂತೃಪ್ತಿ ನೀಡಿದೆ ಎಂದಿದ್ದಾರೆ. ಈ ಸಂದರ್ಭದಲ್ಲಿ ಲಯನ್ಸ್ ಪ್ರಮುಖ ಸಾಯಿರಾಮ ಕಾನಳ್ಳಿ, ವಿ ಎಸ್.ಎಸ್.ಅಧ್ಯಕ್ಷ ಗಜಾನನ ಗೌಡ, ಅನಂತ ಖರೆ, ಸ್ಥಳೀಯ ನೌಕರರಾದ ಅಮಿತ್‌ಕುಮಾರ್, ಹಿಮಾಂಶು, ರಾಕೇಶ್ ಮಶಾಲ್ದಿ ಹಾಗೂ ನುರಿತ ಕೆಲಸಗಾರರು ಉಪಸ್ಥಿತರಿದ್ದರು.

ಮತದಾರರ ಪಟ್ಟಿ ಪರಿಷ್ಕರಣೆ ಸಭೆ



ಬನವಾಸಿ: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತು ಪಕ್ಷದ ಕಾರ್ಯಕರ್ತರ ಸಭೆಯು ಇಲ್ಲಿಯ ನಾಮದೇವ ಕಲ್ಯಾಣ ಮಂಟಪದಲ್ಲಿ ಶಾಸಕ ಶಿವರಾಮ ಹೆಬ್ಬಾರ್ ನಡೆಸಿದರು.

ಸಭೆಯಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆ ಕಾರ್ಯವನ್ನು ಪರಿಣಾಮಕಾರಿಯಾಗಿ ಕೈಗೊಳ್ಳುವ ಕುರಿತು ಚರ್ಚಿಸಿ, ಪಕ್ಷದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರಿಗೆ ಅಗತ್ಯ ಮಾರ್ಗದರ್ಶನ ನೀಡಲಾಯಿತು.

ಈ ಸಂದರ್ಭದಲ್ಲಿ ಕೆಪಿಸಿಸಿ ಸದಸ್ಯರಾದ ವಿವೇಕ್ ಹೆಬ್ಬಾರ್, ಜಿಪಂ ಮಾಜಿ ಸದಸ್ಯರಾದ ಬಸವರಾಜ ದೊಡ್ಮನಿ, ಜಿಲ್ಲಾ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗಗಳ ವಿಭಾಗದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದ್ಯಾಮಣ್ಣ ದೊಡ್ಮನಿ, ಸ್ಥಳೀಯ ಮುಖಂಡರಾದ ರವಿ ನಾಯ್ಕ ಕಲ್ಲಕರಡಿ, ಬ್ಲಾಕ್ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷರಾದ ಮಲ್ಲೇಶಪ್ಪ ಗೋರವರ, ಮಹಿಳಾ ಕಾಂಗ್ರೆಸ್ ರಾಜ್ಯ ಕಾರ್ಯದರ್ಶಿ ಶ್ರೀಲತಾ ಕಾಳೇರಮನೆ, ಪ್ರಮುಖರಾದ ರಾಘು ನಾಯ್ಕ, ಸುಧಾಕರ್ ನಾಯ್ಕ, ಸುರೇಶ್ ನಾಯ್ಕ್ ಸೇರಿದಂತೆ ಪಕ್ಷದ ವಿವಿಧ ಹಂತಗಳ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಸರ್ಕಾರದ ಆಡಳಿತ ವೈಫಲ್ಯ ವಿರುದ್ಧ ಪ್ರತಿಭಟನೆ

ಯಲ್ಲಾಪುರ: ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯ ವಿರುದ್ಧ ಸೋಮವಾರ ತಾಲೂಕಾಡಳಿತ ಸೌಧದ ಮುಂದೆ ಬಿಜೆಪಿ ಪಕ್ಷದಿಂದ ಪ್ರತಿಭಟನೆ ನಡೆಸಿದರು. ಈ ವೇಳೆ ಮಂಡಲಾಧ್ಯಕ್ಷ ಪ್ರಸಾದ್ ಹೆಗಡೆ, ಎಲ್.ಟಿ.ಪಾಟೀಲ, ಉಮೇಶ ಭಾಗ್ವಾತ, ಶ್ಯಾಮಿಲಿ ಪಾಠಣಕರ, ಸೋಮೇಶ್ವರ್ ನಾಯ್ಕ, ಮಹೇಶ ನಾಯ್ಕ ಇತರರು ಮಾತನಾಡಿ,

ಜಿ +2 ಫಲಾನುಭಾವಿಗಳಿಗೆ ತಕ್ಷಣ ಮನೆ ವಿತರಣೆ ಮಾಡಿ, ಯೋಜನೆ ಸಂಪೂರ್ಣ ಮಾಹಿತಿ ಫಲಾನುಭವಿಗಳಿಗೆ ಮಾಹಿತಿ ನೀಡುವಂತೆ ಸಾರ್ವಜನಿಕ ಆಸ್ಪತ್ರೆಗೆ ಸ್ತ್ರೀರೋಗ ತಜ್ಞರನ್ನು ಗ್ರಾಮೀಣ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ತಕ್ಷಣ ವೈದ್ಯರನ್ನು ನೇಮಿಸುವಂತೆ, ತಾಲೂಕಿನ ಎಲ್ಲಾ ಮಳೆಮಾಪನ ಕೇಂದ್ರದ ಅವ್ಯವಸ್ಥೆಯನ್ನು ಸರಿಪಡಿಸುವಂತೆ,

ವನ್ಯಪ್ರಾಣಿಗಳ ದಾಳಿಯಿಂದ ಹಾನಿಗೊಳಗಾದವರಿಗೆ ಸೂಕ್ತ ಪರಿಹಾರ ಸಮನಾಗಿ ನೀಡಬೇಕು. ಕಣ್ಣಿಗೇರಿ ಕಿರವತ್ತಿ ಮದನೂರು ಭಾಗಗಳಲ್ಲಿ ಕೆರೆ ತುಂಬಿಸುವ ಕಾಮಗಾರಿ ಮಾಹಿತಿ ನೀಡಿ. ಆಡಳಿತ ವ್ಯವಸ್ಥೆಯಲ್ಲಿ ಅಧಿಕಾರಿಗಳ ಕೊರತೆ, ಆಡಳಿತ ವ್ಯವಸ್ಥೆ ಸಂಪೂರ್ಣ ನಿರ್ಲಕ್ಷ್ಯ

15 ನೇ ಹಣಕಾಸಿನ ಯೋಜನೆ ಅನುಷ್ಠಾನ ಮಾಡುವಲ್ಲಿ ರಾಜ್ಯ ಕಾಂಗ್ರೆಸ್ ಸರಕಾರ ವಿಫಲ, ಗ್ರಾಮೀಣ ವಸತಿ ಯೋಜನೆ ಸಂಪೂರ್ಣ ವಿಫಲವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸಂಬಂಧ ಪಟ್ಟ ಇಲಾಖೆಯ ಅಧಿಕಾರಿಗಳು ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ,ಮಾಹಿತಿ ನೀಡಿ ತಹಶೀಲ್ದಾರ್ ಮಧುಸೂದನ್ ಕುಲಕರ್ಣಿ ಮಾಹಿತಿ ನೀಡಿದರು.



ಆರೋಗ್ಯ ಇಲಾಖೆಯ ಡಾ ನರೇಂದ್ರ ಪವಾರ ಮಾಹಿತಿ ನೀಡಿ ಸ್ತ್ರೀರೋಗ ತಜ್ಞರಾದ ಡಾ ದೀಪಕ್ ಭಟ್ ನೇಮಕದ ಆದೇಶ ಬಂದಿದೆ ಎಂದರು.

ಪಪಂ ಮುಖ್ಯಾಧಿಕಾರಿ ಕೇಶವ ಚೌಗಲೆ ಮಾಹಿತಿ ನೀಡಿ ಜಿಪ್ಲಸ್ ಟೂ ಮನೆಗಳನ್ನು ನಮಗೆ ಜೂ.22ರಂದು ಹಸ್ತಾಂತರ ಮಾಡಲಿದ್ದಾರೆ ನಂತರ ಲಾಟರಿ ಮೂಲಕ ಫಲಾನುಭವಿಗಳಿಗೆ ವಿತರಿಸಲಾಗುವದು ಎಂದರು ಕಿರವತ್ತಿ ಆರ್‌ಎಫ್‌ಒ ಸೇರಿದಂತೆ ಅಧಿಕಾರಿಗಳು ಮಾಹಿತಿ ನೀಡಿದರು.ಪ್ರತಿಭಟನೆಯಲ್ಲಿ ಬಿಜೆಪಿ ಪ್ರಮುಖ ರಾದ ಗೋಪಾಲ ಕೃಷ್ಣ ಗಾವಂಕರ್, ರಾಘವೇಂದ್ರ ಭಟ್ ನಟರಾಜ್ ಗೌಡ, ರವಿ ಕೈಟಕರ್ ಗಣೇಶ ಪಾಠಣಕರ, ರಾಮು ನಾಯ್ಕ್,ರಾಘು ಕುಂದರಗಿ, ರಜತ್ ಬದ್ದಿ, ಅಮೃತ ಬದ್ದಿ, ವಿನೋದ ತಳೇಕರ್ ಇದ್ದರು.

ಕಿರುಸುದ್ದಿ

ಅಕೌಂಟ್ ಹ್ಯಾಕ್ : 1 ಲಕ್ಷ ರೂ.ಲೂಟಿ

ಹಾವೇರಿ: ವ್ಯಕ್ತಿಯೊಬ್ಬರ ಬ್ಯಾಂಕ್ ಅಕೌಂಟ್ ಹ್ಯಾಕ್ ಮಾಡಿರುವ ಅನಾಮಧೇಯ ವ್ಯಕ್ತಿಗಳು ಖಾತೆಯಲ್ಲಿದ್ದ 1 ಲಕ್ಷ ರೂ.ಹಣವನ್ನು ವರ್ಗಾವಣೆ ಮಾಡಿಕೊಂಡು ಮೋಸ ಮಾಡಿರುವ ಘಟನೆ ಬೆಳಕಿಗೆ ಬಂದಿದೆ. ಹಿರೇಕೆರೂರು ತಾಲೂಕು ಹಂಸಭಾವಿ ಗ್ರಾಮದ ಶ್ರೀಧರಸ್ವಾಮಿ ಎಂಬುವವರೇ ಹಣವನ್ನು ಕಳೆದುಕೊಂಡಿದ್ದಾರೆ. ಮೇ 21ರ ರಾತ್ರಿ ತನ್ನ ಮೊಬೈಲ್ ನಂಬರ್‌ಗೆ ವಿತ್ ಡ್ರಾ ಮಾಡಿದ ಬಗ್ಗೆ ಮೆಸೇಜ್ ಬಂದಿದ್ದನ್ನು ಗಮನಿಸಿದಾಗ, ಬ್ಯಾಂಕ್ ಆಫ್ ಬರೋಡಾ ಖಾತೆಯ ಅಕೌಂಟ್ ನಂಬರ್‌ನ್ನು ಅನಾಮಧೇಯ ಆರೋಪಿತರು ಹ್ಯಾಕ್ ಮಾಡಿದ್ದಾರೆ. ಅದರಲ್ಲಿದ್ದ ಹಣದ ಪೈಕಿ 95,000 ರೂ. ಹಾಗೂ 4,500 ರೂ. ಸೇರಿದಂತೆ ಒಟ್ಟು 1 ಲಕ್ಷ ರೂ. ಹಣವನ್ನು ವರ್ಗಾವಣೆ ಮಾಡಿಕೊಂಡು ವಂಚಿಸಿದ್ದಾರೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದೆ. ಹಂಸಭಾವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಭಕ್ತಿಭಾವದಿಂದ ಪೂಜಿಸಿದಾಗ ಇಷ್ಟಾರ್ಥ ಸಿದ್ಧಿ

ಕುಮಟಾ: ದೇವರು ಒಬ್ಬನೇ, ಆದರೆ ಆತನ ನಾಮಗಳು ಹಲವು. ಭಗವಂತನನ್ನು ಶ್ರದ್ಧಾ-ಭಕ್ತಿಯಿಂದ



ಆರಾಧಿಸಿದಾಗ ಮಾತ್ರ ಮಾನವನ ಇಷ್ಟಾರ್ಥಗಳು ಸಿದ್ಧಿಯಾಗುತ್ತವೆ ಎಂದು ಕರ್ಕಿಯ ದೈವಜ್ಞ ಬ್ರಾಹ್ಮಣ ಮಠದ ಸಚ್ಚಿದಾನಂದ ಜ್ಞಾನೇಶ್ವರ ಭಾರತೀ ಶ್ರೀಗಳು ಹೇಳಿದರು. ಪಟ್ಟಣದ ಹೊಸ ಹೆರವಟ್ಟಾದ ಶ್ರೀಲಕ್ಷ್ಮೀನಾರಾಯಣ ಮಠದಲ್ಲಿ ಲಘುವಿಷ್ಣು ಯಾಗ ನಿರ್ವಹಣಾ ಸಮಿತಿಯ ಆಶ್ರಯದಲ್ಲಿ ನಡೆದ 28 ದಿನಗಳ ಮಹಾವಿಷ್ಣು ಯಾಗದ ಮಹಾಪೂರ್ಣಾಹುತಿ ಕಾರ್ಯಕ್ರಮದಲ್ಲಿ ದೇವರಿಗೆ 108 ಆರತಿಗಳನ್ನು ನೆರವೇರಿಸಿ ಆಶೀರ್ವಚನ ನೀಡಿದ ಅವರು, ನಾವು ಮಾಡುವ ಪ್ರತಿಯೊಂದು ಕಾರ್ಯಕ್ಕೂ ಪುಣ್ಯಫಲ ದೊರೆಯಬೇಕಾದರೆ ಮನಸ್ಸಿನ ಶುದ್ಧತೆ ಅತ್ಯಗತ್ಯ ಎಂದರು. ಉತ್ತಮ ಗುಣಗಳು, ಸದಾಚಾರ ಹಾಗೂ ಸಾತ್ವಿಕ ಜೀವನಶೈಲಿಯನ್ನು ರೂಢಿಸಿಕೊಂಡು ಎಲ್ಲರೊಂದಿಗೆ ಪ್ರೀತಿ-ವಿಶ್ವಾಸದಿಂದ ನಡೆದುಕೊಂಡಾಗ ಮಾತ್ರ ಜೀವನದಲ್ಲಿ ಯಶಸ್ಸು ಹಾಗೂ ನೆಮ್ಮದಿ ದೊರೆಯುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮಕ್ಕೆ ಆಗಮಿಸಿದ ಶ್ರೀ ಸುಜ್ಞಾನೇಶ್ವರ ಭಾರತೀ ಸ್ವಾಮೀಜಿಯವರಿಗೆ ಭವ್ಯ ಸ್ವಾಗತ ಕೋರಲಾಯಿತು. ಬಳಿಕ ಶ್ರೀಗಳಿಂದ ಆಶೀರ್ವಚನ ಹಾಗೂ ಫಲಮಂತ್ರಾಕ್ಷತೆ ನಡೆಯಿತು. ದೇವರಿಗೆ ಕನಕಾಭಿಷೇಕ, ರಜತಾಭಿಷೇಕ, ಅಷ್ಟಾವಧಾನ ಸೇವೆ, ಮಹಾಮಂಗಳಾರತಿ ಹಾಗೂ ಅನ್ನಸಂತರ್ಪಣೆ ನೆರವೇರಿಸಲಾಯಿತು. ಸಂಜೆ ಹೊನ್ನಾವರ ದೈವಜ್ಞ ಬ್ರಾಹ್ಮಣ ಸಮಾಜದವರಿಂದ ಭಜನೆ ಹಾಗೂ ಗುರುವಂದನೆ ಕಾರ್ಯಕ್ರಮ ಜರುಗಿತು. ನೂರೆಂಟು ಆರತಿಗಳೊಂದಿಗೆ ಮಹಾಪೂರ್ಣಾಹುತಿ ಕಾರ್ಯಕ್ರಮವು ಭಕ್ತಿಭಾವದ ವಾತಾವರಣದಲ್ಲಿ ಅದ್ದೂರಿಯಾಗಿ ಸಂಪನ್ನಗೊಂಡಿತು.

ವಿದ್ಯಾರ್ಥಿಗಳಿಗೆ ಕಲಿಕಾ ಪರಿಕರ ವಿತರಣೆ

ಕುಮಟಾ: ಸ್ವಾತಂತ್ರ್ಯ ಹೋರಾಟಗಾರ ಬೆಟ್ಕುಳಿಯ ನಾರಾಯಣ ಕುಸ್ಲಪ್ಪ ನಾಯ್ಕ ಅವರ ಸ್ಮರಣಾರ್ಥ



ಅವರ ಮೊಮ್ಮಗ ಹಾಗೂ ಖ್ಯಾತ ವಕೀಲರಾದ ಪ್ರಶಾಂತಕುಮಾರ ಶಂಕರ ನಾಯ್ಕ ಅವರು ಬೆಟ್ಕುಳಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಕಲಿಕಾ ಪರಿಕರಗಳನ್ನು ವಿತರಿಸುವ ಮೂಲಕ ಶಿಕ್ಷಣ ಪ್ರೇಮ ಮತ್ತು ಸಾಮಾಜಿಕ ಕಾಳಜಿಯನ್ನು ಮೆರೆದರು. ಕಳೆದ ಹಲವು ವರ್ಷಗಳಿಂದ ತಮ್ಮ ಅಜ್ಜ ನಾರಾಯಣ ಕುಸ್ಲಪ್ಪ ನಾಯ್ಕ ಅವರ ನೆನಪಿನಲ್ಲಿ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ನೆರವು ನೀಡುತ್ತಾ ಬಂದಿರುವ ಪ್ರಶಾಂತಕುಮಾರ ನಾಯ್ಕ ಅವರು, ಈ ವರ್ಷವೂ ತಮ್ಮ ಕುಟುಂಬ ಸದಸ್ಯರೊಂದಿಗೆ ಶಾಲೆಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಸಿಹಿ ಹಾಗೂ ವಿವಿಧ ಕಲಿಕಾ ಪರಿಕರಗಳನ್ನು ವಿತರಿಸಿದರು. ಕಾರ್ಯಕ್ರಮದಲ್ಲಿ ನಾರಾಯಣ ನಾಯ್ಕರ ಪುತ್ರ ಹಾಗೂ ನಿವೃತ್ತ ಶಿಕ್ಷಕರಾದ ಶಂಕರ ನಾಯ್ಕ, ಮೊಮ್ಮಗ ಪ್ರವೀಣ್ ನಾಯ್ಕ, ಮರಿ ಮೊಮ್ಮಕ್ಕಳಾದ ಅಭಿನವ ಮತ್ತು ಅಶ್ವಿನ, ಶಿಕ್ಷಕರಾದ ಐ.ಜೆ. ನಾಯ್ಕ ಹಾಗೂ ಅನಿಲಾ ನಾಯಕ, ಎಸ್‌ಡಿಎಂಸಿ ಸದಸ್ಯರಾದ ಪ್ರಕಾಶ ಹರಿಕಾಂತ, ತಿಪ್ಪಯ್ಯ ಹರಿಕಾಂತ, ಜಯಂತ ಹರಿಕಾಂತ ಸೇರಿದಂತೆ ಊರಿನ ನಾಗರಿಕರು ಉಪಸ್ಥಿತರಿದ್ದರು.



ಸಿದ್ದಾಪುರ: ತಾಲೂಕಿನ ಹಲಗೇರಿ ಪದವಿಪೂರ್ವ ಕಾಲೇಜಿನಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕವಂಚೂರು ವಲಯದಿಂದ ಆಯೋಜಿಸಿದ್ದ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಜಿಲ್ಲಾ ಜನಜಾಗೃತಿ ವೇದಿಕೆಯ ಸದಸ್ಯ ಶಂಕರ ಭಟ್ಟ ಸಿದ್ದಾಪುರ ಮಾತನಾಡಿದರು.

ದುಶ್ಚಟಗಳಿಂದ ದೂರವಿರಿ: ಸಿದ್ದಾಪುರ

ಸಿದ್ದಾಪುರ: ಮದ್ಯ, ಗುಟ್ಕಾ, ಹೆರಾಯಿನ್, ಡ್ರಗ್ಸ್‌ಗಳ ಸೇವನೆಯಿಂದ ವ್ಯಕ್ತಿಯ ಸ್ವಾಸ್ಥ್ಯ ಕೆಡುವುದಲ್ಲದೇ ಸಮಾಜದ ಶಾಂತತೆಯೂ ನಾಶವಾಗುತ್ತದೆ. ಮಕ್ಕಳು ದುಶ್ಚಟಗಳಿಂದ ದೂರವಿದ್ದು, ವ್ಯಸನಮುಕ್ತ ಸಮಾಜದ ನಿರ್ಮಾಣಕ್ಕೆ ಪಣತೊಡಬೇಕು ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಶಿರಸಿ ಜಿಲ್ಲಾ ಜನಜಾಗೃತಿ ವೇದಿಕೆಯ ಸದಸ್ಯ ಶಂಕರ ಭಟ್ಟ ಸಿದ್ದಾಪುರ ಹೇಳಿದರು. ತಾಲೂಕಿನ ಹಲಗೇರಿ ಪದವಿಪೂರ್ವ ಕಾಲೇಜಿನಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕವಂಚೂರು ವಲಯದಿಂದ ಆಯೋಜಿಸಿದ್ದ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಅವರು ಮಾತನಾಡಿದರು. ದೈಹಿಕವಾಗಿ, ಮಾನಸಿಕವಾಗಿ, ಸಾಮಾಜಿಕವಾಗಿ, ಸಮಗ್ರ ಕಲ್ಯಾಣದ ಸ್ಥಿತಿಯೇ ಸ್ವಾಸ್ಥ್ಯವಾಗಿದೆ. ಅದನ್ನು ಸಾಧಿಸಲು ತೆಗೆದುಕೊಳ್ಳುವ ದೃಢ ನಿರ್ಧಾರವೇ ಸಂಕಲ್ಪವಾಗಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ವಾಸುದೇವ ಕೆ.ಹೆಚ್. ಮಾತನಾಡಿ, ವಿದ್ಯಾರ್ಥಿಗಳ ನಡೆ, ನುಡಿ, ಶಿಸ್ತು, ವ್ಯಕ್ತಿತ್ವ ನಿರ್ಮಾಣದ ಕುರಿತು ತಿಳಿಸಿದರು. ಕೆಟ್ಟ ವ್ಯಸನಗಳ ದಾಸರಾಗದಂತೆ ಕರೆನೀಡಿದ ಅವರು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಮಾಜಮುಖಿ ಕಾರ್ಯಗಳನ್ನು ಶ್ಲಾಘಿಸಿದರು. ಹಲಗೇರಿ ಪ್ರೌಢಶಾಲೆಯ ಮುಖ್ಯಾಧ್ಯಾಪಕಿ ಸುಧಾ ಹೆಗಡೆಯವರು ಜ್ಯೋತಿ ಬೆಳಗಿ ಕಾರ್ಯಕ್ರಮ ಉದ್ಘಾಟಿಸಿ ಸಾಂದರ್ಭಿಕ ಮಾತುಗಳನ್ನಾಡಿದರು. ಹಲಗೇರಿ ಒಕ್ಕೂಟದ ಕಾರ್ಯದರ್ಶಿ ಸುಮಿತ್ರಾ ನಾಯ್ಕ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕು.ತನುಜಾ ಸಂಗಡಿಗರು ಪ್ರಾರ್ಥಿಸಿದರು. ಸೇವಾ ಪ್ರತಿನಿಧಿ ಪಾರ್ವತಿ ಸ್ವಾಗತಿಸಿದರು. ಕವಂಚೂರು ವಲಯದ ಮೇಲ್ವಿಚಾರಕಿ ಪೂರ್ಣಿಮಾ ಕಾರ್ಯಕ್ರಮ ನಿರೂಪಿಸಿದರು. ಸಿ.ಎಸ್.ಇ ಸೇವಾದಾರರಾದ ಛಾಯಾ ವಂದಿಸಿದರು.



ಕುಮಟಾ : ಕುಮಟಾ ನ್ಯಾಯಾಲಯದಲ್ಲಿ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ವರ್ಷಶ್ರೀ ಅವರು ಪ್ರಧಾನ ಸಿವಿಲ್ ನ್ಯಾಯಾಧೀಶರಾಗಿ ಪದೋನ್ನತಿ ಹೊಂದಿದ ಹಿನ್ನೆಲೆಯಲ್ಲಿ ಹಾಗೂ ಕುಮಟಾದ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾಗಿ ನೂತನವಾಗಿ ನೇಮಕಗೊಂಡ ಶ್ವೇತಾ ಎಚ್.ಇ. ಅವರನ್ನು ಕುಮಟಾ ವಕೀಲರ ಸಂಘದ ವತಿಯಿಂದ ಆತ್ಮೀಯವಾಗಿ ಸ್ವಾಗತಿಸಲಾಯಿತು.

ಜನತಾ ದರ್ಶನ ಕಾರ್ಯಕ್ರಮ | ಶಾಸಕ ಶ್ರೀನಿವಾಸ ಮಾನೆ ಹೇಳಿಕೆ

ಸಮಸ್ಯೆ ಪರಿಹಾರಕ್ಕೆ ಮೊದಲಾದ್ಯತೆ

ಹಾನಗಲ್ಲ: ಜನರ ಸಮಸ್ಯೆಗಳಿಗೆ ಸ್ಥಳದಲ್ಲೇ ಸ್ಪಂದಿಸುವ ಉದ್ದೇಶದಿಂದ ಶಾಸಕ ಶ್ರೀನಿವಾಸ ಮಾನೆ ಅವರು ಇಲ್ಲಿ ಸೋಮವಾರ ಆಯೋಜಿಸಿದ್ದ ಜನತಾದರ್ಶನ ಕಾರ್ಯಕ್ರಮಕ್ಕೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಕ್ಷೇತ್ರದ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ನೂರಾರು ಜನರು ತಮ್ಮ ಅಹವಾಲುಗಳನ್ನು ಶಾಸಕರ ಮುಂದಿಟ್ಟರು. ಕುಡಿಯುವ ನೀರಿನ ಸಮಸ್ಯೆ, ರಸ್ತೆ ಅಭಿವೃದ್ಧಿ, ಚರಂಡಿ ವ್ಯವಸ್ಥೆ, ವಿದ್ಯುತ್ ಸಮಸ್ಯೆ, ವಸತಿ ಯೋಜನೆ, ಪಿಂಚಣಿ ಸೌಲಭ್ಯ ಸೇರಿದಂತೆ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರು ಮನವಿ ಸಲ್ಲಿಸಿದರು. ಪ್ರತಿಯೊಂದು ಅಹವಾಲನ್ನು ಗಮನವಿಟ್ಟು ಆಲಿಸಿದ ಶಾಸಕ ಮಾನೆ, ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೆ ತ್ವರಿತಕ್ರಮ ಕೈಗೊಳ್ಳುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಜನರ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದು ನನ್ನ ಮೊದಲ ಆದ್ಯತೆ. ಜನರು ಸರ್ಕಾರಿ ಕಚೇರಿಗಳಿಗೆ ಅಲೆದಾಡುವ ಪರಿಸ್ಥಿತಿ ಬರಬಾರದು. ಜನತಾ ದರ್ಶನದ ಮೂಲಕ ಜನರ ಮನೆ ಬಾಗಿಲಿಗೆ ಆಡಳಿತ ತಲುಪಿಸುವ ಕೆಲಸ ಪ್ರತಿ ವಾರವೂ ಮಾಡಲಾಗುತ್ತಿದೆ ಎಂದು ಅವರು ತಿಳಿಸಿದರು. ಕಾರ್ಯಕ್ರಮದಲ್ಲಿ ಹಲವು ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ದೊರೆತ ಹಿನ್ನೆಲೆಯಲ್ಲಿ ಸಾರ್ವಜನಿಕರು ಸಂತಸ ವ್ಯಕ್ತಪಡಿಸಿದರು.



> ಜನತಾ ದರ್ಶನವು ಜನಪ್ರತಿನಿಧಿ ಮತ್ತು ಸಾರ್ವಜನಿಕರ ನಡುವಿನ ನೇರ ಸಂಪರ್ಕಕ್ಕೆ ಪರಿಣಾಮಕಾರಿ ವೇದಿಕೆ. ಪ್ರತಿ ವಾರ ಜನತಾದರ್ಶನ ನಡೆಸಿ ಸಮಸ್ಯೆಗಳಿಗೆ ಸ್ಪಂದಿಸಿ ತ್ವರಿತ ಪರಿಹಾರ ಒದಗಿಸಲು ಗಮನ ನೀಡಲಾಗಿದೆ.
> ■ ಶ್ರೀನಿವಾಸ ಮಾನೆ, ಶಾಸಕ

▸▸ ಕುಡಿಯುವ ನೀರು, ರಸ್ತೆ, ಚರಂಡಿ, ವಿದ್ಯುತ್ ಸಮಸ್ಯೆ ಸೇರಿದಂತೆ ವಿವಿಧ ಸಮಸ್ಯೆಗಳ ಕುರಿತು ಸಾರ್ವಜನಿಕರು ಮನವಿ ಸಲ್ಲಿಸಿದರು.

ವನ ಮಹೋತ್ಸವಕ್ಕೆ ಶಾಸಕ ಚಾಲನೆ

ಹಾನಗಲ್ಲ: ತಾಲೂಕಿನ ಕೊಪ್ಪರಸಿಕೊಪ್ಪ ಗ್ರಾಮದ ಡಾ.ಬಿ.ಆರ್.ಅಂಬೇಡ್ಕರ್ ವಿದ್ಯಾರ್ಥಿನಿಯರ ವಸತಿ ಶಾಲೆಯಲ್ಲಿ ಆಯೋಜಿಸಲಾಗಿದ್ದ ವನ ಮಹೋತ್ಸವಕ್ಕೆ ಶಾಸಕ ಶ್ರೀನಿವಾಸ ಮಾನೆ ಚಾಲನೆ ನೀಡಿದರು.

ಇತ್ತೀಚಿನ ದಿನಗಳಲ್ಲಿ ಮಾಲಿನ್ಯದಿಂದ ಪರಿಸರ ಸಮಸ್ಯೆಗಳು ಹೆಚ್ಚುತ್ತಿವೆ. ಪ್ರತಿಯೊಬ್ಬರೂ ಸಹ ಕನಿಷ್ಠ ಒಂದು ಸಸಿ ನೆಟ್ಟು ಪೋಷಿಸುವ ಕಾಳಜಿ ಪ್ರದರ್ಶಿಸಬೇಕಿದೆ. ಪ್ರಕೃತಿ ಮಾನವನ ಜೀವನದ ಆಧಾರವಾಗಿದೆ. ಗಾಳಿ, ನೀರು, ಮಣ್ಣು, ಸಸ್ಯ ಮತ್ತು ಪ್ರಾಣಿಗಳು ಪ್ರಕೃತಿಯ ಅಮೂಲ್ಯ ಕೊಡುಗೆಯಾಗಿವೆ. ಮಾನವನ ಬದುಕಿಗೆ ಅಗತ್ಯವಾದ ಎಲ್ಲ ಸಂಪನ್ಮೂಲಗಳನ್ನು ಪ್ರಕೃತಿಯೇ ಒದಗಿಸುತ್ತದೆ. ಹಾಗಾಗಿ ಪ್ರಕೃತಿಗೆ ಧಕ್ಕೆ ಉಂಟು ಮಾಡದಂತೆ ನಮ್ಮ ಜೀವನ ರೂಪಿಸಿಕೊಳ್ಳಬೇಕಿದೆ ಎಂದು ಹೇಳಿದರು.

ಗ್ಯಾರಂಟಿ ಯೋಜನೆಗಳ ಜಿಲ್ಲಾಮಟ್ಟದ ಅನುಷ್ಠಾನ ಸಮಿತಿ ಅಧ್ಯಕ್ಷ ಹನುಮಂತಪ್ಪ ಮರಗಡಿ, ತಾಲೂಕಾ ಮಟ್ಟದ ಅನುಷ್ಠಾನ ಸಮಿತಿ ಅಧ್ಯಕ್ಷ ಈರಪ್ಪ ಬೈಲವಾಳ, ತಹಶೀಲ್ದಾರ್ ವಿಠ್ಠಲ್ ಚೌಗಲಾ, ಕೆಪಿಸಿಸಿ ಸದಸ್ಯರಾದ ಟಾಕನಗೌಡ ಪಾಟೀಲ, ಖ್ವಾಜಾಮೊಹಿದ್ದೀನ್ ಜಮಾದಾರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಸನಗೌಡ ಪಾಟೀಲ, ಕೆಎಂಎಫ್ ನಿರ್ದೇಶಕ ಚಂದ್ರಪ್ಪ ಜಾಲಗಾರ, ವಿಷ್ಣುಕಾಂತ ಜಾಧವ, ಭರಮಣ್ಣ ಶಿವೂರ, ಅಶೋಕ ಜಾಧವ, ರಾಮಣ್ಣ ಓಲೇಕಾರ, ಪರಶುರಾಮ ಚಿಕ್ಕಣಗಿ, ಹೆಗ್ಗಪ್ಪ ಕಾಮನಹಳ್ಳಿ, ಗದಿಗೆಪ್ಪಗೌಡ ಪಾಟೀಲ, ಮಖ್ಬೂಲ್ ಅಹ್ಮದ್ ಬಡಗಿ, ಗದಿಗೆಪ್ಪ ರಾಟಿ, ಬಾಬಾಸಾಬ ಹಂಚಿನಮನಿ, ಮಲಿಕರೆಹಾನ್ ಹಂಚಿನಮನಿ, ರವಿ ಓಲೇಕಾರ ಸೇರಿದಂತೆ ಇನ್ನೂ ಹಲವರು ಇದ್ದರು.



ಹಾನಗಲ್ಲ: ತಾಲೂಕಿನ ಕೊಪ್ಪರಸಿಕೊಪ್ಪ ಗ್ರಾಮದ ಡಾ.ಬಿ.ಆರ್. ಅಂಬೇಡ್ಕರ್ ವಿದ್ಯಾರ್ಥಿನಿಯರ ವಸತಿ ಶಾಲೆಯಲ್ಲಿ ಆಯೋಜಿಸಲಾಗಿದ್ದ ವನ ಮಹೋತ್ಸವಕ್ಕೆ ಶಾಸಕ ಶ್ರೀನಿವಾಸ ಮಾನೆ ಚಾಲನೆ ನೀಡಿದರು.

ವಿವಿಧ ಕೌಶಲ್ಯಾಧಾರಿತ ತರಬೇತಿಗೆ ಅರ್ಜಿ ಆಹ್ವಾನ

ಹಾವೇರಿ: ಉತ್ತರ ಕನ್ನಡ ಜಿಲ್ಲೆ ಹಳಿಯಾಳ ಕೆನರಾ ಬ್ಯಾಂಕ್ ದೇಶಪಾಂಡೆ ಆರ್ ಸೆಟ್ ತರಬೇತಿ ಸಂಸ್ಥೆಯಲ್ಲಿ ನಿರುದ್ಯೋಗ ಯುವಕ ಮತ್ತು ಯುವತಿಯರಿಗೆ 30 ದಿನಗಳ ರೆಫ್ರಿಜರೇಟರ್ ಮತ್ತು ಏರ್ ಕಂಡಿಷನಿಂಗ್, ಸೋಲಾರ್ ಟೆಕ್ನಿಷಿಯನ್, ಜೆಸಿಬಿ ಆಪರೇಟರ್, ಇಲೆಕ್ಟ್ರಿಕ್ ವೆಹಿಕಲ್ ಸರ್ವಿಸಿಂಗ್, ಕಾರು ಚಾಲನೆ ಮತ್ತು 10ದಿನಗಳ ಸಾಮಾಜಿಕ ಮಾಧ್ಯಮ ಹಾಗೂ ಹೈನುಗಾರಿಕೆ ಮತ್ತು ಎರೆಹುಳು ಗೊಬ್ಬರತಯಾರಿಕೆ ತರಬೇತಿ ಜೂನ್ 22ರಿಂದ ಆರಂಭವಾಗಲಿವೆ. ತರಬೇತಿಯು ಊಟ ಮತ್ತು ವಸತಿಯೊಂದಿಗೆ ಉಚಿತವಾಗಿರುತ್ತದೆ. ಅಭ್ಯರ್ಥಿಗಳು 18ರಿಂದ 50 ವರ್ಷದೊಳಗಿರಬೇಕು. ಗ್ರಾಮೀಣ ಭಾಗದ ನಿರುದ್ಯೋಗಿ ಯುವಕ ಹಾಗೂ ಯುವತಿಯರಿಗೆ ಆದ್ಯತೆ ನೀಡಲಾಗುವುದು. ಆಸಕ್ತ ಅಭ್ಯರ್ಥಿಗಳು ತಮ್ಮ ಸ್ವ ವಿವರಗಳೊಂದಿಗೆ ಜೂ.20ರೊಳಗಾಗಿ ನಿರ್ದೇಶಕರು, ಕೆನರಾ ಬ್ಯಾಂಕ್ ದೇಶಪಾಂಡೆ ಆರ್ ಸೆಟ್ ಸಂಸ್ಥೆ, ಹಳಿಯಾಳ ಉತ್ತರ ಕನ್ನಡ ಜಿಲ್ಲೆ ಈ ವಿಳಾಸಕ್ಕೆ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಸೇವಾಸಿಂಧು ಪೋರ್ಟಲ್‌ನಿಂದ ವಿದ್ಯಾರ್ಥಿಗಳ ಬಸ್ ಪಾಸ್ ವಿತರಣೆ

ಹಾವೇರಿ: ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು, 2026-27ನೇ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿ ಬಸ್ ಪಾಸ್‌ಗಳನ್ನು ಸರ್ಕಾರದ ಇಡಿಸಿಎಸ್ ಇಲಾಖೆಯ ಸೇವಾಸಿಂಧು ಪೋರ್ಟಲ್ ಮೂಲಕ ವಿತರಿಸಲಾಗುತ್ತಿದೆ.



ಕರ್ನಾಟಕ ಸರ್ಕಾರವು ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳ ಬಸ್ಸಗಳಲ್ಲಿ ಪ್ರಯಾಣಿಸುವ ರಾಜ್ಯದ ಶಾಲಾ ಕಾಲೇಜುಗಳಲ್ಲಿನ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ವಿತರಿಸಲು ತಾತ್ವಿಕ ಅನುಮೋದನೆ ನೀಡಿ ಆದೇಶಿಸಿದೆ.

ಜೂ.12ರಿಂದ ಸಂಸ್ಥೆಯ ವ್ಯಾಪ್ತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸುಗಳನ್ನು ವಿತರಿಸಲಾಗುತ್ತಿದೆ. ವಿದ್ಯಾರ್ಥಿ ಬಸ್ ಪಾಸ್ ವಿತರಣೆಯಲ್ಲಿ ಹಾಲಿ ಅನುಸರಿಸುತ್ತಿರುವ ನಿಯಮಾವಳಿಗಳನ್ನು (ವಿದ್ಯಾರ್ಥಿ ಪಾಸಿಗಾಗಿ ಶೈಕ್ಷಣಿಕ ವಿದ್ಯಾಭ್ಯಾಸದ ಅರ್ಹತಾ ಮಾನದಂಡಗಳು, ದೂರದ ಮಿತಿ. ಪಾಸಿನ ಕಾಲಾವಧಿ ಇತ್ಯಾದಿ) ಮುಂದುವರೆಸಲಾಗಿದೆ.

ವಿದ್ಯಾರ್ಥಿಗಳು ಉಚಿತ ಬಸ್ ಪಾಸ್ ಪಡೆಯಲು, ಈ ಹಿಂದಿನಂತೆ ಕರ್ನಾಟಕ ಸರ್ಕಾರದ ಸೇವಾಸಿಂಧು ಪೋರ್ಟಲ್‌ನಲ್ಲಿ, ಶಾಲೆಗಳು ಸೇರಿದಂತೆ ಎಲ್ಲಿಂದಲಾದರೂ, ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್ ಸೇವಾಸಿಂಧು ಪೋರ್ಟಲ್ ಐಡಿ (https://sevasindhuservices.karnataka.gov.in/buspassservices/).ವಾ.ಕ.ರ.ಸಾ.ಸಂಸ್ಥೆ ವ್ಯಾಪ್ತಿಯ 82 ಪಾಸ್ ವಿತರಣಾ ಕೌಂಟರ್‌ಗಳ ವಿವರಗಳನ್ನು ವಿದ್ಯಾರ್ಥಿಗಳಮಾಹಿತಿಗಾಗಿ ನಿಗಮದ ವೆಬ್‌ಸೈಟನಲ್ಲಿ ಒದಗಿಸಲಾಗಿದೆ. ನಿಗಮದ ವೆಬ್‌ಸೈಟ್ ವಿಳಾಸ https://nwkrtc.karnataka.gov.in. ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಈಗಾಗಲೇ ವಿತರಿಸಲಾಗಿರುವ ವಿದ್ಯಾರ್ಥಿ ಬಸ್ ಪಾಸುಗಳು ಯಥಾವತ್ತಾಗಿ ಚಾಲ್ತಿಯಲ್ಲಿರುತ್ತವೆ. ಆದಾಗ್ಯೂ ವಿದ್ಯಾರ್ಥಿಗಳು ಪಾವತಿಸಿರುವ ಮೊತ್ತವನ್ನು ಹಿಂದಿರುಗಿಸಲಾಗುವುದು. ರಾಜ್ಯದಲ್ಲಿ ವಾಸವಿದ್ದು, ನೆರೆರಾಜ್ಯಗಳಲ್ಲಿನ ವಿದ್ಯಾಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಾಗೂ ನೆರೆರಾಜ್ಯಗಳಲ್ಲಿ (ರಾಜ್ಯದ ಗಡಿಭಾಗದಲ್ಲಿ) ವಾಸವಿದ್ದು, ರಾಜ್ಯದೊಳಗಿನ ವಿದ್ಯಾಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳೂ ಉಚಿತ ಬಸ್ ಪಾಸ್ ಪಡೆಯಬಹುದಾಗಿದೆ. ಈಗಾಗಲೇ ಪ್ರಸಕ್ತ ಶೈಕ್ಷಣಿಕ ವರ್ಷ 2026-27ನೇ ಸಾಲಿನಲ್ಲಿ ಶುಲ್ಕ ಪಡೆದು ವಿತರಿಸಲಾದ ಪಾಸುಗಳ ಸಂಪೂರ್ಣ ಶುಲ್ಕವನ್ನು 15 ದಿನಗಳೊಳಗಾಗಿ ವಿದ್ಯಾರ್ಥಿಗಳಿಗೆ ಮರುಪಾವತಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಹಾವೇರಿ ತಾಲೂಕಿನ 33 ಪ್ರೌಢಶಾಲಾ ಶಿಕ್ಷಕರಿಗೆ ಸನ್ಮಾನ

ಹಾವೇರಿ: ತಾಲೂಕಿನ ಬೂದಗಟ್ಟಿ ಗ್ರಾಮದ ಶ್ರೀಪುರ ಸರಸ್ವತಿ ಗುರುಕುಲ ಜ್ಯೋತಿಷ್ಯಾಲಯದ ಇಂದ್ರಪ್ರಸ್ಥ ಆಶ್ರಮದಲ್ಲಿ ಭಾನುವಾರ ತಾಲೂಕಿನ ಪ್ರೌಢಶಾಲೆಗಳ 33 ಶಿಕ್ಷಕ-ಶಿಕ್ಷಕಿಯರನ್ನು ಸನ್ಮಾನಿಸಿ, ಗೌರವಿಸಲಾಯಿತು.



ಅಧಿಕ ಮಾಸ ಪ್ರಯುಕ್ತ ಲೋಕ ಕಲ್ಯಾಣಾರ್ಥವಾಗಿ ಲಕ್ಷ ಕುಂಕುಮಾರ್ಚನೆ, ಲಕ್ಷ ಪುಷ್ಪಾರ್ಚನೆ, ಸನ್ಮಾನ ಹಾಗೂ ತುಲಾಭಾರ ಎರಡು ದಿನಗಳ ಕಾರ್ಯಕ್ರಮದ ಸಮಾರೋಪ ಸಾನಿಧ್ಯವಹಿಸಿ ಆನಂದವನದ ಶ್ರೀ ಶ್ರೀಧರಮೂರ್ತಿ ಚಕ್ರವರ್ತಿ ಸ್ವಾಮೀಜಿ ಮಾತನಾಡಿ, ದಾನಗಳಲ್ಲಿ ಅನ್ನದಾನ, ವಿದ್ಯಾದಾನ ಶ್ರೇಷ್ಠ. ಅಧಿಕ ಮಾಸವು ಎಲ್ಲ ಮಾಸಗಳಲ್ಲಿ ಅತ್ಯಂತ ಶ್ರೇಷ್ಠ. ದಾನ-ಧರ್ಮದಿಂದ ಪುಣ್ಯ ಪ್ರಾಪ್ತಿಯಾಗುವುದು. 33 ಅಡುಗೆ ಭಟ್ಟರ ಹಾಗೂ 33 ಶಿಕ್ಷಕರ ಸನ್ಮಾನ ಮಾಡಿದ್ದು, ಶ್ರೀನಿವಾಸ ಶಿವಪೂಜಿಯವರ ಸೇವೆ ಕಳೆದ ಐದು ವರ್ಷಗಳಿಂದ ಮಾಡುತ್ತಾ ಬಂದಿರುವುದು ಅವರ ಸೇವಾ ಭಕ್ತಿ, ಸಮಾಜ ಮುಖಿ ಕಾರ್ಯಗಳ ಅನುಕರಣೆ ಎಂದು ಹೇಳಿದರು.

ಪಾಠಶಾಲೆ ಗುರುಗಳಾದ ಶಂಕರ ಭಟ್ ಜೋಶಿ, ಆಶ್ರಮದ ಸಂಸ್ಥಾಪಕ ಶ್ರೀನಿವಾಸ ಶಿವಪೂಜಿ ಮಾತನಾಡಿದರು.

ಶಂಕರ ಭಟ್ ಜೋಶಿ ಹಾಗೂ ಗುತ್ತಲದ ಚಿದಂಬರ ಕುಲಕರ್ಣಿ ಅವರನ್ನು ನವಧಾನ್ಯಗಳ ಮೂಲಕ ತುಲಾಭಾರ ನೆರವೇರಿಸಿದರು.

ಲಕ್ಷ ಕುಂಕುಮಾರ್ಚನೆ ಹಾಗೂ ಲಕ್ಷ ಪುಷ್ಪಾರ್ಚನೆ ಕಾರ್ಯಕ್ರಮ ದಲ್ಲಿ 400ಕ್ಕೂ ಅಧಿಕ ಜನರು ಪಾಲ್ಗೊಂಡಿದ್ದರು. ಖ್ಯಾತ ಉದ್ಯಮಿ ಪವನ್ ಬಹದ್ದೂರ ದೇಸಾಯಿ, ಸಹಕಾರಿ ಧುರೀಣ ಡಾ.ಮೃತ್ಯುಂಜಯ ಎಲಿಗಾರ, ಪ್ರೌಢಶಾಲೆಯ ನಿವೃತ್ತ ಮುಖ್ಯ ಶಿಕ್ಷಕ ಎಸ್.ಎನ್. ದೊಡ್ಡಗೌಡ್ರ ಇದ್ದರು. ಶೃತೀಶ್, ರಾಘವೇಂದ್ರ, ರಾಮಚಂದ್ರ ವೇದಘೋಷ ಮಾಡಿದರು. ಶ್ರೀನಿವಾಸ ಸ್ವಾಗತಿಸಿದರು. ಶಿಕ್ಷಕ ಬಾನು ಪ್ರಕಾಶ್ ನಿರೂಪಿಸಿದರು. ಪದ್ಮಾವತಿ ಶ್ರೀನಿವಾಸ್ ವಂದಿಸಿದರು.

ಒಂದು ದಿನದ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣ ಇಂದು

ಹಾವೇರಿ: ನಗರದ ಗುದ್ಲೆಪ್ಪ ಹಳ್ಳಿಕೇರಿ ಮಹಾವಿದ್ಯಾಲಯದ ಐ.ಕ್ಯು.ಎ.ಸಿ ನೇತೃತ್ವದಲ್ಲಿ ಸ್ನಾತಕೋತ್ತರ ವಾಣಿಜ್ಯ ಅಧ್ಯಯನ ವಿಭಾಗದ ಸಂಯುಕ್ತ ಆಶ್ರಯದಲ್ಲಿ ಮತ್ತು ಹಾವೇರಿ ವಿಶ್ವವಿದ್ಯಾಲಯ ವಾಣಿಜ್ಯ ಅಧ್ಯಾಪಕರ ಸಂಘ ಇವರ ಸಹಯೋಗದೊಂದಿಗೆ 'ಕೃತಕ ಬುದ್ಧಿಮತ್ತೆ ಪರಿಸರ ವ್ಯವಸ್ಥೆಯಲ್ಲಿ ಡಿಜಿಟಲ್ ಪರಿವರ್ತನೆ ಮತ್ತು ಸಮಗ್ರ ಅಭಿವೃದ್ಧಿ: ಬಹುಶಿಸ್ತೀಯ ದೃಷ್ಟಿಕೋನ' ಎಂಬ ವಿಷಯದ ಕುರಿತು ಒಂದು ದಿನದ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣವನ್ನು ಜೂ.16ರಂದು ಬೆಳಗ್ಗೆ 10.30 ಗಂಟೆಗೆ ಮಹಾವಿದ್ಯಾಲಯದ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಕೆ.ಎಲ್.ಇ. ಸಂಸ್ಥೆಯ ನಿರ್ದೇಶಕ ಎಂ.ಸಿ. ಕೊಳ್ಳಿ ಉದ್ಘಾಟಿಸಲಿದ್ದು, ಹಾವೇರಿ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಎಸ್.ಎಚ್. ಜಂಗಮಶೆಟ್ಟಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಬೆಂಗಳೂರಿನ ಬ್ಲೂಚಿಂಕ್ ಟೆಕ್ನಾಲಜೀಸ್ ಸಂಸ್ಥೆಯ ಸಂಸ್ಥಾಪಕ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ದೀಪಕ್ ನಾಯಕ್ ಮುಖ್ಯ ಭಾಷಣಕಾರರಾಗಿ ಉಪಸ್ಥಿತರಿರುವರು. ಹಾವೇರಿ ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗದ ಡೀನ್ ಹಾಗೂ ಹಾವೇರಿ ವಿಶ್ವವಿದ್ಯಾಲಯ ವಾಣಿಜ್ಯ ಅಧ್ಯಾಪಕರ ಸಂಘದ ಅಧ್ಯಕ್ಷರಾದ ಡಾ.ಎಂ. ಎನ್. ಕಡ್ಡಿಪುಡಿ ಗೌರವ ಅತಿಥಿಗಳಾಗಿ ಭಾಗವಹಿಸಲಿದ್ದು, ಕಾಲೇಜಿನ ಸ್ಥಾನಿಕ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಡಾ.ಎಸ್.ಎಲ್. ಬಾಲೆಹೊಸೂರ ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಬೆಂಗಳೂರಿನ ಫಿನ್‌ಟೆಕ್ ಶಾಲೆಯ ಸಂಸ್ಥೆಯ ಸಂಸ್ಥಾಪಕ ಹಾಗೂ ಡೆಲ್ಟಾಪೇ ಟೆಕ್ನಾಲಜೀಸ್ ಪ್ರೈವೇಟ್ ಕಂಪನಿಯ ಸಹ- ಸಂಸ್ಥಾಪಕರಾದ, ಐಐಎಂ ಕೊಝಿಕ್ಕೋಡ್ ಹಾಗೂ ಐಐಟಿ ಪಾಟ್ನಾದ ಸಂದರ್ಶಕ ಪ್ರಾಧ್ಯಾಪಕರಾದ ಡಾ. ಕಿರಣ್ ಕುಮಾರ್ ಕೆ.ವಿ. ಅವರು ಸಂಪನ್ಮೂಲ ವ್ಯಕ್ತಿಯಾಗಿ ವಿಶೇಷ ಉಪನ್ಯಾಸ ನೀಡಲಿದ್ದಾರೆ ಎಂದು ಪ್ರಾಚಾರ್ಯ ಪ್ರೊ.ಎಂ.ಎಂ. ಹೊಳ್ಳಿಯವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಸಕ ರುದ್ರಪ್ಪ ಲಮಾಣಿಗೆ ಸಚಿವ ಸ್ಥಾನ ನೀಡಲು ಆಗ್ರಹ

ಹಾವೇರಿ: ರಾಜ್ಯದಲ್ಲಿ ಬಂಜಾರ ಸಮಾಜದ ಏಕೈಕ ಕಾಂಗ್ರೆಸ್ ಶಾಸಕ, ವಿಧಾನಸಭೆ ಸ್ಪೀಕರ್ ರುದ್ರಪ್ಪ ಮಾನಪ್ಪ ಲಮಾಣಿ ಅವರಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ನೇತೃತ್ವದ ಮಂತ್ರಿಮಂಡಲದಲ್ಲಿ ಸಚಿವ ಸ್ಥಾನ ನೀಡುವಂತೆ ವಿವಿಧ ಬಂಜಾರ ಸಮಾಜದ ಸಂಘಟನೆಗಳು, ಸಮಾಜ ಬಾಂಧವರು ಹಾಗೂ ಲಮಾಣಿ ಬೆಂಬಲಿಗರು ಸೋಮವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಹುತಾತ್ಮ ಮೈಲಾರ ಮಹದೇವಪ್ಪ ವೃತ್ತದಲ್ಲಿ ಜಮಾವಣೆಗೊಂಡಿದ್ದ ಬಂಜಾರ ಸಮಾಜದ ಮುಖಂಡರು, ಪದಾಧಿಕಾರಿಗಳು, ಶಾಸಕರ ಅಭಿಮಾನಿಗಳು ನಗರದಲ್ಲಿ ಪ್ರತಿಭಟನಾ ರ‍್ಯಾಲಿ ನಡೆಸಿದರು. ರುದ್ರಪ್ಪ ಲಮಾಣಿ ಪರ ಭಾವಚಿತ್ರ ಹಿಡಿದು ಸಚಿವ ಸ್ಥಾನ ನೀಡುವಂತೆ ಕಾಂಗ್ರೆಸ್‌ನ ಹೈಕಮಾಂಡ ನಾಯಕರಿಗೆ ಒಕ್ಕೊರಲಿನ ಹಕ್ಕೊತ್ತಾಯ ಮಾಡಿದರು. ಹುತಾತ್ಮ ಮೈಲಾರ ಮಹದೇವಪ್ಪ ವೃತ್ತದಿಂದ ಆರಂಭಗೊಂಡ ಮೆರವಣಿಗೆ ಹೊಸಮನಿ ಸಿದ್ದಪ್ಪ ವೃತ್ತ, ಪಿ.ಬಿ ರಸ್ತೆ, ಪ್ರವಾಸಿಮಂದಿರ, ಕಿತ್ತೂರ ರಾಣಿ ಚೆನ್ನಮ್ಮ ವೃತ್ತ, ಗುರುಭವನ ಮಾರ್ಗವಾಗಿ ಸಂಚರಿಸಿ ಜೆ.ಎಚ್. ಪಟೇಲ್ ವೃತ್ತವನ್ನು ತಲುಪಿದರು.



ಪ್ರತಿಭಟನೆ ನೇತೃತ್ವ ವಹಿಸಿದ್ದ ಕರ್ನಾಟಕ ಬಂಜಾರ ಸಂತ ಸೇವಾಲಾಲ್ ಸಂಘದ ಜಿಲ್ಲಾಧ್ಯಕ್ಷ ವಿಷ್ಣುಕುಮಾರ ನಾಯ್ಕ ಮಾತನಾಡಿ, ರಾಜ್ಯದಲ್ಲಿ ಏಕೈಕ ಬಂಜಾರ ಸಮುದಾಯದ ಕಾಂಗ್ರೆಸ್ ನಾಯಕ ರುದ್ರಪ್ಪ ಲಮಾಣಿ ಅವರು ಬ್ಯಾಡಗಿ ಹಾಗೂ ಹಾವೇರಿಯಲ್ಲಿ ಮೂರು ಭಾರಿ ಶಾಸಕರಾಗಿ ಆಯ್ಕೆಯಾದ್ದಾರೆ. 2018ರ ಕಾಂಗ್ರೆಸ್ ಅವಧಿಯಲ್ಲಿ ಮುಜರಾಯಿ ಖಾತೆ ಸಚಿವರಾಗಿಯೂ ಸೇವೆ ಮಾಡಿದ್ದಾರೆ. 2023ರ ಚುನಾವಣೆಯಲ್ಲಿ ಗೆದ್ದಿರುವ ಅವರಿಗೆ ಸಿದ್ದರಾಮಯ್ಯ ನೇತೃತ್ವದ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ಕೈ ತಪ್ಪಿತ್ತು. ಹಾಗಾಗಿ ವಿಧಾನಸಭೆ ಉಪ ಸಭಾಧ್ಯಕ್ಷರನ್ನಾಗಿ ನೇಮಿಸಿದ್ದ ಸರ್ಕಾರ, ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ಅಧಿಕಾರ ನಿರ್ವಹಿಸಿದ್ದಾರೆ. ಇದೀಗ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ನೇತೃತ್ವದಲ್ಲಿ ನೂತನ ಮಂತ್ರಿಮಂಡಲ ರಚನೆಯಾಗಿದ್ದು, ಈ ಅವಧಿಯಲ್ಲಿ ರುದ್ರಪ್ಪ ಲಮಾಣಿ ಅವರಿಗೆ ಸಚಿವ ಸ್ಥಾನ ನೀಡಲೇಬೇಕು ಎಂದು ಆಗ್ರಹಿಸಿದರು.

ಬಳಿಕ ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಈ ವೇಳೆ ಆಲ್ ಇಂಡಿಯಾ ಬಂಜಾರ ಸಮಾಜದ ಜಿಲ್ಲಾಧ್ಯಕ್ಷ ಐ.ಡಿ. ಲಮಾಣಿ, ಕರ್ನಾಟಕ ಸಂತ ಬಂಜಾರ ಸೇವಾಲಾಲ್ ಸಂಘದ ರಾಜ್ಯಾಧ್ಯಕ್ಷ ಜಯರಾಮ್ ಮಾಳಾಪುರ, ಮುತ್ತಪ್ಪ ಕೊರವರ, ತುಕ್ಕಪ್ಪ ಯಲ್ಲಾಪುರ, ನಿಂಗರಾಜ ನಾಯ್ಕ, ಸಂತೋಷ ಲಮಾಣಿ, ಪರಮೇಶ ಲಮಾಣಿ, ಜಯಪ್ಪ ಲಮಾಣಿ, ಸುಭಾಷ ಲಮಾಣಿ, ರವಿ ಲಮಾಣಿ, ಪಕ್ಷದ ಕಾರ್ಯಕರ್ತರಾದ ಮಲ್ಲೇಶಪ್ಪ ಬಂಕಾಪುರ, ಶಂಕರ ಬಾಲಕ್ಕನವರ, ಗೀತಾ ಪ್ರಕಾಶ ಸೇರಿದಂತೆ ಬಂಜಾರ ಸಮಾಜದ ಅನೇಕರು, ಪಕ್ಷದ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಪ್ರಸಾದ್ ಅಬ್ಬಯ್ಯಗೆ ಸಚಿವ ಸ್ಥಾನ ನೀಡಲು ಒತ್ತಾಯ

ಹಾವೇರಿ: ಹುಬ್ಬಳ್ಳಿ-ಧಾರವಾಡ ಪೂರ್ವ ವಿಧಾನಸಭಾ ಕ್ಷೇತ್ರದ ಶಾಸಕ ಪ್ರಸಾದ್ ಅಬ್ಬಯ್ಯ ಅವರಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಮಂತ್ರಿ ಮಂಡಲದಲ್ಲಿ ಸಚಿವ ಸ್ಥಾನ ನೀಡಬೇಕು ಎಂದು ಜಿಲ್ಲಾ ಚಲವಾದಿ ಮಹಾಸಭಾ ಅಧ್ಯಕ್ಷ ಮಲ್ಲೇಶಪ್ಪ ಮದ್ಲೇರ ಕಾಂಗ್ರೆಸ್‌ನ ಹೈಕಮಾಂಡ್‌ಗೆ ಒತ್ತಾಯಿಸಿದರು.



ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹುಬ್ಬಳ್ಳಿ-ಧಾರವಾಡ ಪೂರ್ವ ಕ್ಷೇತ್ರದಿಂದ ಪ್ರಸಾದ್ ಅಬ್ಬಯ್ಯ ಅವರು ಸತತ ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದು, ಜನಪರ ಕಾರ್ಯಗಳು ಹಾಗೂ ಅಭಿವೃದ್ಧಿ ಯೋಜನೆಗಳ ಮೂಲಕ ಜನರ ವಿಶ್ವಾಸ ಗಳಿಸಿದ್ದಾರೆ. ರಾಜ್ಯದಲ್ಲಿ ಸುಮಾರು 50 ಲಕ್ಷ ಜನಸಂಖ್ಯೆ ಇರುವ ಸಮುದಾಯಕ್ಕೆ ವಿಶೇಷ ಪ್ರಾಧಾನ್ಯತೆ ನೀಡಬೇಕು. ಉತ್ತರ ಕರ್ನಾಟಕದಲ್ಲಿ ಪ್ರಭಾವಿ ನಾಯಕರಾದ ಪ್ರಸಾದ್ ಅಬ್ಬಯ್ಯ ಅವರಿಗೆ ಪ್ರಾತಿನಿಧ್ಯ ನೀಡಿ, ಸಚಿವ ಸ್ಥಾನ ನೀಡಬೇಕೆಂದು ಹೇಳಿದರು.

ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಸನದಿ ಮಾತನಾಡಿ, ಉತ್ತರ ಕರ್ನಾಟಕ ಭಾಗದ ಪ್ರಮುಖ ದಲಿತ ನಾಯಕರಾಗಿರುವ ಪ್ರಸಾದ್ ಅಬ್ಬಯ್ಯ ಅವರು ದೀನದಲಿತರು, ಹಿಂದುಳಿದ ವರ್ಗಗಳು, ವಿದ್ಯಾರ್ಥಿಗಳು ಹಾಗೂ ಯುವಕರ ಪರವಾಗಿ ನಿರಂತರವಾಗಿ ಧ್ವನಿ ಎತ್ತುತ್ತಾ ಬಂದಿದ್ದಾರೆ. ಅವರಿಗೆ ಸಚಿವ ಸ್ಥಾನ ನೀಡುವುದರಿಂದ ಈ ಭಾಗದ ಅಭಿವೃದ್ಧಿಗೆ ಮತ್ತಷ್ಟು ವೇಗ ಸಿಗಲಿದ್ದು, ಸಮುದಾಯವೂ ಸರ್ಕಾರ ಮತ್ತು ಪಕ್ಷದೊಂದಿಗೆ ಇನ್ನಷ್ಟು ಗಟ್ಟಿಯಾಗಿ ನಿಲ್ಲಲಿದೆ. ಹಾಗಾಗಿ ರಾಜ್ಯ ಸರ್ಕಾರವು ಸಾಮಾಜಿಕ ನ್ಯಾಯ ಹಾಗೂ ಪ್ರಾದೇಶಿಕ ಸಮತೋಲನದ ದೃಷ್ಟಿಯಿಂದ ಪ್ರಸಾದ್ ಅಬ್ಬಯ್ಯ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಶಂಕರಪ್ಪ ಲಕಮಣ್ಣನವರ, ಬಸವರಾಜ ಚಲವಾದಿ, ಬಸವರಾಜ ಸಾವಕ್ಕನವರ, ಪ್ರಮೋದ ಚಲವಾದಿ ಹಾಗೂ ತಿಪ್ಪೇಶ್ವರ ಚಲವಾದಿ ಸೇರಿದಂತೆ ಮಹಾಸಭೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕಿರುಸುದ್ದಿ

ಮೌನಲಿಂಗಾನುಷ್ಠಾನ ಮಂಗಲೋತ್ಸವ



ರಾಮದುರ್ಗ: ತಾಲೂಕಿನ ಕಲ್ಲೂರು ಸಿದ್ದೇಶ್ವರ ದೇವಸ್ಥಾನದಲ್ಲಿ 31ದಿನಗಳಿಂದ ಅಧಿಕ ಮಾಸದ ಅಂಗವಾಗಿ ಭೈರನಹಟ್ಟಿ ದೊರೆಸ್ವಾಮಿ ವಿರಕ್ತಮಠದ ಶ್ರೀ ಶಾಂತಲಿಂಗ ಪೂಜ್ಯರು ಕೈಗೊಂಡ 17ನೇ ವರ್ಷದ ಮೌನಲಿಂಗಾನುಷ್ಠಾನ ಮಂಗಳವಾರ ಜೂ.16ರಂದು ಮಂಗಲಗೊಳ್ಳಲಿದೆ ಎಂದು ದೇವಸ್ಥಾನದ ಪ್ರಕಟಣೆ ತಿಳಿಸಿದೆ.ಗದಗದ ಡಾ.ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಕಾರ್ಯಕ್ರಮದ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಮುಳ್ಳೂರಿನ ಚಂದ್ರಶೇಖರ ಶಿವಾಚಾರ್ಯರು, ಚಿಪ್ಪಲಕಟ್ಟಿಯ ಸಿದ್ಧಲಿಂಗಶಿವಾಚಾರ್ಯರು, ರಾಮದುರ್ಗದ ಶಾಂತವೀರ ಸ್ವಾಮೀಜಿ, ಕಲ್ಲೂರ ಸಿದ್ದೇಶ್ವರ ದೇವಸ್ಥಾನ ಟ್ರಸ್ಟ್ ಕಮಿಟಿ ಅಧ್ಯಕ್ಷ ಚಂದ್ರಶೇಖರ ಮಟ್ಟಿ, ಬಸವರಾಜ ಗುರುಸಿದ್ದಪ್ಪ ಸಿಂಧೂರ, ಪ್ರೊ. ಶಶಿಧರ ತೋಡಕರ, ಬಸವರಾಜ ಚಿಕ್ಕಮಠ, ಸುರೇಶ ಪೂಜಾರ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಮೌನಲಿಂಗಾನುಷ್ಠಾನದ ಮಂಗಲೋತ್ಸವದಲ್ಲಿ ಶಾಂತಲಿಂಗ ಮಹಾಸ್ವಾಮಿಗಳ ಬಾಗಲಕೋಟೆ-ಬೆಳಗಾವಿ-ಗದಗ ಜಿಲ್ಲೆಯ ಭಕ್ತರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ನೇಸರಗಿ: ಖೇತ್ ಬಚಾವೋ ಆಂದೋಲನ''ದ ಭಾಗವಾಗಿ ಬೈಲಹೊಂಗಲ ತಾಲೂಕಿನ ಹಣ್ಣಿಕೇರಿ ಗ್ರಾಮದಲ್ಲಿ ರೈತರಿಗೆ ತರಬೇತಿ ಕಾರ್ಯಕ್ರಮವನ್ನು ನಡೆಸಲಾಯಿತು.

ಹಿರೇಮಠರಿಗೆ ಪಿಎಚ್‌ಡಿ ಪದವಿ



ಬೆಳಗಾವಿ: ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಮಲ್ಲಿಕಾರ್ಜುನ ಎಂ. ಹಿರೇಮಠ ಅವರು ಕನ್ನಡ ವಿಭಾಗಕ್ಕೆ ಸಲ್ಲಿಸಿದ್ದ ಮಂಟೇಸ್ವಾಮಿ ಹಾಗೂ ಪ್ರಮುಖ ವಚನಕಾರರು: ಸಾಂಸ್ಕೃತಿಕ ಮುಖಾಮುಖಿಎಂಬ ಮಹಾಪ್ರಬಂಧಕ್ಕೆ ಪಿಎಚ್‌ಡಿ ಪದವಿ ನೀಡಿ ಗೌರವಿಸಿದೆ.

ಈ ಸಂಶೋಧನಾ ಪ್ರಬಂಧಕ್ಕೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕರಾದ ಡಾ. ಪಿ. ನಾಗರಾಜ ಅವರು ಮಾರ್ಗದರ್ಶನ ನೀಡಿದ್ದರು.

ಪ್ರಸ್ತುತ ಮಲ್ಲಿಕಾರ್ಜುನ ಎಂ. ಹಿರೇಮಠ ಅವರು ಮುಧೋಳ ನಗರದ ದಾನಮ್ಮದೇವಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಿಳಾ ಮಹಾವಿದ್ಯಾಲಯದ ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರ ಈ ಶೈಕ್ಷಣಿಕ ಸಾಧನೆಗೆ ಶಿಕ್ಷಣ ಕ್ಷೇತ್ರದ ಗಣ್ಯರು, ಸಹೋದ್ಯೋಗಿಗಳು ಹಾಗೂ ಹಿತೈಷಿಗಳು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಚಲವಾದಿ ಸಮುದಾಯಕೆ ಪ್ರಾಶಸ್ತ್ಯ ನೀಡಿ



ಖಾನಾಪುರ: ರಾಜ್ಯ ಸಚಿವ ಸಂಪುಟ ವಿಸ್ತರಣೆಯ ಸಂದರ್ಭದಲ್ಲಿ ಚಲವಾದಿ ಸಮುದಾಯದ ಮುಖಂಡರಿಗೆ ಪ್ರಥಮ ಪ್ರಾಶಸ್ತ್ಯ ನೀಡಬೇಕು. ಈ ಸಮುದಾಯವನ್ನು ಪ್ರತಿನಿಧಿಸುತ್ತಿರುವ ಹುಬ್ಬಳ್ಳಿ ಧಾರವಾಡ (ಪೂರ್ವ) ಶಾಸಕ ಅಬ್ಬಯ್ಯ ಪ್ರಸಾದ ಅವರಿಗೆ ಸಚಿವಸ್ಥಾನ ನೀಡಬೇಕು ಎಂದು ಚಲವಾದಿ ಮಹಾಸಭಾ ತಾಲೂಕು ಘಟಕದ ಅಧ್ಯಕ್ಷ ನಾರಾಯಣ ಚಲವಾದಿ ಆಗ್ರಹಿಸಿದರು.ಪಟ್ಟಣದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ''ರಾಜ್ಯದಲ್ಲಿ ಈ ಸಮುದಾಯವನ್ನು ಪ್ರತಿನಿಧಿಸುತ್ತಿರುವ ಅಬ್ಬಯ್ಯ ಪ್ರಸಾದ ಅವರು ರಾಜಕಾರಣದಲ್ಲಿ ಬಹಳಷ್ಟು ಅನುಭವ ಹೊಂದಿದ್ದಾರೆ. ಅವರನ್ನು ಸಚಿವ ಸ್ಥಾನಕ್ಕೆ ಪರಿಗಣಿಸಿ ಚಲವಾದಿ ಸಮುದಾಯದ ಜನತೆಯ ಬೇಡಿಕೆಯನ್ನು ಈಡೇರಿಸಬೇಕು'' ಎಂದು ಕಾಂಗ್ರೆಸ್ ಪಕ್ಷದ ವರಿಷ್ಠರನ್ನು ಆಗ್ರಹಿಸಿದರು. ಈ ಸಂದರ್ಭದಲ್ಲಿ ಚಲವಾದಿ ಮಹಾಸಭಾ ಮುಖಂಡರು, ಕಾರ್ಯಕರ್ತರು ಇದ್ದರು.



ಬೆಳಗಾವಿ: ನಗರದ ಗೋವಾವೇಸನಲ್ಲಿರುವ ಪಾಲಿಕೆಯ (ಕಂದಾಯ) ದಕ್ಷಿಣ ವಿಭಾಗದಲ್ಲಿ ಕಂದಾಯ ಅಧಿಕಾರಿಯಾಗಿ ಸೇವೆ ಸಲ್ಲಿಸಿ ಮಾತೃ ಇಲಾಖೆಗೆ ಮರಳಿ ವರ್ಗಾವಣೆಯಾಗಿರುವ ಧರ್ಮನಾಥ ಕೋರಿ ಅವರ ಬೀಳ್ಕೊಡುಗೆ ಹಾಗೂ ದಕ್ಷಿಣ ವಲಯ ಆಯುಕ್ತರಾಗಿ ನೂತನವಾಗಿ ನಿಯುಕ್ತಿ ಗೊಂಡಿರುವ ಜಗದೀಶ ಎಸ್ ಅವರ ಸ್ವಾಗತಿಸಲಾಯಿತು. ಮಹಾನಗರ ಪಾಲಿಕೆಯ ಕಂದಾಯ ವಿಭಾಗದ ಉಪ ಆಯುಕ್ತ ಡಾ. ಸಿದ್ದು ಹುಲ್ಲೋಳಿ ಸೇರಿದಂತೆ ಮತ್ತಿತರರು ಇದ್ದರು.

ಗಣೇಬೈಲ, ಹತ್ತರಗುಂಜಿ ಬಸ್ ಸಂಚಾರ ಆರಂಭ

ಖಾನಾಪುರ: ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಸಂಯೋಜಕ ಸಂಘಟನೆ) ವತಿಯಿಂದ ಮೊನ್ನೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಕೆಎಸ್ ಆರ್‌ಟಿಸಿ) ಖಾನಾಪುರ ಘಟಕಕ್ಕೆ ಸಲ್ಲಿಸಲಾಗಿದ್ದ ಮನವಿಗೆ ಸ್ಪಂದಿಸಿ, ಗಣೇಬೈಲ, ಹತ್ತರಗುಂಜಿ, ಮುಡೇವಾಡಿ ಹಾಗೂ ಢುಖರವಾಡಿ ಗ್ರಾಮಗಳಿಗೆ ಸೋಮವಾರ ಬಸ್ ಸಂಚಾರ ಆರಂಭಿಸಲಾಯಿತು.

ಸ್ವಾತಂತ್ರ್ಯ ದೊರೆತು 80 ವರ್ಷಗಳು ಕಳೆದರೂ ಈ ಗ್ರಾಮಗಳಿಗೆ ಸಮರ್ಪಕ ಬಸ್ ವ್ಯವಸ್ಥೆ ಇರಲಿಲ್ಲ. ಇದರಿಂದ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದರು. ಸಂಘಟನೆಯ ಮನವಿಯ ಮೇರೆಗೆ ಬಸ್ ಸೇವೆ ಆರಂಭಗೊಂಡಿರುವುದು ಗ್ರಾಮಸ್ಥರಲ್ಲಿ ಸಂತಸ ಮೂಡಿಸಿದೆ.

ಡಿಪೋ ಮ್ಯಾನೇಜರ್ ಸಂತೋಷ ಬೆನಕನಕೊಪ್ಪ ಹಾಗೂ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜಶೇಖರ್ ಹಿಂಡಲಗಿ ಮತ್ತು ರಾಘವೇಂದ್ರ ಚಲವಾದಿ ಅವರನ್ನು ಗ್ರಾಮಸ್ಥರು ಸನ್ಮಾನಿಸಿದರು.

ಈ ವೇಳೆ ಗ್ರಾಮ ಪಂಚಾಯತಿ ಸದಸ್ಯ ರವಿ ಮಾದರ, ಉಪಾಧ್ಯಕ್ಷೆ ಉಜ್ವಲ ಕುಂಬಾರ, ಬಸವರಾಜ ಮಾದರ, ಶಶಿಧರ ನಾಯಕ, ಪರಶುರಾಮ ಚಿಟೋಂಚಿಣಚಿಡಿ, ರಾಜಾರಾಮ ಚಿಟೋಂಚಿಣಚಿಡಿ, ಮೋಹನ್ ಗುಡಿಚಿವ, ವಿಜಯ್ ಗುಡಿಚಿವ, ಬೈರೂ ಕುಂಬಾರ, ಜಂಟಿಬಚಿ ಕುಂಬಾರ, ಸಂಜಯ್ ಕುಂಬಾರ, ಹಾಗೂ ಗ್ರಾಮ ಪಂಚಾಯತಿ ಸಿಬ್ಬಂದಿ, ಗ್ರಾಮಸ್ಥರು ವಿದ್ಯಾರ್ಥಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.



ಖಾನಾಪುರ: ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಸಂಯೋಜಕ ಸಂಘಟನೆ) ವತಿಯಿಂದ ಮೊನ್ನೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಕೆಎಸ್‌ಆರ್‌ಟಿಸಿ) ಖಾನಾಪುರ ಘಟಕಕ್ಕೆ ಸಲ್ಲಿಸಲಾಗಿದ್ದ ಮನವಿಗೆ ಸ್ಪಂದಿಸಿ, ಗಣೇಬೈಲ, ಹತ್ತರಗುಂಜಿ, ಮುಡೇವಾಡಿ ಹಾಗೂ ಢುಖರವಾಡಿ ಗ್ರಾಮಗಳಿಗೆ ಸೋಮವಾರ ಬಸ್ ಸಂಚಾರ ಆರಂಭಿಸಲಾಯಿತು.

ರೈತರಿಂದ ಪತ್ರಿಭಟನೆ | ಜಿಲ್ಲಾಧಿಕಾರಿಗಳಿಗೆ ಮನವಿ

ಸಮಸ್ಯೆಗಳ ಪರಿಹಾರಕ್ಕೆ ಆಗ್ರಹ

ಬೆಳಗಾವಿ: ಕರ್ನಾಟಕ ರಾಜ್ಯ ರೈತ ಸಂಘದ ಬೆಳಗಾವಿ ಜಿಲ್ಲಾ ಘಟಕದ ವತಿಯಿಂದ ಜಿಲ್ಲೆಯ ರೈತರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳ ಕುರಿತು ಜಿಲ್ಲಾಡಳಿತದವು ಶೀಘ್ರ ಪರಿಹರಿಸಬೇಕೆಂದು ಆಗ್ರಹಿಸಿ ಮನವಿ ಸಲ್ಲಿಸಿದರು.

ಸೋಮವಾರ ವಿವಿಧ ಬೇಡಿಕೆಯಗಳನ್ನು ಈಡೇರಿಸುವಂತೆ ಜಿಲ್ಲಾಧಿಕಾರಿಗಳ ಕಚೇರಿ ಎದುರು ರೈತರು ಪತ್ರಿಭಟನೆ ನಡೆಸಿದರು. ರೈತರ ಜಮೀನುಗಳ 7/12 ಉತಾರಗಳನ್ನು ಕಂದಾಯ ಇಲಾಖೆ ಒಟ್ಟುಗೂಡಿಸಿರುವುದರಿಂದ ರೈತರಿಗೆ ತೊಂದರೆಯಾಗುತ್ತಿದ್ದು, ಈ ಹಿಂದೆ ಇದ್ದಂತೆ ಪ್ರತ್ಯೇಕ ಉತಾರಗಳನ್ನು ನೀಡುವಂತೆ ಒತ್ತಾಯಿಸಲಾಗಿದೆ. ಅಲ್ಲದೇ, ಕೆಲವು ಜಮೀನುಗಳಿಗೆ ಸರಕಾರಿ ಮಾರ್ಗಗಳ ಕೊರತೆಯಿಂದ ರೈತರು ಸಂಕಷ್ಟ ಅನುಭವಿಸುತ್ತಿದ್ದಾರೆ. ಅಗತ್ಯವಿರುವ ಕಡೆಗಳಲ್ಲಿ ಸರ್ಕಾರದಿಂದ ಮಾರ್ಗಗಳನ್ನು ನಿರ್ಮಿಸಿಕೊಡಬೇಕೆಂದು ಪ್ರತಿಭಟನೆಯಲ್ಲಿ ಒತ್ತಾಯಿಸಿದರು.

ರಾಸಾಯನಿಕ ಗೊಬ್ಬರಗಳ ಬೆಲೆ ಅತಿಯಾಗಿ ಏರಿಕೆಯಾಗಿದ್ದು, ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಯೂರಿಯಾ ಗೊಬ್ಬರದ ದರ ಕಡಿಮೆ ಮಾಡಬೇಕು, ಹಾಗೂ ನ್ಯಾನೋ ಉತ್ಪನ್ನಗಳನ್ನು ನೀಡಿ ಹೆಚ್ಚುವರಿ ಹಣ ವಸೂಲಿ ಮಾಡುತಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೂಲಿಕಾರರಿಗೆ ವೇತನ ನೀಡುವುದರ ಜೊತೆಗೆ, ಗ್ರಾಮ ಪಂಚಾಯಿತಿಗಳ ಮೂಲಕ ರೈತರ ಜಮೀನುಗಳಲ್ಲಿ ಕೃಷಿ ಕಾರ್ಯಗಳಿಗೆ ಅವರನ್ನು ನಿಯೋಜಿಸುವ ವ್ಯವಸ್ಥೆ ಕಲ್ಪಿಸಬೇಕೆಂದು ಮನವಿಯಲ್ಲಿ ತಿಳಿಸಲಾಗಿದೆ.

ಗ್ರಾಮ ಪಂಚಾಯಿತಿಗಳಲ್ಲಿ ಈ ಹಿಂದೆ ನೀಡಲಾಗುತ್ತಿದ್ದ ಮನೆಗಳ ಕಂಪ್ಯೂಟರ್ ಉತಾರಗಳ ಸೇವೆಯನ್ನು ಸ್ಥಗಿತಗೊಳಿಸಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಅದನ್ನು ಪುನಃ ಆರಂಭಿಸಬೇಕೆಂದು ಸಂಘ ಒತ್ತಾಯಿಸಿದರು.

ರೈತರು ಅನಿಭವಿಸುತ್ತಿರುವ ಎಲ್ಲ ಸಮಸ್ಯೆಗಳನ್ನು ಜಿಲ್ಲಾಡಳಿತವುಗಂಭೀರವಾಗಿಪರಿಗಣಿಸಿ, ಶೀಘ್ರದಲ್ಲಿ ಸೂಕ್ತ ಕ್ರಮ ಕೈಗೊಂಡು ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಒತ್ತಾಯಿಸಿದರು.

ಈ ವೇಳೆ ಬಸವರಾಜ ರು. ಮೊಕಾಶಿ, ಕುಮಾರ ಶಿ. ನಾವಿ, ರೈತ ಮುಖಂಡ ಪರಶುರಾಮ ಸ. ರೇಡೇಕರ, ಪಾರ್ವತಿ ಈ. ಕಳಸಣ್ಣವರ, ಬಸವರಾಜ ಕ. ಪಾಟೀಲ, ಮಾರುತಿ ಪ. ಬುರ್ಲಿ, ಕಲಗೌಡ ಬಾ. ಪಾಟೀಲ, ವೈಜು ಲ. ಲೂಮ್ಯಾಚೆ ಅಮೃತ ಕ. ಮುದ್ದೆಣ್ಣವರ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.



ಅಸಮಾಧಾನ ಹೊರ ಹಾಕಿದ ಅನ್ನದಾತ

ಬೆಳಗಾವಿ ಎಪಿಎಂಸಿ ಆವರಣದಲ್ಲಿ ರೈತರಿಗಾಗಿ ನಿರ್ಮಿಸಲಾಗಿದ್ದ ಸಂಡೇ ಮಾರ್ಕೆಟ್' ಪ್ರಾಂಗಣವನ್ನು ಖಾಸಗಿ ಮಾರುಕಟ್ಟೆಯವರಿಗೆ ವ್ಯಾಪಾರಕ್ಕಾಗಿ ನೀಡಿರುವುದರಿಂದ ರೈತರು ರಸ್ತೆ ಬದಿಯಲ್ಲಿ ನಿಂತು ತಮ್ಮ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಅಸಮಾಧಾನ ಹೊರ ಹಾಕಿದರು.

ಅಂಗನವಾಡಿ ಕೇಂದ್ರಗಳಲ್ಲಿ ಎಲ್‌ಕೆಜಿ, ಯುಕೆಜಿ ಆರಂಭಕ್ಕೆ ವಿರೋಧ: ಮನವಿ

ಖಾನಾಪುರ: ತಾಲೂಕಿನ ಅಂಗನವಾಡಿ ಕೇಂದ್ರಗಳಲ್ಲಿ ಎಲ್ ಕೆಜಿ-ಯುಕೆಜಿ ತರಗತಿಗಳನ್ನು ಆರಂಭಿಸಲು ಸರ್ಕಾರ ಪ್ರಯತ್ನ ನಡೆಸುತ್ತಿದ್ದು, ಇದನ್ನು ವಿರೋಧಿಸಿದ ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಸಂಘದ ಪದಾಧಿಕಾರಿಗಳು ಸೋಮವಾರ ಪಟ್ಟಣದ ತಹಶೀಲ್ದಾರ್ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿದರು. ಅಂಗನವಾಡಿ ಕೇಂದ್ರಗಳಲ್ಲಿ ಎಲ್‌ಕೆಜಿ, ಯುಕೆಜಿ ಆರಂಭಕ್ಕೆ ವಿರೋಧ ವ್ಯಕ್ತಪಡಿಸಿ ತಹಸೀಲ್ದಾರರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ತಹಶೀಲ್ದಾರ್ ಕಚೇರಿ ಆವರಣದಲ್ಲಿ ತಾಲೂಕಿನ ವಿವಿಧ ಭಾಗಗಳ 500ಕ್ಕೂ ಹೆಚ್ಚು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರು ಸೇರಿದ್ದರು. ಕೆಲಕಾಲ ಕಚೇರಿ ಮುಂಭಾಗದಲ್ಲಿ ಕುಳಿತು ಪ್ರತಿಭಟನೆ ನಡೆಸಿದ ಅವರು ಸ್ಥಳಕ್ಕಾಗಮಿಸಿದ ತಹಶೀಲ್ದಾರ್ ದುಂಡಪ್ಪ ಕೋಮಾರ ಅವರಿಗೆ ಲಿಖಿತ ಮನವಿಯನ್ನು ಸಲ್ಲಿಸಿದರು.

ಅಂಗನವಾಡಿ ಕೇಂದ್ರಗಳಲ್ಲಿ ಎಲ್ ಕೆಜಿ-ಯುಕೆಜಿ ತರಗತಿಗಳನ್ನು ಆರಂಭಿಸುವ ಆದೇಶವನ್ನು ಹಿಂಪಡೆಯಬೇಕು. ಜೊತೆಗೆ ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರಿಗೆ ಮಾಸಿಕ ಋತುಚಕ್ರದ ಅವಧಿಯಲ್ಲಿ ಮೂರು ದಿನಗಳ ವಿಶೇಷ ರಜೆ ಮಂಜೂರು ಮಾಡಬೇಕು'' ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಎಐಟಿಯುಸಿ ಸಂಘಟನೆಯ ರಾಜ್ಯಾಧ್ಯಕ್ಷ ಬಿ. ಅಹಮದ್, ರಾಜ್ಯ ಕಾರ್ಯದರ್ಶಿ ಜಯಮ್ಮ, ರಾಜ್ಯ ಉಪಾಧ್ಯಕ್ಷೆ ಮುಮ್ತಾಜ್ ಬೇಗಂ, ತಾಲೂಕು ಘಟಕದ ಅಧ್ಯಕ್ಷೆ ಮೇಘಾ ಮಿಠಾರಿ, ಉಪಾಧ್ಯಕ್ಷೆ ಸರಿತಾ ಪೆಡಣೇಕರ, ಕಾರ್ಯದರ್ಶಿ ಭಾರತಿ ಪೈ ಸೇರಿದಂತೆ ಪದಾಧಿಕಾರಿಗಳು, ಕಾರ್ಯಕರ್ತೆಯರು, ಸಹಾಯಕಿಯರು ಇದ್ದರು. ಮನವಿಯ ಪ್ರತಿಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಿಗೆ ಸಲ್ಲಿಸಿದರು.



ನಕಲಿ ಆಯುರ್ವೇದಿಕ್ ಔಷಧಿ ಮಾರಾಟ: ಕ್ರಮಕ್ಕೆ ಒತ್ತಾಯ

ಕರವೇ ಸ್ವಾಭಿಮಾನಿ ಬಣ ಆಗ್ರಹ

ಬೆಳಗಾವಿ: ಸಾರ್ವಜನಿಕರ ಆರೋಗ್ಯದೊಂದಿಗೆ ಚೆಲ್ಲಾಟವಾಡುತ್ತಿರುವ ನಕಲಿ ಹಾಗೂ ಡುಪ್ಲಿಕೇಟ್ ಆಯುರ್ವೇದಿಕ್ ಔಷಧಿಗಳ ಮಾರಾಟದ ದಂಧೆಯೊಂದು ಬೆಳಕಿಗೆ ಬಂದಿದ್ದು, ಇದರ ವಿರುದ್ಧ ಕರ್ನಾಟಕ ರಕ್ಷಣಾ ವೇದಿಕೆ (ಸ್ವಾಭಿಮಾನಿ ಬಣ) ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

ನಗರದ ಶನಿವಾರಖೂಟ ಪ್ರದೇಶದಲ್ಲಿರುವ ಅಮೃತ ಕಳಸ ಆಯುರ್ವೇದಿಕ ಅಂಗಡಿಯಲ್ಲಿ ಸಾರ್ವಜನಿಕರಿಗೆ ನಕಲಿ ಔಷಧಿಗಳನ್ನು ನೀಡಿ ಲಕ್ಷಾಂತರರೂಪಾಯಿವಂಚನೆಮಾಡಲಾಗುತ್ತಿದೆ ಎಂದು ಸಂಘಟನೆ ಆರೋಪಿಸಿದೆ. ಸವದತ್ತಿ ತಾಲೂಕಿನ ಮುರಗೋಡ ಗ್ರಾಮದ ರೈತ ಮಡಿವಾಳಪ್ಪ ಬಸಪ್ಪ ವಿವೇಕಿ ಅವರಿಗೆ ಗುಣಪಡಿಸಲಾಗದ ಕಾಯಿಲೆಯನ್ನು ವಾಸಿ ಮಾಡುವುದಾಗಿ ನಂಬಿಸಿ ಸುಮಾರು 1.50 ಲಕ್ಷ ಹಣ ಪಡೆದು ವಂಚಿಸಲಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಈ ರೀತಿಯ ಮೋಸದ ಜಾಲದಿಂದ ನೂರಾರು ಜನರು ಆರೋಗ್ಯ ಸುಧಾರಿಸುವ ನಿರೀಕ್ಷೆಯಲ್ಲಿ ಹಣ ಕಳೆದುಕೊಂಡು, ದೈಹಿಕ ಹಾಗೂ ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ ಎಂದು ಕರವೇ ಸ್ವಾಭಿಮಾನಿ ಬಣ ತಿಳಿಸಿದೆ.

ಈ ಸಂಬಂಧ ಸಂಘಟನೆಯ ಜಿಲ್ಲಾಧ್ಯಕ್ಷ ಈಶ್ವರಗೌಡ ಸಿ. ಪಾಟೀಲ ಅವರ ನೇತೃತ್ವದಲ್ಲಿ ಜಿಲ್ಲಾಧಿಕಾರಿ, ಪೊಲೀಸ್ ಆಯುಕ್ತರು, ಜಿಲ್ಲಾ ಆಯುಷ್ ಇಲಾಖೆ ಹಾಗೂ ಉಪ ಔಷಧಿ ನಿಯಂತ್ರಣ ಕೇಂದ್ರಕ್ಕೆ ಈಗಾಗಲೇ ಹಲವು ಮನವಿಗಳನ್ನು ಸಲ್ಲಿಸಲಾಗಿದೆ. ಆದರೆ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಖಡೇಬಜಾರ್ ಪೊಲೀಸ್ ಠಾಣೆ ಸಿಬ್ಬಂದಿ ಆರೋಪಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ತೋರುತ್ತಿದ್ದಾರೆ ಎಂದು ಸಂಘಟನೆ ಆರೋಪಿಸಿದೆ.

ಅಧಿಕಾರಿಗಳ ನಿರ್ಲಕ್ಷ್ಯ ಇದೇ ರೀತಿ ಮುಂದುವರಿದರೆ ಭವಿಷ್ಯದಲ್ಲಿ ಗಂಭೀರ ಅನಾಹುತಗಳು ಸಂಭವಿಸುವ ಸಾಧ್ಯತೆ ಇದೆ ಎಂದು ಎಚ್ಚರಿಸಿರುವ ಕರವೇ ಸ್ವಾಭಿಮಾನಿ ಬಣ, ಆರೋಪಿತ ಅಂಗಡಿ ಮಾಲೀಕರ ವಿರುದ್ಧ ತಕ್ಷಣ ಪ್ರಕರಣ ದಾಖಲಿಸಿ ಕಠಿಣ ಕಾನೂನು ಕ್ರಮ ಜರುಗಿಸಬೇಕು. ಅಲ್ಲದೆ ವಂಚನೆಗೊಳಗಾದ ಗ್ರಾಹಕರಿಗೆ ಅವರ ಹಣವನ್ನು ವಾಪಸ್ ದೊರಕಿಸಿಕೊಡಬೇಕು ಎಂದು ಆಗ್ರಹಿಸಿದೆ. ಕ್ರಮ ಕೈಗೊಳ್ಳದಿದ್ದಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳುವುದಾಗಿ ಸಂಘಟನೆ ಎಚ್ಚರಿಕೆ ನೀಡಿದೆ.



ನೌಕರರ ಸಂಘದ ಹೋರಾಟಕ್ಕೆ ಸಂದ ಜಯ: ಮಹೇಶ ಹುಬ್ಬಳ್ಳಿ



ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಮುಖ್ಯ ಕಾರ್ಯದರ್ಶಿಗಳ ಆದೇಶ

ರಾಯಬಾಗ: ರಾಜ್ಯದ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಖಾಲಿ ಇರುವ ಬ್ಯಾಕ್ ಲಾಗ್ ಹುದ್ದೆಗಳನ್ನು ಶೀಘ್ರವಾಗಿ ಭರ್ತಿ ಮಾಡುವಂತೆ ಮುಖ್ಯ ಕಾರ್ಯದರ್ಶಿಗಳು ಆದೇಶ ಹೊರಡಿಸಿರುವುದು ಕರ್ನಾಟಕ ರಾಜ್ಯ ಸರ್ಕಾರಿ, ಅರೆ ಸರ್ಕಾರಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ನೌಕರರ ಸಂಘದ ನಿರಂತರ ಹೋರಾಟಕ್ಕೆ ಸಂದ ಜಯವಾಗಿದೆ ಎಂದು ಸಂಘದ ರಾಜ್ಯಾಧ್ಯಕ್ಷ ಮಹೇಶ್ ಹುಬ್ಬಳ್ಳಿ ತಿಳಿಸಿದ್ದಾರೆ.

ಪತ್ರಿಕಾ ಪ್ರಕಟಣೆಯಲ್ಲಿ ಈ ಕುರಿತು ಸಂತಸ ವ್ಯಕ್ತಪಡಿಸಿದ ಅವರು, ಕಲ್ಯಾಣ ಕರ್ನಾಟಕ ವಿಭಾಗೀಯ ಮಟ್ಟದ ಸಮಾವೇಶದಲ್ಲಿ ಅಂಗೀಕರಿಸಲಾದ ವಿವಿಧ ಬೇಡಿಕೆಗಳ ಈಡೇರಿಕೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ, ಗಳಿಕೆ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಚಿವರು, ಶಾಸಕರು ಹಾಗೂ ಹಿರಿಯ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಲಾಗಿತ್ತು ಎಂದು ಹೇಳಿದರು.

ಸಂಘದ ನಿರಂತರ ಹೋರಾಟ ಮತ್ತು ಮನವಿಗಳಿಗೆ ಸ್ಪಂದಿಸಿದ ರಾಜ್ಯ ಸರ್ಕಾರವು ಮೇ 25, 2026ರಂದು ಎಲ್ಲ ಇಲಾಖೆಗಳಲ್ಲಿ ಖಾಲಿ ಇರುವ ಬ್ಯಾಕ್ ಲಾಗ್ ಹುದ್ದೆಗಳ ಭರ್ತಿಗೆ ತುರ್ತು ಕ್ರಮ ಕೈಗೊಳ್ಳುವಂತೆ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಅವರ ಮೂಲಕ ಆದೇಶ ಹೊರಡಿಸಿರುವುದು ಸಂತಸ ತಂದಿದೆ.

ಈ ಮೂಲಕ ಸರ್ಕಾರ ಸಾಮಾಜಿಕ ನ್ಯಾಯದತ್ತ ಮಹತ್ವದ ಹೆಜ್ಜೆ ಇಟ್ಟಿದೆ ಎಂದು ಅವರು ಅಭಿಪ್ರಾಯಪಟ್ಟರು.

ಸಂಘದ ಹೋರಾಟಕ್ಕೆ ಸ್ಪಂದಿಸಿದ ಬ್ಯಾಕ್ಲಾಗ್ ಹುದ್ದೆ ಗಳ ಭರ್ತಿಗೆ ಮುಖ್ಯ ಕಾರ್ಯ ದರ್ಶಿಗಳ ಆದೇಶ ಸಂತಸದ ವಿಚಾರ. ನೌಕರರ ಸಂಘದ ಹೋರಾಟಕ್ಕೆ ಸಂದ ಜಯವಾಗಿದ್ದು, ಸಾವಿರಾರುನಿರುದ್ಯೋಗಿಯುವಕರಿಗೆ ಇದು ಆಶಾಕಿರಣವಾಗಿದೆ. ಸರ್ಕಾರ ಶೀಘ್ರದಲ್ಲೇ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲಿ. ಎಂದು ಚಿಕೋಡಿ ಜಿಲ್ಲಾ ಅಧ್ಯಕ್ಷರು ಮಹಾದೇವ ಸಿ ಐವಳೆ ಅವರು ಸಂತಸ ವ್ಯಕ್ತಪಡಿಸಿದರು.

ಅಧ್ಯಕ್ಷರಾಗಿ ಮಡಿವಾಳರ ಆಯ್ಕೆ



ಸುರೇಬಾನ: ಸಮೀಪದ ಕಲಹಾಳ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಸ್‌ಡಿಎಂಸಿ ನೂತನ ಅಧ್ಯಕ್ಷರಾಗಿ ಮಹದಾಯಿ ಹೋರಾಟಗಾರ ಹನಮಪ್ಪ ಸಂ. ಮಡಿವಾಳರ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಶಿಕ್ಷಣ ಇಲಾಖೆಯ ನಿಯಮಾನುಸಾರ ಏಳು ಸದಸ್ಯರ ಸ್ಥಾನಗಳಿಗೆ ನೂತನ ಸದಸ್ಯರನ್ನು ನೇಮಕ ಮಾಡಿದ ಬಳಿಕ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆಯಿತು.

ಶಾಲೆಯ ಪದೋನ್ನತಿ ಪ್ರಧಾನ ಗುರು ಆರ್.ಪಿ. ಬೆಟಗೇರಿಯವರು ಆಯ್ಕೆ ಪ್ರಕ್ರಿಯೆ ನಡೆಸಿ ಶಾಲೆಯ ಸರ್ವಾಂಗೀಣ ಅಭಿವೃದ್ಧಿಗೆ ಸಮಿತಿ ಹಾಗೂ ಗ್ರಾಮಸ್ಥರ ಸಹಕಾರ ಕೋರಿದರು.

ಯುವ ಮುಖಂಡ ಕಲ್ಲಪ್ಪ ಜಗ್ಗಲ ಅವರು ಶಾಲಾ ಮಕ್ಕಳಿಗೆ ಟೈ, ಬೆಲ್ಟ್ ಹಾಗೂ ಗುರುತಿನ ಚೀಟಿ (ಐಡೆಂಟಿಟಿ ಕಾರ್ಡ್) ಒದಗಿಸುವುದಾಗಿ ಭರವಸೆ ನೀಡಿದರು. ಪಿಎಲ್‌ಡಿ ಬ್ಯಾಂಕ್‌ನ ಮಾಜಿ ಅಧ್ಯಕ್ಷ ನಾರಾಯಣ ಹೂಲಗೇರಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಎಸ್‌ಡಿಎಂಸಿ ಸದಸ್ಯರು, ಶಿಕ್ಷಕರು, ಗ್ರಾಮಸ್ಥರು ಹಾಗೂ ಮಹಿಳಾ ಸದಸ್ಯರು ಉಪಸ್ಥಿತರಿದ್ದರು.

ಬೆಳಗಾವಿಯಲ್ಲಿ ವಿದ್ಯುತ್ ವ್ಯತ್ಯಯ ಇಂದು

ಬೆಳಗಾವಿ: ಕಣಬರ್ಗಿಯ 110/11 ಕೆವ್ಹಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಎಫ್-05 ಶಿವಾಲಯ 11 ಕೆ.ವಿ. ಫೀಡರ್ ಮೇಲೆ ತುರ್ತು ನಿರ್ವಹಣಾ ಕಾರ್ಯ ಕೈಗೊಳ್ಳಬೇಕಾಗಿರುವ ಹಿನ್ನೆಲೆಯಲ್ಲಿ ಜೂ.16 ರಂದು ರೇಣುಕಾ ನಗರ, ಹೊಸ ರೇಣುಕಾ ನಗರ, ಕಣಬರ್ಗಿ ರಸ್ತೆ, ಸುರಭಿ ಹೊಟೆಲ್ನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳಗ್ಗೆ 10 ಗಂಟೆಯಿಂದ ಸಾಯಂಕಾಲ 6 ಗಂಟೆಯ ವರೆಗೆ ವಿದ್ಯುತ್ ನಿಲುಗಡೆಯಾಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ ಸನ್ಮಾನ

ಹಿಂದೂ ಕಾರ್ಯಕರ್ತರ ಸಮಾವೇಶ:ಅವಲೋಕನ ಸಭೆ



ಬೆಳಗಾವಿ: ಬೆಳಗಾವಿಯ ಗಣೇಶಪುರ- ಹಿಂಡಲಗಾದ ಇಂಪೋರಿಯಾ ಟವರ್‌ನಲ್ಲಿ ಧನಂಜಯ ಜಾಧವ ಮಿತ್ರ ಪರಿವಾರ ಹಾಗೂ ಮರಾಠಾ ಸಮಾಜ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ 29ನೇ ಹಿಂದೂ ಕಾರ್ಯಕರ್ತರ ಸಮಾವೇಶದ ಯಶಸ್ವಿ ಅವಲೋಕನ ಸಭೆ ಹಾಗೂ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ವಿಶೇಷ ಸಾಧನೆ ಮಾಡಿದ ಪ್ರತಿಭಾವಂತವಿದ್ಯಾರ್ಥಿನಿಯರಸನ್ಮಾನ ಸಮಾರಂಭವು ಉತ್ಸಾಹಭರಿತವಾಗಿ ನೆರವೇರಿತು.

ಕಳೆದ ಜನವರಿಯಲ್ಲಿ ಬೆಳಗಾವಿ ತಾಲೂಕಿನ ಉಚಗಾಂವ ಗ್ರಾಮದ ಶ್ರೀ ಮಳೇಕರಣಿ ದೇವಸ್ಥಾನದ ಆವರಣದಲ್ಲಿ ನಡೆದಿದ್ದ ಬೃಹತ್ ಹಿಂದೂ ಕಾರ್ಯಕರ್ತರ ಸಮಾವೇಶದ ಯಶಸ್ಸಿನಹಿನ್ನೆಲೆಯಲ್ಲಿಈಅವಲೋಕನ ಸಭೆಯನ್ನು ಆಯೋಜಿಸಲಾಗಿತ್ತು.

ಅಧ್ಯಕ್ಷತೆ ವಹಿಸಿದ್ದ ಬಿಜೆಪಿ ಮುಖಂಡ ಹಾಗೂ ಬೆಳಗಾವಿ ಗ್ರಾಮೀಣ ಮಂಡಳಿಯ ಮಾಜಿ ಅಧ್ಯಕ್ಷಧನಂಜಯ ಜಾಧವ ಮಾತನಾಡಿದರು.

ಇದೇ ಸಂದರ್ಭದಲ್ಲಿ ಮರಾಠಾ ಸಮಾಜ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆಗೈದ ವಿದ್ಯಾರ್ಥಿನಿಯರನ್ನು ಗೌರವಿಸಲಾಯಿತು.

ಗ್ರಾಮೀಣ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ ಪ್ರಾಜಕ್ತಾ ಉತ್ತಮ್ ಚೌಗುಲೆ, ಕನ್ನಡ ಮಾಧ್ಯಮದಲ್ಲಿ ಪ್ರಥಮ ಸ್ಥಾನ ಗಳಿಸಿದ ರಾಧಿಕಾ ಚಂದ್ರಶೇಖರ ಬಂಗಾರಿ, ನಗರ ಮರಾಠಿ ಮಾಧ್ಯಮದ ಪ್ರಥಮ ಸ್ಥಾನಿ ಕುಮಾರಿ ಸ್ನೇಹಾ ಯಲ್ಲಪ್ಪ ಹಿರೋಜಿ, ಇಂಗ್ಲಿಷ್ ಮಾಧ್ಯಮದ ಪ್ರಥಮ ಸ್ಥಾನಿ ಕುಮಾರಿ ಸಾಯಿಶಾ ಪವನ್ ದೇಸಾಯಿ, ಹೈಯರ್ ಎಜುಕೇಶನ್ ಸ್ಕಾಲರ್ಶಿಪ್ ಪರೀಕ್ಷೆಯಲ್ಲಿ ಉತ್ತೀರ್ಣಳಾದ ಕುಮಾರಿ ತೃಪ್ತಿ ದೇಸಾಯಿ ಹಾಗೂ ರಾಜ್ಯ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದ ದಿವ್ಯಾ ಪ್ರದೀಪ್ ದೇಸಾಯಿ ಅವರನ್ನು ಸ್ಮರಣಿಕೆ, ಪುಷ್ಪಗುಚ್ಛ ಹಾಗೂ ತಲಾ 15,000 ನಗದು ನೀಡಿ ಸನ್ಮಾನಿಸಲಾಯಿತು.

ಸಭೆಯಲ್ಲಿ ನಾರಾಯಣ ಪಾಟೀಲ್ ಅವರು ಸಮಾವೇಶದ ಸಮಗ್ರ ವರದಿಯನ್ನು ಮಂಡಿಸಿದರು. ಮಲ್ಲಪ್ಪ ಬೆಳಗಾಂವಕರ, ಮಾರುತಿ ಪಾಟೀಲ್ ಹಾಗೂ ಪಂಕಜ ಘಾಡಿ ಅವರು ತಮ್ಮ ಮನೋಗತಗಳನ್ನು ವ್ಯಕ್ತಪಡಿಸಿ ಸಮಾವೇಶದ ಯಶಸ್ಸಿಗೆ ಶ್ರಮಿಸಿದ ಕಾರ್ಯಕರ್ತರನ್ನು ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ನಗರಸಭಾ ಸದಸ್ಯರಾದ ರಾಜು ಭಾತಕಾಂಡೆ, ಶಂಕರ ಪಾಟೀಲ್, ಮಾಜಿ ಬುಡಾ ಅಧ್ಯಕ್ಷ ಸಂಜಯ ಬೆಳಗಾಂವಕರ, ಪ್ರದೀಪ ಪಾಟೀಲ್, ತಿಮ್ಮಾಜಿ ಮೊರೆ, ಭುಜಂಗ ಸಾದಗುಡೆ, ಸಿದ್ದಪ್ಪ ಹುಕ್ಕೇರಿ, ಭರಮ ಗೋಮಾನಾಚೆ, ಅನಿಲ್ ಪಾಟೀಲ್, ಷಡಾಕ್ಷರಿ ಹಿರೇಮಠ, ಸೂರ್ಯಾಜಿ, ಉಮೇಶ್ ಪುರಿ, ಬಾಳು ಬಡಗಾವಿ, ಅನಿಲ್ ಕೇಸರ್ಕರ್ ಸೇರಿದಂತೆ ಬೆಳಗಾವಿ ಗ್ರಾಮೀಣ ಭಾಗದ ನೂರಾರು ಕಾರ್ಯಕರ್ತರು, ಹಿತೈಷಿಗಳು ಹಾಗೂ ಗಣ್ಯರು ಉಪಸ್ಥಿತರಿದ್ದರು.

ಡಿಜಿಟಲ್ ಅರೆಸ್ಟ್ ವಂಚನೆಗಳ ಬಗ್ಗೆ ಹಿರಿಯ ನಾಗರಿಕರು ಎಚ್ಚರವಾಗಿರಿ



ಬೆಳಗಾವಿ: ಇತ್ತೀಚಿನ ದಿನಗಳಲ್ಲಿ ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ನಡೆಯುತ್ತಿರುವ ಸೈಬರ್ ವಂಚನೆಗಳು ಹೆಚ್ಚಾಗುತ್ತಿದ್ದು, ವಿಶೇಷವಾಗಿ ಹಿರಿಯ ನಾಗರಿಕರನ್ನು ಗುರಿಯಾಗಿಸಿಕೊಂಡು ಮೋಸ ಮಾಡಲಾಗುತ್ತಿದೆ ಎಂದು ಬೆಳಗಾವಿ ಮಹಾನಗರ ಪಾಲಿಕೆಯ ಉಪ ಆಯುಕ್ತ ಉದಯಕುಮಾರ ತಳವಾರ ಹೇಳಿದರು.

ಸೋಮವಾರ ನಗರದ ಕನ್ನಡ ಸಾಹಿತ್ಯ ಭವನದಲ್ಲಿ, ವಿಶ್ವ ಹಿರಿಯ ನಾಗರಿಕರ ಮೇಲಿನ ದೌರ್ಜನ್ಯ ತಡೆ ಜಾಗೃತಿ ದಿನದ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೋಸಗಾರರು ಪೊಲೀಸ್, ಸಿಬಿಐ, ಕಸ್ಟಮ್ಸ್ ಸೇರಿದಂತೆ ವಿವಿಧ ಸರ್ಕಾರಿ ಇಲಾಖೆಗಳ ಅಧಿಕಾರಿಗಳ ಹೆಸರಿನಲ್ಲಿ ಕರೆ ಮಾಡಿ ಹಿರಿಯ ನಾಗರಿಕರನ್ನು ಬೆದರಿಸುವ ಪ್ರಕರಣಗಳು ಹೆಚ್ಚಾಗಿವೆ ಎಂದು ತಿಳಿಸಿದರು.

ನಿಮ್ಮ ಬ್ಯಾಂಕ್ ಖಾತೆ, ಆಧಾರ್ ಅಥವಾ ಮೊಬೈಲ್ ಸಂಖ್ಯೆಯನ್ನು ಅಪರಾಧ ಚಟುವಟಿಕೆಗಳಿಗೆ ಬಳಸಲಾಗಿದೆ ಎಂದು ಸುಳ್ಳು ಮಾಹಿತಿ ನೀಡಿ, ಜೀವನಪೂರ್ತಿ ದುಡಿದು ಸಂಪಾದಿಸಿದ ಹಣವನ್ನು ವಂಚಕರು ದೋಚುತ್ತಿದ್ದಾರೆ. ಇಂತಹ ವಂಚನೆಗಳಿಂದ ಹಿರಿಯ ನಾಗರಿಕರು ಜಾಗೃತರಾಗಿರಬೇಕು, ಎಂದರು.

ವಿಶ್ವ ಹಿರಿಯ ನಾಗರಿಕರ ಮೇಲಿನ ದೌರ್ಜನ್ಯ ತಡೆ ಜಾಗೃತಿ ದಿನದ ಮಹತ್ವವನ್ನು ಉಲ್ಲೇಖಿಸಿದ ತಳವಾರ, ಹಿರಿಯ ನಾಗರಿಕರಿಗೆ ಯಾವುದೇ ರೀತಿಯ ತೊಂದರೆ ಅಥವಾ ಕಳವಳ ಉಂಟಾಗದಂತೆ ನೋಡಿಕೊಳ್ಳುವುದು ಸಮಾಜದ ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದರು.

ಜೀವನಪೂರ್ತಿ ಶ್ರಮಪಟ್ಟು ಕುಟುಂಬ ಹಾಗೂ ಸಮಾಜದ ಅಭಿವೃದ್ಧಿಗೆ ತಮ್ಮ ಕೊಡುಗೆ ನೀಡಿರುವ ಹಿರಿಯರು ಸಂಪಾದಿಸಿದ ಹಣ, ಆಸ್ತಿ ಹಾಗೂ ಸಂಪತ್ತು ಅನ್ಯಾಯವಾಗಿ ಬೇರೆಯವರ ಪಾಲಾಗದಂತೆ ಎಚ್ಚರಿಕೆ ವಹಿಸಬೇಕು. ಪೊಲೀಸ್ ಹಾಗೂ ನ್ಯಾಯಾಂಗ ವ್ಯವಸ್ಥೆ ಇಂತಹ ಮೋಸದ ಜಾಲಗಳನ್ನು ಪತ್ತೆಹಚ್ಚಿ ಕ್ರಮ ಕೈಗೊಳ್ಳಲು ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿದೆ. ಆದಾಗ್ಯೂ ಡಿಜಿಟಲ್ ಅರೆಸ್ಟ್' ವಂಚನೆಗಳ ಬಗ್ಗೆ ಜನರು ಹೆಚ್ಚಿನ ಜಾಗೃತಿ ಹೊಂದಿರಬೇಕು, ಎಂದು ಹೇಳಿದರು.

ಹಿರಿಯ ಸಿವಿಲ್ ನ್ಯಾಯಾಧೀಶ ಕೆ.ಎಸ್. ಶಿವಕುಮಾರ, ವಕೀಲರ ಸಂಘದ ರಾಷ್ಟ್ರೀಯ ಉಪಾಧ್ಯಕ್ಷ ಎಂ.ವಿ. ಹಿರೇಮಠ, ನಿವೃತ್ತ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಸಿದ್ನಾಳ, ಕರ್ನಾಟಕ ಹಿರಿಯ ನಾಗರಿಕರ ಸಂಘದ ಅಧ್ಯಕ್ಷ ಎ.ವೈ. ಬೆಂಡಿಗೇರಿ, ನಾಮದೇವ ಬಿಲಕರ, ಸುಶೀಲಾ ರಜಪೂತ, ನಿರಲಗಿಮಠ, ಸವದಿ ಸೇರಿದಂತೆ ಇತರರು ಇದ್ದರು.

ಕಿರುಸುದ್ದಿ

ಖುಷಿ ಸಂಸ್ಥೆಯಿಂದ 5000 ಸಸಿಗಳ ಉಚಿತ ವಿತರಣೆ

• **ರಾಯಬಾಗ:** ಸ್ಥಳೀಯ ಖುಷಿ ಸಮಾಜ ಸೇವಾ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ತಾಲೂಕಿನ ಸುತ್ತಮುತ್ತಲಿನ ರೈತರಿಗೆ ಹಾಗೂ ಪಟ್ಟಣದ ಜನರಿಗೆ ಪರಿಸರ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಸುಮಾರು 5000 ವಿವಿಧ ರೀತಿಯ ಸಸಿಗಳನ್ನು ಉಚಿತವಾಗಿ ಹಂಚಲಾಯಿತು.

ನೇತೃತ್ವವನ್ನು ಖುಷಿ ಸಂಸ್ಥೆಯ ಅಧ್ಯಕ್ಷರಾದ ಭಾಗ್ಯಶ್ರೀ ಅನಿಲ ಶೆಟ್ಟಿ ಅವರು ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ರಾಯಬಾಗ ತಾಲೂಕು ದಂಡಾಧಿಕಾರಿಗಳಾದ (ತಹಶೀಲ್ದಾರ್) ಮಹಾದೇವ ಸನ್ನೂರಿ, ರಾಯಬಾಗ ಪೊಲೀಸ್ ಠಾಣೆಯ ಎಎಸ್ಐ ವಿಠ್ಠಲ ದೇವಮಾನೆ ಹಾಗೂ ಕೆನರಾ ಬ್ಯಾಂಕ್ ಮ್ಯಾನೇಜರ್ ಮಂಗೇಶ್ ಕುಮಾರ್ ಬೋರೆ ಅವರು ಉಪಸ್ಥಿತರಿದ್ದು, ಸಸಿಗಳನ್ನು ವಿತರಿಸುವ ಮೂಲಕ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಪ್ರಮುಖರಾದ ಅನಿಲ ಜೆ. ಶೆಟ್ಟಿ, ಯಲ್ಲಪ್ಪಾ ಶಮನೇವಾಡಿ, ಭೈರು ಮಾನಶಾಪುರ, ಭೀಮು ಚೌಗಲಾ, ರಾಜು ಹೀರೆ, ರಾಹುಲ್ ಶೆಟ್ಟಿ, ಅಕ್ಷಯ ಶೆಟ್ಟಿ, ಪ್ರವೀಣ್ ಬರಗಾಲೆ, ಗಜು ಪೂಜಾರಿ, ಕುಮಾರ್ ಹಡಪದ, ವಿಠ್ಠಲ ಹಡಗಿ ಇದ್ದರು.

ಅರ್ಜಿ ಆಹ್ವಾನ

• **ಬೆಳಗಾವಿ:** ತೋಟಗಾರಿಕೆ ಇಲಾಖೆಯಿಂದ 2026-27ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಹನಿ ನೀರಾವರಿ ಘಟಕಗಳಿಗೆ ಸಹಾಯಧನ ಪಡೆಯಲು ಅವಕಾಶವಿದ್ದು, ಯೋಜನೆಗಳ ಪ್ರಯೋಜನ ಪಡೆಯಲು ಆಸಕ್ತ ತೋಟಗಾರಿಕೆ ಬೆಳೆಗಾರರಿಂದ ಅರ್ಜಿ ಆಹ್ವಾನಿಸಲಾಗಿದೆ. ವಿವಿಧ ಬೆಳೆಗಳಾದ ಮಾವು, ಗೋಡಂಬಿ, ಬಾಳೆ, ರಾಮ್ ಬುತಾನ್, ಹೈಬ್ರಿಡ್ ತರಕಾರಿ ಪ್ರದೇಶ ವಿಸ್ತರಣೆ, ಹಳೆಯ ಮರಗಳ ಪುನಶ್ಚೇತನ, ಸಮಗ್ರ ಪೋಷಕಾಂಶಗಳ ನಿರ್ವಹಣೆ, ವೈಯಕ್ತಿಕ ಕೃಷಿ ಹೊಂಡ, ಪ್ಯಾಕ್ ಹೌಸ್, ಕಳೆ ಚಾಪೆ, ಫಾರ್ಮ್ ಗೇಟ್, ಪ್ಯಾಕ್ ಹೌಸ್, ತೋಟಗಾರಿಕೆಯಲ್ಲಿ ಯಾಂತ್ರೀಕರಣ, ಎರೆಹುಳು ಗೊಬ್ಬರ ಘಟಕಗಳಿಗೆ ಸಹಾಯ ಧನ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ರಾಷ್ಟ್ರೀಯ ಖಾದ್ಯ ತೈಲ ಅಭಿಯಾನದಡಿ ತಾಳೆ ಬೆಳೆ, ಪ್ರದೇಶ ವಿಸ್ತರಣೆ, ನಿರ್ವಹಣೆ, ಪಂಪಸೆಟ್/ಕೊಳವೆಬಾವಿಗಳಿಗೆ ಸಹಾಯಧನ, ಕೃಷಿ ಹೊಂಡ, ತಾಳೆ ಹಣ್ಣು ಕಟಾವು ಯಂತ್ರ, ಚಾಪ್ ಕಟರ್, ಟ್ರ್ಯಾಕ್ಟರ್/ಟ್ರಾಲಿ, ಅಂತರ ಬೆಳೆಗಳಿಗೆ ಸಹಾಯಧನ ಪಡೆಯಲು ಅವಕಾಶವಿದೆ. ಅರ್ಜಿ ಸಲ್ಲಿಸಲು ಜೂನ್ 30 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ರೈತ ಸಂಪರ್ಕ ಕೇಂದ್ರ, ಅಥವಾ ತೋಟಗಾರಿಕೆ ತಾಲ್ಲೂಕಾ ಕಚೇರಿಯನ್ನು ಸಂಪರ್ಕಿಸುವಂತೆ ಗೋಕಾಕ ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಲಾ ನಡಿಗೆ ನಿಮ್ಮ ಬಳಿಗೆ ಕಾರ್ಯಕ್ರಮ ಯಶಸ್ವಿ



• **ಬೆಳಗಾವಿ:** ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಭಾರತೀಯ ವಿಮಾನ ನಿಲ್ದಾಣ, ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ ಕಲಾ ನಡಿಗೆ ನಿಮ್ಮ ಬಳಿಗೆ ಕಾರ್ಯಕ್ರಮವು ಬೆಳಗಾವಿ ವಿಮಾನ ನಿಲ್ದಾಣದಲ್ಲಿ ಯಶಸ್ವಿಯಾಗಿ ನಡೆಯಿತು.

ಭಾರತೀಯ ವಿಮಾನ ನಿಲ್ದಾಣ, ಬೆಳಗಾವಿಯ ನಿರ್ದೇಶಕರಾದ ಎಸ್.ತ್ಯಾಗರಾಜನ್ ಉದ್ಘಾಟಿಸಿದರು. ಬೆಳಗಾವಿ ಪ್ರಾದೇಶಿಕ ಆಯುಕ್ತರ ಜಾನಕಿ ಕೆ ಎಮ್ ಅವರೂ ಕೂಡ ವೀರಗಾಸೆ ಭರತನಾಟ್ಯ ಪ್ರದರ್ಶನವನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕರಾದ ವಿದ್ಯಾವತಿ ಭಜಂತ್ರಿ ಉಪಸ್ಥಿತರಿದ್ದರು. ಸಾಂಸ್ಕೃತಿಕ ಕಾರ್ಯಕ್ರಮಗಳ ಅಂಗವಾಗಿ ಪ್ರಖ್ಯಾತ ಭರತನಾಟ್ಯ ಕಲಾವಿದೆ ರೇಖಾ ಹೆಗಡೆ ಅವರ ತಂಡದಿಂದ ಸಮೂಹ ಭರತನಾಟ್ಯ ಪ್ರದರ್ಶನ ನಡೆಯಿತು. ನಂತರ ನಾದಸುಧಾ ಸುಗಮ ಸಂಗೀತ ಅಕಾಡೆಮಿಯ ಸತ್ಯನಾರಾಯಣ ಹಾಗೂ ತಂಡದವರು ಸುಗಮ ಸಂಗೀತ ಕಾರ್ಯಕ್ರಮವನ್ನು ನಡೆಸಿಕೊಟ್ಟು ಪ್ರೇಕ್ಷಕರ ಮನಗೆದ್ದರು. ಇದೇ ವೇಳೆ ನಾಡಿನ ಹೆಮ್ಮೆಯ ಜನಪದ ಕಲಾವಿದ ಗುಳಪ್ಪ ವಿಜಯನಗರ ಅವರು ವೀರಗಾಸೆ ಪ್ರದರ್ಶನ ನೀಡುವ ಮೂಲಕ ಸಭಿಕರಿಂದ ಭಾರಿ ಮೆಚ್ಚುಗೆ ಪಡೆದರು. ಕಾರ್ಯಕ್ರಮದಲ್ಲಿ ಅನಿಲ್ ಬೇಕಲ್ (ಎಲೆಕ್ಟ್ರಿಕ್ ಇನ್ಚಾರ್ಜ) ಹಾಗೂ ಲಕ್ಷ್ಮಿ (ಮ್ಯಾನೇಜರ್) ಉಪಸ್ಥಿತರಿದ್ದರು. ಕಲಾ, ಸಂಸ್ಕೃತಿ ಮತ್ತು ಜನಪದ ಪರಂಪರೆಯ ವೈಭವವನ್ನು ಅನಾವರಣಗೊಳಿಸಿದ ಈ ಕಾರ್ಯಕ್ರಮವು ಪ್ರೇಕ್ಷಕರಿಂದ ಉತ್ತಮ ಸ್ಪಂದನೆ ಪಡೆದು ಯಶಸ್ವಿಯಾಗಿ ಸಂಪನ್ನಗೊಂಡಿತು.



ರಾಯಬಾಗ: ಸ್ಥಳೀಯ ಖುಷಿ ಸಮಾಜ ಸೇವಾ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ತಾಲೂಕಿನ ಸುತ್ತಮುತ್ತಲಿನ ರೈತರಿಗೆ ಹಾಗೂ ಪಟ್ಟಣದ ಜನರಿಗೆ ಪರಿಸರ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಸುಮಾರು 5000 ವಿವಿಧ ರೀತಿಯ ಸಸಿಗಳನ್ನು ಉಚಿತವಾಗಿ ಹಂಚಲಾಯಿತು.

ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ

• **ಬೆಳಗಾವಿ:** ಗ್ರಾಮೀಣ ಕ್ಷೇತ್ರದ ಶಾಸಕಿ ಲಕ್ಷ್ಮೀ ಹೆಬ್ಬಾಳ್ಕರ್ ಶನಿವಾರ ವಿವಿಧ ಗ್ರಾಮಗಳಲ್ಲಿ ರಸ್ತೆ, ಚರಂಡಿ, ಸೇತುವೆ ಹಾಗೂ ಧಾರ್ಮಿಕ ಕಟ್ಟಡ ನಿರ್ಮಾಣ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಚಾಲನೆ ನೀಡಿದರು. ಜೊತೆಗೆ ದೇವಸ್ಥಾನ ನಿರ್ಮಾಣಕ್ಕಾಗಿ ಅನುದಾನದ ಚೆಕ್ ನ್ನು ಹಸ್ತಾಂತರಿಸಿದರು.

ಮೊದಲಿಗೆ ಬಡಸ್ ಗ್ರಾಮದಿಂದ ಬೀದರಗಡ್ಡಿಗೆ ಸಂಪರ್ಕ ಕಲ್ಪಿಸುವ ರಸ್ತೆ ಕಾಮಗಾರಿಗೆ ಗ್ರಾಮಸ್ಥರ ಸಮ್ಮುಖದಲ್ಲಿ ಭೂಮಿ ಪೂಜೆ ನೆರವೇರಿಸಿ ಚಾಲನೆ ನೀಡಿದರು.

ಸುಮಾರು 1.12 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ರಸ್ತೆ ಗ್ರಾಮೀಣ ಜನರ ಸಂಚಾರ, ಕೃಷಿ ಉತ್ಪನ್ನಗಳ ಸಾಗಣೆ ಹಾಗೂ ಸ್ಥಳೀಯ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಕಾಮಗಾರಿಯನ್ನು ಗುಣಮಟ್ಟದಿಂದ ಮತ್ತು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಅವರು ಸೂಚನೆ ನೀಡಿದರು.

ಇದಾದ ಬಳಿಕ ಬೆಂಡಿಗೇರಿ ಗ್ರಾಮದಲ್ಲಿ ಸುಮಾರು 1.05 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ರಸ್ತೆ ಹಾಗೂ ಚರಂಡಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಚಾಲನೆ ನೀಡಿದರು. ಬಳಿಕ ಅರಳೀಕಟ್ಟಿ ಗ್ರಾಮದಲ್ಲಿ ಸುಮಾರು 1 ಕೋಟಿ ರೂ.ಗಳ ವೆಚ್ಚದಲ್ಲಿ ನೂತನವಾಗಿ ನಿರ್ಮಾಣಗೊಳ್ಳಲಿರುವ ಶ್ರೀ ಬಸವೇಶ್ವರ ದೇವಸ್ಥಾನದ ಕಟ್ಟಡ ಕಾಮಗಾರಿಗಾಗಿ ಮೂರನೇ ಕಂತಿನ 20 ಲಕ್ಷ ರೂ.ಗಳ ಚೆಕ್ ನ್ನು ಲಕ್ಷ್ಮೀ ಹೆಬ್ಬಾಳ್ಕರ್ ಹಸ್ತಾಂತರಿಸಿದರು. ಗ್ರಾಮದ ತೋಂಟದಾರ್ಯ ವಿರಕ್ತ ಮಠದ ಶಿವಮೂರ್ತಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.



ಬೆಳಗಾವಿ: ಗ್ರಾಮೀಣ ಕ್ಷೇತ್ರದ ಶಾಸಕಿ ಲಕ್ಷ್ಮೀ ಹೆಬ್ಬಾಳ್ಕರ್ ಶನಿವಾರ ವಿವಿಧ ಗ್ರಾಮಗಳಲ್ಲಿ ರಸ್ತೆ, ಚರಂಡಿ, ಸೇತುವೆ ಹಾಗೂ ಧಾರ್ಮಿಕ ಕಟ್ಟಡ ನಿರ್ಮಾಣ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಚಾಲನೆ ನೀಡಿದರು. ಜೊತೆಗೆ ದೇವಸ್ಥಾನ ನಿರ್ಮಾಣಕ್ಕಾಗಿ ಅನುದಾನದ ಚೆಕ್‌ನ್ನು ಹಸ್ತಾಂತರಿಸಿದರು.

ಪ್ರಧಾನ ಜಿಲ್ಲಾ ಮತ್ತು ಸತ್ರನ್ಯಾಯಾಧೀಶ ಮಂಜುನಾಥ ನಾಯಕರಿಂದ ಚಾಲನೆ

ಕಾಯಂ ನ್ಯಾಯಾಲಯ ಸ್ಥಾಪನೆ

• **ಯರಗಟ್ಟಿ:** ಪಟ್ಟಣದಸಂಚಾರಿ ನ್ಯಾಯಾಲಯವನ್ನು ಕಾಯಂ ನ್ಯಾಯಾಲಯ ಸ್ಥಾಪನೆಗೆ ಆದೇಶ ಹಿನ್ನೆಲೆಯಲ್ಲಿ ಸೋಮವಾರ ಪ್ರಧಾನ ಜಿಲ್ಲಾ ಮತ್ತು ಸತ್ರನ್ಯಾಯಾಧೀಶ ಮಂಜುನಾಥ ನಾಯಕ ಅವರು ರಿಬ್ಬನ್ ಕತ್ತರಿಸುವ ಮೂಲಕ ಚಾಲನೆ ನೀಡಿದರು.

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ತಾಲೂಕಿನ ನ್ಯಾಯಾಂಗವ್ಯವಸ್ಥೆಯನ್ನು ಬಲಪಡಿಸುವ ಮಹತ್ವದ ಹೆಜ್ಜೆಯಾಗಿ, ಉಚ್ಚನ್ಯಾಯಾಲಯವು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಂಚಾರಿ ನ್ಯಾಯಾಲಯ (ಸರ್ಕ್ಯೂಟ್ ಕೋರ್ಟ್) ವ್ಯವಸ್ಥೆಯನ್ನು ಸ್ಥಗಿತಗೊಳಿಸಿ, ಖಾಯಂ ನ್ಯಾಯಾಲಯ ಸ್ಥಾಪನೆಗೆ ಆದೇಶ ಹೊರಡಿಸಿದೆ ಎಂದು ಹೇಳಿದರು.

ಆದೇಶದ ಅನ್ವಯ, ಇನ್ಮುಂದೆ ಯರಗಟ್ಟಿಯಲ್ಲಿ ಕಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಹಾಗೂ ನ್ಯಾಯಾಂಗ ದಂಡಾಧಿಕಾರಿ ಪ್ರಥಮ ದರ್ಜೆ (ಜೆಎಂಎಫ್) ನ್ಯಾಯಾಲಯಗಳ ದೈನಂದಿನ ನಿಯಮಿತ ಕಲಾಪಗಳು ನಡೆಯಲಿವೆ ಎಂದು ತಿಳಿಸಿವೆ.

ಯರಗಟ್ಟಿ ನ್ಯಾಯಾಂಗ ಇತಿಹಾಸದಲ್ಲಿ ಇದು ಮಹತ್ವದ ಮೈಲುಗಲ್ಲು. ಸಂಚಾರಿ ನ್ಯಾಯಾಲಯದ ಅನಿಶ್ಚಿತತೆಗೆ ಅಂತ್ಯವಾಗಿದ್ದು, ಖಾಯಂ ನ್ಯಾಯಾಲಯದ ಸ್ಥಾಪನೆಯಿಂದ ನ್ಯಾಯ ವಿತರಣಾ ವ್ಯವಸ್ಥೆ ಇನ್ನಷ್ಟು ಪರಿಣಾಮಕಾರಿಯಾಗಲಿದೆ ಎಂದು ತಾಲೂಕು ವಕೀಲರ ಸಂಘದ ಅಧ್ಯಕ್ಷ ಎಸ್. ಆರ್. ರೆಬ್ಬನ್ನವರ ಹೇಳಿದರು.

ಸಾಮಾನ್ಯ ಜನರಿಂದಲೂ ಈ ಕ್ರಮಕ್ಕೆ ಹರ್ಷ ವ್ಯಕ್ತವಾಗಿದ್ದು, ನ್ಯಾಯಾಲಯದ ಕಾರ್ಯಗಳಿಗೆ ದೂರ ಪ್ರಯಾಣಿಸುವ ತೊಂದರೆ ಕಡಿಮೆಯಾಗಲಿದ್ದು, ಪ್ರಕರಣಗಳ ತ್ವರಿತ ವಿಚಾರಣೆ ಸಾಧ್ಯವಾಗಲಿದೆ ಎಂಬ ನಿರೀಕ್ಷೆ ವ್ಯಕ್ತವಾಗಿದೆ. ಒಟ್ಟಾರೆ, ಯರಗಟ್ಟಿಯಲ್ಲಿ ಖಾಯಂ ನ್ಯಾಯಾಲಯ ಸ್ಥಾಪನೆ ನ್ಯಾಯದ ಲಭ್ಯತೆಯನ್ನು ವಿಸ್ತರಿಸುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಯಾಗಿ ಪರಿಗಣಿಸಲಾಗಿದೆ.

ಈ ವೇಳೆ ಯರಗಟ್ಟಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರಾದ ಕೃಷ್ಣಪ್ಪ ಪಮ್ಮಾರ, ಸರಕಾರಿ ವಕೀಲರಾದ ಮಂಜುನಾಥ ಸನ್ನಿಂಗನ್ನವರ, ತಹಶೀಲ್ದಾರ ಎಂ. ವ್ಹಿ. ಗುಂಡಪ್ಪಗೋಳ, ಸಿಪಿಐ ಐ. ಎಂ. ಪಠಪತಿ, ವಕೀಲರ ಸಂಘದ ಉಪಾಧ್ಯಕ್ಷ ವ್ಹಿ. ಜಿ. ಬಿರಾದಾರಪಾಟೀಲ, ನ್ಯಾಯವಾದಿಗಳಾದ ಸಿ. ಬಿ.ಯಡಹಳ್ಳಿ, ವಾಯ್. ಬಿ. ನರಿ, ಎಂ. ಎಂ. ಮಡಿವಾಳರ, ಆರ್. ಎಸ್. ಆಲದಕಟ್ಟಿ, ಬಿ. ಎ. ಜಮಾದಾರ, ಎಸ್. ಎನ್. ರಾಯರ, ಎಸ್. ವ್ಹಿ. ಶಿರಹಟ್ಟಿಮಠ, ಎಸ್. ವ್ಹಿ. ಮಾಳಕ್ಕನವರ, ರೇವತಿ ಪಾಟೀಲ, ಎಮ್. ಎಸ್. ಪಚ್ಚಿನವರ, ಎನ್. ಎಸ್. ನಾಯ್ಕರ, ವ್ಹಿ. ಬಿ. ಹೊಸಮನಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



> ತಾಲೂಕಿನ ಜನತೆಗೆ ನ್ಯಾಯಾಂಗ ಸೇವೆಗಳು ಸ್ಥಳೀಯ ಮಟ್ಟದಲ್ಲೇ ನಿರಂತರವಾಗಿ ಲಭ್ಯವಾಗಲಿದ್ದು, ನ್ಯಾಯ ಸಿಗುವುದು ಇನ್ನಷ್ಟು ಸುಗಮವಾಗಲಿದೆ.
> ■ ಮಂಜುನಾಥ ನಾಯಕ, ಪ್ರಧಾನ ಜಿಲ್ಲಾ ಮತ್ತು ಸತ್ರನ್ಯಾಯಾಧೀಶ

- ಯರಗಟ್ಟಿ ನ್ಯಾಯಾಂಗ ಇತಿಹಾಸದಲ್ಲಿ ಮಹತ್ವದ ಮೈಲುಗಲ್ಲು.
- ನ್ಯಾಯಾಲಯದ ಕಾರ್ಯಗಳಿಗೆ ದೂರ ಪ್ರಯಾಣಿಸುವ ತೊಂದರೆ ಕಡಿಮೆಯಾಗಲಿದ್ದು, ಪ್ರಕರಣಗಳ ತ್ವರಿತ ವಿಚಾರಣೆ ಸಾಧ್ಯವಾಗಲಿದೆ

ರಾಸಿಂಗೆ ಉಚ್ಛಾಟನೆಗೆ ದಲಿತ ಮುಖಂಡರ ಆಗ್ರಹ

• **ಬೆಳಗಾವಿ:** ಸಚಿವ ಸತೀಶ ಜಾರಕಿಹೊಳಿ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದ ಅಂಬೇಡ್ಕರ್ ಜನಜಾಗೃತಿ ವೇದಿಕೆಯ ಜಿಲ್ಲಾ ಗೌರವಾಧ್ಯಕ್ಷ ಮಲ್ಲಿಕಾರ್ಜುನ ಜಯರಾಮ ರಾಸಿಂಗೆ ಅವರನ್ನು ತಕ್ಷಣವೇ ಸಂಘಟನೆಯಿಂದ ಹಾಗೂ ಕಾಂಗ್ರೆಸ್ ಪಕ್ಷದಿಂದ ಉಚ್ಛಾಟಿಸಬೇಕು ಎಂದು ಬೆಳಗಾವಿಯ ಪ್ರಮುಖ ದಲಿತ ಮುಖಂಡರು ಆಗ್ರಹಿಸಿದರು.

ಸೋಮವಾರ ನಗರದ ಸರ್ಕಿಟ್ ಹೌಸ್‌ನಲ್ಲಿ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಲಿತ ಮುಖಂಡರು, ಸಚಿವ ಸತೀಶ್ ಜಾರಕಿಹೊಳಿ ಅವರ ಹೆಸರನ್ನು ನೇರವಾಗಿ ಉಲ್ಲೇಖಿಸದೆ, ನಮ್ಮ ನಾಯಕರ ಬಗ್ಗೆ ಅತ್ಯಂತ ಹಗುರವಾಗಿ ಮಾತನಾಡಿರುವುದನ್ನು ನಾವು ಬಲವಾಗಿ ಖಂಡಿಸುತ್ತೇವೆ ಎಂದು ಹೇಳಿದರು.

ಅಂಬೇಡ್ಕರ್ ಜನಜಾಗೃತಿ ವೇದಿಕೆಯ ಜಿಲ್ಲಾ ಗೌರವಾಧ್ಯಕ್ಷ ಮಲ್ಲಿಕಾರ್ಜುನ ಜಯರಾಮ ರಾಸಿಂಗೆ ಅವರು ಇತ್ತೀಚೆಗೆ ನೀಡಿದ ವಿವಾದಾತ್ಮಕ ಹೇಳಿಕೆಯಿಂದ ದಲಿತ ಸಂಘಟನೆಗಳ ವಲಯದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಅಲ್ಲದೇ ರಾಸಿಂಗೆ ಹಿಂದೆ ಹತ್ತು ಜನ ಬೆಂಬಲಿಗರೂ ಇಲ್ಲ. ಅವನಿಗೂ ಚಲುವಾದಿ ಸಮಾಜಕ್ಕೂ ಯಾವುದೇ ಸಂಬಂಧವಿಲ್ಲ. ಕಾಂಗ್ರೆಸ್ ಪಕ್ಷದಿಂದ ಉಚ್ಛಾಟಿಸಬೇಕು ಎಂದು ಆಗ್ರಹಿಸಿದರು.

ಇದೇ ಸಂದರ್ಭದಲ್ಲಿ ಮುಖಂಡರಾದ ಮಹಾವೀರ ಮೋಹಿತೆ ಹಾಗೂ ಮಲ್ಲೇಶ ಚೌಗಲಾ ಮಾತನಾಡಿದರು.

ಮಲ್ಲಿಕಾರ್ಜುನ ರಾಸಿಂಗೆ ಅವರು ತಕ್ಷಣವೇ ತಮ್ಮ ಹೇಳಿಕೆಯನ್ನು ವಾಪಸ್ ಪಡೆದು, ಬಹಿರಂಗವಾಗಿ ಕ್ಷಮೆಯಾಚಿಸಬೇಕು ಎಂದು ದಲಿತ ಮುಖಂಡರು ಎಚ್ಚರಿಕೆ ನೀಡಿದ್ದಾರೆ.

ಈ ವೇಳೆ ಬಿಡಿಸಿಸಿ ಬ್ಯಾಂಕ್ ನಿರ್ದೇಶಕಿ ಸುನೀತಾ ಐಹೊಳೆ, ಕೆಂಪಣ್ಣ ಸಿರಹಟ್ಟಿ, ಮಹಾದೇವ ತಳವಾರ, ಬಾಹುಸಾಬ ಪಾಂಡರೆ, ವಿಕ್ರಂ ಕರನಿಂಗ, ಸಂಜೀವ ಕಾಂಬಳೆ, ಶಾನುರ ತಹಶೀಲ್ದಾರ್ ಸೇರಿದಂತೆ ಬೆಳಗಾವಿ ಜಿಲ್ಲೆಯ ವಿವಿಧ ದಲಿತ ಸಂಘಟನೆಗಳ ಪ್ರಮುಖ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.



ಖಾಸಗೀಕರಣ ವಿರೋಧಿಸಿ ಆಕ್ರೋಶ

• **ಬೈಲಹೊಂಗಲ:** ಕೆಇಬಿ (ಹೆಸ್ಕಾಂ) ನಿವೃತ್ತ ನೌಕರರ ಸಂಘ ಸ್ಥಾಪನೆಯಾಗಿ 80 ವರ್ಷಗಳು ಪೂರ್ಣಗೊಂಡ ಹಿನ್ನೆಲೆಯಲ್ಲಿ ನಗರದ ಹೊಸೂರ ರಸ್ತೆಯಲ್ಲಿರುವ ವಿಜಯ ಸೋಶಿಯಲ್ ಕ್ಲಬ್ಬಿನಲ್ಲಿ ಭಾನುವಾರ ನಿವೃತ್ತ ನೌಕರರ ಸನ್ಮಾನ ಸಮಾರಂಭವನ್ನು ಅರ್ಥಪೂರ್ಣವಾಗಿ ಆಯೋಜಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿವೃತ್ತ ನೌಕರರ ಸಂಘದ ಉಪಾಧ್ಯಕ್ಷ ಎನ್.ಟಿ. ಹಾವೇರಿ, ನಿವೃತ್ತ ನೌಕರರು ಸಂಘಟಿತರಾಗಿ ಕಾರ್ಯ ನಿರ್ವಹಿಸುವ ಅಗತ್ಯವಿದೆ ಎಂದು ಹೇಳಿದರು. ಹೆಸ್ಕಾಂ ಸಂಸ್ಥೆಯನ್ನು ಖಾಸಗೀಕರಣಗೊಳಿಸುವ ಯಾವುದೇ ಪ್ರಯತ್ನ ನಡೆದರೆ ಅದರ ವಿರುದ್ಧ ಸಂಘದ ಸದಸ್ಯರು ಒಗ್ಗಟ್ಟಿನಿಂದ ಹೋರಾಟ ನಡೆಸಲು ಸಜ್ಜಾಗಿರಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಕೆಇಬಿ (ಹೆಸ್ಕಾಂ) ನಿವೃತ್ತ ನೌಕರರ ಸಂಘದ ಬೈಲಹೊಂಗಲ ಘಟಕದ ಅಧ್ಯಕ್ಷ ವಿಠ್ಠಲ ಬಡ್ಲಿ ಮಾತನಾಡಿ, ಬಲಿಷ್ಠ ಸಂಘಟನೆಯಿಂದ ಸದಸ್ಯರ ವಿವಿಧ ಸಮಸ್ಯೆಗಳಿಗೆ ತ್ವರಿತ ಪರಿಹಾರ ದೊರೆಯುತ್ತದೆ ಎಂದು ತಿಳಿಸಿದರು. ಹೆಸ್ಕಾಂ ಖಾಸಗೀಕರಣಗೊಂಡರೆ ಭವಿಷ್ಯದಲ್ಲಿ ಪಿಂಚಣಿ ಸೇರಿದಂತೆ ನಿವೃತ್ತ ನೌಕರರ ಹಕ್ಕುಗಳಿಗೆ ಧಕ್ಕೆಯಾಗುವ ಸಾಧ್ಯತೆ ಇರುವುದರಿಂದ ಎಲ್ಲರೂ ಎಚ್ಚರಿಕೆಯಿಂದ ಇರಬೇಕು ಎಂದರು.

ಸಂಘದ ಸದಸ್ಯರ ನಿಧನದ ಸಂದರ್ಭದಲ್ಲಿ ಅವರ ಕುಟುಂಬಕ್ಕೆ ಸಂಘದ ವತಿಯಿಂದ ಮರಣೋತ್ತರ ನಿಧಿ ವಿತರಿಸುವ ಯೋಜನೆ ಮುಂದುವರಿಯಲಿದ್ದು, ಸಂಕಷ್ಟದ ಸಮಯದಲ್ಲಿ ಸಂಘವು ಸದಸ್ಯರ ಕುಟುಂಬಗಳ ಬೆಂಬಲಕ್ಕೆ ನಿಲ್ಲಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಂಘದ ಹಿರಿಯ ನಿವೃತ್ತ ನೌಕರರನ್ನು ಸನ್ಮಾನಿಸಿ ಗೌರವಿಸಲಾಯಿತು. ಇದೇ ವೇಳೆ ಹೆಸ್ಕಾಂ ಖಾಸಗೀಕರಣ ವಿರೋಧಿಸಿ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿವೃತ್ತ ನೌಕರರ ಸಂಘದ ಸಂಘಟನಾ ಕಾರ್ಯದರ್ಶಿ ಎಂ.ಜಿ. ಕೋಟೂರ, ಎಸ್. ಆರ್. ಯರಗಂಬಳಿಮಠ, ಕೆ.ಪಿ. ರಾಮಗುಂಡಿ, ಎಸ್.ವಿ. ದೇವನಾಳ, ಆರ್.ಎಸ್. ಜಂಬಗಿ, ಕೆ.ಆರ್. ನಡಮನಿ, ಎಂ.ಟಿ. ಸೂರಿ, ಜೆ.ಎಸ್. ಗಣಾಚಾರಿ, ಎ.ಎಫ್. ನದಾಫ್, ಶಂಕ್ರೆಪ್ಪ ಉಳವಿ, ನಿಂಗಪ್ಪ ತೋಟಗಿ, ಎಚ್.ಎನ್. ಚವಡಕಿ ಸೇರಿದಂತೆ ಸಂಘದ ಪದಾಧಿಕಾರಿಗಳು, ಸದಸ್ಯರು ಹಾಗೂ ಗಣ್ಯರು ಉಪಸ್ಥಿತರಿದ್ದರು. ಶಿವನಗೌಡ ಚಾಪಗಾಂವ ಸ್ವಾಗತಿಸಿದರು. ಎಂ.ಎಫ್. ಗೊರವನಕೊಳ್ಳ ಕಾರ್ಯಕ್ರಮ ನಿರೂಪಿಸಿದರು. ಮುತ್ನಾಳ ವಂದಿಸಿದರು.



ಯುವಕ ಸಂಘಗಳ ಮೂಲಕ ಒಂದು ಸಾವಿರ ಗಿಡ ನೆಡುವ ಸಂಕಲ್ಪ

• **ಮೂಡಲಗಿ:** ಸಕಾಲಕ್ಕೆ ಮಳೆ ಮತ್ತು ಸಮೃದ್ಧ ಪರಿಸರಕ್ಕಾಗಿ ಮರಗಿಡಗಳನ್ನು ಬೆಳೆಸುವುದು ಪ್ರತಿಯೊಬ್ಬರ ಜವಾಬ್ದಾರಿ. ಪರಿಸರವನ್ನು ಉಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ, ಎಂದು ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟದ ಬೆಳಗಾವಿ ಜಿಲ್ಲಾಧ್ಯರು ಹಾಗೂ ಪರಿಸರ ಪ್ರೇಮಿ ಸಿದ್ದಣ್ಣ ದುರದುಂಡಿ ಹೇಳಿದರು.

ನಗರದ ಮಂಜುನಾಥ ಸೈನಿಕ ತರಬೇತಿ ಕೇಂದ್ರದಲ್ಲಿ ಭಾರತ ಸರ್ಕಾರದ ಯುವ ಕಾರ್ಯ ಹಾಗೂ ಕ್ರೀಡಾ ಸಚಿವಾಲಯ, ಮೈ ಭಾರತ ಕೇಂದ್ರ ಬೆಳಗಾವಿ, ಜೈ ಕರ್ನಾಟಕ ಅಂಗವಿಕಲರ ಗ್ರಾಮೀಣ ಅಭಿವೃದ್ಧಿ ಸಂಘ ಹಳ್ಳೂರ ಹಾಗೂ ಸಂಕಲ್ಪ ಕ್ರೀಡಾ ಮತ್ತು ಸಮಾಜ ಸೇವಾ ಸಂಘಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ 'ವಿಶ್ವ ಪರಿಸರ ದಿನಾಚರಣೆ' ಶಿಬಿರಾರ್ಥಿಗಳಿಗೆ ಸಸಿ ವಿತರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು,

ಸಂಕಲ್ಪ ಕ್ರೀಡಾ ಮತ್ತು ಸಮಾಜ ಸೇವಾ ಸಂಘದ ಅಧ್ಯಕ್ಷ ಸುಭಾಸ ಗೊಡ್ಯಾಗೋಳ ಮಾತನಾಡಿ, ''ಇಂದಿನ ದಿನಮಾನದಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಮನೆಗಳ ನಿರ್ಮಾಣಕ್ಕಾಗಿ ಪರಿಸರವನ್ನು ನಾಶ ಮಾಡಲಾಗುತ್ತಿದೆ. ಇದರಿಂದ ಮಳೆಯ ಪ್ರಮಾಣ ಕಡಿಮೆಯಾಗುತ್ತಿದ್ದು, ಪ್ರಾಣಿ-ಪಕ್ಷಿಗಳು ನೀರು ಮತ್ತು ಗಾಳಿಯಿಲ್ಲದೆ ಸಂಕಷ್ಟ ಅನುಭವಿಸುತ್ತಿವೆ. ಮನುಷ್ಯ ಇನ್ನಾದರೂ ಎಚ್ಚೆತ್ತುಕೊಂಡು ಪರಿಸರ ಉಳಿಸುವ ವ್ಯವಸ್ಥೆಯನ್ನು ಮಾಡಬೇಕಿದೆ,'' ಎಂದು ಎಚ್ಚರಿಸಿದರು.



ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಲಕ್ಷ್ಮಣ ಅಡಿಹುಡಿ ಮಾತನಾಡಿದರು.

ಈ ಸಂದರ್ಭದಲ್ಲಿ ಶಿಲ್ಪಾ ಗಡಾದ ಶಿಕ್ಷಕ ರವಿ ಕರಿಗಾರ,ಹಣಮಂತ ಅಂಗಡಿ, ಮಾರುತಿ ಸಿಂಧೆ, ಅಭಿಷೇಕ್ ಕಟ್ಟಿಮನಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ನಾಳೆ ಅಥರ್ವ ಕಾಲೇಜಿಗೆ ರಾಷ್ಟ್ರಸಂತ ನಿರ್ಭಯಾನಂದ ಶ್ರೀ

• **ಮೂಡಲಗಿ:** ನಾಗನೂರ ಪಟ್ಟಣದ ಅಥರ್ವ ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯಕ್ಕೆ ಬುಧವಾರ ಜೂ.17 ರಂದು ಗದಗ ಹಾಗೂ ವಿಜಯಪುರ ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ಸ್ವಾಮಿ ನಿರ್ಭಯಾನಂದ ಸರಸ್ವತೀ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಉಪನ್ಯಾಸ ನೀಡಲಿದ್ದಾರೆ ಎಂದು ಸಂಸ್ಥೆಯ ಅಧ್ಯಕ್ಷ ವೆಂಕಟೇಶ ಜಂಬಗಿ ತಿಳಿಸಿದ್ದಾರೆ.



ಪತ್ರಿಕಾ ಪ್ರಕಟಣೆ ಮೂಲಕ ಈ ವಿಷಯ ತಿಳಿಸಿದ ಅವರು ಮಹಾವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ಅಥರ್ವ ತೇಜಸ್ವಿಭವಃ-2026 ಎಂಬ ವಿಶೇಷ ಉಪನ್ಯಾಸ ಕಾರ್ಯಾಗಾರ ಏರ್ಪಡಿಸಲಾಗಿದ್ದು, ಬೆಳಿಗ್ಗೆ 9.30 ರಿಂದ ಸಂಜೆ 4.30ರವರೆಗೆ ನಡೆಯುವ ಈ ಕಾರ್ಯಾಗಾರವನ್ನು ವಿಧಾನ ಪರಿಷತ್ ಸದಸ್ಯ ಹಣಮಂತ ನಿರಾಣಿ ಉದ್ಘಾಟಿಸಲಿದ್ದಾರೆ. ಬೆಂಗಳೂರಿನ ಸೀಕ್ ಕೌಶಲ್ಯ ತರಬೇತಿ ಸಂಸ್ಥೆಯ ಅಧ್ಯಕ್ಷ ಹಾಗೂ ಹಿರಿಯ ಶಿಕ್ಷಣತಜ್ಞ ರಘೋತ್ತಮ ರಾವ್ ಮಧ್ಯಾಹ್ನದ ಅವಧಿಗೆ ಉಪನ್ಯಾಸ ನೀಡಲಿದ್ದಾರೆ.

ಕಾರ್ಯಾಗಾರದ ಅಧಕ್ಷತೆಯನ್ನು ಮಹಾಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಸನಗೌಡ ಪಾಟೀಲ ವಹಿಸಲಿದ್ದಾರೆ. ಪ್ರಾಚಾರ್ಯ ಗಿರೀಶ ಗೋರಬಾಳ ನಿರ್ದೇಶಕರಾದ ಡಾ. ಸಂತೋಷ ಮಿರ್ಜಿ, ಚೇತನ ಜೋಗನ್ನವರ, ಆಶೀರ್ವಾದ ಹುಲಕುಂದ ಉಪಸ್ಥಿತರಿಲಿದ್ದಾರೆ.

- ವಿದ್ಯಾರ್ಥಿಗಳಿಗೆ ತೇಜಸ್ವಿಭವಃ ವಿಶೇಷ ಕಾರ್ಯಾಗಾರ
- ವಿ.ಪ. ಸದಸ್ಯ ಹಣಮಂತ ನಿರಾಣಿ ಅವರಿಂದ ಚಾಲನೆ

ವಿದ್ಯಾರ್ಥಿ ಜೀವನದಲ್ಲಿ ಅಧ್ಯಯನದಲ್ಲಿ ಏಕಾಗ್ರತೆ, ಶಿಸ್ತು, ನೈತಿಕತೆ, ರಾಷ್ಟ್ರಭಕ್ತಿ, ಭವಿಷ್ಯದ ಅವಕಾಶಗಳ ಮಾರ್ಗದರ್ಶನ ನೀಡುವ ನಿಟ್ಟಿನಲ್ಲಿ ಈ ಕಾರ್ಯಾಗಾರ ಅತ್ಯಂತ ಮಹತ್ವನಿಸಿದ್ದು, ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳ ಜೊತೆಗೆ ಈ ಭಾಗದ 200ಕ್ಕೂ ಅಧಿಕ ಶಿಕ್ಷಣಪ್ರೇಮಿಗಳು, ಸಾಹಿತಿಗಳು ಹಾಗೂ ಆಧ್ಯಾತ್ಮಿಕ ಚಿಂತಕರು ಈ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ ಎಂದು ಹೇಳಿದರು.

ಗೋಡೆ ನಿರ್ಮಾಣ ಪೂರ್ಣಗೊಳಿಸಲು ಆಗ್ರಹಿಸಿ ಗ್ರಾಪಂಗೆ ಬೀಗ

• **ತೆಲಸಂಗ:** ಗ್ರಾಮದಲ್ಲಿ ಕಳೆದ ಹತ್ತು ವರ್ಷಗಳಿಂದ ಅರ್ಧಕ್ಕೆ ನಿಂತಿರುವ ಗೋಡೆ ನಿರ್ಮಾಣ ಕಾಮಗಾರಿಯನ್ನು ತಕ್ಷಣವೇ ಪೂರ್ಣಗೊಳಿಸಬೇಕೆಂದು ಆಗ್ರಹಿಸಿ, ಗ್ರಾಮದ ಮಹಿಳೆಯರು ಗ್ರಾಮ ಪಂಚಾಯತಿ ಕಾರ್ಯಾಲಯಕ್ಕೆ ಬೀಗ ಹಾಕಿ ಭಾರಿ ಪ್ರತಿಭಟನೆ ನಡೆಸಿದ ಘಟನೆ ಸೋಮವಾರ ನಡೆಯಿತು.

ಗ್ರಾಮದ ಮಹಿಳೆಯರು ಶೌಚಾಲಯಕ್ಕಾಗಿ ಬಳಸುವ ಜಾಗದ ಸುತ್ತಲೂ ಕೇವಲ ನೂರು ಮೀಟರ್‌ನಷ್ಟು ಗೋಡೆ ನಿರ್ಮಿಸುವ ಕೆಲಸ ದಶಕದಿಂದ ನೆನೆಗುದಿಗೆ ಬಿದ್ದಿದೆ. ಹತ್ತು ವರ್ಷಗಳು ಉರುಳಿದರೂ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಕೇವಲ ನೂರು ಮೀಟರ್ ಗೋಡೆ ಕಟ್ಟಲು ಸಾಧ್ಯವಾಗಿಲ್ಲ. ಇದು ಮಹಿಳೆಯರ ಘನತೆ ಮತ್ತು ಮಾನ ಕಾಯದ ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ ಎಂದು ಪ್ರತಿಭಟನಾಕಾರರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಈ ಹಿಂದೆ ಸಂಬಂಧಪಟ್ಟ ಅಧಿಕಾರಿಗಳಿಗೆ ಅದೆಷ್ಟೋ ಬಾರಿ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ, ಇದರಿಂದ ಬೇಸತ್ತ ಮಹಿಳೆಯರು, ಇನ್ನು ಮುಂದೆ ನಮಗೆ ಕೇವಲ ಆಶ್ವಾಸನೆಗಳು ಬೇಡ, ಸ್ಥಳದಲ್ಲೇ ಕಾಮಗಾರಿ ಆರಂಭವಾಗಬೇಕು. ಅಲ್ಲಿಯವರೆಗೆ ಪಂಚಾಯತಿ ಬೀಗ ತೆಗೆಯುವುದಿಲ್ಲ ಎಂದು ಪಟ್ಟು ಹಿಡಿದು ಕಚೇರಿಯ ಮುಂಭಾಗದಲ್ಲೇ ಧರಣಿ ಕುಳಿತರು. ದೂರವಾಣಿ ಮೂಲಕ ಮಾತನಾಡಿದ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಬೀರಪ್ಪಾ ಕಡಗಂಚಿ ಅವರು, ತಾಂತ್ರಿಕ ಕಾರಣಗಳಿಂದ ವಿಳಂಬವಾಗಿದ್ದ ಕಾಮಗಾರಿಯನ್ನು ಒಂದು ವಾರದೊಳಗೆ ಅಧಿಕೃತವಾಗಿ ಪ್ರಾರಂಭಿಸುವುದಾಗಿ ಅವರು ಲಿಖಿತ ಭರವಸೆ ನೀಡಿದರು.

ಅಧಿಕಾರಿಯ ವಾರದ ಗಡುವು ಮತ್ತು ಭರವಸೆಗೆ ಮೊದಮೊದಲು ಒಪ್ಪದೆ ಪಟ್ಟು ಹಿಡಿದ ಕುಳಿತ ಮಹಿಳೆಯರು, ಒಂದು ವೇಳೆ ನಿಗದಿತ ಅವಧಿಯಲ್ಲಿ ಕೆಲಸ ಆರಂಭವಾಗದಿದ್ದರೆ ಮುಂದಿನ ದಿನಗಳಲ್ಲಿ ಮತ್ತಷ್ಟು ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಸಿ ಪ್ರತಿಭಟನೆಯನ್ನು ತಾತ್ಕಾಲಿಕವಾಗಿ ಕೈಬಿಟ್ಟರು.

ಕಲಾವತಿ ಮಠಪತಿ, ಗಂಗವ್ವಾ ಮಠಪತಿ, ಶರಣವ್ವಾ ಹಳ್ಳಿ, ಶಕುಂತಲಾ ಪೂಜಾರಿ, ದುಂಡವ್ವಾ ಪೂಜಾರಿ, ಸುಖದೇವಿ ಮೇಣಸಂಗಿ, ನಾಗವ್ವಾ ಕಳಸಗೊಂಡ, ಶೋಭಾ ಮಠಪತಿ, ಸುಧಾ ಮೇಣಸಂಗಿ, ದಾನವ್ವಾ ಹಳ್ಳಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



- ಅಥಣಿ ತಾಲೂಕಿನ ತೆಲಸಂಗ ಗ್ರಾಮ ಪಂಚಾಯತಿ ಎದುರು ಪ್ರತಿಭಟನೆ
- 10 ವರ್ಷಗಳಿಂದ ಅರ್ಧಕ್ಕೆ ನಿಂತಿರುವ 100 ಮೀಟರ್ ಗೋಡೆ ಕಾಮಗಾರಿ.
- ಮಹಿಳೆಯರ ಶೌಚಾಲಯದ ಜಾಗಕ್ಕೆ ಸುರಕ್ಷತೆ ಇಲ್ಲ
- ಅಧಿಕಾರಿಗಳ ವಾರದ ಭರವಸೆ ಗಡುವಿನೊಂದಿಗೆ ಪ್ರತಿಭಟನೆ ಕೈಬಿಟ್ಟ ಮಹಿಳೆಯರು

ಮಧುಮೇಹದ ಬಗ್ಗೆ ಅನಗತ್ಯ ಭಯ ಬೇಡ

• **ಬೆಳಗಾವಿ:** ಡಯಾಬಿಟಿಸ್ ಅಷ್ಟು ಮಾರಕ ಕಾಯಿಲೆಯಲ್ಲ, ಸಮಯಕ್ಕೆ ಸರಿಯಾಗಿ ವೈದ್ಯರ ಸಲಹೆ ಪಡೆದು ಸೂಕ್ತ ಚಿಕಿತ್ಸೆ ಪಡೆದರೆ ರೋಗವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಬಹುದು ಎಂದು ಹಿರಿಯ ಮಧುಮೇಹ ತಜ್ಞ ಡಾ. ಸಂದೀಪ್ ಶ್ರೀವಾಸ್ತವ ಹೇಳಿದರು.

ನಗರದ ಹೊರವಲಯದ ಖಾಸಗಿ ಹೋಟೆಲ್ ನಲ್ಲಿ ಮೆಡ್ ಬೆಲ್ ಗ್ಲೋಬಲ್ ಹೆಲ್ತ್ ಕೇರ್ ಮತ್ತು ಸಂಶೋಧನೆ ಫೌಂಡೇಶನ್ ವತಿಯಿಂದ ಆಯೋಜಿಸಲಾದ ಎರಡು ದಿನದ ಮಧುಮೇಹ ಜಾಗೃತ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು,

ಮಧುಮೇಹ ರೋಗಿಗಳು ರೋಗದ ಬಗ್ಗೆ ಅನಗತ್ಯ ಭಯ ಮತ್ತು ಆತಂಕಕ್ಕೆ ಒಳಗಾಗಬಾರದು ಎಂದರು.

ಡಿಸಿಪಿ ನಾರಾಯಣ ಭರಮನಿ ಮಾತನಾಡಿದರು.

ಡಾ. ಡಿ.ನಾಗೇಶ್ವರ ರೆಡಿ, ಡಾ.ಅರವಿಂದ ಸೊಸಲೆ, ಡಾ.ಹೇಮಂತ ಕೌಜಲಗಿ, ಮೆಡ್ ಬೆಲ್ ಗ್ಲೋಬಲ್ ಸಂಸ್ಥೆಯ ಅಧ್ಯಕ್ಷರು, ಖ್ಯಾತ ವೈದ್ಯರಾದ ಡಾ. ಗೀರಿಶ ಸೋನವಾಲಕರ್ , ಡಾ.ಮಾಧವ ಪ್ರಭು, ಡಾ. ಸೈಯದ್ ಅಲಿ, ಡಾ. ವಿಕ್ರಾಂತ ಬಿ. ಘಟನಟ್ಟಿ, ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ ವೈದ್ಯರು, ಆರೋಗ್ಯ ತಜ್ಞರು, ವೈದ್ಯಕೀಯ ವಿದ್ಯಾರ್ಥಿಗಳು ಹಾಗೂ ಗಣ್ಯರು ಉಪಸ್ಥಿತರಿದ್ದರು.



ಯಲ್ಲಾಲಿಂಗೇಶ್ವರ ಶ್ರೀಮಠಕ್ಕೆ ಕಡಾಡಿ ಭೇಟಿ



• **ಮುಗಳಖೋಡ:** ಮಠ- ಮಠಾಧೀಶರು, ದೈವದ ಮೇಲೆ ನಂಬಿಕೆ ಉಳ್ಳವರು ಜನಸಾಮಾನ್ಯರ ಜೊತೆಗೆ ಗುರುತಿಸಿಕೊಂಡು ಧಾರ್ಮಿಕ ಸಾಮಾಜಿಕ ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಸಹಾಯ ಸಹಕಾರ ಮಾಡುವವರಿಗೆ ಮುಂದೊಂದು ದಿನ ರಾಜಕೀಯ ಸ್ಥಾನಮಾನಗಳು ಉನ್ನತ ಹುದ್ದೆಗಳು ಪ್ರಾಪ್ತಿಯಾಗಲಿವೆ ಎಂದು ಡಾ. ಮುರುಘರಾಜೇಂದ್ರ ಸ್ವಾಮೀಜಿಯವರು ಕಡಾಡಿ ಅವರಿಗೆ ಆಶೀರ್ವದಿಸಿದರು.

ಅವರು ಅಧಿಕ ಮಾಸದ ಪ್ರಯುಕ್ತ ಯಲ್ಲಾಲಿಂಗ ಮಹಾಪ್ರಭುಗಳ ಶ್ರೀಮಠಕ್ಕೆ ಆಗಮಿಸಿದ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಅವರಿಂದ ಸತ್ಕಾರ ಸ್ವೀಕರಿಸಿದರು.

ರಾಜ್ಯಸಭಾ ಸದಸ್ಯರಾದ ಈರಣ್ಣ ಕಡಾಡಿ ಅವರಿಗೆ ರಾಜಕಾರಣದಲ್ಲಿ ಉನ್ನತ ಹುದ್ದೆಗಳು ಲಭಿಸಲಿವೆ ಎಂದು ಶಾಲು ಹೊದಿಸಿ ಹೂಮಾಲೆ ಹಾಕಿ ಸತ್ಕರಿಸಿದರು .

ಈ ಸಂದರ್ಭದಲ್ಲಿ ಮಾಜಿ ಶಾಸಕ ಪಿ ರಾಜೀವ್, ಕಲ್ಲೋಳ್ಳಿಯ ಬಸವರಾಜ ಕಡಾಡಿ, ಕಲ್ಲೋಳಿ ಶ್ರೀ ಮಹಾಲಕ್ಷ್ಮಿ ಬ್ಯಾಂಕಿನ ಉಪಾಧ್ಯಕ್ಷ ಶ್ರೀಶೈಲ ತುಪ್ಪದ, ಪುರಸಭೆ ಸದಸ್ಯರಾದ ಪರಪ್ಪಗೌಡ ಖೇತಗೌಡರ , ಚೇತನ ಯಡವನ್ನವರ, ಮಹಾಂತೇಶ ಯರಡೆತ್ತಿ ಶ್ರೀಕಾಂತ ಗೌಡ ಖೇತಗೌಡರ, ಗುರು ಮಠಪತಿ ರಾಜಕುಮಾರ್ ನಾಯಕ, ಸೋಮು ಹೊರಟ್ಟಿ , ಇತರರು ಇದ್ದರು.

ಕಿರುಸುದ್ದಿ

ಪಿಎಚ್‌ಡಿ ಪ್ರದಾನ



ಮುಧೋಳ: ನಗರದ ಬಸವೇಶ್ವರ ವಿದ್ಯಾವರ್ಧಕ ಸಂಘದ ದಾನಮ್ಮ ದೇವಿ ಕಲಾ ವಾಣಿಜ್ಯ ಮತ್ತು ವಿಜ್ಞಾನ ಮಹಿಳಾ ಮಹಾ ವಿದ್ಯಾಲಯದ ಪ್ರಾಚಾರ್ಯ ಮಲ್ಲಿಕಾರ್ಜುನ್ ಹಿರೇಮಠ ಅವರಿಗೆ ಪಿಎಚ್‌ಡಿ ಪದವಿ ಲಭಿಸಿದೆ. ಬೆಳಗಾವಿ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಕನ್ನಡ ವಿಭಾಗಕ್ಕೆ ಸಲ್ಲಿಸಿದ ಮಂಟೇಸ್ವಾಮಿ ಹಾಗೂ ಪ್ರಮುಖ ವಚನಕಾರರು ಸಂಸ್ಕೃತಿಕ ಮುಖಾಮುಖಿ ಎಂಬ ಮಹಾ ಪ್ರಬಂಧಕ್ಕೆ ಪಿಎಚ್‌ಡಿ ಪದವಿ ನೀಡಿದೆ. ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕ ಡಾ.ಪಿ.ನಾಗರಾಜ ಅವರು ಮಾರ್ಗದರ್ಶನ ನೀಡಿದ್ದರು. ಮಲ್ಲಿಕಾರ್ಜುನ ಹಿರೇಮಠ್ ಪಿಎಚ್‌ಡಿ ಪದವಿ ಪಡೆದ ಪ್ರಯುಕ್ತ ಬಸವೇಶ್ವರ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ಹಾಗೂ ಸಂಘದ ಆಡಳಿತ ಮಂಡಳಿ ಪ್ರಾಧ್ಯಾಪಕರು ಶುಭಾಶಯ ತಿಳಿಸಿದ್ದಾರೆ.

ಕಾಶಪ್ಪನವರಿಗೆ ಸಚಿವ ಸ್ಥಾನ ನೀಡಲು ಆಗ್ರಹ

ಹುನಗುಂದ: ಶಾಸಕ ವಿಜಯಾನಂದ ಕಾಶಪ್ಪನವರ ಅವರಿಗೆ ಎರಡನೇ ಹಂತದ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕು ಎಂದು ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿಯ ಸದಸ್ಯ ಸುರೇಶ ಹಳಪೇಟಿ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಅವರನ್ನು ಆಗ್ರಹಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು,ಹುನಗುಂದ ಮತಕ್ಷೇತ್ರದಲ್ಲಿ ಕಾಶಪ್ಪನವರ ಮನೆತನ ಕಳೆದ 50 ವರ್ಷಗಳಿಂದ ಕಾಂಗ್ರೆಸ್ ಪಕ್ಷದ ಸಂಘಟನೆಗೆ ಮತ್ತು ಪಕ್ಷ ಅಧಿಕಾರಕ್ಕೆ ತರಲು ಪ್ರಾಮಾಣಿಕರಾಗಿ ಶ್ರಮಿಸಿದ್ದಾರೆ. ಕಳೆದ ಬಾಗಲಕೋಟೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಲಿಂಗಾಯತರ ಮತ ಸೆಳೆದು ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸುವಲ್ಲಿ ಕೂಡಾ ಪ್ರಾಮಾಣಿಕ ಕೆಲಸ ಮಾಡಿದ ಪಕ್ಷದ ನಿಷ್ಠಾವಂತ ಶಾಸಕ ವಿಜಯಾನಂದ ಕಾಶಪ್ಪನವರಿಗೆ ಈ ಬಾರಿ ಸಚಿವ ಸ್ಥಾನ ನೀಡಲೇಬೇಕು ಎಂದು ಮುಖ್ಯಮಂತ್ರಿಗಳಿಗೆ ಒತ್ತಾಯಿಸಿದ್ದಾರೆ.

ವಿವಿಧ ಧಾರ್ಮಿಕ ಕಾರ್ಯಕ್ರಮ



ಲೋಕಾಪುರ: ಪಟ್ಟಣದ ವೆಂಕಟೇಶ್ವರ ದೇವಸ್ಥಾನದಲ್ಲಿ ಅಧಿಕ ಮಾಸದ ನಿಮಿತ್ತ ವಿವಿಧ ಧಾರ್ಮಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಗಾಯತ್ರಿ ಭಜನಾ ಮಂಡಳದ ವತಿಯಿಂದ ಪುರುಷೋತ್ತಮ ಮಾಸದ 33 ಕೀರ್ತನೆಗಳ ಮಂಗಳೋತ್ಸವ ಮತ್ತು ಧನ್ವಂತರಿ ಹೋಮವನ್ನು ಆನಂದಚಾರ್ಯ ಜಂಬಗಿ ಹಾಗೂ ಅಣ್ಣಾರಾವ ದೇಶಪಾಂಡೆ ಇವರ ನೇತೃತ್ವದಲ್ಲಿ ಜರುಗಿತು. ನಿವೃತ್ತ ಶಿಕ್ಷಕ ಹಾಗೂ ವಿಪ್ರ ಸಮಾಜದ ಮುಖಂಡ ಗುರುರಾಜ ಜೋಶಿ ಮಾತನಾಡಿ ಅಧಿಕ ಮಾಸವು ಮೂರು ವರ್ಷಗಳಿಗೊಮ್ಮೆ ಬರುತ್ತದೆ, ಈ ಕಾಲದಲ್ಲಿ ಜಪ, ಸತ್ಸಂಗ, ಸತ್ಸವೇ, ತ್ಯಾಗ ಮತ್ತು ದಾನಕ್ಕೆ ಅಸಾಧಾರಣ ಮಹತ್ವಿದೆ, ಈ ಮಾಸದಲ್ಲಿ ದಾನ ಮಾಡಿದರೆ ಅದರ ಫಲವು ಹಲವು ಪಟ್ಟು ಹೆಚ್ಚಾಗಿ ಸಿಗುತ್ತದೆ. ಆದ್ದರಿಂದ ಈ ಅವಧಿಯಲ್ಲಿ ವಸ್ತ್ರದಾನ, ಅನ್ನದಾನ ಮತ್ತು ಜ್ಞಾನದಾನ ಮಾಡುವುದಕ್ಕೆ ವಿಶೇಷ ಮಹತ್ವವಿದೆ ಎಂದರು. ಗಾಯತ್ರಿ ಭಜನಾ ಮಂಡಳದ ಸದಸ್ಯರಾದ ಲಲಿತಾ ಜೋಶಿ, ಮಂಗಳಾ ಸೋಮಾಪುರ, ಲಲಿತಾ ಚಿಣಗುಂದಿ, ಮಂಜುಳಾ ಬಟಕುರ್ಕಿ, ಉಮಾ ಕುಲಕರ್ಣಿ, ವಿದ್ಯಾ ಕುಲಕರ್ಣಿ, ವನಿತಾ ಜೋಶಿ, ಪ್ರತಿಭಾ ಜೋಶಿ, ಪ್ರಭಾವತಿ ಕುಲಕರ್ಣಿ, ಪದ್ಮಾವತಿ ಕುಲಕರ್ಣಿ, ಶಿಲಾ ಗುಡೂರ, ರತ್ನಾ ದೇಶಪಾಂಡೆ, ಗೌರಿ ಜಾಲಿಹಾಳ ನಮಿತಾ ಕುಲಕರ್ಣಿ, ಪ್ರೀತಿ ಐತಾಳ, ಗೀತಾ ಕಟ್ಟಿ, ವೀಣಾ ಜೋಶಿ, ಶೀಲಾ ಕುಲಕರ್ಣಿ, ಗೀತಾ ದೇಶಪಾಂಡೆ, ಪ್ರೇಮಾ ದೇಶಪಾಂಡೆ, ರೇಖಾ ಮುರಗೋಡ, ಆರತಿ ಜಂಬಗಿ, ವಿಭಾ ದೇಶಪಾಂಡೆ, ಮಂಜುಳಾ ದೇಶಪಾಂಡೆ ಗಾಯತ್ರಿ ಭಜನಾ ಮಂಡಳ, ಗುರುಸಾರ್ವಭೌಮ ಯುವಕ ಮಂಡಳ, ರಾಘವೇಂದ್ರ ಇದ್ದರು.

ವ್ಯಕ್ತಿ ಕಾಣೆ

ಬಾಗಲಕೋಟೆ: ಮುಧೋಳನ ಟಿಪ್ಪು ಗಲ್ಲಿಯ ಸಮಿಜ ಅನ್ನು ಪತ್ತೆ ವಯಸ್ಸು ಎಂಬ ವ್ಯಕ್ತಿ ಮಾನಸಿಕವಾಗಿದ್ದು ವ್ಯಕ್ತಿ ಕಾಣೆಯಾಗಿದ್ದಾನೆ. ಈ ಕುರಿತು ಮುಧೋಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವ್ಯಕ್ತಿ 5.1 ಪೂಟ್ ಎತ್ತರವಿದ್ದು, ಗೋಧಿ ಮೈ ಬಣ್ಣ ಹೊಂದಿದ್ದಾರೆ. ಕಪ್ಪು ಬಣ್ಣದ ನೈಟ್ ಪ್ಯಾಂಟ್, ತಿಳಿ ಹಸಿರು ಬಣ್ಣದ ಟಿಶರ್ಟ ಧರಿಸಿದ್ದು, ಕನ್ನಡ, ಹಿಂದಿ, ಉರ್ದು ಭಾಷೆ ಮಾತನಾಡುತ್ತಾನೆ. ಇತರ ಬಗ್ಗೆ ಸುಳಿವು ದೊರೆತಲ್ಲಿ ಎಸ್.ಪಿ ಬಾಗಲಕೋಟೆ (08354-235079, 9480803901) ಸಂಪರ್ಕಿಸಿ ಮಾಹಿತಿ ನೀಡುವಂತೆ ಮುಧೋಳ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ತಿಳಿಸಿದ್ದಾರೆ.



ಬೀಳಗಿ: ಕಮತಗಿಯ ಮೇಘ ಮೈತ್ರಿ ಕನ್ನಡ ಸಾಹಿತ್ಯ ಸಂಘವು ಬೆಂಗಳೂರಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಚಿತ್ರಕಲಾ ಸಮ್ಮೇಳನದಲ್ಲಿ ಚಿತ್ರಕಲಾ ಸಮ್ಮೇಳನ ಹಿನ್ನೆಲೆಯಲ್ಲಿ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ ಏರ್ಪಡಿಸಲಾಗಿತ್ತು. ತಾಲೂಕಿನ ಕೊಪ್ಪ (ಎಸ್.ಕೆ) ಗ್ರಾಮದ ಬಾಲಕಿ ಹಾಗೂ ಮುಧೋಳ ರಾಯಲ್ ಸ್ಕೂಲ್ ವಿದ್ಯಾರ್ಥಿನಿ ಪೂರ್ವಿ ವೆಂಕಟೇಶ ಪಾಟೀಲ ಭಾಗವಹಿಸಿ ಗಮನ ಸೆಳೆದಿದ್ದಾಳೆ. ಡಾ.ಬಸವರಾಜ ಗವಿಮಠ, ರಮೇಶ ಕಮತಗಿ ಸೇರಿದಂತೆ ಮತ್ತಿತರ ಗಣ್ಯರು ಮೆಚ್ಚುಗೆ ವ್ಯಕ್ತಪಡಿಸಿದರು.

ವಿದ್ಯುತ್ ವಿತರಣೆ ಖಾಸಗೀಕರಣಕ್ಕೆ ವಿರೋಧ

ಗುಳೇದಗುಡ್ಡ: ಟಾಟಾ ಸಂಸ್ಥೆ ವಿದ್ಯುತ್ ವಿತರಣಾ ಕೇಂದ್ರ ಖಾಸಗೀಕರಣ ಪರವಾನಿಗೆ ರದ್ದುಗೊಳಿಸಿ, ಸರ್ಕಾರದ ಸ್ವಾಮ್ಯದಲ್ಲಿ ಮುಂದುವರೆಸುವಂತೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆಯ ವತಿಯಿಂದ ಪಟ್ಟಣದ ಹೆಸ್ಕಾಂ ಅಧಿಕಾರಿ ಮಹಾಂತೇಶ ಬಾದವಾಡಗಿ ಅವರಿಗೆ ಸೋಮವಾರ ಮನವಿ ಸಲ್ಲಿಸಲಾಯಿತು.

ಈ ವೇಳೆ ಮಾತನಾಡಿದ ಕರವೇ ತಾಲೂಕು ಅಧ್ಯಕ್ಷ ರವಿ ಅಂಗಡಿ, ಟಾಟಾ ಸಂಸ್ಥೆಯು ವಿದ್ಯುತ್ ನಿಯಂತ್ರಣ ಆಯೋಗಕ್ಕೆ ವಿತರಣಾ ಕೇಂದ್ರದ ಖಾಸಗೀಕರಣಕ್ಕೆ ಅರ್ಜಿ ಸಲ್ಲಿಸಿದ್ದು, ಸರ್ಕಾರ ಗ್ರಾಹಕರ ಹಿತದೃಷ್ಟಿಯಿಂದ ಹಾಗೂ ರೈತರ, ನೇಕಾರರ ಹಿತದೃಷ್ಟಿಯಿಂದ ಖಾಸಗೀಕರಣ ಕೈಬಿಟ್ಟು ಮೊದಲಿನಂತೆ ಸರಕಾರದ ಸ್ವಾಮ್ಯದಲ್ಲಿ ಮುಂದುವರೆಸಬೇಕು ಎಂದರು. ನೇಕಾರರ ಪಾವರ ಲೂಮ್ ಮಗ್ಗಗಳಿಗೆ, ರೈತರ ನೀರಾವರಿ ಯೋಜನೆಗಳಿಗೆ ಸರ್ಕಾರ ನೀಡುತ್ತಿರುವ ಉಚಿತ ವಿದ್ಯುತ್, ರಿಯಾಯತಿ ವಿದ್ಯುತ್ ನಿಂತುಹೋಗಿ, ನೇಕಾರರ, ರೈತರು ಸಂಕಷ್ಟ ಅನುಭವಿಸಬೇಕಾಗುತ್ತದೆ. ಸರ್ಕಾರ ವಿದ್ಯುತ್ ಪ್ರಸರಣವನ್ನು ಖಾಸಗಿಯವರಿಗೆ ನೀಡುವ ನಿರ್ಣಯ ಕೈ ಬಿಡಬೇಕು ಎಂದರು.

ಡಾ.ವಿ.ಎ.ಚೆನಸಾಳ, ಶ್ರೀಕಾಂತ ಹುನಗುಂದ, ರಫೀಕ್ ಕಮನಾಗಾರ, ಶೇಖಣ್ಣ ತಾಂಡೂರ, ಸೋಮಶೇಖರ ಕಲ್ಬುರ್ಗಿ, ಪ್ರವೀಣ ದೇವಗಿರಕರ, ಸೋಮಶೇಖರ ಜವಳಿ, ಹೆಸ್ಕಾಂ ಎಸ್.ಓ.ಶ್ರೀಧರ ಮಾಲಗಿತ್ತಿ, ಮಹಿಬೂಬ ಕಂಟ್ರಾಕ್ಟರ್, ಭದ್ರು ಪರಗಿ, ಮುತ್ತಾ ಕೊಣ್ಣೂರ, ಮತ್ತು ಮಿಟ್ಟಲಕೋಡ, ಆಯಿಷಾ ಸೂಳಿಭಾವಿ, ಕಿರಣ ರಾಠೋಡ, ಸಂಗು ಬೂಥನಾಳ ಇದ್ದರು.



ಗುಳೇದಗುಡ್ಡ: ಟಾಟಾ ಸಂಸ್ಥೆ ವಿದ್ಯುತ್ ವಿತರಣಾ ಕೇಂದ್ರ, ಖಾಸಗೀಕರಣ ಪರವಾಣಿಗೆ ರದ್ದುಗೊಳಿಸಿ, ಸರ್ಕಾರದ ಸ್ವಾಮ್ಯದಲ್ಲಿ ಮುಂದುವರಿಸುವಂತೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆಯ ವತಿಯಿಂದ ಪಟ್ಟಣದ ಹೆಸ್ಕಾಂ ಅಧಿಕಾರಿ ಮಹಾಂತೇಶ ಬಾದವಾಡಗಿ ಅವರಿಗೆ ಸೋಮವಾರ ಮನವಿ ಸಲ್ಲಿಸಲಾಯಿತು.

ಇಳಕಲ್ ನಗರಸಭೆ ಕಮಿನಷರ್ ವಿರುದ್ಧ ದೊಡ್ಡನಗೌಡ ಪಾಟೀಲ ಗರಂ

ಸೇವೆಯಿಂದ ಅಮಾನತಿಗೆ ಆಗ್ರಹ

ಬಾಗಲಕೋಟೆ: ಇಳಕಲ್ ನಗರಸಭೆ ವ್ಯಾಪ್ತಿಯಲ್ಲಿ ಸಾರ್ವಜನಿಕರು ಕುಡಿಯುವ ನೀರು ಸಮರ್ಪಕವಾಗಿ ಪೂರೈಸಬೇಕು ಎಂದು ನಗರಸಭೆ ಕಮೀಷನರ್ ಕಚೇರಿ ಮುಂದೆ ಪ್ರತಿಭಟನೆ ನಡೆಸಲು ಸಾರ್ವಜನಿಕರು ಮುಂದಾದರೆ ಅಂತಹವರ ಮೇಲೆ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಿಸುವ ಅಧಿಕಾರಿಯನ್ನು ಸೇವೆಯಿಂದ ಅಮಾನತ್ತು ಗೊಳಿಸಬೇಕು ಎಂದು ಹುನಗುಂದ ಮಾಜಿ ಶಾಸಕ ದೊಡ್ಡನಗೌಡ ಪಾಟೀಲ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.



ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿ ಸಂಗಪ್ಪರವರಿಗೆ ಇಳಕಲ್ ನಗರಸಭೆಯಿಂದ ಸಾರ್ವಜನಿಕರಿಗೆ ಕುಡಿಯುವ ನೀರಿನ ಸಮಸ್ಯೆ ಹಾಗೂ ಇಳಕಲ್ ನಗರಸಭೆ ಕಮೀಷನರ್ ಶ್ರೀನಿವಾಸ ಜಾಧವ ಅವರಿಂದ ಆಗುತ್ತಿರುವ ತೊಂದರೆಯನ್ನು ತಿಳಿಸಿದ ಬಳಿಕ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು. ಸಾರ್ವಜನಿಕರು ಕುಡಿಯಲು ನೀರು ಕೊಡಿ ಎಂದು ಕಮೀಷನರ್ ಮುಂದೆ ಪ್ರತಿಭಟನೆ ನಡೆಸಿದ್ದಕ್ಕೆ ಹುನಗುಂದ ಶಾಸಕರ ಒತ್ತಡಕ್ಕೆ ಮಣಿದು ಇಳಕಲ್ ನಗರಸಭೆ ಕಮೀಷನರ್ ಒಂಬತ್ತು ಜನರ ಮೇಲೆ ಎಫ್ಐಆರ್ ದಾಖಲಿಸಿದ್ದಾರೆ. ಜನ ನೀರು ಕೇಳುವುದು ತಪ್ಪಾ ಇದೆಂತಹ ಆಡಳಿತ ಎಂದು ಪ್ರಶ್ನಿಸಿದರು.

ಶಾಸಕ ವಿಜಯಾನಂದ ಕಾಶಪ್ಪನವರ ತಮ್ಮ ರೆಸಾರ್ಟ್‌ದಲ್ಲಿರುವ ಸ್ವಿಮ್ಮಿಂಗ್ ಪೂಲ್ ಮತ್ತು ಮೀನಿನ ಪಾಂಡ್‌ಗೆ ಇಳಕಲ್ ನಗರಸಭೆ ವ್ಯಾಪ್ತಿಯನ್ನು ಬಿಟ್ಟು ಗ್ರಾಮ ಪಂಚಾಯ್ತಿ ವ್ಯಾಪ್ತಿಯಿಂದ 2 ಇಂಚಿನ ಪೈಪ್ ಮೂಲಕ ನೀರು ಪೂರೈಸಿಕೊಂಡಿದ್ದಾರೆ. ಸಾರ್ವಜನಿಕರು ಕುಡಿಯಲು ನೀರು ಕೇಳಿದರೆ ಕೇಸ್ ದಾಖಲಿಸುವಂತೆ ಹೇಳುವಂತಹ ಶಾಸಕು ಇದ್ದಾರೆ. ಜನರಿಗೆ ನ್ಯಾಯ ಕೊಡಿಸುವವರು ಯಾರು ಎಂದರು.

ಸಾರ್ವಜನಿಕರ ಮೇಲೆ ದಾಖಲಾಗಿರುವ ಪ್ರಕರಣವನ್ನು ವಾಪಸ್ ಪಡೆದುಕೊಳ್ಳಬೇಕು, ಸಾರ್ವಜನಿಕರಿಗೆ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಒಂದು ವಾರದ ಗಡವು ನೀಡಲಾಗಿದೆ. ಬೇಡಿಕೆ ಈಡೇರದಿದ್ದರೆ ಹೋರಾಟದ ಹಾದಿಯನ್ನು ತುಳಿಯುತ್ತೇವೆ ಎಂದು ಎಚ್ಚರಿಸಿದರು.

ಇಳಕಲ್ ನಗರದ ಕುಡಿಯುವ ನೀರಿನ ವ್ಯವಸ್ಥೆ 24/7 ಸಂಪೂರ್ಣ ಹದಗೆಟ್ಟಿದ್ದು ಅದರ ಸಮರ್ಪಕ ನಿರ್ವಹಣೆ ಇಲ್ಲದೇ ಕುಡಿಯುವ ನೀರನ ಸಮಸ್ಯೆ ಉಂಟಾಗುತ್ತಿದೆ. ಇಳಕಲ್ ನಗರಕ್ಕೆ ಆಲಮಟ್ಟಿಯಿಂದ ಇಳಕಲ್ ನಗರ, ಹುನಗುಂದ, ಕುಷ್ಟಗಿ ನಗರಗಳಿಗೆ 2008ರಿಂದ 2010ರಲ್ಲಿ ಕುಡಿಯುವ ನೀರು ಪೂರೈಕೆ ಕಾಮಗಾರಿ ಪೂರ್ಣಗೊಂಡು ಪ್ರತಿ ಮನೆಗೆ ನೀರಿನ ವ್ಯವಸ್ಥೆ ಇತ್ತು ಈಗ ಕಳೆದ ಎರಡು ವರ್ಷಗಳಿಂದ ಸರಿಯಾಗಿ ಕುಡಿಯುವ ನೀರು ಪೂರೈಕೆಯಾಗದೇ ನಿತ್ಯ ಜನರು ಸಮಸ್ಯೆ ಎದುರಿಸುವಂತಾಗಿದೆ ಎಂದು ದೂರಿದರು.

ವಿಯೋಲಿಯಾ ಕಂಪನಿಯಿಂದ ಮೂರು ನಗರಕ್ಕೆ ಕುಡಿಯುವ ನೀರು ಪೂರೈಕೆಯಾಗುತ್ತಿತ್ತು 2023 ರಿಂದ ಏಕಾಏಕಿ ಸದರಿ ಕಂಪನಿಯರ ಸರಬಾರಜು ವ್ಯವಸ್ಥೆ ಬಿಡಿಸಿ ಪಟ್ಟಭದ್ರ ಹಿತಾಸಕ್ತಿ ಒತ್ತಾಯಣಕ್ಕೆ ಮಣಿದು ಇಳಕಲ್ ನಗರಸಭೆ ಕಮೀಷನರ್ ಶ್ರೀನಿವಾಸ ಜಾಧವ ತನ್ನ ಕಮೀಷನ್ ಪಡೆಯಲು ಯಾವುದೇ ಅನುಭವ ಇಲ್ಲದ ಪದ್ಮಾವತಿ ಎಂಬ ಕಂಪನಿಗೆ ನಿರ್ವಹಣೆ ಮಾಡಲು ಕೊಟ್ಟಿದ್ದರಿಂದ ಸಮಸ್ಯೆಗಳು ಜಾಸ್ತಿಯಾಗಿದೆ. ಪ್ರತಿ ವಾರ್ಡ್‌ನಲ್ಲಿ ಒಂದಿಲ್ಲೊಂದು ಕುಡಿಯುವ ನೀರಿನ ಸಮಸ್ಯೆ ಉಂಟಾಗುತ್ತಿದೆ ಇದರ ಬಗ್ಗೆ ಜಿಲ್ಲಾಧಿಕಾರಿಗಳು ಗಮನ ಹರಿಸಿ ಕ್ರಮ ವಹಿಸಬೇಕು ಎಂದು ಒತ್ತಾಯ ಮಾಡಿದ್ದೇವೆ. ಒಂದು ವಾರದಲ್ಲಿ ಎಲ್ಲ ಸಮಸ್ಯೆ ನಿವಾರಣೆಯಾಗಲಿದೆ ಎಂದು ಹೇಳಿದರು.

ಗ್ರಾಮೀಣಾಭಿವೃದ್ಧಿಗೆ ಸ್ಥಳೀಯ ಸರ್ಕಾರ ಮುಖ್ಯ

ಕಲಾದಗಿ: ರಾಜ್ಯದ ಪ್ರಗತಿಗೆ ಹಾಗೂ ಗ್ರಾಮೀಣಾಭಿವೃದ್ಧಿಗೆ ಸ್ಥಳೀಯ ಸರ್ಕಾರಗಳು ಬಹುಮುಖ್ಯವಾಗಿದ್ದು, ರಾಜ್ಯ ಸರ್ಕಾರ ಸ್ಥಳೀಯ ಸರ್ಕಾರಗಳ ಚುನಾವಣೆಯನ್ನು ಶೀಘ್ರವಾಗಿ ನಡೆಸಲು ಮುಂದಾಗಬೇಕು ಎಂದು ಗ್ರಾಮ ಸ್ವರಾಜ್ಯ ಕರ್ನಾಟಕ ಸಂಘಟನೆ ರಾಜ್ಯಾಧ್ಯಕ್ಷ ಸತೀಶ ಕಾಡಶೆಟ್ಟಿಹಳ್ಳಿ ಹೇಳಿದರು.

ದಾಂಡೇಲಿಯಲ್ಲಿ ಜರುಗಿದ ಗ್ರಾಮ ಸ್ವರಾಜ್ಯ ಕರ್ನಾಟಕ ಸಂಘಟನೆಯ ರಾಜ್ಯ ಮಟ್ಟದ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿ, ಸರ್ಕಾರ ಶೀಘ್ರವಾಗಿ ಚುನಾವಣೆ ಮಾಡುವಂತೆ ಒತ್ತಾಯಿಸಿದರು. ರಾಜ್ಯದ ಅಭಿವೃದ್ಧಿಗೆ ಸ್ಥಳೀಯ ಸರ್ಕಾರಗಳಾದ ಗ್ರಾಪಂ, ತಾಪಂ, ಜಿಪಂ, ನಗರಸಭೆ, ಪಟ್ಟಣ ಪಂಚಾಯತಿ, ಪುರಸಭೆ, ಮಹಾನಗರ ಪಾಲಿಕೆಗಳು ಸ್ಥಳೀಯ ಅಭಿವೃದ್ಧಿಗಾಗಿ ಮಹತ್ತರ ಪಾತ್ರವನ್ನು ನಿರ್ವಹಿಸುತ್ತವೆ. ಪ್ರಜಾಪ್ರಭುತ್ವದ ಯಶಸ್ವಿಗೆ ಸ್ಥಳೀಯ ಸರ್ಕಾರಗಳ ಶ್ರಮ ನಿರಂತರವಾಗಿದೆ ಎಂದರು.

ಗ್ರಾಮೀಣ ಭಾಗದಲ್ಲಿ ಜನಪ್ರತಿನಿಧಿಗಳು ಇಲ್ಲದೇ ಗ್ರಾಮಗಳು ಸಮಸ್ಯೆಯ ಆಗರವಾಗಿವೆ. ಆಡಳಿತಾಧಿಕಾರಿಗಳ ಸರಿಯಾದ ನಿರ್ವಹಣೆ ಇಲ್ಲದೇ ಆಡಳಿತ ಯಂತ್ರ ಕುಸಿದು ಹೋಗಿದ್ದು ತಾಪಂ, ಜಿಪಂ ಚುನಾವಣೆಗಳು ಇಲ್ಲದೇ 6ವರ್ಷಗಳು ಕಳೆದು ಹೋಗಿವೆ, ಗ್ರಾಪಂ ಅವಧಿ ಮುಗಿದು ಈಗಾಗಲೇ 6ತಿಂಗಳು ಕಳೆದಿವೆ ಹಾಗಾಗಿ ಚುನಾವಣೆ ನಡೆಸಲು ಜನಜಾಗೃತಿ ಮೂಡಿಸುವ ಸಲುವಾಗಿ ಗ್ರಾಮ ಸ್ವರಾಜ್ಯ ಸಂಘಟಣೆಯಿಂದ ರಾಜ್ಯಾದ್ಯಂತ ಸಾರ್ವಜನಿಕರೊಂದಿಗೆ ಅಭಿಯಾನ ಶುರು ಮಾಡಲಿದ್ದೇವೆ. ಚುನಾವಣಾ ಆಯೋಗ ಹಾಗೂ ರಾಜ್ಯ ಸರ್ಕಾರ ಎಲ್ಲಾ ಸ್ಥಳೀಯ ಸಂಸ್ಥೆಗಳ ಚುನಾವಣೆ ಶೀಘ್ರವಾಗಿ ಮಾಡಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಜಿಲ್ಲಾ ಘಟಕ ತಾಲುಕೂ ಘಟಕ ಹಾಗೂ ಗ್ರಾಮ ಘಟಕಗಳ ಪದಾದಿಕಾರಿಗಳ ಮೂಲಕ ನೂತನ ಹೋರಾಟಕ್ಕೆ ಕರೆ ನೀಡಲಾಗುವುದು ಎಂದು ರಾಜ್ಯಾಧ್ಯಕ್ಷ ಸತೀಶ ಕಾಡಶೆಟ್ಟಿಹಳ್ಳಿ ಸಭೆಯ ಅಧ್ಯಕ್ಷತೆ ವಹಿಸಿ ಸರ್ಕಾರವನ್ನು ಒತ್ತಾಯಿಸಿದರು.

ರಾಜ್ಯ ಸಮಿತಿಯ ಪದಾದಿಕಾರಿಗಳಿಗೆ ನೂತನ ಜವಾಬ್ದಾರಿಗಳನ್ನು ಹಂಚಿಕೆ ಮಾಡಲಾಯಿತು. ರಾಜ್ಯ ಉಪಾಧ್ಯಕ್ಷ ಆನಂದ ಹವಳನ್ನವರ, ಪಂಪಯ್ಯ, ಪ್ರದೀಪ ಪಾಟೀಲ, ರಾಜ್ಯ ಮಾಧ್ಯಮ ಕಾರ್ಯದರ್ಶಿ ನಿಂಗಪ್ಪ ಆರೇರ್, ಚಂದ್ರಮೋಳಿ, ಖಜಾಂಚಿ ನಾಗೇಶ, ರಾಜ್ಯ ಕಾರ್ಯದರ್ಶಿ ಪ್ರವೀಣ ಅರಕೇರಿ ಹಾಗೂ ರಾಜ್ಯ ಸಮಿತಿ ಪದಾಧಿಕಾರಿಗಳು ಇದ್ದರು.



ವಿದ್ಯುತ್ ವಿತರಣೆ ಖಾಸಗೀಕರಣದಿಂದ ತೊಂದರೆ

ಬೀಳಗಿ: ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಹೆಸ್ಕಾಂನ್ನು ಖಾಸಗೀಕರಣಗೊಳಿಸಿ ಟಾಟಾ ಪವರ್ ಕಂಪನಿಗೆ ವಹಿಸುವದರಿಂದ ರೈತರಿಗೆ, ಸಾರ್ವಜನಿಕರಿಗೆ ಹಾಗೂ ಹೆಸ್ಕಾಂ ನೌಕರರಿಗೆ ತೊಂದರೆಯಾಗಲಿದ್ದು, ತಕ್ಷಣ ಖಾಸಗೀಕರಣ ಮಾಡಬಾರದು ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಕಾರ್ಯಕಾರಿಣಿ ಸದಸ್ಯ ಬಸವರಾಜ ಗೋನಾಳ ಸರಕಾರಕ್ಕೆ ಆಗ್ರಹಿಸಿದರು.

ಪಟ್ಟಣದ ತಹಶೀಲ್ದಾರ್ ಕಚೇರಿ ಮುಂದೆ ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ರೈತರು ಕೆಇಬಿಯನ್ನು ಖಾಸಗೀಕರಣಗೊಳಿಸದಿರಲು ಆಗ್ರಹಿಸಿ ಪ್ರತಿಭಟನೆ ನಡೆಸಿ ಪ್ರಭಾರ ತಹಶೀಲ್ದಾರ್ (ಗ್ರೇಡ್- 2) ಸಂಗಮೇಶ ಚರಂತಿಮಠ ಮತ್ತು ಹೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಮಂಜುನಾಥ ಬೋಕಿ ಮೂಲಕ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಮನವಿ ಸಲ್ಲಿಸಿ ಅವರು ಮಾತನಾಡಿದರು. ಟಾಟಾ ಪವರ್ ಕಂಪನಿಯವರು ಹೆಸ್ಕಾಂ, ಬೆಸ್ಕಾಂ, ಜೆಸ್ಕಾಂ ರಾಜ್ಯದಲ್ಲಿ ವಿದ್ಯುತ್ ವಿತರಣೆಗೆ ಪರವಾಣಿಗೆ ಕೇಳಿ ಕ.ವಿ.ಚ.ಆ ಅನುಮತಿ ಕೇಳಿದ್ದು, ಇದರ ಕುರಿತು ಆಕ್ಷೇಪಣೆ ಸಲ್ಲಿಸಲು ಜೂನ್ 23 ರಂದು ಗ್ರಾಹಕರಿಗೆ ಅವಕಾಶ ನೀಡಲಾಗಿದ್ದು, ಗ್ರಾಹಕರು ತಮ್ಮ ಅಭಿಪ್ರಾಯ ತಿಳಿಸಲು ಕೋರಿದ್ದರಿಂದ ಸಾರ್ವಜನಿಕರು ವಿದ್ಯುಚ್ಛಕ್ತಿ ಆಯೋಗಕ್ಕೆ ಖಾಸಗೀಕರಣ ತಿರಸ್ಕಾರ ಮಾಡಬೇಕೆಂದು ಮನವಿ ಮಾಡಿಕೊಂಡರು.

ಕ.ರಾ.ರೈ ಸಂಘದ ಜಿಲ್ಲಾಧ್ಯಕ್ಷ ಡೊಂಗ್ರಿಸಾಬ ನದಾಫ ಮಾತನಾಡಿ, ಖಾಸಗೀಕರಣ ನಡೆಯಿಂದ ಪಂಪಸೆಟ್‌ಗಳಿಗೆ ನಾವು ವಿದ್ಯುತ್‌ನ್ನು ಕೃಷಿಗೆ ಉಚಿತವಾಗಿ ಪಡೆಯುತ್ತಿದ್ದು, ಗ್ರಹಜ್ಯೋತಿಗೆ ತೊಂದರೆಯಾಗಲಿದೆ. ಖಾಸಗಿ ಕಂಪನಿ ತನ್ನ ನಿಯಂತ್ರಣ ಸಾಧಿಸಿ ಸ್ಮಾರ್ಟ ಮೀಟರ್ ಅಳವಡಿಸಿ ದುಬಾರಿ ಬಿಲ್ ನ್ನು ವಿಧಿಸುತ್ತಾರೆ. ವಿದ್ಯುತ್ ವಿತರಣೆಯಲ್ಲಿ ಲಾಭದಾಯಕ ಅಲ್ಲದ ಗ್ರಾಮಗಳ ಬಗ್ಗೆ ನಿರ್ಲಕ್ಷ್ಯ ತಾಳಬಹುದಾಗಿದೆ. ಈಗಿರುವ ನೌಕರರಿಗೆ ಅಭದ್ರತೆ ಎದುರಾಗಬಹುದು. ಆದಕ್ಕಾಗಿ ಸರ್ಕಾರ ಖಾಸಗೀಕರಣಕ್ಕೆ ಮುಂದಾಗಬಾರದು ಎಂದರು. ರೈತ ಸಂಘದ ತಾಲೂಕಾಧ್ಯಕ್ಷ ಶಿವನಗೌಡ ಪಾಟೀಲ, ಪ್ರಧಾನ ಕಾರ್ಯದರ್ಶಿ ಸಿದ್ರಾಮಯ್ಯ ಮಠಪತಿ, ಮುಖಂಡರಾದ ಶ್ರೀಶೈಲ ಮೇಟಿ, ಸದಾಶಿವ ಆಗೋಜಿ, ರಾಜು ಪಾಟೀಲ, ಮಲ್ಲಪ್ಪ ಮಂಟೂರ, ಎಸ್.ಎಸ್.ಕುಡಕುಂಟಿ, ಚಿದಾನಂದ ಬೋರಡ್ಡಿ, ನರಸಪ್ಪ ಗಾಣಿಗೇರ, ನಾಗೇಶ ನಾಯ್ಕರ, ಎಚ್.ಎಸ್.ನದಾಫ್, ಲಕ್ಷ್ಮಣ ಗೊಣ್ಣಾಗಾರ ಮತ್ತಿತರಿದ್ದರು.



ಶೇ.56ರಷ್ಟು ಮೀಸಲಾತಿ ಹೆಚ್ಚಳಕ್ಕೆ ತಿಂಗಳ ಗಡುವು: ಉಗ್ರಪ್ಪ

ಬಾದಾಮಿ: ಎಸ್‌ಸಿ, ಎಸ್‌ಟಿ, ಒಬಿಸಿ ಸಮಾಜದವರಿಗೆ ಶೇ.56ರಷ್ಟು ಮೀಸಲಾತಿ ಜಾರಿ ಮಾಡಬೇಕು. ವಡ್ಡರ ಮತ್ತು ಭೋವಿ ಸಮಾಜಕ್ಕೆ ಎಸ್‌ಸಿ ಪ್ರಮಾಣಪತ್ರ ನೀಡಬೇಕು ಎಂದು ಆಗ್ರಹಿಸಿ ಬರುವ ಜುಲೈ ತಿಂಗಳಲ್ಲಿ ಒಂದು ಲಕ್ಷ ಜನರೊಂದಿಗೆ ಒಂದು ದಿನ ಧರಣಿ ಮಾಡಿ ರಾಜ್ಯ ಹಾಗೂ ಕೇಂದ್ರ ಸರಕಾರದ ಗಮನ ಸೆಳೆಯಲಾಗುವುದು ಎಂದು ಮಾಜಿ ಸಂಸದ ವಿ.ಎಸ್. ಉಗ್ರಪ್ಪ ಹೇಳಿದರು.

ಪಟ್ಟಣದ ಅಕ್ಕಮಹಾದೇವಿ ಅನುಭವ ಮಂಟಪದಲ್ಲಿ ಹಮ್ಮಿಕೊಂಡಿದ್ದ ಮೂಲ ಭೋವಿ ಸಮಾಜದ ಸಂಘಟನಾ ಸಭೆ ಹಾಗೂ ಸನ್ಮಾನ ಸ್ವೀಕರಿಸಿ ಮಾತನಾಡಿದರು. ಮಹಾರಾಷ್ಟ್ರದಲ್ಲಿ ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ಸಮಾಜದವರಿಗೆ ಮೀಸಲಾತಿ ಶೇ69 ಇದೆ. ಅದೇ ಮಾದರಿಯಲ್ಲಿ ನಮ್ಮ ರಾಜ್ಯದಲ್ಲಿ ಶೇ.56ಕ್ಕೆ ಹೆಚ್ಚಿಸಲು ಕೇಂದ್ರ ಸರಕಾರ ಸೆಡ್ಯೈಲ್ 9ರಲ್ಲಿ ಸೇರಿಸಬೇಕು. ಭೋವಿ ಮತ್ತು ವಡ್ಡರ ಸಮಾಜ ಒಂದೇ ಅಲ್ಲ ಇವರೆಕ್ಕೂ ಎಸ್‌ಸಿ ಪ್ರಮಾಣಪತ್ರ ನೀಡಬೇಕು.

ಸಂವಿಧಾನದ ಆರ್ಟಿಕಲ್ 341, 342 ರ ಪ್ರಕಾರ ಭೋವಿ ಸಮಾಜದವನ್ನು ಎಸ್.ಸಿ. ಎಂದು ಪರಿಗಣಿಸಬೇಕು. ಭೋವಿ, ವಡ್ಡರ ಸೇರಿದಂತೆ ಶೋಷಿತರ ಪರ ನ್ಯಾಯ ಸಿಗುವವರೆಗೆ ಹೋರಾಟ ಮಾಡುತ್ತೇನೆ ಎಂದು ಭರವಸೆ ನೀಡಿದರು.



ರಾಜ್ಯ ಭೋವಿ ಸಮಾಜದ ಪರವಾಗಿ ವಿ.ಎಸ್.ಉಗ್ರಪ್ಪ ಅವರನ್ನು ಸನ್ಮಾನಿಸಲಾಯಿತು. ಭೋವಿ ಸಮಾಜದ ರಾಜ್ಯಾಧ್ಯಕ್ಷ ಅಂದಪ್ಪ ಭೋವಿ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಮುಖಂಡರಾದ ಕೇಶವ ಭೋವಿ, ವಿಠ್ಠಲ ಭೋವಿ, ಕಿಶೋರ ವಿಚಾಟೆ, ಸುಭಾಸ ಭೋವಿ, ಶಂಕರ ಭೋವಿ, ಹನಮಂತರಾಯಪ್ಪ, ಯಲ್ಲಪ್ಪ ಭೋವಿ, ವೆಂಕಟೇಶ ನಾಯಕ, ಶರಣಪ್ಪ ಗುಡಿಹಿಂದಿನ ಹಾಜರಿದ್ದರು. ಭೋವಿ ಸಮಾಜದ ಜಿಲ್ಲಾಧ್ಯಕ್ಷ ಮುತ್ತು ಭೋವಿ ಪ್ರಸ್ತಾವಿಕವಾಗಿ ಮಾತನಾಡಿದರು.ರಾಜ್ಯದ ವಿವಿದ ಜಿಲ್ಲೆಗಳಿಂದ ಪದಾಧಿಕಾರಿಗಳು, ಮುಖಂಡರು, ಮಹಿಳೆಯರು ಭಾಗವಹಿಸಿದ್ದರು.

ಭಾರತೀಯ ಸಂಸ್ಕೃತಿಯಲ್ಲಿ ಅಕ್ಷರಾಭ್ಯಾಸ ಮಹತ್ವದ್ದು: ನೀಲಕಂಠ ಶ್ರೀ

ಗುಳೇದಗುಡ್ಡ: ಅಕ್ಷರಾಭ್ಯಾಸವು ಮಗುವಿನ ವಿದ್ಯಾಭ್ಯಾಸದ ಆರಂಭ ಸೂಚಿಸುವ ಈ ಕಾರ್ಯಕ್ರಮ ಹಿಂದೂ ಧರ್ಮದಲ್ಲಿ ಅತ್ಯಂತ ಮಹತ್ವ ಸ್ಥಾನ ಪಡೆದಿದೆ. ಅಕ್ಷರಾಭ್ಯಾಸ ಮಾಡಿಸಿದರೆ ಮಗುವು ಜ್ಞಾನ ಪಡೆಯುತ್ತದೆ ಎಂದು ಅಮರೇಶ್ವರ ಮಠದ ನೀಲಕಂಠ ಸ್ವಾಮಿಗಳು ಹೇಳಿದರು.

ಸರಸ್ವತಿ ವಿದ್ಯಾಮಂದಿರದ ಮಡಿವಾಳಪ್ಪ ಹುಚ್ಚಪ್ಪ ಆಡಿನ ಶಾಲೆಯಲ್ಲಿ ಅರುಣ ಮತ್ತು 1ನೇ ವರ್ಗದ ಮಕ್ಕಳಿಗೆ ಅಕ್ಷರಾಭ್ಯಾಸ ಹಾಗೂ ವಿದ್ಯಾರಂಭದ ಕಾರ್ಯಕ್ರಮದ ಸಾನ್ನಿಧ್ಯವಹಿಸಿ ಮಾತನಾಡಿ, ಭಾರತೀಯ ಸಂಸ್ಕೃತಿಯ ಮಹತ್ವದ ಸಂಸ್ಕಾರಗಳಲ್ಲಿ ಒಂದಾದ ಅಕ್ಷರಾಭ್ಯಾಸವು ಮಗುವಿನ ಜೀವನದಲ್ಲಿ ಜ್ಞಾನಾರ್ಜನೆಯ ಪಯಣಕ್ಕೆ ಶುಭಾರಂಭದ ಸಂಕೇತವಾಗಿದೆ. ಮಗುವು ತನ್ನ ಜೀವನದ ಮೊಟ್ಟಮೊದಲ ಅಕ್ಷರವನ್ನು ಬರೆಯುವ ಈ ಪವಿತ್ರ ಕ್ಷಣವು ಭಾರತೀಯ ಪರಂಪರೆಯಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ. ಭಾರತೀಯ ಪುರಾತನ ಸಂಸ್ಕೃತಿ, ಸಂಪ್ರದಾಯ ಹಾಗೂ ಮೌಲ್ಯಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಅಕ್ಷರಾಭ್ಯಾಸದಂತಹ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ಶ್ಲಾಘನೀಯ. ಶಿಕ್ಷಣದ ಜೊತೆಗೆ ಭಾರತೀಯ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವಲ್ಲಿ ಇಂತಹ ಆಚರಣೆಗಳು ಮಹತ್ವದ ಪಾತ್ರ ವಹಿಸುತ್ತವೆ ಎಂದರು.



ಸಂಸ್ಥೆಯ ಕಾರ್ಯದರ್ಶಿ ಮಲ್ಲಿಕಾರ್ಜುನ್ ತಾಂಡೂರ ಕಾರ್ಯದರ್ಶಿಗಳು. ಸಂಗಣ್ಣ ಹುನಗುಂದ ಶಾಲಾ ಮುಖ್ಯೋಪಾಧ್ಯಯರಾದ ನಾಗರಾಜ ದೊಡಮನಿ ಮಲ್ಲಿಕಾರ್ಜುನ ಹಿರೇಮಠ, ನಿವೃತ್ತ ಮುಖ್ಯೋಪಾಧ್ಯಯ ಪರಶುರಾಮ ಬಂತಲ್, ಶಿಕ್ಷಕರಾದ ವಿವೇಕಾನಂದ ದೇವಾಂಗಮಠ. ಕೆ.ಎಸ್.ರಂಜನಗಿ,ಎಸ್.ಎಸ್.ಶೀಘ್ರ, ಶ್ರೀಕಾಂತ ರಾಠೋಡ, ಅಕ್ಷತಾ ಪಾಟೀಲ, ಆರ್.ಪಿ.ಬೊಂಬಲೇಕರ, ಕಾವೇರಿ ಶಿರಾಗುಂಪಿ. ವಂದನಾ ಕಂಠಿ, ಇಂದೂಮತಿ ಕಂಠಿ, ಗುರುದೇವಿ ಪತ್ತಾರ ಅಶ್ವಿನಿ ಸುಳಕೇರಿ, ಅಶ್ವಿನಿ ಮೂಲಿಮನಿ, ಗೌರಮ್ಮ ಏಳುಮಗ್ಗದ, ಎಸ್.ಎ.ಶೇಖಾ ಇದ್ದರು.

ಶಿಕ್ಷಕರ ಪಾತ್ರ ಮಹತ್ವದ್ದು: ಶ್ರೀ



ಗುಳೇದಗುಡ್ಡ: ಪ್ರಜ್ಞಾವಂತ ಸಮಾಜ ನಿರ್ಮಾಣಕ್ಕೆ ನಿಸ್ವಾರ್ಥತೆಯಿಂದ ಸೇವೆ ನೀಡುವ ಶಿಕ್ಷಕ ವೃತ್ತಿ ಅತ್ಯಂತ ಶ್ರೇಷ್ಠ ಹಾಗೂ ಮಹತ್ವಪೂರ್ಣವಾಗಿದೆ ಎಂದು ಮರಡಿಮಠದ ಅಭಿನವ ಕಾಡಸಿದ್ದೇಶ್ವರ ಮಹಾಸ್ವಾಮಿಗಳು ಹೇಳಿದರು.

ಭಾನುವಾರ ಪಟ್ಟಣದ ಶೆಟ್ಟರ ಸಮಸ್ತ ಕಲ್ಯಾಣ ಮಂಟಪದಲ್ಲಿ ನಡೆದ ಗುರು ಸಮರ್ಪಣೆ ಮತ್ತು ಸೇವಾ ನಿವೃತ್ತಿ ಸಮಾರಂಭದಲ್ಲಿ ಸಾನಿಧ್ಯ ವಹಿಸಿ ಮಾತನಾಡಿ, ನಿಂಗಯ್ಯ ಪೂಜಾರಿ ಗುರುಗಳು ಸುದೀರ್ಘ ಸೇವೆ ಸಲ್ಲಿಸಿ ಮೌಲ್ಯಯುತ ಶಿಕ್ಷಣ ನೀಡುತ್ತಾ ಶಿಕ್ಷಣ ರಂಗದಲ್ಲಿ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಿ ಸೇವೆ ಸಲ್ಲಿಸಿದ್ದಾರೆ. ಶಿಕ್ಷಕ ವೃತ್ತಿ ಅತ್ಯಂತ ಪವಿತ್ರವಾದದ್ದು, ಜೀವನದುದ್ದಕ್ಕೂ ನಿಷ್ಠೆಯಿಂದ ಬೋಧನೆ ಮಾಡಿ ಸಾವಿರಾರು ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆ ಮಾಡಿದ್ದಾರೆ. ಅವರು ತಮ್ಮ ನಿವೃತ್ತಿ ಜೀವನವನ್ನು ಸಮಾಜಮುಖಿ ಚಿಂತನೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಬದುಕು ಸಾರ್ಥಕ ಪಡಿಸಿಕೊಳ್ಳಬೇಕು ಸೇವಾ ನಿವೃತ್ತಿ ಬದುಕು ಅತ್ಯಂತ ನೆಮ್ಮದಿಯಾಗಲಿ ಎಂದು ಶುಭಹಾರೈಸಿದರು.

ಕ್ಷೇತ್ರ ಸಮನ್ವಯ ಅಧಿಕಾರಿ ಎಂಬಿ ದೊಡ್ಡಪ್ಪನವರು, ಜಂಗಮ ಸಮಾಜದ ಅಧ್ಯಕ್ಷ ಶಿವನಯ್ಯ ಮಳ್ಳಿಮಠ, ಸರ್ವ ಮಂಗಳ ಪೂಜಾರಿ, ಸಂಗಮೇಶ ಎಲಿಗಾರ, ರಾಜು ಹಿರೇಮಠ, ಪ್ರಭು ತಟ್ಟಿ ಮಠ, ಮಹಾಂತೇಶ ಸರಗನಾಚಾರಿ, ಸಿದ್ದು ಕರನಾಲಗಿ, ಸಂಜು ನಡುವಿನಮನಿ, ಭುವನ್ ಪೂಜಾರಿ ಇದ್ದರು.

ಸಮಸ್ಯೆ ಆಲಿಸಿದ ಮುಖ್ಯಾಧಿಕಾರಿ

ಲೋಕಾಪುರ: ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿರುವ ಬರುವ ವಾಡ್‌ಗಳಲ್ಲಿ ಮೂಲ ಸೌಕರ್ಯ ಒದಗಿಸುವ ಸಮಸ್ಯೆಗಳ ಕುರಿತು ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಸಾಬಣ್ಣ ಪೂಜೇರಿ ವೀಕ್ಷಣೆ ಮಾಡಿ ಸಾರ್ವಜನಿಕರ ಸಮಸ್ಯೆ ಆಲಿಸಿದರು. ಮಾಜಿ ಸಚಿವ ಆರ್.ಬಿ.ತಿಮ್ಮಾಪುರ ನಿರ್ದೇಶನದಂತೆ ಗುರುವಾರ ಪಟ್ಟಣದ 11,12.13 ಮತ್ತು 15 ವಾರ್ಡ್‌ಗಳಿಗೆ ಭೇಟಿ ನೀಡಿ ಮೂಲ ಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಸಾರ್ವಜನಿಕರ ಕೊಂದು ಕೊರತೆಗಳನ್ನು ಆಲಿಸಿ ಮಾತನಾಡಿದ ಅವರು, ವಾರ್ಡಗಳಲ್ಲಿ ಕುಡಿಯುವ ನೀರು, ಸ್ವೈರ್ಮಲ್ಯ, ರಸ್ತೆಗಳ ಸ್ಥಿತಿಗತಿ, ಚರಂಡಿ ವ್ಯವಸ್ಥೆ ಮತ್ತು ಬೀದಿ ದೀಪಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿವೆಯೇ ಎಂದು ಖಚಿತಪಡಿಸಿಕೊಂಡು ಜನರಿಗೆ ಅಗತ್ಯ ಸೇವೆ ಒದಗಿಸಲು ಪ್ರಯತ್ನಿಸುವುದಾಗಿ ತಿಳಿಸಿದರು. ಸ್ಥಳೀಯ ನಿವಾಸಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಆಲಿಸಿ, ಅವುಗಳನ್ನು ತಕ್ಷಣವೇ ಬಗೆಹರಿಸಲು ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗೆ ನಿರ್ದೇಶನ ನೀಡಲಾಗುವುದು ಮುಂದಿನ ದಿನಮಾನಗಳಲ್ಲಿ ಪ್ರತಿ ತಿಂಗಳು ಎಲ್ಲ ವಾರ್ಡಗಳಿಗೆ ಭೇಟಿ ನೀಡಿ ಸಾರ್ವಜನಿಕರಿಗೆ ಆಗುವ ಪರಿಹಾರಗಳನ್ನು ತಕ್ಷಣವೇ ಪರಿಹರಿಸಲಾಗುವುದು ಎಂದರು. ಪಟ್ಟಣ ಪಂಚಾಯತಿ ಎಂಜಿನಿಯರ್ ಪ್ರಶಾಂತ ಪಾಟೀಲ, ವಿಠ್ಠಲ ಕನಸಗೇರಿ, ಸುಲ್ತಾನ ಕಲಾದಗಿ, ದುರ್ಗಪ್ಪ ಭಜಂತ್ರಿ, ರೆಹೆಮಾನ ತೊರಗಲ್, ಗೋಪಾಲ ಲಮಾಣಿ, ಸಿದ್ದು ಕಿಲಾರಿ, ವಾರ್ಡಗಳ ಸಾರ್ವಜನಿಕರು ಮತ್ತು ಪಪಂ ಸಿಬ್ಬಂದಿ ಇದ್ದರು.



40ನೇ ದಿನಕ್ಕೆ ಮುಂದುವರಿದ ಧರಣಿ



ಹುನಗುಂದ: ತಾಲೂಕಿನ ಇದ್ದಲಗಿ ಗ್ರಾಮದ ಮುಳಗಡೆ ಸಂತ್ರಸ್ತರು ವಾಸಿಸುವ ಶೆಡ್‌ಗಳನ್ನು ಪುನರ್ವಸತಿ ಕೇಂದ್ರದಲ್ಲಿ ಪುನರ ನಿರ್ಮಾಣ ಮಾಡಿಕೊಡುವುದು ಅಲ್ಲಿ ಮೂಲ ಸೌಲಭ್ಯ ಕಲ್ಪಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಸುವಂತೆ ಆಗ್ರಹಿಸಿ ನಡೆಸುತ್ತಿರುವ ಅನಿರ್ದಿಷ್ಟಾವಧಿ ಸಂತ್ರಸ್ತರ ಧರಣಿಯು ಭಾನುವಾರಕ್ಕೆ 40ನೇ ದಿನಗಳೇ ಕಳೆದವು. ಸಂತ್ರಸ್ತರು ತಮ್ಮ ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟುಕೊಂಡು ನಡೆಸುತ್ತಿರುವ ಹೋರಾಟಕ್ಕೆ 40 ದಿನಗಳೇ ಕಳೆದರೂ ಪರಿಹಾರ ಮಾತ್ರ ಮರೀಚಿಕೆಯಂತಾಗಿದೆ. ಆದರೆ ಹೋರಾಟಗಾರರು ಮಾತ್ರ ಹೋರಾಟದ ಪಟ್ಟನ್ನು ಸಡಿಲಿಸದೇ ಸರ್ಕಾರ ಮತ್ತು ಜನಪ್ರತಿನಿಧಿಗಳನ್ನು ಹಾಗೂ ಅಧಿಕಾರಿಗಳ ಕಣ್ತೆರೆಸುವವರೆಗೆ ಹೋರಾಟವನ್ನು ಮುಂದುವರಿಸಿದ್ದಾರೆ. 18 ವರ್ಷಗಳಿಂದ ಶೆಡ್ ನಲ್ಲಿ ಚಳಿ, ಮಳೆ, ಬೇಸಿಗೆ, ಬಿರುಗಾಳಿಯನ್ನು ಸಹಿಸಿ ಬದುಕಿದ್ದಾಗಿದೆ. ಸರ್ಕಾರ ನಮ್ಮ ಬೇಡಿಕೆಗಳನ್ನು ಈಡೇರಿಸುವವರೆಗೆ ಎಷ್ಟೇ ಕಷ್ಟ ಸಂಕಷ್ಟ ಬಂದರೂ ಕೂಡಾ ಹೋರಾಟ ಮಾತ್ರ ನಿರಂತರವಾಗಿರುತ್ತದೆ. ನಮ್ಮ ನ್ಯಾಯಯುತ ಬೇಡಿಕೆಗಳು ಈಡೇರುವವರೆಗೂ ನಮ್ಮ ಅನಿರ್ದಿಷ್ಟಾವಧಿ ಧರಣಿ ಮಾತ್ರ ನಿಲ್ಲೋದಿಲ್ಲ ಮುಂದುವರೆಯುತ್ತೆ ಎನ್ನುತ್ತಾರೆ ಧರಣಿ ನಿರತ ಸಂತ್ರಸ್ತರು. ಜುಮ್ಮಣ್ಣ ನಾಗರಾಳ, ಯಮನಪ್ಪ ಕೊಣ್ಣಾಟಿ, ಯಲ್ಲಪ್ಪ ಕುರಿ, ರಾಜಮ್ಮ ವಾಲಿಕಾರ, ನೀಲಮ್ಮ ಆನೆಹೊಸೂರ, ರೇಣವ್ವ ಕುರಿ, ಅಂಬವ್ವ ಕಮ್ಮಾರ, ಬಸವ್ವ ಕೆಸರಬಾವಿ, ಬಸವರಾಜ ಮುಳ್ಳೂರ ಸೇರಿದಂತೆ ಅನೇಕರು ಇದ್ದರು.

ಸಂಘಟಿತ ಪ್ರಯತ್ನ ಅವಶ್ಯ: ನರಗುಂದ

ಬಾಗಲಕೋಟೆ: ಸಾಮಾಜಿಕ ಸಮಸ್ಯೆಯಾಗಿರುವ ಬಾಲ ಕಾರ್ಮಿಕ ಪದ್ಧತಿ ನಿವಾರಿಸಲು ಸಂಘಟಿತ ಪ್ರಯತ್ನಅವಶ್ಯವಾಗಿದೆ. ಈ ದಿಶೆಯಲ್ಲಿಯುವ ಸಮುದಾಯ ಮಹತ್ವದ ಪಾತ್ರವನ್ನು ವಹಿಸಬೇಕು ಎಂದು ಪ್ರಾಚಾರ್ಯ ಶ್ರೀನಿವಾಸ ನರಗುಂದ ಹೇಳಿದರು.

ನಗರದ ವಿದ್ಯಾ ಪ್ರಸಾರಕ ಮಂಡಳದ ಎಸ್.ಆರ್. ನರಸಾಪೂರ ಕಲಾ ಹಾಗೂ ಎಂ.ಬಿ.ಶಿರೂರ ವಾಣಿಜ್ಯ ಮಹಾವಿದ್ಯಾಲಯದ ಎನ್‌ಎಸ್‌ಎಸ್ ಘಟಕ 1 ಮತ್ತು 2 ಆಯೋಜಿಸಿದ್ದ 'ವಿಶ್ವ ಬಾಲ ಕಾರ್ಮಿಕ ವಿರೋಧಿ ದಿನದಕಾರ್ಯಕ್ರಮದಲ್ಲಿಅವರು ಮಾತನಾಡಿದರು. ಹಲವು ಸಾಮಾಜಿಕ ಸಮಸ್ಯೆ ಮತ್ತು ಅವುಗಳ ಪರಿಣಾಮಗಳ ಬಗ್ಗೆ ಜನರಲ್ಲಿಜಾಗೃತಿ ಮೂಡಿಸುವಲ್ಲಿ ಶಿಕ್ಷಣ ಸಂಸ್ಥೆಗಳು ಮಹತ್ವದ ಪಾತ್ರ ವಹಿಸುತ್ತವೆ ಎಂದರು.

ಬಾಲ ಕಾರ್ಮಿಕ ಪದ್ಧತಿ ಮಕ್ಕಳ ಬಾಲ್ಯವನ್ನು ಕಸಿದುಕೊಂಡು ಅವರ ಸಾಮರ್ಥ್ಯಕ್ಕೆ ಧಕ್ಕೆಯಾಗಿ ಬೆಳವಣಿಗೆಗೆ ಹಿನ್ನಡೆ ಉಂಟುಮಾಡುವುದು.ಈ ಪದ್ಧತಿಯಿಂದ ಮಕ್ಕಳ ರಕ್ಷಣೆಯಾಗಬೇಕು. ಅವರ ಹಕ್ಕುಗಳ ಬಗ್ಗೆ ಅರಿವು ಮೂಡಿಸಬೇಕು. ಈ ದಿಶೆಯಲ್ಲಿ ಯುವಕರು ತಮ್ಮ ಕೊಡುಗೆ ನೀಡಬೇಕು ಎಂದರು. ಎನ್‌ಎಸ್‌ಎಸ್ ಅಧಿಕಾರಿ ಎಸ್.ಎಂ.ಹಡಪದ ಪ್ರತಿಜ್ಞಾವಿಧಿ ಬೋಧಿಸಿದರು. ಡಾ.ಎಸ್.ಎಸ್.ಹಂಗರಗಿ, ಎಂ.ಕೆ.ಗುಡೂರ, ಎ.ಎ.ಗಂಗಲ್, ಬಿ.ಡಿ.ಮಾದರ, ಎ.ಎಲ್.ಬಿಲ್ಲಾರ ಪಾಲ್ಗೊಂಡರು.



ಕಿರುಸುದ್ದಿ

ಮಹಿಳೆಯರು ಉನ್ನತ ಹುದ್ದೆ ಅಲಂಕರಿಸಲಿ: ನಾಯಕ



• **ವಿಜಯಪುರ:** ಮಹಿಳೆಯರು ತಮ್ಮಲ್ಲಿರುವ ಪ್ರತಿಭೆ ಮತ್ತು ಶಕ್ತಿಯನ್ನು ಹೊರಹೊಮ್ಮಿಸಿ ಜೀವನದಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸುತ್ತ ಸಾಗಬೇಕು ಎಂದು ಬಾಗಲಕೋಟ ಹಾಗೂ ವಿಜಯಪುರದ ತುಳಸಿಗೇರಿ ಮಧುಮೇಹ ಆಸ್ಪತ್ರೆಯ ಮುಖ್ಯ ಮಧುಮೇಹ ತಜ್ಞ ಡಾ.ಬಾಬು ರಾಜೇಂದ್ರ ನಾಯಕ ಹೇಳಿದರು.

ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ, ಸಸ್ಯಶಾಸ್ತ್ರ ಅಧ್ಯಯನ ವಿಭಾಗದ ಸಹಯೋಗದಲ್ಲಿ ಇತ್ತಿಚಿಗೆ ಹಮ್ಮಿಕೊಂಡಿದ್ದ, ಪರಿಸರ ದಿನಾಚರಣೆ ಹಾಗೂ ಎಂ.ಎಸ್‌ಸಿ ಅಂತಿಮ ವರ್ಷದ ವಿದ್ಯಾರ್ಥಿನಿಯರ ಬೀಳ್ಕೊಡುಗೆ ಸಮಾರಂಭದಲ್ಲಿ ಒಬ್ಬ ವಿದ್ಯಾರ್ಥಿ: ಒಂದು ಸಸಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಡಾ.ಬಾಬಾಸಾಹೇಬ ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಜಾಯ್ ಹೊಸ್ಕೇರಿ ಮಾತನಾಡಿದರು. ಸಸ್ಯಶಾಸ್ತ್ರ ಅಧ್ಯಯನ ವಿಭಾಗದ ಸಂಯೋಜಕ ಡಾ.ಬಾಬು ಆರ್.ಎಲ್. ಮಾತನಾಡಿ, ವಿದ್ಯಾರ್ಥಿನಿಯರು ವಿದ್ಯಾಭ್ಯಾಸದ ಜೊತೆಗೆ ಮಾನವೀಯ ಮೌಲ್ಯ ಬೆಳೆಸಿಕೊಂಡು ಉತ್ತಮ ಸಾಧನೆ ಮಾಡಬೇಕು ಹಾಗೂ ಮಹಿಳಾ ಉದ್ಯಮಶೀಲತೆಯತ್ತ ಹೆಚ್ಚಿನ ಗಮನ ಹರಿಸಿ ಉದ್ಯೋಗದಾತರಾಗಬೇಕು ಎಂದರು. ದ್ರಾಕ್ಷಾಯಣಿ ಹಾಗೂ ಶುನೈನ್ ನಾಜ್ ನಿರೂಪಿಸಿದರು. ಗ್ರೀಷ್ಮಾ ಕುಲಕರ್ಣಿ ಸ್ವಾಗತಿಸಿದರು, ಶ್ರೀದೇವಿ ನಿಗಡಿ ಪರಿಚಯಿಸಿದರು. ಶಶಿಕಲಾ ವಂದಿಸಿದರು.

ಹೂಗಾರಗೆ ಪಿಎಚ್‌ಡಿ



• **ಸಿಂದಗಿ:** ಸ್ಥಳೀಯ ನಗರದ ತಾಲೂಕು ಶಿಕ್ಷಣ ಪ್ರಸಾರಕ ಮಂಡಳಿಯ ಸಿ.ಎಂ.ಮನಗೂಳಿ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯದಲ್ಲಿ ಶಿಕ್ಷಣಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿರುವ ಎಸ್. ಕೆ.ಹೂಗಾರ ಅವರಿಗೆ ಗುಲಬರ್ಗಾ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಮುಖ್ಯಸ್ಥ ಡಾ.ಹೂವಿನಭಾವಿ ಬಿ.ಎಲ್ ಅವರ ಮಾರ್ಗದರ್ಶನದಲ್ಲಿ ಎ ಸ್ಟಡಿ ಆನ್ ಇಂಪ್ಯಾಕ್ಟ್ ಆಫ್ ಆಯ್.ಸಿ.ಟಿ ಆನ್ ಎಂಪಾವರಮೆಂಟ್ ಆಫ್ ಬಿ.ಇಡಿ ಕೋರ್ಸ್ ಇನ್ ಟೀಚರ್ ಎಜುಕೇಶನ್ ಇನ್ಸ್ಟಿಟ್ಯೂಶನ್ಸ್ ಎಂಬ ವಿಷಯದ ಮೇಲೆ ಮಂಡಿಸಿದ ಪ್ರಬಂಧಕ್ಕೆ ಡಾಕ್ಟರೇಟ್ ನೀಡಿದೆ. ಡಾಕ್ಟರೇಟ್ ಪದವಿಗೆ ಭಾಜನರಾದ ಸಂಸ್ಥೆಯ ಚೇರಮನ್ನರು ಹಾಗೂ ಶಾಸಕ ಅಶೋಕ ಮನಗೂಳಿ, ಡಾ.ಅರವಿಂದ ಮನಗೂಳಿ ಸೇರಿದಂತೆ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿ ಶುಭ ಕೋರಿದ್ದಾರೆ.

ಕವಿತೆಗಳಿಗೆ ಆಹ್ವಾನ

• **ವಿಜಯಪುರ:** ನಗರದ ಬಸವ ಜನ್ಮಭೂಮಿ ಪ್ರತಿಷ್ಠಾನ ವತಿಯಿಂದ ಪತ್ರಿಕಾ ದಿನಾಚರಣೆ ನಿಮಿತ್ತ ರಾಜಾಜಿನಗರದ ಬಸವನಗರ ಸಭಾಂಗಣದಲ್ಲಿ ಜುಲೈ ಮೊದಲ ವಾರದಲ್ಲಿ ಕವಿಗೋಷ್ಠಿ, ಪತ್ರಿಕಾ ಮಾಧ್ಯಮದ ಮಹತ್ವ ಕುರಿತು ಉಪನ್ಯಾಸ ಹಾಗೂ ಪ್ರತಿಷ್ಠಾನದ ಪ್ರಶಸ್ತಿಗೆ ಭಾಜನ ಪತ್ರಕರ್ತರನ್ನು ಪೂರ್ವ ನಿರ್ಧರಿಸಿದ ದಿನಾಂಕದಂದು ಗೌರವ ಸನ್ಮಾನ ಕಾರ್ಯಕ್ರಮ ಹಮ್ಮಿಕೊಂಡಿದೆ. ಆಸಕ್ತ ಕವಿಗಳು ಪತ್ರಿಕೆಗಳ ಮಹತ್ವ ಮತ್ತು ಓದುಗ ವಿಷಯ ಕುರಿತು 20 ಸಾಲುಗಳ ಮಿತಿಯುಳ್ಳ ಒಂದು ಕವಿತೆಯನ್ನು ಜೂ.25ರೊಳಗೆ ಮುರುಗೇಶ ಸಂಗಮ ಸಂಚಾಲಕ, ಬಸವಜನ್ಮಭೂಮಿ ಪ್ರತಿಷ್ಠಾನ ಆರ್‌ಟಿಒ ಕಚೇರಿ ಹಿಂಭಾಗ, ನಾಡದೇವಿ ಮಂದಿರ ರಸ್ತೆ, ರಾಜಾಜಿನಗರ ವಿಜಯಪುರ ವಿಳಾಸಕ್ಕೆ ಕಳುಹಿಸಬೇಕು. ಮಾಹಿತಿಗಾಗಿ (ಮೊ.9449437604) ಸಂಪರ್ಕಿಸಬೇಕೆಂದು ಪ್ರಕಟಣೆ ತಿಳಿಸಿದೆ.

ಶೀಘ್ರದಲ್ಲೇ ರಸ್ತೆ ಅಭಿವೃದ್ಧಿ: ಶಾಸಕ ಯತ್ನಾಳ

• **ವಿಜಯಪುರ:** ನಗರದ ಗಾಂಧಿ ಚೌಕದಿಂದ ಸಿದ್ದೇಶ್ವರ ದೇವಸ್ಥಾನದ ವರೆಗಿನ ಸಿದ್ದೇಶ್ವರ ದೇವಸ್ಥಾನ ಮಾರ್ಗದ ಅಭಿವೃದ್ಧಿಗಾಗಿ 2023–24ನೇ ಸಾಲಿನ ಸಿಆರ್‌ಎಫ್ ಯೋಜನೆಯಡಿ 6 ಕೋಟಿ ರೂ. ಅನುದಾನ ಮಂಜೂರಾಗಿ ಟೆಂಡರ್ ಸಹ ಆಹ್ವಾನಿಸಲಾಗಿದ್ದು, ಶೀಘ್ರದಲ್ಲೇ ಮಾದರಿ ರಸ್ತೆಯಾಗಿ ಅಭಿವೃದ್ಧಿಗೊಳಿಸಲಾಗುವುದು ಎಂದು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದ್ದಾರೆ.

ಸುಗಮ ಸಂಚಾರದ ಜೊತೆಗೆ ನಗರದ ಅಂದ ಹೆಚ್ಚಿಸಿರುವ ಡಾ.ಬಿ.ಆರ್.ಅಂಬೇಡ್ಕರ್ ಮಾರ್ಗ, ಸುಭಾಷಚಂದ್ರ ಬೋಸ್ ಮಾರ್ಗ, ಅಟಲ್ ಬಿಹಾರಿ ವಾಜಪೇಯಿ ಮಾರ್ಗ, ಮಹಾರಾಣಾ ಪ್ರತಾಪ ಮಾರ್ಗ ಸೇರಿದಂತೆ ನಗರದ ಅನೇಕ ಪ್ರಮುಖ ರಸ್ತೆಗಳನ್ನು ಅಭಿವೃದ್ಧಿಪಡಿಸಿದ ಮಾದರಿಯಲ್ಲಿ ಗುಣಮಟ್ಟದ ಸಿಸಿ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲಾಗುವುದು ಎಂದು ತಿಳಿಸಿದ್ದಾರೆ.



ಬಾಗಲಕೋಟೆ: ಬಿಟಿಡಿಎ ಕಚೇರಿಯ ಅಧಿಕಾರಿಗೆ ಚಪ್ಪಲಿ ಏಟಿನಿಂದ ಹೊಡೆದಿರುವುದನ್ನು ಖಂಡಿಸಿ, ಹಲ್ಲೆ ಮಾಡಿರುವ ವ್ಯಕ್ತಿಯನ್ನು ಬಂಧಿಸಬೇಕು ಎಂದು ಒತ್ತಾಯಿಸಿ ಬಿಟಿಡಿಎ ಅಧ್ಯಕ್ಷ ಪ್ರಕಾಶ ತಪಶೆಟ್ಟಿಯವರ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಸಂಗಪ್ಪನವರಿಗೆ ಮನವಿ ಸಲ್ಲಿಸಲಾಯಿತು.

ಮಹಾಮೃತ್ಯುಂಜಯ ಯಜ್ಞ ಪೂರ್ಣಾಹುತಿ ಸಂಪನ್ನ

• **ವಿಜಯಪುರ:** ಇಲ್ಲಿನ ಗಣೇಶ ನಗರದಲ್ಲಿ ಹಮ್ಮಿಕೊಂಡ ಮೂವತ್ತುಮೂರು ಬ್ರಾಹ್ಮಣರ ಏಕಕಂಠದ ಮಂತ್ರಘೋಷದ ನಡುವೆ ಮಹಾ ಮೃತ್ಯುಂಜಯ ಯಜ್ಞದ ಪೂರ್ಣಾಹುತಿ ಸಂಪನ್ನಗೊಂಡಿತು. ಅಧಿಕ ಮಾಸದ ಪ್ರಯುಕ್ತ ವಿದ್ವಾನ್ ಗುರುರಾಜ ಆಚಾರ್ಯರ ಸಂಕಲ್ಪದಂತೆ ಸುಮಾರು 10–15 ಸಾಧಕರು ಪ್ರತಿ ದಿನ ಮಹಾಮೃತ್ಯುಂಜಯ ಜಪ ಕೈಗೊಂಡ ಹಿನ್ನೆಲೆ ಮಹಾಮೃತ್ಯುಂಜಯ ಯಜ್ಞ ನಡೆಯಿತು. ಪಂ.ಪ್ರಭಂಜನಾಚಾರ್ಯ ಪೂಜಾರ್, ಪಂ.ಶ್ರೀಪಾದಾಚಾರ್ಯ (ಯರಗೋಳ), ಶ್ರೀಕಾಂತಾಚಾರ್ಯ ಆಶ್ರೀತ್, ಪ್ರಾಣೇಶ ಆಚಾರ್ಯ ಆಶ್ರೀತ, ಅಚ್ಯುತ್ ಆಚಾರ್ಯ ಪುರೋಹಿತ್, ದತ್ತಾತ್ರೇಯ ದೀಕ್ಷಿತ್, ಅಶೋಕ ಜೋಶಿ ನೇತೃತ್ವದಲ್ಲಿ ಹೋಮ- ಹವನ ನೆರವೇರಿತು. ಗಣೇಶನಗರದ ಮಹಿಳಾ ಮಂಡಳದವರು ಸ್ಥಾಪಿಸಿದ ಅಧಿಕ ಗೌರಿಗೆ ವಿಶೇಷ ಪೂಜೆ, ಅಲಂಕಾರ, ಹೂರ್ಣದ ಆರತಿ, 33 ದಾಸರ ಹಾಡುಗಳನ್ನು ಸಮರ್ಪಿಸಲಾಯಿತು. ಸಂಸದ ರಮೇಶ ಜಿಗಜಿಣಗಿ, ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ, ಜಿಲ್ಲಾ ಶಸ್ತ್ರಚಿಕಿತ್ಸಕ ಶಿವಾನಂದ ಮಾಸ್ತಿಹೋಳಿ, ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ, ಗೋಪಾಲ ನಾಯಕ, ಪಾಲಿಕೆ ಸದಸ್ಯ ಕುಮಾರ ಗಡಗಿ, ರಮೇಶ ಬಿದನೂರ, ರಾಜು ಗಚ್ಚಿನಮಠ, ಪ್ರಭು ಮಲ್ಲಿಕಾರ್ಜುನಮಠ, ಡಾ.ಬಾಬುರಾಜೇಂದ್ರ ನಾಯಕ, ಕಾನಿಪ ಜಿಲ್ಲಾಧ್ಯಕ್ಷ ಅಶೋಕ ಯಡಹಳ್ಳಿ, ಷಡಕ್ಷರಿ, ಕೆ.ಎನ್.ರಮೇಶ, ಮಹೇಶ ಶೆಟಗಾರ, ಶ್ರೀಶೈಲ ಬೊಮ್ಮನಹಳ್ಳಿ, ಸುನೀಲಗೌಡ ಬಿರಾದಾರ, ಸಂತೋಷ ಶೆಟ್ಟರ, ಲಕ್ಷ್ಮೀಕಾಂತ ಚನಗೊಂಡ ಇತರರು ಇದ್ದರು.



ದೇವರಹಿಪ್ಪರಗಿ: ಅಧ್ಯಾತ್ಮ, ಯೋಗ, ಸಮಾಜ ಪ್ರಬೋಧನೆ ಹಾಗೂ ಮಾನವಕಲ್ಯಾಣ ಕ್ಷೇತ್ರಗಳಲ್ಲಿ ಸುದೀರ್ಘ ಕಾಲದಿಂದ ನಿಸ್ವಾರ್ಥ ಭಾವದಿಂದ ನಿರಂತರ ಸೇವೆ ಸಲ್ಲಿಸುತ್ತಾ ಬಂದಿರುವ ತಾಲೂಕಿನ ಕೊರವಾರ ಗ್ರಾಮದ ಮಹಂತೇಶ್ವರ ಮಠದ ಬಸವಲಿಂಗ ಶಿವಾಚಾರ್ಯರಿಗೆ ಕಾಶಿ ಪೀಠದ ವತಿಯಿಂದ ಪ್ರತಿಷ್ಠಿತ ''ತಪೋರತ್ನಂ'' ಪ್ರಶಸ್ತಿ ನೀಡಿಗೌರವಿಸಲಾಯಿತು.

ಪ್ರತಿ ಮನೆಯಲ್ಲೂ ಗ್ರಂಥಾಲಯ ಉದ್ಘಾಟನೆಯಾಗಲಿ: ಡಾ.ಬರಗೂರ

• **ವಿಜಯಪುರ:** ಮನೆಗೊಂದು ಗ್ರಂಥಾಲಯ ಪ್ರತಿ ಮನೆ ಮನೆಯಲ್ಲೂ ಉದ್ಘಾಟನೆ ಆಗಬೇಕು. ಆ ಮೂಲಕ ಸಾಹಿತ್ಯದ ಚರ್ಚೆಗಳು, ಸಂವಾದಗಳು ನಿರಂತರವಾಗಿ ನಡೆಯಬೇಕು ಎಂದು ಕನ್ನಡ ಪುಸ್ತಕ ಪ್ರಾಧಿಕಾರ ಸದಸ್ಯ ಡಾ.ಕುಶಾಲ ಬರಗೂರ ಹೇಳಿದರು.

ಇಲ್ಲಿನ ಕೆಎಚ್‌ಬಿ ಕಾಲೋನಿಯ ಡಾ.ಎಂ.ಎಸ್. ಮಾಗಣಗೇರಿ ಅವರ ನಿವಾಸದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರ ಹಾಗೂ ಮನೆಗೊಂದು ಗ್ರಂಥಾಲಯ ಜಿಲ್ಲಾ ಜಾಗೃತ ಸಮಿತಿ ವತಿಯಿಂದ ಹಮ್ಮಿಕೊಂಡ ಮನೆಗೊಂದು ಗ್ರಂಥಾಲಯ ಅನುಷ್ಠಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಲೇಖಕರು ವಿಮರ್ಶೆ ಮತ್ತು ಸಂಶೋಧನೆಯಲ್ಲಿ ತೊಡಗಿಸಿಕೊಂಡು ಉತ್ತಮ ಸಾಹಿತ್ಯ ಕೃತಿಗಳನ್ನು ಹೊರ ತರಬೇಕು, ಪ್ರತಿಯೊಬ್ಬರು ಪುಸ್ತಕ ಧ್ಯಾನಸ್ಥರಾಗಬೇಕು, ಧ್ಯಾನದೊಳಗೆ ಜ್ಞಾನ ಪಡೆಯುವ ಧನಾತ್ಮಕ ಕಾರ್ಯ ಆಗಬೇಕು ಎಂದರು.

ಸಾಹಿತಿ ಮನು ಪತ್ತಾರ ಮಾತನಾಡಿ, ಸೌಹಾರ್ದ ನೆಲೆಯಲ್ಲಿ ಸಾಹಿತ್ಯವನ್ನು ರಚನೆ ಮಾಡಿದವರು ಡಾ.ಎಂ.ಎಸ್.ಮಾಗಣಗೇರಿ. ಕನ್ನಡದ ವಿಮರ್ಶೆ ಹೊಗಳಿಕೆ ನೆಲೆಯಲ್ಲಿ ನಿಂತಿರುವಾಗ, ಬೇರೆ ದೇಶದ ವಿಮರ್ಶೆ ಮಾದರಿಗಳನ್ನು ಬಿಟ್ಟು, ಕನ್ನಡಕ್ಕೆ ಇರುವ ವಿಮರ್ಶೆ ಮಾದರಿಯನ್ನು ಸಂಶೋಧನಾತ್ಮಕ ನೆಲೆಯಲ್ಲಿ ಕಟ್ಟಿ ಕೊಟ್ಟವರು ಮಾಗಣಗೇರಿ ಎಂದರು.



> ಪ್ರತಿಯೊಬ್ಬರ ಮನಸ್ಸು ಮನಸ್ಸುಗಳನ್ನು ಬೆಸೆಯುವ ಕೆಲಸ ಮಾಡುವುದೇ ಕನ್ನಡ ಪುಸ್ತಕ ಪ್ರಾಧಿಕಾರದ ಉದ್ದೇಶವಾಗಿದೆ.
> ■ ಡಾ.ಕುಶಾಲ ಬರಗೂರ

ಪತ್ರಕರ್ತ, ಸಾಹಿತಿ ಪರಶುರಾಮ ಶಿವಶರಣ ಮಾತನಾಡಿ, ಪುಸ್ತಕಗಳು ಬರಿ ಕಾಗದ ಹಾಳೆಯಲ್ಲ, ಅವುಗಳು ಜ್ಞಾನದ ಕಣಜಗಳಾಗಿವೆ. ಪುಸ್ತಕಗಳನ್ನು ಸಂಗಾತಿಗಳಾಗಿ ಮಾಡಿಕೊಂಡು ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರಂತಹ ವಿಶ್ವಜ್ಞಾನಿ ರೂಪುಗೊಂಡಿದ್ದು, ನಮಗೆಲ್ಲ ಆದರ್ಶವಾಗಿದೆ. ಮನುಷ್ಯನ ಒಂಟಿತನವನ್ನು ಹೋಗಲಾಡಿಸುವ ಅಮೂಲ್ಯ ವಸ್ತು ಪುಸ್ತಕಗಳಾಗಿವೆ. ಪ್ರತಿಯೊಬ್ಬರೂ ಪುಸ್ತಕಗಳ ಒಡನಾಟವನ್ನು ಹೊಂದಬೇಕು ಎಂದರು.

ಡಾ.ಎಂ.ಎಸ್.ಮಾಗಣಗೇರಿ ಮಾತನಾಡಿದರು.

ಜಿಲ್ಲಾ ಗ್ರಂಥಾಲಯ ಜಾಗೃತಿ ಸಮಿತಿ ಸಂಚಾಲಕ ಶಂಕರ ಬೈಚಬಾಳ ಮಾತನಾಡಿ, ಬಸವಣ್ಣನನ್ನು ಎಷ್ಟು ಮುಖಗಳಿಂದ ಅಧ್ಯಯನ ಮಾಡಿದರು ಕಡಿಮೆಯೆ, ನಾವು ಸಮಯವನ್ನು ಪುಸ್ತಕ ಓದಿಗೆ ಮೀಸಲಾಗಿಡಬೇಕು. ಪ್ರತಿಯೊಬ್ಬರು ಮನೆ ಮನೆಯಲ್ಲಿ ಗ್ರಂಥಾಲಯವನ್ನು ನಿರ್ಮಾಣ ಮಾಡಬೇಕು ಎಂದರು.

ಜಿಲ್ಲಾ ಗ್ರಂಥಾಲಯ ಜಾಗೃತಿ ಸಮಿತಿಯ ನೂತನ ಸದಸ್ಯ ಪ್ರೊ.ಬಸವರಾಜ ಜಾಲವಾದಿ ಅವರನ್ನು ಗೌರವಿಸಲಾಯಿತು. ಸಾಹಿತಿ ಸುಭಾಷ ಯಾದವಾಡ, ಸವಿತಾ ಝುಳಕಿ, ಡಾ.ಸುಭಾಷ ಕನ್ನೂರ, ಲಾಯಪ್ಪ ಇಂಗಳೆ, ಗುರಪ್ಪ ಅಗಸಬಾಳ, ಎ.ಎಚ್.ಕೊಳಮಲಿ, ರಾವಸಾಬ್ ಬಿರಾದಾರ, ಎಂ.ಎಸ್.ಝುಳಕಿ, ಪಂಚಾಕ್ಷರಿ ಸಂಖ, ಶರಣು ಶಿರೂರು, ರವಿ ಝುಳಕಿ, ಲಕ್ಷ್ಮೀ ಝುಳಕಿ, ಶ್ರೀನಿಧಿ ಮಾಗಣಗೇರಿ, ಸದಾಶಿವ ಹಾದಿಮನಿ, ವೀರೇಶ ಗಬ್ಬೂರು, ಬಸವರಾಜ ಸಾಲವಾಡಗಿ ಇದ್ದರು.

ಮಹನೀಯರ ಜಯಂತಿ ಅರ್ಥಪೂರ್ಣವಾಗಿ ಆಚರಿಸಲು ಅಧಿಕಾರಿಗಳಿಗೆ ಎಡಿಸಿ ಸೂಚನೆ

• **ವಿಜಯಪುರ:** ಜಿಲ್ಲೆಯಲ್ಲಿ ಜೂ.27ರಂದು ನಾಡಪ್ರಭು ಕೆಂಪೇಗೌಡ ಹಾಗೂ ಜು.2ರಂದು ಡಾ.ಫ.ಗು.ಹಳಕಟ್ಟಿ ಜನ್ಮದಿನ ಹಾಗೂ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆಯನ್ನು ಮಹನೀಯರ ಜಯಂತಿ ಕಾರ್ಯಕ್ರಮಗಳನ್ನು ಯಾವುದೇ ಲೋಪವಿಲ್ಲದೆ, ಅತ್ಯಂತ ಅರ್ಥಪೂರ್ಣ, ಅಚ್ಚುಕಟ್ಟಾಗಿ ಆಯೋಜಿಸುವಂತೆ ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಮಹನೀಯರ ಜಯಂತಿ ಕಾರ್ಯಕ್ರಮಗಳ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಹೇಳಿದರು.

ಜೂ.27ರಂದು ನಾಡಪ್ರಭು ಕೆಂಪೇಗೌಡ ಜಯಂತಿ, ಜೂ.27ರಂದು ನಾಡಪ್ರಭು ಕೆಂಪೇಗೌಡ ಅವರ ಜಯಂತಿಯನ್ನು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮದೊಂದಿಗೆ ಆಚರಿಸಲಾಗುವುದು. ಜು.2–ಡಾ. ಫ.ಗು.ಹಳಕಟ್ಟಿ ಜನ್ಮದಿನ ಹಾಗೂ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆಯನ್ನು ಉಪನ್ಯಾಸ ಕಾರ್ಯಕ್ರಮದೊಂದಿಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗುವುದು. ಜು.29ರಂದು ಹಡಪದ ಅಪ್ಪಣ್ಣ ಜಯಂತಿಯನ್ನು ಜಿಲ್ಲಾಡಳಿತದ ವತಿಯಿಂದ ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ವಿವರಿಸಿದರು.

ಮಹಾನಗರ ಪಾಲಿಕೆಯ ಉಪ ಆಯುಕ್ತ ಮಹಾವೀರ ಬೋರಣ್ಣನವರ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಪುಂಡಲೀಕ ಮಾನವರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ, ಎಸ್. ಅಶೋಕ ಕುಮಾರ, ಎಸ್.ಜಿ.ಸುರಪುರ, ಎ.ಬಿ.ಅಂಕದ, ಗಿರೀಶ ಕುಲಕರ್ಣಿ, ದೇವೇಂದ್ರ ಮೆರೇಕರ, ಡಾ.ಎಂ. ಆರ್.ಗುರಿಕರ, ವಿದ್ಯಾವತಿ ಅಂಕಲಗಿ, ಸೋಮನಗೌಡ ಕಲ್ಲೂರ, ಭೀಮರಾಯ ಜಿಗಜಿಣಗಿ ಸೇರಿದಂತೆ ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ವಿವಿಧ ಸಮಾಜದ ಮುಖಂಡರು ಮತ್ತು ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.



ವಿದ್ಯಾರ್ಥಿಗಳ ಪ್ರತಿಭೆ ಪ್ರೋತ್ಸಾಹಿಸಿ: ಪೂಜಾರಿ

• **ಬಸವನಬಾಗೇವಾಡಿ:** ಪ್ರತಿ ವಿದ್ಯಾರ್ಥಿಗಳಲ್ಲಿ ವಿಶೇಷ ಪ್ರತಿಭೆ ಇರುತ್ತದೆ. ಅದನ್ನು ಹೊರ ತಂದು ಪ್ರೋತ್ಸಾಹಿಸುವ ಜವಾಬ್ದಾರಿ ಸಮಾಜದ ಮೇಲಿದೆ ಎಂದು ತಳೇವಾಡದ ಸರಕಾರಿ ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಸಂಗಮೇಶ ಪೂಜಾರಿ ಹೇಳಿದರು.

ಸ್ಥಳೀಯ ವಿರಕ್ತಮಠದ ಶಿವಲಿಂಗೇಶ್ವರ ಶಿವಾನುಭವ ಮಂಟಪದಲ್ಲಿ ತಾಲೂಕಿನ ಹಂಗರಗಿಯ ಚನ್ನಬಸವೇಶ್ವರ ಪ್ರತಿಷ್ಠಾನ ಹಾಗೂ ಶರಣ ಸಾಹಿತ್ಯ ಪರಿಷತ್ತು ಕದಳಿ ವೇದಿಕೆ ಸಹಯೋಗದಲ್ಲಿ ಹಮ್ಮಿಕೊಳ್ಳಲಾದ ಪ್ರತಿಭಾ ಪುರಸ್ಕಾರ, ಸನ್ಮಾನ ಸಮಾರಂಭ ಹಾಗೂ ಉಪನ್ಯಾಸ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡಿದ ಅವರು ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ ಗೌರವಿಸುವ ಕೆಲಸವನ್ನು ಸಮಾಜ ನಿರಂತರವಾಗಿ ಮಾಡಬೇಕಾಗಿದೆ ಎಂದರು.

ಸ್ಥಳೀಯ ಪಿಎಲ್‌ಡಿ ಬ್ಯಾಂಕಿನ ಅಧ್ಯಕ್ಷ ಈರಣ್ಣ ಪಟ್ಟಣಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಕೊಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಈ ನಿಟ್ಟಿನಲ್ಲಿ ಚನ್ನಬಸವೇಶ್ವರ ಪ್ರತಿಷ್ಠಾನ ಹಾಗೂ ಶರಣ ಸಾಹಿತ್ಯ ಪರಿಷತ್ತು ಕದಳಿ ವೇದಿಕೆ ಉತ್ತಮ ಕೆಲಸ ಮಾಡುತ್ತಿವೆ. ಇಂದಿನ ವಿದ್ಯಾರ್ಥಿಗಳೇ ನಾಡಿನ ಭವಿಷ್ಯದ ನಾಗರೀಕರು ಅವರಲ್ಲಿರುವ ಪ್ರತಿಭೆಯನ್ನು ಗುರುತಿಸುವ ಜವಾಬ್ದಾರಿ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ ಎಂದು ಹೇಳಿದರು.

ಚನ್ನಬಸವೇಶ್ವರ ಪ್ರತಿಷ್ಠಾನದ ಅಧ್ಯಕ್ಷ ವಿವೇಕಾನಂದ ಕಲ್ಯಾಣಶೆಟ್ಟಿ ಮಾತನಾಡಿ, ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ ಸಮಾಜದ ಮುಖ್ಯವಾಹಿನಿಗೆ ತರುವ ಜವಾಬ್ದಾರಿಯನ್ನು ಸಂಘಟನೆಗಳು ಹೊರಬೇಕಾಗಿದೆ. ವಿದ್ಯಾರ್ಥಿಗಳನ್ನು ನೈತಿಕವಾಗಿ ಬೆಳೆಸುವ ಜವಾಬ್ದಾರಿಯ ಜೊತೆಗೆ ಆಧ್ಯಾತ್ಮದ ಅಭಿರುಚಿಯನ್ನು ಬೆಳೆಸುವ ಕೆಲಸವನ್ನು ಚನ್ನಬಸವೇಶ್ವರ ಪ್ರತಿಷ್ಠಾನ ಹಲವಾರು ವರ್ಷಗಳಿಂದ ಮಾಡುತ್ತಾ ಬಂದಿದೆ, ಸಮಾಜದಲ್ಲಿ ಎಲ್ಲರೂ ಇಂಥಹ ಕಾರ್ಯಗಳಿಗೆ ಕೈಜೋಡಿಸುವ ಅವಶ್ಯಕತೆ ಇದೆ ಎಂದು ಹೇಳಿದರು.

ಡಾ.ಎನ್.ಬಿ.ವಜೀರಕರ, ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವೀರಣ್ಣ ವರ್ತೂರ, ಭಾರತೀಯ ಸ್ಟೇಟ್ ಬ್ಯಾಂಕ್ ನ ವ್ಯವಸ್ಥಾಪಕ ರಾಘವೇಂದ್ರ ಕಟ್ಟಿ, ಸ್ಥಳೀಯ ವಿರಕ್ತಮಠದ ಸಿದ್ದಲಿಂಗ ಸ್ವಾಮೀಜಿ ಸಾನಿಧ್ಯ ವಹಿಸಿದರು. ಶಿಕ್ಷಕ ವಾಯ್.ಎನ್.ಮಿಣಜಗಿ ಸ್ವಾಗತಿಸಿದರು. ಪ್ರತಿಷ್ಠಾನದ ಕಾರ್ಯದರ್ಶಿ ಮುತ್ತು ಪತ್ತಾರ ಮಾತನಾಡಿದರು. ಕದಳಿ ವೇದಿಕೆ ಅಧ್ಯಕ್ಷೆ ಸಾವಿತ್ರಿ ಕಲ್ಯಾಣಶೆಟ್ಟಿ, ಠಾಕೂರಬಾಯಿ ಲಮಾಣಿ, ವಿರೇಶ ಗೂಡ್ಲಮನಿ, ಶಿಕ್ಷಕ ಕೊಟ್ರೇಶ ಹೆಗಡ್ಯಾಳ ಇದ್ದರು.



ಶಿಕ್ಷಣದ ಮೂಲಕ ವಿದ್ಯಾರ್ಥಿಗಳು ಭವಿಷ್ಯ ರೂಪಿಸಿಕೊಳ್ಳಲಿ: ದೇಗಾವತ್

• **ವಿಜಯಪುರ:** ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಗೋರ್ ಶಿಕವಾಡಿ ಕರ್ನಾಟಕ ಕಟಮಾಳೋ ಚಾರಿಟೇಬಲ್ ಟ್ರಸ್ಟ್ ವಿಜಯಪುರ ಘಟಕ ಹಾಗೂ ರಾಯಸೀನಾ ಫೌಂಡೇಶನ್ ಸಹಯೋಗದಲ್ಲಿ ಗೋರ್ ಗುಣವಂತ ವಿದ್ಯಾರ್ಥಿ ಸತ್ಕಾರ್ ಮತ್ತು ವೃತ್ತಿ ಮಾರ್ಗದರ್ಶನ ಕಾರ್ಯಕ್ರಮ ನಡೆಯಿತು.

ರಾಷ್ಟ್ರೀಯ ಗೋರ ಸೇನಾ ಅಧ್ಯಕ್ಷ ಡಾ.ಬಾಳ ಸಾಹೇಬ್ ದೇಗಾವತ್ ಮಾತನಾಡಿ, ವಿದ್ಯಾರ್ಥಿಗಳು ಶಿಕ್ಷಣದ ಮೂಲಕ ತಮ್ಮ ಮುಂದಿನ ಭವಷ್ಯವನ್ನು ರೂಪಿಸಿಕೊಳ್ಳಬೇಕು. ಐಎಎಸ್, ಕೆಎಎಸ್, ಐಪಿಎಸ್ ಅಧಿಕಾರಿಗಳಾಗಬೇಕು ಮತ್ತು ತಾವು ಅಧಿಕಾರಿಗಳಾದ ಮೇಲೆ ಪೇ ಬ್ಯಾಕ್ ಟು ಸೊಸೈಟಿ ಎಂಬ ತತ್ವವನ್ನು ಅನುಸರಿಸಬೇಕೆಂದರು. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಹೇಳಿದ ಶಿಕ್ಷಣ, ಸಂಘಟನೆ, ಹೋರಾಟ ಈ ಅಂಶಗಳನ್ನು ಅನುಸರಿಸುವುದರ ಮೂಲಕ ಸಮುದಾಯದ ಇತಿಹಾಸವನ್ನು ಅರಿತುಕೊಂಡು ಇತಿಹಾಸವನ್ನು ನಿರ್ಮಿಸಬೇಕೆಂದರು.

ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತರಾದಂತಹ ಸುರೇಶ್ ಲಮಾಣಿ (ಗದಗ) ಮಾತನಾಡಿ, ವಿದ್ಯಾರ್ಥಿಗಳಿಗೆ ತಮ್ಮ ಮುಂದಿನ ಬದುಕನ್ನು ಯಾವ ರೀತಿಯಲ್ಲಿ ರೂಪಿಸಿಕೊಳ್ಳಬೇಕು ಮತ್ತು ತಮ್ಮ ತಂದೆ ತಾಯಿಗಳನ್ನು ಹೇಗೆ ಗೌರವಿಸಬೇಕು ಎಂಬುದನ್ನು ತಿಳಿಸಿದರು.



ಡಾ.ಗೋಪಿಚಂದ, ವಕೀಲರಾದ ಮಲ್ಲಿಕಾರ್ಜುನ ಮತ್ತು ಸಮಾಜದ ಮುಖಂಡರಾದ ರಾಜಪಾಲ್ ಚವ್ಹಾಣ ಮಾತನಾಡಿದರು.

ಆಹಾರ ಮತ್ತು ನಾಗರಿಕ ಸರಬರಾಜು ಉಪನಿರ್ದೇಶಕ ನಾಮದೇವ ಚವ್ಹಾಣ ಅಧ್ಯಕ್ಷತೆ ವಹಿಸಿ ಮಾತನಾಡಿದ ನಿವೃತ್ತ ಪ್ರಾಧ್ಯಾಪಕ ಪ್ರೊ.ನಾರಾಯಣ ಬಿ.ಪವಾರ ವಿದ್ಯಾರ್ಥಿಗಳು ಏಕಾಗ್ರತೆಯಿಂದ ನಿರಂತರವಾಗಿ ಅಧ್ಯಯನದಲ್ಲಿ ತೊಡಗಿದರೆ ಯಶಸ್ಸು ಕಟ್ಟಿಟ್ಟ ಬುತ್ತಿ ಎಂದರು.

ಡಾ.ಸುರೇಖಾ ಜಿ ರಾಠೋಡ, ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಸದಸ್ಯರು, ಸಂಗೀತಾ ಪವಾರ, ಬಿ.ಬಿ.ಲಮಾಣಿ, ಮಹೇಂದ್ರ ನಾಯಕ, ಅರುಣ ನಾಯಕ, ಬಾಬು ಚವ್ಹಾಣ, ಅರವಿಂದ ಪವಾರ, ಸಂತೋಷ ರಾಠೋಡ, ಚಂದು ಜಾದವ, ಸುರೇಶ ಬಿಜಾಪುರ ಉಪಸ್ಥಿತರಿದ್ದರು. ಡಾ.ಬಾಬು ಲಮಾಣಿ ಸ್ವಾಗತ ಮತ್ತು ಪ್ರಾಸ್ತಾವಿಕವಾಗಿ ಮಾತಾನಾಡಿದರು.

ಕ್ಷಯರೋಗ ಪರೀಕ್ಷೆ: ಸಂಚಾರಿ ಕ್ಷ ಕಿರಣ ಪ್ರಯೋಗ ಯಶಸ್ವಿ

• **ಮುದ್ದೇಬಿಹಾಳ:** ತಾಲೂಕಿನ ಕುಂಟೋಜಿ ಹಾಗೂ ಗರಸಂಗಿ ಗ್ರಾಮದ ಆರೋಗ್ಯ ಉಪ ಕೇಂದ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಗ್ರಾಮ ಪಂಚಾಯತಿ ಸಂಯುಕ್ತ ಆಶ್ರಯದಲ್ಲಿ ತ್ವರಿತವಾಗಿ ಕ್ಷಯ ರೋಗವನ್ನು ಪತ್ತೆ ಹಚ್ಚುವದಕ್ಕಾಗಿ 100 ದಿನದ ಕ್ಷಯ ಮುಕ್ತ ಭಾರತ ಯೋಜನೆ ಅಂಗವಾಗಿ ಹಮ್ಮಿಕೊಂಡಿದ್ದ ಉಚಿತ ಎಕ್ಸರೇ ಯಂತ್ರ ಉದ್ಘಾಟನೆ ಸೋಮವಾರ ಮಾಡಲಾಯಿತು.

ಗರಸಂಗಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಧಿಕಾರಿಗಳಾದ ಡಾ.ತೈಸಿನ್ ಶಿವಣಗಿ ಮಾತನಾಡಿ, ರೋಗಿಗಳು ನಿರಂತರ 6 ತಿಂಗಳು ಸೂಕ್ತ ಚಿಕತ್ಸೆ ಪಡೆದರೆ ರೋಗದಿಂದ ಮುಕ್ತಿ ಹೊಂದಬಹುದು. ನಿಯಮಿತವಾಗಿ ಔಷಧ ತೆಗೆದುಕೊಳ್ಳದಿದ್ದರೆ ಅಡ್ಡ ಪರಿಣಾಮಗಳು ಉಂಟಾಗಬಹುದು. ಸೂಕ್ತ ಸಮಯಕ್ಕೆ ಚಿಕಿತ್ಸೆ ಪಡೆಯುವುದರಿಂದ ರೋಗ ನಿಯಂತ್ರಿಸಬಹುದು. ಕ್ಷಯ ರೋಗಕ್ಕೆ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸಾ ಸೌಲಭ್ಯ ನೀಡಲಾಗುತ್ತದೆ ಎಂದು ಹೇಳಿದರು.



ಗರಸಂಗಿ ಪ್ರಾಥಮಿಕ ಆರೋಗ್ಯ ಕೇಂದ್ರದ ಮೇಲ್ವಿಚಾರಕ ಎಂ.ಎಸ್.ಗೌಡರ ಮಾತನಾಡಿ, ನಗರ, ಹಳ್ಳಿ, ಪಟ್ಟಣ ಸೇರಿ ಎಲ್ಲ ಕಡೆಗೂ ಕ್ಷಯ ರೋಗಿಗಳ ಪತ್ತೆ ಹಚ್ಚುವ ಕಾರ್ಯ ನಡೆದಿದ್ದು, ಆಯ್ದ ಗ್ರಾಮಗಳಲ್ಲಿ ಹಮ್ಮಿಕೊಳ್ಳಲಾಗಿದ್ದು ಕ್ಷಯರೋಗ ಲಕ್ಷಣಗಳು ಇದ್ದವರು ಹಾಗೂ ದುರ್ಬಲ ವರ್ಗದವರು ತಪಾಸಣೆಗೆ ಒಳಪಟ್ಟು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಿದರು.

ಕುಂಟೋಜಿ ಗ್ರಾಮದ ಒಟ್ಟು 118 ಜನರು ಉಚಿತ ಎಕ್ಸರೇ ಪರೀಕ್ಷೆ ಮಾಡಿಸಿಕೊಂಡರು. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎನ್ .ಜಿ.ತಾಳಿಕೋಟಿ ಜಿಲ್ಲಾ ಕಾರ್ಯಕ್ರಮ ಸಹಾಯಕ ಮಂಜುನಾಥ ಮಾಮನೆ ಆರೋಗ್ಯ ನಿರೀಕ್ಷಕ ಎಸ್.ಬಿ.ಹೂಗಾರ, ಛಾಯಾ ಚಿತ್ರಣಾಧಿಕಾರಿ ಈರಣ್ಣ ಕಸಬೇಗೌಡರ, ಬಸವರಾಜ ಕುಂಟೋಜಿ, ಬಸವರಾಜ ಹವೇರಿ, ಎಸ್‌ಟಿಎಸ್ ಶಿವರಾಜ ದೀಕ್ಷಿತ, ವಿ.ಕೆ.ಪಾಟೀಲ, ಝೆಡ್.ಎಂ.ಬೀಳಗಿ. ಮಲ್ಲನಗೌಡ ಬಿರಾದರ ಉಪಸ್ಥಿತರಿದ್ದರು.

ಪರಿಸರ ಸಂರಕ್ಷಣೆ ಎಲ್ಲರ ಜವಾಬ್ದಾರಿ



• **ಇಂಡಿ:** ಪರಿಸರವು ಪ್ರತಿಯೊಂದು ಜೀವಿಯ ಉಸಿರಾಗಿದ್ದು, ಅದರ ಸಂರಕ್ಷಣೆ ಎಲ್ಲರ ಜವಾಬ್ದಾರಿಯಾಗಿದೆ. ಪರಿಸರಕ್ಕೆ ಹಾನಿಯಾಗುವ ವಸ್ತುಗಳ ಬಳಕೆ ತೊರೆಯಬೇಕು ಎಂದು ಧರ್ಮಸ್ಥಳದ ಇಂಡಿ ತಾಲೂಕಿನ ಕ್ಷೇತ್ರ ಯೋಜನಾಧಿಕಾರಿ ನಟರಾಜ್.ಎಲ್.ಎಮ್ ರವರು ಹೇಳಿದರು.

ಹಿರೇರೂಗಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡ ಸಸಿ ನಡುವಿಕೆ ಹಾಗೂ ಮಕ್ಕಳಿಗೆ ಪರಿಸರ ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ ಮುಖ್ಯ ಗುರುಗ ಎಸ್.ಎಸ್.ಬಡಿಗೇರ ಮಾತನಾಡಿ, ಪರಿಸರ ಸ್ವಚ್ಛವಾಗಿಟ್ಟುಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಸರಕಾರ ಜಾರಿಗೊಳಿಸಿರುವ ಸ್ವಚ್ಛ ಭಾರತ ಅಭಿಯಾನ ಕಾರ್ಯಕ್ರಮದ ಯೋಜನೆಗಳನ್ನು ಸದುಪಯೋಗ ಪಡೆದು ಸಾಮಾಜಿಕ ಜವಾಬ್ದಾರಿಯನ್ನು ನಿಭಾಯಿಸಬೇಕು ಧರ್ಮಸ್ಥಳದಿಂದ ಅನೇಕ ಯೋಜನೆಗಳನ್ನು ತಂದು ಬಡ ಕುಟುಂಬಗಳನ್ನು ಸಾವಲಂಬಿಯಾಗಿ ಬದುಕಲು ಅನುವು ಮಾಡಿಕೊಟ್ಟು ಅದರಂತೆ ಮಕ್ಕಳಿಗೂ ಕೂಡ ಪರಿಸರ ಜಾಗೃತಿ ಕಾರ್ಯಕ್ರಮ ಮಾಡಿ ಯೋಜನೆಯ ಮಾಹಿತಿಗಳನ್ನು ನೀಡುತ್ತಿರುವ ನಟರಾಜ ಅವರ ಕಾರ್ಯ ಶ್ಲಾಘನಿಯ ಎಂದರು. ಕೃಷಿ ಮೇಲ್ವಿಚಾರಕ ಸುದೀಪ, ವಲಯ ಮೇಲ್ವಿಚಾರಕ ಚನ್ನವೀರ ಇದ್ದರು.

ಸ್ಪರ್ಧೆಗಳು ಆರೋಗ್ಯಕರವಾಗಿರಲಿ

• **ವಿಜಯಪುರ:** ನಗರದ ಬಿಎಲ್‌ಡಿಇ ಸಂಸ್ಥೆಯ ಬಿ.ಎಂ.ಪಾಟೀಲ ಪಬ್ಲಿಕ್ (ಸಿಬಿಎಸ್‌ಇ) ಶಾಲೆಯಲ್ಲಿ ಶಾಲಾ ಅಂತರ್ ಸದನಗಳ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಕ್ರೀಡಾ ಸ್ಪರ್ಧೆಯ ಉದ್ಘಾಟನಾ ಸಮಾರಂಭ ನಡೆಯಿತು.

ವಿದ್ಯಾರ್ಥಿಗಳು ತಮಗಿಷ್ಟವಾದ ಹವ್ಯಾಸವನ್ನು ಆಯ್ಕೆ ಮಾಡಿಕೊಂಡರು. ಇವರಿಗೆ ನಗರದ ನುರಿತ ತರಬೇತುದಾರರನ್ನು ನೇಮಿಸಿ, ಚೆಸ್, ಫುಟ್ಬಾಲ್, ವಾಲಿಬಾಲ್, ಬಾಸ್ಕೆಟ್ಬಾಲ್, ಕ್ರಿಕೆಟ್, ಸ್ಕೇಟಿಂಗ್, ನೃತ್ಯ, ಸಂಗೀತ, ಝುಂಬಾ, ಗಾರ್ಡನಿಂಗ್, ಅಗ್ನಿರಹಿತ ಆಹಾರ ತಯಾರಿಕೆ ಮುಂತಾದ ಚಟುವಟಿಕೆಗಳಿಗೆ ತರಬೇತಿಯನ್ನು ವಿದ್ಯಾರ್ಥಿಗಳ ಆಸಕ್ತಿಗನುಣವಾಗಿ ಪ್ರಾರಂಭಿಸಲಾಯಿತು.

ಶಾಲೆಯ ಉಪಪ್ರಾಚಾರ್ಯೆ ವಸುಧಾ ನಾರ್ವೇಕರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸ್ಪರ್ಧೆಗಳು ಆರೋಗ್ಯಕರವಾಗಿರಬೇಕು. ಸೋಲೇ ಗೆಲುವಿನ ಸೋಪಾನ ಮತ್ತು ಗೆಲುವೆಂಬುದು ಸತತ ಪರಿಶ್ರಮದ ಫಲ ಎಂಬುದನ್ನು ಮಕ್ಕಳಿಗೆ ಕಥೆಯ ಮೂಲಕ ತಿಳಿಸಿದರು. ನೃತ್ಯ ಶಿಕ್ಷಕಿ ಪೂಜಾ ಮತ್ತು ತರಬೇತಿದಾರ ಸಮೀರಖಾನ್ ನೃತ್ಯ ಮಾಡಿ ವಿದ್ಯಾರ್ಥಿಗಳಲ್ಲಿ ಉತ್ಸಾಹವನ್ನು ತುಂಬಿದರು. ಸಂಗೀತ ಶಿಕ್ಷಕಿ ಸಂತೋಷಿ ಕುಸೂರ ಪ್ರಾರ್ಥಿಸಿದರು. ಸಾಂಸ್ಕೃತಿಕ ಕಾರ್ಯಸಂಯೋಜಕಿ ಫರಾ ಜಹಾಗೀದಾರ ನಿರೂಪಿಸಿದರು. ಕಿರಿಯರ ವಿಭಾಗದ ಸಂಸ್ಕೃತಿಕ ಕಾರ್ಯಸಂಯೋಜಕಿ ಶಿವಾನಿ ವಂದಿಸಿದರು.



ಶಾಂತತೆಯಿಂದ ಮೊಹರಂ ಆಚರಿಸಿ



• **ಆಲಮೇಲ:** ಪಟ್ಟಣದಲ್ಲಿ ನಡೆಯುತ್ತಿರುವ ಮೊಹರಂ ಹಬ್ಬವನ್ನು ಶಾಂತಿ ಸೌಹಾರ್ದತೆಯೊಂದಿಗೆ ಅನ್ಯ ಧರ್ಮೀಯರ ಭಾವನೆಗಳಿಗೆ ಧಕ್ಕೆ ಆಗದಂತೆ ಕಾನೂನಿನ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವದರ ಜೊತೆಗೆ ಶಾಂತಿಯಿಂದ ಹಬ್ಬ ಆಚರಿಸಬೇಕು. ಒಂದು ವೇಳೆ ಯಾರಾದರೂ ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುವಂತಹ ಕೃತ್ಯ ನಡೆಸಿದರೆ ಕಠಿಣ ಕ್ರಮ ಜರುಗಿಸಲಾಗುವದು ಎಂದು ಪಿಎಸ್‌ಐ ಅರವಿಂದ ಅಂಗಡಿ ಸಲಹೆ ನಿಡಿದರು.

ಪಟ್ಟಣದ ಪೊಲೀಸ್ ಠಾಣೆಯ ಆವರಣದಲ್ಲಿ ಸೋಮವಾರ ಮೊಹರಂ ಹಬ್ಬದ ನಿಮಿತ್ತ ಏರ್ಪಡಿಸಿದ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ನಾಗರೀಕ ವೇದಿಕೆಯ ಅಧ್ಯಕ್ಷ ರಮೇಶ ಬಂಟನೂರ ಮಾತನಾಡಿ, ಪಟ್ಟಣದಲ್ಲಿನಡೆಯುವಪ್ರತಿಯೊಂದುಹಬ್ಬಗಳುಶಾಂತಿಸುವ್ಯವಸ್ಥೆಯೊಂದಿಗೆ ಎಲ್ಲ ಧರ್ಮೀಯವರು ಸೇರಿ ಆಚರಿಸುತ್ತಾ ಬಂದಿದ್ದೇವೆ. ಈ ಬಾರಿಯೂ ಕೂಡಾ ಸಹೋದರತ್ವದೊಂದಿಗೆ ಹಬ್ಬ ಆಚರಿಸಲಾಗುವದು ಎಂದರು.

ಹರೀಶ ಯಂಟಮನ, ವಹಾಬ ಸುಂಬಡ, ಗಾಲೀಬ ಡಾಂಗೆ, ಬಶೀರ ತಾಂಬೋಳಿ, ಅಂಬಣ್ಣಾ ಗುರಕಾರ, ಉಮ್ಮರ ಮಾಳೂರ, ಮಡಿವಾಳಪ್ಪಗೌಡ ಪಾಟೀಲ, ಸಿಬ್ಬಂದಿಗಳಾದ ರೋಹಿತ ಘೋಡೆಕರ, ಬಿ.ಎಸ್.ಮೇಡೆದರ, ಸುರೇಶ ವಾಘಮೋರೆ ಹಾಗೂ ಹಿರಿಯರು ಇದ್ದರು.

ಜೂ.30ರಿಂದ ಮತದಾರರ ಪಟ್ಟಿ ಪರಿಷ್ಕರಣೆ

• **ಚಡಚಣ:** ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ಜೂ.30ರಿಂದ ಆರಂಭಗೊಂಡು ಜು.29ರ ವರೆಗೆ ನಡೆಯಲಿದ್ದು, ತಾಲೂಕಿನ ಎಲ್ಲ ಮತದಾರರು ಈ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಹಕರಿಸಬೇಕು ಎಂದು ತಹಶೀಲ್ದಾರ್ ಸಂಜಯ ಇಂಗಳೆ ಮನವಿ ಮಾಡಿದ್ದಾರೆ.

ಪಟ್ಟಣದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಇತ್ತೀಚಿಗೆ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮತದಾರರ ಪಟ್ಟಿ ಇನ್ನಷ್ಟು ನಿಖರ ಹಾಗೂ ದೋಷರಹಿತಗೊಳಿಸುವ ಉದ್ದೇಶದಿಂದ ಈ ವಿಶೇಷ ಪರಿಷ್ಕರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜೂ.20ರಿಂದ ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ ತರಬೇತಿ ನೀಡಲಾಗುತ್ತಿದ್ದು, ಈಗಾಗಲೇ 2002ರ ಮತದಾರರ ಪಟ್ಟಿ ಹಾಗೂ 2026ರ ಮತದಾರರ ಪಟ್ಟಿಯ ಮತದಾರರ ಮ್ಯಾಪಿಂಗ್ ಕಾರ್ಯ ಶೇ.90ರಷ್ಟು ಪೂರ್ಣಗೊಂಡಿದೆ ಎಂದರು. ಜೂ.30ರಿಂದ ಜುಲೈ29ರವರೆಗೆ ಬಿಎಲ್‌ಒಗಳು ಮನೆಮನೆಗೆ ಭೇಟಿ ನೀಡಿ ಅನುಬಂಧ ನಮೂನೆ–3 ವಿತರಿಸಲಿದ್ದು, ಚುನಾವಣಾ ಆಯೋಗ ಸೂಚಿಸಿರುವ 12 ದಾಖಲೆಗಳಲ್ಲಿ ಅಗತ್ಯ ದಾಖಲೆಗಳನ್ನು ಸಂಗ್ರಹಿಸಲಿದ್ದಾರೆ. ಸಾರ್ವಜನಿಕರು ಅಧಿಕಾರಿಗಳಿಗೆ ಸೂಕ್ತ ದಾಖಲೆ ಒದಗಿಸುವ ಮೂಲಕ ಸಹಕರಿಸಬೇಕು ಎಂದು ಹೇಳಿದರು. ಶಿರಸ್ತೇದಾರ ಆರ್.ಪಿ.ಹಡಪದ, ವಿಷಯ ಕಾರ್ಯನಿರ್ವಾಹಕ ಸಂತೋಷ ನಾಯಕ, ಕಾಂತುಗೌಡ ಪಾಟೀಲ, ಆರ್.ಡಿ.ಹಕ್ಕೆ, ಭೀಮಾಶಂಕರ ವಾಳಿಖಿಂಡಿ ಸೇರಿದಂತೆ ಅಧಿಕಾರಿಗಳು ಇದ್ದರು.



ಕಿರುಸುದ್ದಿ

ದುರ್ಗಾಪರಮೇಶ್ವರಿ ದೇವಿಗೆ ಪೂಜೆ

ಮುನಿರಾಬಾದ್: ಐತಿಹಾಸಿಕ ಕ್ಷೇತ್ರವಾದ ಹೇಮಗುಡ್ಡದಲ್ಲಿ ಸೋಮವಾರ ಅಮಾವಾಸ್ಯೆ ಪ್ರಯುಕ್ತ ಶ್ರೀದುರ್ಗಾಪರಮೇಶ್ವರಿ ದೇವಿಗೆ ಪುಷ್ಪಾಲಂಕಾರ, ಆಭರಣಗಳು ಮತ್ತು ಭಕ್ತಿಯ ವಿಶೇಷ ಅಲಂಕಾರ ಮಾಡಲಾಗಿತ್ತು. ಇದು ತುಂಬಾ ದೈವಿಕ ವಾತಾವರಣವನ್ನು ಸೃಷ್ಟಿಸಿತ್ತು. ಇಂತಹ ಶುಭ ಸಂದರ್ಭದಲ್ಲಿ ಸಾವಿರಾರು ಭಕ್ತರು ಸರತಿ ಸಾಲಿನಲ್ಲಿ ನಿಂತು ದರ್ಶನ ಪಡೆದು ಶ್ರೀಅಮ್ಮನವರ ಕೃಪೆಗೆ ಪಾತ್ರರಾದರು. ಇಲ್ಲಿ ವಿಶೇಷವಾಗಿ ಪೂಜೆ ಮಾಡಿಸಿಕೊಂಡು ಹೋದರೆ ಒಳ್ಳೆಯದಾಗುತ್ತೆ ಎಂಬ ಭಾವನೆ ಜನರಲ್ಲಿದ್ದು ಅದೇ ತರಹ ನೂರಾರು ವಾಹನಗಳಿಗೆ ಪೂಜೆ ಮಾಡಿಕೊಂಡು ಹೋಗುತ್ತಿರುವುದು ಸರ್ವೇಸಾಮಾನ್ಯವಾಗಿದೆ. ನಂತರ ಮಧ್ಯಾಹ್ನ ಭಕ್ತರಿಗೆ ಪ್ರಸಾದ ವ್ಯವಸ್ಥೆಯನ್ನು ಮಾಡಲಾಯಿತು. ಅಮ್ಮನವರಿಗೆ ಮದ್ದಾನಪ್ಪ ಹೂಗಾರ್ ಪೂಜಾರಿ ಅದ್ಭುತವಾಗಿ ಅಲಂಕಾರ ಮಾಡಿದ್ದರು.



ಬಾದರ್ಲಿಗೆ ಸಚಿವ ಸ್ಥಾನ ನೀಡಲು ಆಗ್ರಹ

ಸಿಂಧನೂರು: ಐದು ಬಾರಿ ಶಾಸಕರಾಗಿ ಅಪಾರ ರಾಜಕೀಯ ಅನುಭವ ಹೊಂದಿರುವ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ಹಾಗೂ ಶಾಸಕ ಹಂಪನಗೌಡ ಬಾದರ್ಲಿ ಅವರಿಗೆ ಸಚಿವ ಸಂಪುಟದಲ್ಲಿ ಸ್ಥಾನ ನೀಡಬೇಕು ಎಂದು ಆಗ್ರಹಿಸಿ ಅವರ ಬೆಂಬಲಿಗರು, ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ಹಿತೈಷಿಗಳು ನಗರದಲ್ಲಿ ಪಾದಯಾತ್ರೆ ನಡೆಸಿದರು. ಈ ವೇಳೆ ಗಾಂಧಿ ಪ್ರತಿಮೆಗೆ ಕಾಂಗ್ರೆಸ್ ಮುಖಂಡರು ಹೂಮಾಲೆ ಅರ್ಪಿಸಿ ಗೌರವ ಸಲ್ಲಿಸಿದ ನಂತರ ಪಾದಯಾತ್ರೆಯು ಹೊಸಳ್ಳಿ ಕ್ರಾಸ್, ಶ್ರೀಪುರಂ ಜಂಕ್ಷನ್, ಗೊರೇಬಾಳ ಕ್ಯಾಂಪ್, ಗೊರೇಬಾಳ, ಬಂಗಾರಿ ಕ್ಯಾಂಪ್, ಲಕ್ಷ್ಮೀ ಕ್ಯಾಂಪ್ ಹಾಗೂ ಗೊರೆಬಾಳ್ ಗ್ರಾಮದ ಮಾರ್ಗವಾಗಿ ಸುಮಾರು 25 ರಿಂದ 30 ಕಿಲೋ ಮೀಟರ್ ದೂರದಲ್ಲಿರುವ ಸಿದ್ದಪರ್ವತ ಅಂಬಾಮಠದ ಅಂಬಾದೇವಿ ದೇವಸ್ಥಾನ ತಲುಪಿತು. ಈ ಒಂದು ಪಾದಯಾತ್ರೆಯಲ್ಲಿ ಭಾಗವಹಿಸಿದ್ದ ಕಾರ್ಯಕರ್ತರು ಶಾಸಕ ಹಂಪನಗೌಡ ಬಾದರ್ಲಿ ಅವರ ಭಾವಚಿತ್ರಗಳನ್ನು ಪ್ರದರ್ಶಿಸಿ, ಸಚಿವ ಸ್ಥಾನ ನೀಡುವಂತೆ ಘೋಷಣೆಗಳನ್ನು ಕೂಗಿದರು. ರಾಜ್ಯ ಸಚಿವ ಸಂಪುಟ ವಿಸ್ತರಣೆಯಲ್ಲಿ ಅವರಿಗೆ ಅವಕಾಶ ದೊರೆಯಲಿ ಎಂದು ದೇವರಿಗೆ ವಿಶೇ? ಪ್ರಾರ್ಥನೆ ಸಲ್ಲಿಸಿ 1,100 ತೆಂಗಿನಕಾಯಿಗಳನ್ನು ಒಡೆಯುವ ಮೂಲಕ ವಿಶೇ? ಪೂಜೆ ಸಲ್ಲಿಸಲಾಯಿತು. ತಮ್ಮ ನೆಚ್ಚಿನ ನಾಯಕನಿಗೆ ಸಚಿವ ಸ್ಥಾನ ಲಭಿಸಲಿ ಎಂದು ಭಕ್ತಿಯಿಂದ ಪ್ರಾರ್ಥನೆ ಮಾಡಿದರು.

ನಂತರ ಶಿವರಾಜ್ ಪಾಟೀಲ್ ಮಾತನಾಡಿದರು. ಕಾಂಗ್ರೆಸ್‌ನ ಮುಖಂಡರಾದ ಪಂಪನಗೌಡ ಬಾದರ್ಲಿ, ಬಾಬುಗೌಡ ಬಾದರ್ಲಿ, ರಾಜುಗೌಡ ಬಾದರ್ಲಿ, ಲಿಂಗಪ್ಪ ದಡೇಸುಗೂರು, ಬಸವರಾಜ ಹಿರೇಗೌಡರ್, ಶಿವನಗೌಡ ಎಲೆಕೂಡ್ಲಿಗಿ, ಎನ್. ಅಮರೇಶ, ಶಬ್ಬೀರ್ ನಾಯಕ, ಶಫ್ಫುಲ್ಲಾಖಾನ್, ಶೇಖರಪ್ಪ ಗಿಣಿವಾರ ಇತರರಿದ್ದರು.

ಸಾಮಾನ್ಯ ಸಭೆ ಇಂದು

ಕುಷ್ಟಗಿ: ಪಟ್ಟಣದ ತಾಲೂಕಾ ಪಂಚಾಯತಿ ಸಭಾಂಗಣದಲ್ಲಿ ಜೂ.16ರಂದು ಬೆಳಿಗ್ಗೆ 10 ಗಂಟೆಗೆ ಸಾಮಾನ್ಯ ಸಭೆ ಜರುಗಲಿದೆ. ಜಿಲ್ಲಾ ಪಂಚಾಯತಿ ಉಪ ಕಾರ್ಯದರ್ಶಿ ಸಭೆ ಅಧ್ಯಕ್ಷತೆ ವಹಿಸಲಿದ್ದಾರೆ. ತಾಲೂಕಾ ಮಟ್ಟದ ಎಲ್ಲಾ ಅಧಿಕಾರಿಗಳು ಕಡ್ಡಾಯವಾಗಿ ಪಾಲ್ಗೊಳ್ಳಬೇಕು ಎಂದು ತಾಪಂ ಕಚೇರಿಯ ಮೂಲಗಳು ತಿಳಿಸಿವೆ.

ವಾಹನ ಡಿಕ್ಕಿ: ನರೇಗಾ ಸಿಬ್ಬಂದಿಗೆ ಗಾಯ

ಹನುಮಸಾಗರ: ಸಮೀಪದ ಜಾಗೀರ ಗುಡದೂರು ವ್ಯಾಪ್ತಿಯ ಗುಡ್ಡದ ದೇವಲಾಪುರ ಗ್ರಾಮದಲ್ಲಿ ಶನಿವಾರ ರಸ್ತೆ ಅಪಘಾತ ಸಂಭವಿಸಿದ್ದು, ನರೇಗಾ ಕಾಮಗಾರಿಯ ಎನ್‌ಎಂಎಂಎಸ್ ಹಾಜರಾತಿ ದಾಖಲಿಸಿ ಹಿಂದಿರುಗುತ್ತಿದ್ದ ಸಿಬ್ಬಂದಿಗೆ ಟಾಟಾ ಏಸ್ ವಾಹನ ಡಿಕ್ಕಿ ಹೊಡೆದ ಘಟನೆ ನಡೆದಿದೆ. ನರೇಗಾ ಯೋಜನೆಯಡಿ ನಡೆಯುತ್ತಿರುವ ನಾಲಾ ಮತ್ತು ಕೆರೆ ಕಾಮಗಾರಿಗಳ ಎನ್‌ಎಂಎಂಎಸ್ ಹಾಜರಾತಿಯನ್ನು ದಾಖಲಿಸಿದ ನಂತರ ಜಿಕೆಎಂ ರೇಣುಕಾ ಸಾಳುಂಕೆ ಅವರು ಹಿಂದಿರುಗುತ್ತಿದ್ದರು. ಈ ವೇಳೆ ರಸ್ತೆ ಬದಿಯಲ್ಲಿ ಸಾಗುತ್ತಿದ್ದಾಗ ಹಿಂದಿನಿಂದ ವೇಗವಾಗಿ ಬಂದ ಟಾಟಾ ಏಸ್ ವಾಹನ ಡಿಕ್ಕಿ ಹೊಡೆದಿದೆ ಎಂದು ತಿಳಿದುಬಂದಿದೆ. ಅಪಘಾತದ ಪರಿಣಾಮ ರೇಣುಕಾ ಸಾಳುಂಕೆ ಅವರಿಗೆ ಗಾಯಗಳಾಗಿದ್ದು, ಸ್ಥಳೀಯರು ತಕ್ಷಣ ನೆರವಿಗೆ ಧಾವಿಸಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ಸಾಗಿಸಿದ್ದಾರೆ. ಘಟನೆ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದ್ದು, ಅಪಘಾತಕ್ಕೆ ಕಾರಣವಾದ ವಾಹನ ಚಾಲಕನ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.



ಯಲಬುರ್ಗಾ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಕ್ಕೆ ನೂತನ ತಾಲೂಕಾಧ್ಯಕ್ಷರಾಗಿ ಆಯ್ಕೆಯಾದ ಶಿವಮೂರ್ತಿ ಇಟಗಿ ಅವರನ್ನು ಸಮಾಜ ಸೇವಕ, ರಾಜಕೀಯ ಧುರೀಣ ಕಳಕಪ್ಪ ಕಂಬಳಿ, ನ್ಯಾಯವಾದಿ ಎನ್.ಎಸ್.ಶ್ಯಾಗೋಟಿ ಹಾಗೂ ಜಿಪಂ ಮಾಜಿ ಸದಸ್ಯ ಈರಪ್ಪ ಕುಡಗುಂಟಿ ಅವರು ಪಟ್ಟಣದ ಹೊಸದಿಗಂತ ಪತ್ರಿಕೆಯ ಕಚೇರಿಯಲ್ಲಿ ಸೋಮವಾರ ಸನ್ಮಾನಿಸಿದರು. ವಿಎಸ್‌ಎಸ್‌ಎನ್ ಸಂಘದ ಮಾಜಿ ಅಧ್ಯಕ್ಷ ಷಣ್ಮುಖಪ್ಪ ರಾಂಪುರ, ಸಿದ್ದಪ್ಪ ಕಟ್ಟಿಮನಿ, ಮಲ್ಲು ದಾನಕೈ ಇತರರಿದ್ದರು.

ಮಾಲಗಿತ್ತಿ ಗ್ರಾಮದಲ್ಲಿ ಜಾಗೃತಿ ಕಾರ್ಯಕ್ರಮ

ಕೊಪ್ಪಳ: ಜಿಲ್ಲಾಡಳಿತ, ಜಿಲ್ಲಾ ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಮತ್ತು ಸಾಕ್ಷರತಾ ಇಲಾಖೆ, ಆರೋಗ್ಯ ಮತ್ತು ಕುಟುಂಬ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಮಾಲಗಿತ್ತಿ ಗ್ರಾಪಂ ಸಂಯುಕ್ತಾಶ್ರಯದಲ್ಲಿ ಮಾಲಗಿತ್ತಿ ಗ್ರಾಮದ ಶ್ರೀಶರಣಬಸವೇಶ್ವರ ದೇವಸ್ಥಾನದಲ್ಲಿ ಮಕ್ಕಳ ಹಕ್ಕುಗಳು, ಕಾನೂನುಗಳು ಮತ್ತು ಮಕ್ಕಳ ಸುರಕ್ಷತೆ ಕುರಿತಾದ ಜಾಗೃತಿ (ಮಕ್ಕಳ ಮೇಲಿನ ದೌರ್ಜನ್ಯ ತಡೆಗಾಗಿ ಜನಸಂಪರ್ಕ ಸಂವಾದ) ಕಾರ್ಯಕ್ರಮ ನಡೆಯಿತು.

ಕೊಪ್ಪಳ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ರಕ್ಷಣಾಧಿಕಾರಿ(ಅಸಾಂಸ್ಥಿಕ) ಪ್ರಶಾಂತ ರಡ್ಡಿ ಮಾತನಾಡಿ, ಪೋಷಣೆ ಮತ್ತು ರಕ್ಷಣೆ ಅವಶ್ಯವಿರುವ ಯಾರೇ ಮಕ್ಕಳು ಕಂಡುಬಂದಲ್ಲಿ ಮಕ್ಕಳ ಸಹಾಯವಾಣಿ-1098 ಗೆ ಕರೆ ಮಾಡಿ, ಮಾಹಿತಿಯನ್ನು ನೀಡಿದಲ್ಲಿ ಮಗು ಇರುವಲ್ಲಿಯೇ ತಂಡವು ಆಗಮಿಸಿ, ಮಗುವನ್ನು ರಕ್ಷಿಸಿ ಮುಂದಿನ ಪೋಷಣೆ ಮತ್ತು ರಕ್ಷಣೆಗಾಗಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರಪಡಿಸಲಾಗುವುದು ಅಥವಾ ನಿಲ್ದಾಣಗಳೇ ಖುದ್ದು ಮಗುವನ್ನು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ಹಾಜರಪಡಿಸಬಹುದಾಗಿದೆ ಎಂದರು.

ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಪ್ರತಿಭಾ ಕಾಶಿಮಠ ಅವರು ಮಾತನಾಡಿ, ಮಕ್ಕಳ ಮೇಲಿನ ಲೈಂಗಿಕ ಅಪರಾಧಗಳನ್ನು ತಡೆಗಟ್ಟಲು ಸರಕಾರವು ವಿವಿಧ ಕಾನೂನುಗಳನ್ನು ಜಾರಿಯಲ್ಲಿ ತಂದಿರುತ್ತದೆ. ಎಂದರು. ಕಾರ್ಯಕ್ರಮವನ್ನು ಮುತ್ತಣ್ಣನವರು ನಿರೂಪಿಸಿದರು, ದೇವರಾಜ್ ತಿಲಗಾರ್ ಅವರು ವಂದಿಸಿದರು.



ಕೊಪ್ಪಳ: ಜಿಲ್ಲಾಡಳಿತ, ಜಿಲ್ಲಾ ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಮತ್ತು ಸಾಕ್ಷರತಾ ಇಲಾಖೆ, ಆರೋಗ್ಯ ಮತ್ತು ಕುಟುಂಬ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಮಾಲಗಿತ್ತಿ ಗ್ರಾಪಂ ಸಂಯುಕ್ತಾಶ್ರಯದಲ್ಲಿ ಮಾಲಗಿತ್ತಿ ಗ್ರಾಮದ ಶ್ರೀಶರಣಬಸವೇಶ್ವರ ದೇವಸ್ಥಾನದಲ್ಲಿ ಮಕ್ಕಳ ಹಕ್ಕುಗಳು, ಕಾನೂನುಗಳು ಮತ್ತು ಮಕ್ಕಳ ಸುರಕ್ಷತೆ ಕುರಿತಾದ ಜಾಗೃತಿ (ಮಕ್ಕಳ ಮೇಲಿನ ದೌರ್ಜನ್ಯ ತಡೆಗಾಗಿ ಜನಸಂಪರ್ಕ ಸಂವಾದ) ಕಾರ್ಯಕ್ರಮ ನಡೆಯಿತು.

ಬೂತ್ ಮಟ್ಟದ ಏಜೆಂಟರಗಳಿಗೆ ಎಸ್‌ಐಆರ್ ಮಾಹಿತಿ ಕಾರ್ಯಾಗಾರ

ಎನುಮರೇಷನ್ ಫಾರ್ಮ್ ಎಲ್ಲರಿಗೂ ನೀಡಿ

ಕೊಪ್ಪಳ: ಎಸ್‌ಐಆರ್ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ ಹಿನ್ನೆಲೆಯಲ್ಲಿ ಬಿಎಲ್‌ಓಗಳು ಮನೆ ಮನೆಗೆ ಭೇಟಿ ನೀಡಲಿದ್ದು, ಈ ವೇಳೆ ಪ್ರತಿಯೊಬ್ಬ ಅರ್ಹ ಮತದಾರರಿಗೆ ಎನುಮರೇಷನ್ ಫಾರಂ ಸಿಗುವಂತೆ ನೋಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ಸುರೇಶ ಬಿ. ಇಟ್ನಾಳ ಹೇಳಿದರು.

ಕೊಪ್ಪಳ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಸೋಮವಾರ ಬೂತ್ ಮಟ್ಟದ ಏಜೆಂಟರುಗಳಿಗೆ (ಬಿಎಲ್‌ಎ) ವಿಶೇಷ ಸಮಗ್ರ ಪರಿಷ್ಕರಣೆ ಎಸ್.ಐ.ಆರ್-2026ರ ಮಾಹಿತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಭಾರತದಲ್ಲಿ ಇದುವರೆಗೂ ಒಟ್ಟು 7 ಬಾರಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್.ಐ.ಆರ್) ಆಗಿದೆ. ಕಳೆದ ಬಾರಿ ಕರ್ನಾಟಕದಲ್ಲಿ 2002 ರಲ್ಲಿ ಎಸ್.ಐ.ಆರ್ ಆಗಿತ್ತು. 2002ರ ಮಾತದಾರರ ಪಟ್ಟಿಯಲ್ಲಿರುವವರನ್ನು ಅರ್ಹ ಮತದಾರರೆಂದು ಪರಿಗಣಿಸಲಾಗುತ್ತಿದೆ. ಪ್ರಸ್ತುತ 2025ರ ಮಾತದಾರರ ಪಟ್ಟಿಯನ್ನು 2002ರ ಪಟ್ಟಿಯೊಂದಿಗೆ ಹೋಲಿಕೆ ಮಾಡಿ ಅವರನ್ನು ಮ್ಯಾಪಿಂಗ್ ಮಾಡಲಾಗುತ್ತಿದೆ. ಈ ಪ್ರಕ್ರಿಯೆಯಲ್ಲಿ ಬಿಎಲ್‌ಎ ಮತ್ತು ಬಿಎಲ್‌ಓಗಳ ಪಾತ್ರ ಬಹಳ ಮುಖ್ಯವಾಗಿದೆ ಎಂದರು.

ಮತದಾರರ ಪಟ್ಟಿಯ ಪರಿಷ್ಕರಣೆಯು ಈ ಬಾರಿ ಸಂಪೂರ್ಣವಾಗಿ ಡಿಜಿಟಲೈಜ್ ಆಗಿ ನಡೆಯುತ್ತಿರುವುದರಿಂದ ಒಬ್ಬ ಮತದಾರನಿಗೆ ಎರಡು ಕಡೆ ಹೆಸರು ಉಳಿಸಿಕೊಳ್ಳುವುದಕ್ಕೆ ಯಾವುದೇ ಅವಕಾಶವಿಲ್ಲ. ಎಸ್‌ಐಆರ್ ಪ್ರಕ್ರಿಯೆಯಲ್ಲಿ 2025ರ ಮತದಾರರ ಪಟ್ಟಿಯಲ್ಲಿರುವ ಪ್ರತಿಯೊಬ್ಬರಿಗೂ ಎನುಮರೇಷನ್ ಫಾರಂ ಕೊಡಲಾಗುತ್ತದೆ. ಮತದಾರರು ಭರ್ತಿ ಮಾಡಿ, ಬಿ.ಎಲ್.ಓ.ಗಳಿಗೆ ನೀಡಿದ್ದಲ್ಲಿ ಅದನ್ನು ಅವರು ಆ್ಯಪ್ ಮೂಲಕ ಮುಂದಿನ ಕ್ರಮ ಕೈಗೊಳ್ಳುವರು ಎಂದರು.

ಬಿಎಲ್‌ಓಗಳು ಮನೆ ಮನೆಗೆ ಭೇಟಿ ನೀಡಿ, ಎನುಮರೇಷನ್ ಫಾರಂ ನೀಡುವ ಸಂದರ್ಭದಲ್ಲಿ ಎಲ್ಲಾ ಬೂತ್ ಮಟ್ಟದ ಏಜೆಂಟರುಗಳು ಜಾಗ್ರತರಾಗಿ ಕಾರ್ಯನಿರ್ವಹಿಸಿ, ಯಾವುದೇ ಅರ್ಹ ಮತದಾರರು ಮತದಾರರ ಪಟ್ಟಿಯಿಂದ ಬಿಟ್ಟು ಹೋಗದಂತೆ ನೋಡಿಕೊಳ್ಳಬೇಕು. ಈ ಬಗ್ಗೆ ಬಿ.ಎಲ್.ಓ.ಗಳು ನಿಮ್ಮೊಂದಿಗೆ ಸಭೆ ಮಾಡಲಿದ್ದು, ಮತದಾರರಿಂದ ಎನುಮರೇಷನ್ ಫಾರಂ ಸಂಗ್ರಹಿಸಿ, ಅದನ್ನು ಬಿಎಲ್‌ಓಗಳಿಗೆ ನೀಡಲು ಎಲ್ಲ ಬೂತ್ ಮಟ್ಟದ ಏಜೆಂಟರುಗಳಿಗೆ ಅವಕಾಶ ನೀಡಲಾಗಿದೆ ಎಂದು ಹೇಳಿದರು. ಜೆಡಿಎಸ್ ಪಕ್ಷದ ಸಿ.ವಿ.ಚಂದ್ರಶೇಖರ, ಬಿಜೆಪಿಯ ವಿರೇಶ ಮಾತನಾಡಿದರು. ಜಿಲ್ಲಾ ಮಟ್ಟದ ಮಾಸ್ಟರ್ ಟ್ರೈನರ್ ವಿದ್ಯಾಧರ ಅವರು ಎಸ್‌ಐಆರ್ ಕುರಿತು ವಿವರವಾಗಿ ಮಾಹಿತಿ ನೀಡಿದರು. ಎಡಿಸಿ ಸಿದ್ರಾಮೇಶ್ವರ, ಕಾಂಗ್ರೆಸ್ ಪಕ್ಷದ ಕೃಷ್ಣರೆಡ್ಡಿ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು, ಬಿಎಲ್‌ಎ-1 ಮತ್ತು 2 ಸೇರಿ ಇತರರು ಉಪಸ್ಥಿತರಿದ್ದರು.



> ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ ಪ್ರಯುಕ್ತ ನಮ್ಮ ಜಿಲ್ಲೆಯಲ್ಲಿ ಈಗಾಗಲೇ ಶೇ.92ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಮ್ಯಾಪಿಂಗ್ ಮಾಡಿದ್ದು, ರಾಜ್ಯದಲ್ಲಿ ನಮ್ಮ ಜಿಲ್ಲೆ ಮುಂಚೂಣಿಯಲ್ಲಿದೆ. ಎನುಮರೇಷನ್ ಫಾರ್ಮ್ ಭರ್ತಿ ಮಾಡಿ ಸಲ್ಲಿಸುವುದು ತುಂಬಾ ಅವಶ್ಯಕವಾಗಿದ್ದು, ಈ ಪ್ರಕ್ರಿಯೆಯಲ್ಲಿ ಯಾವುದೇ ಅರ್ಹ ಮತದಾರರು ಬಿಟ್ಟು ಹೋಗದಂತೆ ಎಲ್ಲಾ ಬಿಎಲ್‌ಎಗಳು ನೋಡಿಕೊಳ್ಳಬೇಕು.
>
> ■ ಕೆ.ರಾಜಶೇಖರ ಹಿಟ್ನಾಳ್, ಸಂಸದ

> ಎಸ್‌ಐಆರ್ ಹಿನ್ನೆಲೆಯಲ್ಲಿ ರಾಜಕೀಯ ಪಕ್ಷಗಳಿಂದ ಈಗಾಗಲೇ ಬಿಎಲ್‌ಎ-1 ಮತ್ತು 2ನ್ನು ನೇಮಿಸಿಕೊಂಡಿದ್ದಾರೆ. ಬಿಎಲ್‌ಓಗಳ ವಿವರಗಳುಳ್ಳ ಪಟ್ಟಿಯನ್ನು ಬೂತ್ ಮಟ್ಟದ ಏಜೆಂಟರುಗಳಿಗೆ ನೀಡಬೇಕು. ಇದರಿಂದ ಬಾಕಿ ಇರುವ ಮತದಾರರ ಮ್ಯಾಪಿಂಗ್ ಮಾಡಿಸಲು ಬಿಎಲ್‌ಎಗಳಿಗೆ ಅನುಕೂಲವಾಗುತ್ತದೆ. ಈ ಕಾರ್ಯಕ್ರಮವನ್ನು ಜವಾಬ್ದಾರಿಯಿಂದ ನಿರ್ವಹಿಸಬೇಕು.
>
> ■ ಕೆ.ರಾಘವೇಂದ್ರ ಹಿಟ್ನಾಳ್, ಶಾಸಕ

ಜಿಲ್ಲಾ ಕಸಾಪ ಸಮ್ಮೇಳನದ ಲಾಂಛನ ಅನಾವರಣ

ಕುಷ್ಟಗಿ: ಜಿಲ್ಲಾ ಸಮ್ಮೇಳನವಾಗಿರುವುದರಿಂದ ಜಿಲ್ಲೆಯ ವಿವಿಧೆಡೆಯಿಂದ ಬರುವ ಕನ್ನಡ ಮನಸುಗಳಿಗೆ ಆದರದ ಆತಿಥ್ಯ ನೀಡಿ ಗೌರವಿಸಬೇಕು ಎಂದು ವಿಧಾನಸಭೆ ಮುಖ್ಯ ಸಚೇತಕ ಹಾಗೂ ಶಾಸಕ ಮತ್ತು ಕಸಾಪ ಜಿಲ್ಲಾ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷ ದೊಡ್ಡನಗೌಡ ಪಾಟೀಲ ಹೇಳಿದರು.

ಪಟ್ಟಣದ ಶಾಸಕರ ಕಾರ್ಯಾಲಯದಲ್ಲಿ ಕೊಪ್ಪಳ ಜಿಲ್ಲಾ 14ನೇ ಕನ್ನಡ ಸಾಹಿತ್ಯ ಸಮ್ಮೇಳನದ ಲಾಂಛನವನ್ನು ಸೋಮವಾರ ಅನಾವರಣಗೊಳಿಸಿ ಮಾತನಾಡಿದ ಅವರು, ಜಿಲ್ಲಾಮಟ್ಟದ ಸಮ್ಮೇಳನವಾಗಿರುವುದರಿಂದ ಯಾವುದೇ ರೀತಿಯ ಅವಘಡಗಳು ಆಗದಂತೆ ನೋಡಿಕೊಳ್ಳಬೇಕು. ಹಿರೇಮನ್ನಾಪುರ ಗ್ರಾಮಸ್ಥರ ಸಹಕಾರ ಮತ್ತು ಗುರು, ಹಿರಿಯರು ಎಲ್ಲರೂ ಸಮ್ಮತ ಹಾಗೂ ಎಲ್ಲ ಕನ್ನಡ ಮನಸುಗಳ ಸಹಕಾರದಿಂದ ಸಮ್ಮೇಳನ ಯಶಸ್ವಿಗೊಳಿಸೋಣ ಅದಕ್ಕೆ ಎಲ್ಲರ ಸಹಕಾರ ಮುಖ್ಯವಾಗಿದೆ. ಲಾಂಛನವು ಬಹಳ ವಿಶೇಷತೆಯಿಂದ ಕೂಡಿದೆ. ಜಿಲ್ಲೆಯ ಸಮಗ್ರ ಐತಿಹಾಸಿಕ ಹಾಗೂ ಪ್ರಮುಖ ಪ್ರೇಕ್ಷಣೀಯ ಸ್ಥಳಗಳನ್ನು ಒಳಗೊಂಡಿದೆ ಅನಾವರಣಗೊಳಿಸಿರುವುದು ಸಂತಸ ತಂದಿದೆ ಎಂದರು.

ಕಸಾಪ ಜಿಲ್ಲಾ ಅಧ್ಯಕ್ಷ ಶರಣೇಗೌಡ ಪೊಲೀಸ್‌ಪಾಟೀಲ, ಕಸಾಪ ಜಿಲ್ಲಾ ಪ್ರತಿನಿಧಿ ರವಿಂದ್ರ ಬಾಕಳೆ, ಶ್ರೀನಿವಾಸ ಜಹಗಿರದಾರ ಅಬ್ದುಲ್ ಕರಿಂ ಒಂಟೆಳ್ಳಿ, ಎಸ್.ಜಿ.ಕಡೆಮನಿ, ವಿ.ಎಸ್.ಕಾಡಗಿಮಠ, ಶರಣಪ್ಪ ವಡಗೇರಿ, ಎಚ್.ವೈ.ಈಟಿಯವರ್ ಹನಮೇಶ ಗುಮಗೇರಿ, ದೇವಣ್ಣ ಬಳಿಗಾರ, ಶಿವಾನಂದ ಹಿರೇಮಠ, ಪರಸಪ್ಪ ಅಳ್ಳಳ್ಳಿ, ಮರಿಯಪ್ಪ ಮುಳ್ಳೂರು, ವಿರೇಶ ಹಾಸಗಲ್, ಸಂಗಪ್ಪ ಕತ್ತಿ, ಬಾಳಪ್ಪ ಹಡಪದ, ಶಂಕ್ರಪ್ಪ ಕುಷ್ಟಗಿ ಸೇರಿದಂತೆ ಹಿರೇಮನ್ನಾಪುರ ಗ್ರಾಮದ ಗುರು, ಹಿರಿಯರು, ಕಸಾಪ ಆಜೀವ ಸದಸ್ಯರು ಹಾಗೂ ಕನ್ನಡ ಮನಸ್ಸುಗಳು ಇದ್ದರು.

ಈ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷ ಲಂಕೆಪ್ಪ ವಾಲಿಕಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯದರ್ಶಿ ಶರಣಪ್ಪ ಲೈನದ್ ಸ್ವಾಗತಿಸಿ, ನಿರೂಪಿಸಿ, ವಂದಿಸಿದರು.



ಎಸ್‌ಐಆರ್ ಪ್ರಕ್ರಿಯೆಯಲ್ಲಿ ಚುನಾವಣಾ ಆಯೋಗದ ಜೊತೆ ನಿಲ್ಲೋಣ: ಸಿವಿಸಿ

ಕೊಪ್ಪಳ: ಚುನಾವಣಾ ಆಯೋಗದ ವಿಶೇಷಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ನಾವೆಲ್ಲ ಆಯೋಗದ ಜೊತೆಗೆ ಪೂರಕವಾಗಿ ಕೆಲಸ ಮಾಡಬೇಕು ಎಂದು ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯ ಸಿ.ವಿ.ಚಂದ್ರಶೇಖರ್ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸೋಮವಾರ ನಡೆದ ಬಿಎಲ್‌ಎ (ಬೂತ್ ಲೆವೆಲ್ ಏಜೆಂಟ್) ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಪರಿಷ್ಕೃತ ಮತದಾರ ಪಟ್ಟಿ ದೋಷರಹಿತವಾಗಿರುವಂತೆ ನೋಡಿಕೊಳ್ಳುವ ಜವಾಬ್ದಾರಿ ಎಲ್ಲಾ ರಾಜಕೀಯ ಪಕ್ಷಗಳ ಮೇಲೆ ಇದೆ. ಈಗಾಗಲೇ ನೇಮಕಗೊಂಡಿರುವ ಬಿಎಲ್‌ಎ- 2 ಅವರು ಸರಕಾರದ ಬಿಎಲ್‌ಓ ಅವರ ಜೊತೆಗೆ ಸರಿಯಾಗಿ ಕೆಲಸ ನಿರ್ವಹಿಸಿ ಮತದಾರರ ಪಟ್ಟಿ ಸರಿಯಾಗಿ ಇರುವಂತೆ ನೋಡಿಕೊಳ್ಳಬೇಕಿದೆ. ಪಕ್ಷಾತೀತವಾಗಿ ಈ ಕೆಲಸ ಮಾಡಬೇಕು. ಮುಕ್ತ ಮತ್ತು ನ್ಯಾಯ ಸಮ್ಮತ ಚುನಾವಣೆ ಕೈಗೊಳ್ಳಲು ಮತದಾರರ ಪಟ್ಟಿ ಪರಿಷ್ಕೃತಗೊಳ್ಳುವುದು ಅತ್ಯಂತ ಅಗತ್ಯ ಎಂದು ಹೇಳಿದರು.

2002ರ ಮತದಾನ ಪಟ್ಟಿಯ ಆಧಾರದ ಮೇಲೆ ಕೆಲವೊಂದು ಬದಲಾವಣೆಗಳನ್ನು ಕೈಗೊಳ್ಳಲಾಗುತ್ತಿದೆ. ಅನರ್ಹ ಹಾಗೂ ನಿಧನ ಹೊಂದಿದವರ ಹೆಸರುಗಳನ್ನು ತೆಗೆದುಹಾಕಿ ಪಟ್ಟಿ ಸರಿಯಾಗಿ ಇರುವಂತೆ ನೋಡಿಕೊಳ್ಳುವ ಕೆಲಸ ಚುನಾವಣಾ ಆಯೋಗ ಮಾಡುತ್ತಿದೆ. ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಜೆಡಿಎಸ್ ಪಕ್ಷ ಪ್ರಾಥಮಿಕ ಹಂತದ ಕೆಲಸಗಳನ್ನು ಪೂರೈಸಿ ಜಿಲ್ಲಾಡಳಿತದ ಜೊತೆಗೆ ನಿಕಟವಾಗಿ ಕೆಲಸ ಮಾಡುತ್ತಿದೆ. ಈ ಪ್ರಕ್ರಿಯೆ ಯಶಸ್ವಿಯಾಗಿ ಪೂರ್ಣಗೊಳ್ಳಲು ನಮ್ಮ ಪಕ್ಷದ ಸಂಪೂರ್ಣ ಸಹಕಾರ ಇರಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾಸಕ ರಾಘವೇಂದ್ರ ಹಿಟ್ನಾಳ್, ಸಂಸದ ರಾಜಶೇಖರ ಹಿಟ್ನಾಳ್, ಜಿಲ್ಲಾಧಿಕಾರಿ ಡಾ. ಸುರೇಶ ಇಟ್ನಾಳ, ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಜಿಲ್ಲಾ ಮಟ್ಟದ ಅಧಿಕಾರಿಗಳು, ವಿವಿಧ ಪಕ್ಷದ ಮುಖಂಡರು ಹಾಗೂ ಬಿಎಲ್‌ಎಗಳಿದ್ದರು.



ಗ್ಯಾರಂಟಿಗೆ ಕತ್ತರಿ ಕಾಂಗ್ರೆಸ್ ಸರ್ಕಾರದ ಮೋಸ; ತೇಲ್ಕೂರ್

ಕಲಬುರಗಿ: ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಸಾಧ್ಯವಾಗದೇ ಈಗ ಲಕ್ಷಾಂತರ ಫಲಾನುಭವಿಗಳನ್ನು ಕಡಿತ ಮಾಡಲು ಹೊರಟಿರುವ ಕಾಂಗ್ರೆಸ್ ಸರ್ಕಾರದ ಕ್ರಮ ಖಂಡನೀಯ ಎಂದು ಸೇಡಂ ಮಾಜಿ ಶಾಸಕ ರಾಜಕುಮಾರ ಪಾಟೀಲ್ ತೇಲ್ಕೂರ್ ತೀವ್ರವಾಗಿ ಆಕ್ಷೇಪಿಸಿದ್ದಾರೆ.



ಪತ್ರಿಕಾ ಪ್ರಕಟಣೆ ಮೂಲಕ ಹೇಳಿಕೆ ಬಿಡುಗಡೆ ಮಾಡಿರುವ ಅವರು, ತಾನೇ ಘೋಷಿಸಿದ್ದ ಗ್ಯಾರಂಟಿಗಳ ಬಗ್ಗೆ ಈಗ ಸರ್ಕಾರವೇ ವ್ಯತಿರಿಕ್ತ ಹೇಳಿಕೆ ನೀಡುತ್ತಿದೆ. ಮಾನದಂಡ ಬದಲಿಸಿ ಫಲಾನುಭವಿಗಳ ಸಂಖ್ಯೆ ಇಳಿಸುವ ಹುನ್ನಾರ ನಡೆದಿದೆ. ಚುನಾವಣೆ ವೇಳೆ ಪ್ರತಿಯೊಬ್ಬ ಮಹಿಳೆಗೂ ಗೃಹಲಕ್ಷ್ಮಿ ಕೊಡುತ್ತೇವೆ ಎಂದು ಪ್ರಣಾಳಿಕೆಯಲ್ಲಿ ಘೋಷಿಸಿದ್ದೀರಿ. ಈಗ ಕುಂಟು ನೆಪ ಹೇಳಿ ಕತ್ತರಿ ಹಾಕುತ್ತಿದ್ದೀರಿ. ಇದು ಜನರಿಗೆ ಮಾಡಿದ ದ್ರೋಹ ಎಂದು ಕಿಡಿಕಾರಿದರು.

ಶ್ವೇತಪತ್ರಕ್ಕೆ ಒತ್ತಾಯ: ಕೊಟ್ಟ ಮಾತಿನಂತೆ ನಡೆಯುವುದು ಸರ್ಕಾರದ ಆದ್ಯ ಕರ್ತವ್ಯ. ರಾಜ್ಯದ ಆರ್ಥಿಕ ಪರಿಸ್ಥಿತಿ ಏನಾಗಿದೆ ಎಂದು ಮುಖ್ಯಮಂತ್ರಿಗಳು ಜನರ ಮುಂದೆ ಬಹಿರಂಗ ಪಡಿಸಬೇಕು. ಖಜಾನೆ ಖಾಲಿ ಆಗಿದ್ದರೆ ಶ್ವೇತಪತ್ರ ಹೊರಡಿಸಿ. ಗ್ಯಾರಂಟಿ ಕೊಟ್ಟು ಸರ್ಕಾರಿ ನೌಕರರಿಗೆ ಸಂಬಳ ಕೊಡಲಾಗದ ಪರಿಸ್ಥಿತಿ ಹಿಮಾಚಲ ಪ್ರದೇಶ ಮತ್ತು ತೆಲಂಗಾಣದಲ್ಲಿ ನಿರ್ಮಾಣವಾಗಿದೆ. ಕರ್ನಾಟಕವೂ ಅದೇ ದಾರಿಯಲ್ಲಿ ಸಾಗುತ್ತಿದೆ ಎಂದು ಎಚ್ಚರಿಸಿದ ಅವರು, ಜನ ಗ್ಯಾರಂಟಿ ಕೇಳಿರಲಿಲ್ಲ. ನೀವೇ ಘೋಷಣೆ ಮಾಡಿ ಈಗ ಅವರಿಗೆ ಅಪಮಾನ ಮಾಡುತ್ತಿದ್ದೀರಿ. ಮೂರು ವರ್ಷದಲ್ಲಿ ಅಭಿವೃದ್ಧಿ ಶೂನ್ಯ. ಇನ್ನಾದರೂ ಉತ್ತಮ ಆಡಳಿತ ಕೊಡಿ ಎಂದು ಹೇಳಿದರು.

ಜೂ.22ಕ್ಕೆ ಎಸ್‌ಇಪಿ, ಟಿಎಸ್‌ಪಿ ದುರ್ಬಳಕೆ ಖಂಡಿಸಿ ಧರಣಿ

ಮಾನ್ವಿ: ಚೆಕ್ ಡ್ಯಾಂಮ್‌ಗಳ ನಿರ್ಮಾಣದಲ್ಲಿ ಎಸ್‌ಇಪಿ, ಟಿಎಸ್‌ಪಿ ದುರ್ಬಳಕೆಯಾಗಿರುವುದನ್ನು ಖಂಡಿಸಿ ಜೂ.22ರಂದು ಧರಣಿ ಮಾಡಲಾಗುವುದೆಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಮಿತಿಯ ಜಿಲ್ಲಾಧ್ಯಕ್ಷ ಬಸವರಾಜ ನಕ್ಕುಂದಿ ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಸಾಮಾಜಿಕ ನ್ಯಾಯಕ್ಕಾಗಿ ಚಳವಳಿ ಜಿಲ್ಲಾ ಸಮಿತಿ ಹಾಗೂ ಕರ್ನಾಟಕ ರಾಜ್ಯ ಸುರಕ್ಷಾ ಶ್ರಮಿಕ ವರ್ಗ ಕಟ್ಟಡ ನಿರ್ಮಾಣ ಮತ್ತು ಅಸಂಘಟಿತರ ಕಾರ್ಮಿಕ ಸಂಘ, ದಲಿತಸಮರಸೇನೆ, ಕರ್ನಾಟಕಸ್ಲಮ್ ಜನರಕ್ರಿಯಾವೇದಿಕೆ, ಕರ್ನಾಟಕ ದಲಿತ ಸಂಘರ್ಷ ಸಮಿತಿ ಭೀಮಬಣ ಸಂಘಟನೆಯ ಸಂಯುಕ್ತಾಶ್ರಯದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ರಾಜ್ಯ ಸರ್ಕಾರವು ಅಂತರ್ಜಲಮಟ್ಟವನ್ನು ವೃದ್ಧಿಸುವುದು, ರೈತರ ಜಮೀನುಗಳಿಗೆ ನೀರು ಹರಿಸುವುದಕ್ಕೆ ಅಗತ್ಯ ನೀರಾವರಿ ಸೌಲಭ್ಯವನ್ನು ಕಲ್ಪಿಸುವ ಉದ್ದೇಶದಿಂದ ಹಳ್ಳಗಳಿಗೆ, ನಾಲೆಗಳಿಗೆ, ಗುಡ್ಡಗಾಡು ಪ್ರದೇಶವಿರುವ ಕಡೆ ಚೆಕ್ ಡ್ಯಾಂಗಳನ್ನು ನಿರ್ಮಾಣ ಮಾಡುವ ಕಾಮಗಾರಿಯನ್ನು ಕೈಗೊಂಡಿದು ಮಾನ್ವಿ ಮತ್ತು ಸಿರವಾರ ತಾಲೂಕುಗಳಲ್ಲಿ 80 ಕ್ಕೂ ಹೆಚ್ಚು ಚೆಕ್‌ಡ್ಯಾಂಗಳನ್ನು ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳು ಅತ್ಯಂತ ಅವೈಜ್ಞಾನಿಕವಾಗಿದೆ. ಎಸ್‌ಇಪಿ, ಟಿಎಸ್‌ಪಿ ಯೋಜನೆಯಡಿಯಲ್ಲಿ ದಲಿತರ ಜಮೀನುಗಳಿಗೆ ನೀರವಾರಿಯನ್ನು ಕಲ್ಪಿಸುವುದಕ್ಕಾಗಿ ಪ.ಜಾತಿ, ಪಂಗಡ ಸಮುದಾಯಗಳ ರೈತರ ಜಮೀನಿರುವ ಕಡೆ ಚೆಕ್ ಡ್ಯಾಂಗಳನ್ನು ಕಟ್ಟದೆ ಸಾಮಾನ್ಯ ವರ್ಗಕ್ಕೆ ಸೇರಿದ ರೈತರು ಹೆಚ್ಚಿರುವ ಕಡೆ ಚೆಕ್‌ಡ್ಯಾಂಗಳನ್ನು ನಿರ್ಮಾಣ ಮಾಡಲಾಗಿರುವುದರಿಂದ ಪ.ಜಾತಿ, ಪಂಗಡ ಸಮುದಾಯಗಳ ರೈತರಿಗೆ ಅನ್ಯಾಯವಾಗಿರುವುದನ್ನು ಖಂಡಿಸಿ, ಹಾಗೂ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು ಹಾಗೂ ಸಮಗ್ರವಾದ ತನಿಖೆಯನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.



ಕಾರ್ಮಿಕ ಸಂಘದ ಅಧ್ಯಕ್ಷ ಪರಶುರಾಮ್ ಬಾಗಲವಾಡ, ದಲಿತ ಚಳವಳಿ ತಾ.ಅಧ್ಯಕ್ಷ ಚಂದ್ರಶೇಖರ, ದಲಿತ ಸಮರ ಸೇನೆ ತಾ.ಅಧ್ಯಕ್ಷ ಅನಿಲ್ ಕುಮಾರ, ದಲಿತ ಸಂಘರ್ಷ ಸಮಿತಿ ಜಿಲ್ಲಾ ಪ್ರ.ಕಾರ್ಯದರ್ಶಿ ನರಸರೆಡ್ಡಿ, ವಿದ್ಯಾರ್ಥಿ ಒಕ್ಕೂಟದ ರಾಜ್ಯ ಪ್ರ.ಕಾರ್ಯದರ್ಶಿ ಪ್ರಶಾಂತ್ ಜಾಗೀರ್ ಪನ್ನೂರ್, ದ.ಸಂಘರ್ಷ ಸಮಿತಿ ಕಾರ್ಯದರ್ಶಿ ವೆಂಕಟೇಶ್, ಅಮರೇಶ್ ಜಾಗೀರ್ ಪನ್ನೂರು ಇತರರಿದ್ದರು.

ಪಾಲಕರು ಮಕ್ಕಳಿಗೆ ಶಿಕ್ಷಣ ಕೊಡಿಸುವತ್ತ ಗಮನಹರಿಸಲಿ

ಯಲಬುರ್ಗಾ: ಪಟ್ಟಣದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ತಾಲೂಕಾ ಸೇವಾ ಸಮಿತಿ, ಶಿಕ್ಷಣ ಇಲಾಖೆ ಕಾರ್ಮಿಕ, ಕಂದಾಯ ಇಲಾಖೆ ಸಹಯೋಗದಲ್ಲಿ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನವನ್ನು ಶಾಲಾ ಮಕ್ಕಳಿಗೆ ಪ್ರಮಾಣವಚನ ಬೋಧಿಸುವ ಮೂಲಕ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಈ ವೇಳೆ ಹಿರಿಯ ಸಿವಿಲ್ ನ್ಯಾಯಾಧೀಶ ಪ್ರಮೀಳಾ ಎಂ. ಮಾತನಾಡಿ, ಪ್ರತಿಯೊಬ್ಬ ಪಾಲಕರು ಬಡತನದ ನೆಪ ಹೇಳಿಕೊಂಡು ಮಕ್ಕಳನ್ನು ಬಾಲಕಾರ್ಮಿಕತೆಗೆ ಒಳಪಡಿಸುವ ಮೂಲಕ ಅವರನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡದೆ ಶಿಕ್ಷಣ ಕೊಡಿಸುವ ಪ್ರಾಮಾಣಿಕ ಪ್ರಯತ್ನಕ್ಕೆ ಮುಂದಾಗಬೇಕು ಎಂದರು.

ಮಕ್ಕಳಿಗೆ ಶಿಕ್ಷಣ ಕಲಿಸುವ ವಯಸ್ಸಿನಲ್ಲಿಯೇ ಉತ್ತಮ ಶಿಕ್ಷಣ ಕೊಡಿಸದೆ ಅವರನ್ನು ದುಡಿಮೆಗೆ ಹಚ್ಚುವುದರಿಂದ ಮಕ್ಕಳ ಜನ್ಮದ ಹಕ್ಕನ್ನು ಮೊಟಕುಗೊಳಿಸಿದಂತಾಗುತ್ತದೆ. ಚಿಕ್ಕ ವಯಸ್ಸಿನ ಮಕ್ಕಳಿಗೆ ದೈಹಿಕ ಒತ್ತಡ ಹೇರುತ್ತಿರುವುದರಿಂದ ಮಾನಸಿಕ ಖಿನ್ನತೆಗೆ ಒಳಗಾಗಿ ಅವರ ಭವಿಷ್ಯವೇ ಮಣ್ಣು ಪಾಲಾಗಲಿದೆ. ಹೀಗಾಗಿ ಎಲ್ಲ ಪಾಲಕರು ಗಮನದಲ್ಲಿಟ್ಟುಕೊಂಡು ಶಿಕ್ಷಣ ಕೊಡಿಸುವ ಮೂಲಕ ಅವರ ಉಜ್ವಲ್ ಭವಿಷ್ಯಕ್ಕೆ ದಾರಿದೀಪವಾಗಬೇಕು ಎಂದು ಹೇಳಿದರು.

ಸಿವಿಲ್ ನ್ಯಾಯಾಧೀಶ ಸಂಜುಕುಮಾರ್ ಪಾಚಾಪೂರೆ ಶಾಲಾ ಮಕ್ಕಳಿಗೆ ಪ್ರಮಾಣ ವಚನವನ್ನು ಬೋಧಿಸಿ ಮಾತನಾಡಿ, ಬಾಲ ಕಾರ್ಮಿಕ ಪದ್ಧತಿಯನ್ನು ಬುಡಸಮೇತ ಕಿತ್ತು ಎಸೆಯಲು ಎಲ್ಲರ ಸಹಕಾರ ಅಗತ್ಯವಾಗಿದೆ ಎಂದರು.



ತಹಶೀಲ್ದಾರ್ ಪ್ರಕಾಶ ನಾಶಿ ಮಾತನಾಡಿ, ಸಮಾಜ ನಿರ್ಮಾಣದಲ್ಲಿ ವಿದ್ಯಾರ್ಥಿಗಳ ಪಾತ್ರ ಮಹತ್ವದಾಗಿದ್ದು, ಮೊದಲು ಉತ್ತಮ ನಾಗರಿಕರಾಗುವುದನ್ನು ಕಲಿತು ಕೊಳ್ಳಬೇಕು. ಸಮಾಜ ನಮಗೇನು ಕೊಟ್ಟಿದೆ ಎನ್ನುವುದಕ್ಕಿಂತ ನಾವು ಸಮಾಜಕ್ಕಾಗಿ ನಾವು ಏನು ಕೊಡುಗೆ ಕೊಟ್ಟಿದ್ದೇವೆ ಎನ್ನುವುದರ ಬಗ್ಗೆ ಚಿಂತನೆ ಮಾಡಬೇಕು ಎಂದರು.

ವಕೀಲ ಸಂಘದ ಅಧ್ಯಕ್ಷ ಎಸ್.ಎಸ್.ಹೊಂಬಾಳ, ಅಪರ ಸರ್ಕಾರಿ ವಕೀಲ ಮಲ್ಲನಗೌಡ ಪಾಟೀಲ, ಉಪಾಧ್ಯಕ್ಷ ಎಂ.ಎಸ್.ನಾಯ್ಕರ್, ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ದುರ್ಗಪ್ಪ ಹಿರೇಮನಿ, ವಕೀಲರಾದ ಎ.ಎಂ.ಪಾಟೀಲ, ಎಎಸ್‌ಐ ಕಲ್ಲಪ್ಪ, ಕಾರ್ಮಿಕ ಇಲಾಖೆ ಸಿಬ್ಬಂದಿ ವೀರೇಶ್, ಮಹೇಶ, ನ್ಯಾಯಾಲಯದ ಸಿಬ್ಬಂದಿ ರಾಘವೇಂದ್ರ, ಕೋಳಿಹಾಳ, ವಿನಾಯಕ ಮತ್ತಿತರರಿದ್ದರು.

ಬಸಪ್ಪ ಕಟ್ಟಿ ಸೇವಾ ನಿವೃತ್ತಿ: ಸನ್ಮಾನ

ಕುಷ್ಟಗಿ: ತಾಲೂಕಿನ ಯಲಬುರ್ತಿ ಸರ್ಕಾರಿ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾಗಿ ಸುಮಾರು ಮೂವತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿದ ಬಸಪ್ಪ ಕಟ್ಟಿಯವರ ಸೇವಾ ನಿವೃತ್ತಿ ಕಾರ್ಯಕ್ರಮದ ಜೊತೆಗೆ ಶಾರದಾ ಬಸಪ್ಪ ಕಟ್ಟಿಮನಿ ಅವರ 36ನೇಯ ವರ್ಷದ ವಿವಾಹ ವಾರ್ಷಿಕೋತ್ಸವದ ಸಮಾರಂಭ ಇಲ್ಲಿನ ಎಸ್.ಎಂ. ಭವನದಲ್ಲಿ ನಡೆಯಿತು.

ಶಿಕ್ಷಣ ಇಲಾಖೆಯ ಪರವಾಗಿ ಶರಣು ತೆಮ್ಮಿನಾಳ ಮಾತನಾಡಿ, ಸರ್ಕಾರಿ ಸೇವೆಯಲ್ಲಿ ಇದು ಸಾಮಾನ್ಯ ಪ್ರಕ್ರಿಯೆ ಕಾರಣ ನಾವು ಮಾಡಿದ ಕೆಲಸ ತೃಪ್ತಿಕರವಾಗಿ ಇರಬೇಕು. ಯಾವುದೇ ವೃತ್ತಿ ಜೀವನದಲ್ಲಿ ಒಂದು ದಿನ ನಿವೃತ್ತಿ ಹೊಂದಬೇಕು. ಅಲ್ಲದೇ ಇದೇ ಸಮಯದಲ್ಲಿ ನಿವೃತ್ತಿ ಹೊಂದಿದ ಬಸಪ್ಪ ಮತ್ತು ಶಾರದಾ ಕಟ್ಟಿಮನಿ ದಂಪತಿಗೆ ವಿವಾಹ ಮಹೋತ್ಸವದ ಶುಭಾಶಯಗಳು ಕೋರಲಾಯಿತು. ನಂತರ ಡಿ.ಬಿ.ಗಡೇದ, ಡಾ.ಜೀವನಸಾಬ ಬಿನ್ನಾಳ, ನಟರಾಜ ಸೋನಾರ್, ಹನಮೇಶ ಶೆಟ್ಟರ್, ಶಾರದಾ ಶೆಟ್ಟರ್, ರವಿಂದ್ರ ಬಾಕಳೆ, ಎ.ಎಚ್.ಪಲ್ಲೇದ ವಕೀಲರು ಮಾತನಾಡಿದರು. ನಂತರ ಅವರ ಒಡನಾಡಿಗಳು ಅಭಿಮಾನಿಗಳು ಸಹ ಶಿಕ್ಷಕರು ಇಬ್ಬರನ್ನೂ ಸನ್ಮಾನಿಸಿ ಗೌರವಿಸಿದರು. ಬಸವರಾಜ ಗಾಣಿಗೇರ ನಿರೂಪಿಸಿ, ವಂದಿಸಿದರು.



ಕೇಂದ್ರದ ಮೇಲೆ ಒತ್ತಡ ಹೇರಿ ಜೋಳದ ಹಣ ಬಿಡುಗಡೆ ಮಾಡಿ

ಸಿಂಧನೂರು: ಜೋಳದ ಹಣ ಬಿಡುಗಡೆ ವಿಳಂಬವಾಗಿರುವುದಕ್ಕೆ ಕೇಂದ್ರ ಸರ್ಕಾರ ಕಾರಣವಾಗಿದ್ದು,ಮಾಜಿ ಶಾಸಕ ವೆಂಕಟರಾವ್ ನಾಡಗೌಡರು,ರೈತರನ್ನು ರಾಜಕೀಯವಾಗಿ ದಾರಿತಪ್ಪಿಸುವುದನ್ನು ಕೈಬಿಟ್ಟು ಹಣ ಬಿಡುಗಡೆಗೆ ತಮ್ಮದೇ ಪಕ್ಷದ ಪಾಲುದಾರ ಎನ್‌ಡಿಎ ಸರ್ಕಾರದ ಮೇಲೆ ಒತ್ತಡ ಹೇರಲಿ ಎಂದು ಶಾಸಕ ಹಂಪನಗೌಡ ಬಾದರ್ಲಿ ಹೇಳಿದರು.

ನಗರದ ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ?ನಾಡಗೌಡರು ಸುಳ್ಳನ್ನು ಸತ್ಯವೆಂದು ಬಿಂಬಿಸಲು ಹೊರಟಿದ್ದಾರೆ.ಕೇಂದ್ರ ಸರ್ಕಾರ ಆಹಾರ ಭದ್ರತಾ ಕಾಯ್ದೆ ಅಡಿ ಜೋಳ ಖರೀದಿಸಿದೆ.ಆದರೆ ಹಣ ಪಾವತಿ ಮಾಡದೇ ಬೇಜವಾಬ್ದಾರಿವಹಿಸಿದೆ.ಜೆಡಿಎಸ್ ಪಕ್ಷ ಬಿಜೆಪಿ ಸರ್ಕಾರದ ಪಾಲುದಾರ ಪಕ್ಷವಾಗಿದ್ದು,ಕೇಂದ್ರ ಸರ್ಕಾರದಲ್ಲಿಕುಮಾರಸ್ವಾಮಿ ಅವರು ಮಂತ್ರಿಯಾಗಿದ್ದಾರೆ. ಅವರದೇ ಸರ್ಕಾರವಿದ್ದರೂ ರಾಜ್ಯ ಸರ್ಕಾರದ ಮೇಲೆ ವಿನಾಃಕಾರಣ ಆಪಾದನೆ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಜಿಲ್ಲೆಯಲ್ಲಿ 18.3.2026 ರಿಂದ 15.5.2026 ರವರೆಗೆ ಮುಂಗಾರು-ಹಿಂಗಾರು ಹಂಗಾಮಿನಲ್ಲಿ 22,462 ರೈತರು ನೋಂದಣಿ ಮಾಡಿಕೊಂಡಿದ್ದಾರೆ. ರೈತರಿಂದ ಒಟ್ಟು 12,23,112 ಕ್ವಿಂಟಲ್ ಜೋಳ (ಶೇ.82.85) ಖರೀದಿಸಲಾಗಿದ್ದು, 468 ಕೋಟಿ ರೂಪಾಯಿ ಜಿಲ್ಲೆಯ ರೈತರಿಗೆ ಹಣ ಪಾವತಿಬೇಕಿದೆ.ಆದರೆ ಇಲ್ಲಿಯವರೆಗೆ ಕೇವಲ 34 ಲಕ್ಷ ರೂಪಾಯಿ ಮಾತ್ರ ಬಿಡುಗಡೆಯಾಗಿದೆ ಎಂದು ವಿವರಿಸಿದರು.




ರಾಜ್ಯದ ಜೋಳ ಬೆಳೆಗಾರರಿಗೆ 801 ಕೋಟಿ ರೂಪಾಯಿ ಹಾಗೂ ಉಳಿದಂತೆ ಭತ್ತ ಸೇರಿ ಇನ್ನಿತರೆ ಬೆಳೆಗಳಿಗೆ 2800 ಕೋಟಿ ರೂಪಾಯಿಯನ್ನು ಕೇಂದ್ರ ಸರ್ಕಾರ ರಾಜ್ಯಕ್ಕೆ ಬಿಡುಗಡೆ ಮಾಡಬೇಕು.ಆದರೆ ಕೇಂದ್ರ ಸರ್ಕಾರ ಕಳೆದ 2 ವರ್ಷಗಳಿಂದ ಹಣ ಬಿಡುಗಡೆ ಮಾಡುತ್ತಿಲ್ಲ. ಜೋಳದ ಹಣ ಬಿಡುಗಡೆ ಮಾಡುವುದು ಕೇಂದ್ರ ಸರ್ಕಾರದ ಜವಾಬ್ದಾರಿಯಾಗಿದೆ. ರಾಜ್ಯ ಸರ್ಕಾರ ಆವರ್ತನಿಧಿಯಡಿ ಈಗಾಗಲೇ ತೊಗರಿ, ರಾಗಿ ಸೇರಿದಂತೆ ಇನ್ನಿತರೆ ಬೆಳೆಗಳಿಗೆ ಹಣ ಪಾವತಿಸಿ ರೈತರಿಗೆ ಸ್ಪಂದಿಸಿದೆ. ಆದರೆ ಕೇಂದ್ರ ಸರ್ಕಾರ ಮಾತ್ರ ಜವಾಬ್ದಾರಿಯಿಂದ ನುಣುಚಿಕೊಂಡಿದೆ ಎಂದು ದೂರಿದರು.

ಬಸವರಾಜ ಹಿರೇಗೌಡರ್, ಖಾಜಿಮಲಿಕ್, ಅನಿಲ್ ಕುಮಾರ್, ಅಶೋಕ ಉಮಲೂಟಿ, ಪ್ರಭುರಾಜ ಮತ್ತಿತರರಿದ್ದರು.

ಕಿರುಸುದ್ದಿ

ದರ್ಶನಾಪುರಗೆ ಸಚಿವ ಸ್ಥಾನ ನೀಡಲು ಆಗ್ರಹ



◆ **ಸುರಪುರ:** ಶಹಾಪುರ ಮತಕ್ಷೇತ್ರದ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ಹಾಗೂ ಶಾಸಕ ಶರಣಬಸಪ್ಪಗೌಡ ದರ್ಶನಾಪುರ ಅವರಿಗೆ ರಾಜ್ಯ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕು ಎಂದು ಪರಿಶಿಷ್ಟ ಪಂಗಡ ತಳವಾರ ಸಮಾಜದ ಯುವ ಹೋರಾಟಗಾರ ಭಾಗೇಶ ಏವೂರ ಆಗ್ರಹಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ಶಹಾಪುರ ಮತಕ್ಷೇತ್ರದ ಶರಣಬಸಪ್ಪಗೌಡ ದರ್ಶನಾಪುರ ಅವರು ಹಲವು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಅನುಭವಿ ರಾಜಕಾರಣಿಯಾಗಿದ್ದು, ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಾಂಗ್ರೆಸ್ ಪಕ್ಷವನ್ನು ಬಲಪಡಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಅವರ ಪಟ್ಟಿರುವ ಶ್ರಮ ಅಸ್ಟಿಷ್ಟಲ್ಲ ಅವರ ಶ್ರಮದಿಂದ ಕಾಂಗ್ರೆಸ್ ಪಕ್ಷ ಜಯ ಸಾಧಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಯಾದಗಿರಿ ಜಿಲ್ಲೆಯ ಅಭಿವೃದ್ಧಿಗೆ ನಿರಂತರವಾಗಿ ಶ್ರಮಿಸಿರುವ ಅವರು, ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುವ ಜನನಾಯಕನಾಗಿ ಗುರುತಿಸಿಕೊಂಡಿದ್ದಾರೆ. ರೈತರು, ಕಾರ್ಮಿಕರು, ದಲಿತರು, ಹಿಂದುಳಿದ ವರ್ಗಗಳು ಅಲ್ಪಸಂಖ್ಯಾತರ ಹಾಗೂ ಸಮಾಜದ ದುರ್ಬಲ ವರ್ಗಗಳ ಪರವಾಗಿ ಸದಾ ಧ್ವನಿಯಾಗಿರುವವರು. ಈ ಭಾಗದ ಜನರ ಆಶಯಗಳನ್ನು ಸರ್ಕಾರದ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಪ್ರತಿನಿಧಿಸುವ ಸಾಮರ್ಥ್ಯ ದರ್ಶನಾಪುರಗೆ ಇದೆ. ಆದ್ದರಿಂದ ಅವರನ್ನು ಸಚಿವ ಸಂಪುಟಕ್ಕೆ ಸೇರಿಸುವ ಮೂಲಕ ಶಹಾಪುರ ಮತಕ್ಷೇತ್ರದ ಜನತೆಗೆ ಕಾಂಗ್ರೆಸ್ ಪಕ್ಷದ ಯುವಕರಿಗೆ ನ್ಯಾಯ ದೊರಕಿಸಲು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪಪಂ ತಳವಾರ ಸಮಾಜದ ಯುವ ನಾಯಕ ಭಾಗೇಶ ಏವೂರ ಆಗ್ರಹಿಸಿದ್ದಾರೆ.

ಜೂ.18ರಂದು ಅತಿಥಿ ಉಪನ್ಯಾಸಕರ ಆಯ್ಕೆ

◆ **ವಿಜಯನಗರ:** ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪ್ರಸಕ್ತ ಸಾಲಿನಲ್ಲಿ ಮೊರಾರ್ಜಿ, ಕಿತ್ತೂರು ರಾಣಿ ಚನ್ನಮ್ಮ, ಅಟಲ್, ಅಂಬೇಡ್ಕರ್, ಇಂದಿರಾ ಗಾಂಧಿ ವಸತಿ ಶಾಲೆ ಹಾಗೂ ಕಾಲೇಜ್‌ಗಳಿಗೆ ಖಾಲಿ ಇರುವ ಅತಿಥಿ ಉಪನ್ಯಾಸಕ ಸ್ಥಾನಗಳಿಗೆ ಜೂ.18ರಂದು ಬೆಳಗ್ಗೆ 10ಕ್ಕೆ ಆಯ್ಕೆ ಪ್ರಕ್ರಿಯೆ ನಡೆಸಲಾಗುವುದು. ಈ ಹುದ್ದೆಗಳಿಗೆ ಪಾಠ ವೀಕ್ಷಣಾ-ಪ್ರಾತ್ಯಕ್ಷತೆ ಮಾನದಂಡ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತಿದ್ದು, ಆಯ್ಕೆ ಸಮಿತಿ ಸಭೆ ಕರೆಯಲಾಗಿದೆ. ಹುದ್ದೆಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಕೂಡ್ಲಿಗಿ ತಾಲೂಕಿನ ಹಿರೇಹೆಗ್ಡಾಳ್ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಗೆ ಹಾಜರಾಗಬೇಕು ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ವೈ.ಎ.ಕಾಳೆ ತಿಳಿಸಿದ್ದಾರೆ.

ರೈತ ಸಹಾಯವಾಣಿ ಪ್ರಾರಂಭ

◆ **ವಿಜಯನಗರ:** ಜಿಲ್ಲೆಯಲ್ಲಿ ಮುಂಗಾರು ಹಂಗಾಮು ಪ್ರಾರಂಭಗೊಂಡಿದ್ದು, ಉತ್ತಮ ಬಿತ್ತನೆ ಬೀಜಗಳ ಬಳಕೆ, ರಸಗೊಬ್ಬರಗಳ ಸಮರ್ಪಕ ಬಳಕೆ, ವಿವಿಧ ರಸಗೊಬ್ಬರಗಳ ಲಭ್ಯತೆ, ನೈಸರ್ಗಿಕ ಕೃಷಿ ಅಳವಡಿಕೆ ಬಗ್ಗೆ ರೈತರಿಗೆ ಮಾಹಿತಿ ಒದಗಿಸಲು ಕೃಷಿ ಇಲಾಖೆ ಸಹಾಯವಾಣಿಗಳನ್ನ ಪ್ರಾರಂಭಿಸಿದೆ. ಕೂಡ್ಲಿಗಿ ತಾಲೂಕಿನ ಮೊ.8884007247, ಹಡಗಲಿ ಮೊ.8884006917, ಹಗರಿಬೊಮ್ಮನಹಳ್ಳಿ ಮೊ.8884006783, ಹರಪನಹಳ್ಳಿ ಮೊ. 8884007016, ಹೊಸಪೇಟೆ ಮೊ.8884007348, ವಿಜಯನಗರ ಜಿಲ್ಲೆಯ ಮೊ.8884006758 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ನೀರು ಪೂರೈಕೆಯಲ್ಲಿ ವ್ಯತ್ಯಯ ಇಂದು, ನಾಳೆ

◆ **ವಿಜಯನಗರ:** ಹೊಸಪೇಟೆ ನಗರದ 2ನೇ ಹಂತದ ಜಲಶುದ್ಧೀಕರಣ ಘಟಕದಲ್ಲಿ ತುರ್ತು ನಿರ್ವಹಣೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ನಗರದ ವಿವಿಧ ವಾರ್ಡ್‌ಗಳಲ್ಲಿ ಜೂ.16, 17ರಂದು ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ. ನಗರದ 7, 8, 9, 13, 14, 16, 17, 18, 19, 20, 21, 22, 23, 24, 25, 26, 27, 29, 30, 31, 32, 33, 34 ಮತ್ತು 35ರ ವಾರ್ಡ್ ವ್ಯಾಪ್ತಿಯಲ್ಲಿ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಪೌರಾಯುಕ್ತ ಎರಗುಡಿ ಶಿವಕುಮಾರ್ ಪ್ರಕಟಣೆಯಲ್ಲಿ ಕೋರಿದ್ದಾರೆ.

ದತ್ತಾತ್ರೇಯ ನಿಧನ



◆ **ಹಗರಿಬೊಮ್ಮನಹಳ್ಳಿ:** ಭೂಮಿ ಪ್ರಿಂಟರ್ ಮಾಲೀಕ ಮಾಲವಿ ಸನ್ನುತಿ ದತ್ತಾತ್ರೇಯ (64) ಅವರು ಹೃದಯಾಘಾತದಿಂದ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಭಾನುವಾರ ನಿಧನರಾಗಿದರು. ಮೃತರು ಪತ್ನಿ ಮೂರು ಜನ ಪುತ್ರಿಯರು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.



ಕರೂರು: ಸಮೀಪದ ಹಾಗಲೂರ ಗ್ರಾಮದಲ್ಲಿ ವೀರ ಅಭಿಮನ್ಯು ಕಾಳಗ ಬೈಲಾಟ ನಾಟಕ ನಡೆಯಿತು. ಹಾಗಲೂರಿನ ಗ್ರಾಮದೇವತೆಗಳಾದ ದೇವಮ್ಮ ದೇವಿ, ಸಂಕಲಮ್ಮ ದೇವಿ, ಕೊಲ್ಲಾಪುರ ಮಹಾದೇವಿ ಮರಿಗೆಮದೇವಿ ಸಣ್ಣ ಕಲ್ಲಾಪುರಮ್ಮ ದೇವಿ ಕುಂಭೋತ್ಸವ ಪ್ರಯುಕ್ತ ಬಯಲಾಟ ನಾಟಕ ನಡೆಯಿತು.

ಭಾರತ ಭೂಷಣ ರಾಷ್ಟ್ರ ಪ್ರಶಸ್ತಿಗೆ ನಾಗರಾಜ ಆಯ್ಕೆ



◆ **ಕುರುಗೋಡು:** ಅಂತಾರಾಷ್ಟ್ರೀಯ ಹಿಂದೂ ಮಹಾಸಭಾ ಕರ್ನಾಟಕ ವತಿಯಿಂದ ಜೂ.24ರಂದು ಬಾಗಲಕೋಟೆ ಲಯನ್ಸ್ ಕ್ಲಬ್ ಸಭಾ ಭವನದಲ್ಲಿ ನಡೆದ ಸಮಾರಂಭದಲ್ಲಿ ಕುರುಗೋಡಿನ ಸಮಾಜ ಸೇವಕ ಬುಗುಡೆ ನಾಗರಾಜರವರನ್ನು ಭಾರತ ಭೂಷಣ ರಾಷ್ಟ್ರ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ ಎಂದು ಅಂತರಾಷ್ಟ್ರೀಯ ಹಿಂದೂ ಮಹಾಸಭಾ ಕರ್ನಾಟಕ ವಿದ್ಯಾರ್ಥಿ ಘಟಕದ ರಾಜ್ಯಾಧ್ಯಕ್ಷ ಸಾಗರ ಕಲದಗಿ ತಿಳಿಸಿದ್ದಾರೆ.

ಈ ಕುರಿತು ಪತ್ರಿಕೆ ಹೇಳಿಕೆ ನೀಡಿರುವ ಅವರು, ಬುಗುಡೆ ನಾಗರಾಜ ಭದ್ರತಾ ಸೇವಾ ಕ್ಷೇತ್ರದಲ್ಲಿ ಮುಖ್ಯಮಂತ್ರಿಗಳ ಚಿನ್ನದ ಪದಕ ಪುರಸ್ಕೃತ ಹಾಗೂ ಘಟಕ ಅಧಿಕಾರಿ ಗೃಹ ರಕ್ಷಕ ದಳ ಕುರುಗೋಡು. ಈ ಒಂದು ಅನುಪಮಾ ಸೇವೆ ಪರಿಗಣಿಸಿ ಈ ಪ್ರತಿಷ್ಠಿತ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದರು. ಈ ಕುರಿತು ಪ್ರತಿಕ್ರಿಸಿದ ಬುಗುಡೆ ನಾಗರಾಜ, ಈ ಒಂದು ಗೌರವವು ಕೇವಲ ನನ್ನ ವೈಯಕ್ತಿಕ ಸಾಧನೆ ಅಲ್ಲ, ಇದು ನನ್ನ ಸ್ನೇಹಿತರು, ಕುಟುಂಬ, ಸಮಾಜದ ಬಂಧುಗಳು, ಗುರು-ಹಿರಿಯರು ಸದಾ ಪ್ರೋತ್ಸಾಹಿಸಿ ಬೆಂಬಲಿಸಿ ಹಾರೈಸದ ಎಲ್ಲರಿಗೂ ನಾನು ಚಿರಋಣಿಯಾಗಿದ್ದೇನೆ ಎಂದು ಕೃತಜ್ಞತೆ ವ್ಯಕ್ತಪಡಿಸಿದ್ದಾರೆ. ಈ ಪ್ರತಿಷ್ಠಿತ ಪ್ರಶಸ್ತಿಗೆ ಆಯ್ಕೆ ಮಾಡಿದ ಅಂತರಾಷ್ಟ್ರೀಯ ಹಿಂದೂ ಮಹಾಸಭಾ ಕರ್ನಾಟಕ ರಾಜ್ಯದ್ಯಕ್ಷ ಸಾಗರ ಕಲದಗಿ, ಎಲ್ಲ ಪದಾಧಿಕಾರಿಗಳಿಗೆ ಧನ್ಯವಾದಗಳು ಸಲ್ಲಿಸಿದ್ದಾರೆ.



ಕರೂರು: ಇಲ್ಲಿಯ ಶ್ರೀ ನಾರಾಯಣ ಸ್ವಾಮಿ ಜಾತ್ರಾ ಮಹೋತ್ಸವ ಅಂಗವಾಗಿ ಮ್ಯಾರಥಾನ್ ಸ್ಪರ್ಧೆ ಏರ್ಪಡಿಸಲಾಗಿತ್ತು. ದರೂರ್ ಕ್ಯಾಂಪ್‌ನಿಂದ ಲಕ್ಷ್ಮಿ ನಾರಾಯಣ ಗುಡಿ ಹತ್ತಿರದವರೆಗೆ ನಡೆಯಿತು. ಸಿರಿಗೇರಿ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಟಿ.ಶಶಿಧರ ನಾಯಕ, ವೈದ್ಯ ಎಂ.ತಿಪ್ಪಾರೆಡ್ಡಿ ಚಾಲನೆ ನೀಡಿದರು. ವಿದ್ಯಾರ್ಥಿಗಳು ಸೇರಿ ಸುಮಾರು 200 ರಿಂದ 300 ಜನ ಸ್ಪರ್ಧೆಗಳಲ್ಲಿ ಪಾಲ್ಗೊಂಡಿದ್ದರು. ಜಿ.ಲಿಂಗರೆಡ್ಡಿ, ಎಸ್.ಶ್ರೀನಿವಾಸ ರೆಡ್ಡಿ, ನವೀನ್ ರೆಡ್ಡಿ ಇತರಿದ್ದರು.

ಕಪ್ಪಗಲ್ಲು ನಾಟಕೋತ್ಸವದಲ್ಲಿ ಕಲಾವಿದರಿಗೆ ಸನ್ಮಾನ | ಸಿ.ಟಿ.ರವಿ ಅಭಿಮತ

ರಂಗತೋರಣ ಕಾರ್ಯ ಶ್ಲಾಘನೀಯ

◆ **ಬಳ್ಳಾರಿ:** ನಾಟಕಗಳು ಆಯಾ ಕಾಲಘಟ್ಟದ ಸಾಮಾಜಿಕ ಪರಿಸ್ಥಿತಿಯ ಕನ್ನಡಿ ಹಿಡಿಯುವ ಕೆಲಸ ಮಾಡುತ್ತಿದ್ದು ವರ್ತಮಾನದಲ್ಲಿ ಪ್ರಭಾವ ಬೀರುತ್ತವೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ತಿಳಿಸಿದರು.

ತಾಲೂಕಿನ ಕಪ್ಪಗಲ್ಲು ಗ್ರಾಮದಲ್ಲಿ ರಂಗತೋರಣ ಸಾಂಸ್ಕೃತಿಕ ಸಂಘಟನೆ ಹಮ್ಮಿಕೊಂಡಿದ್ದ ಕಪ್ಪಗಲ್ಲು ನಾಟಕೋತ್ಸವದಲ್ಲಿ ಹಿರಿಯ ರಂಗಭೂಮಿ ಕಲಾವಿದರಾದ ಆದವಾನಿ ವೀಣಾ ಹಾಗೂ ಶ್ರೀಧರ ಹೆಗಡೆ ಅವರಿಗೆ ರಾಜ್ಯಮಟ್ಟದ 'ಸಾಂಸ್ಕೃತಿಕ ಸಾರ್ವಭೌಮ ಜೋಳದರಾಶಿ ದೊಡ್ಡನಗೌಡ ರಂಗತೋರಣ ಪುರಸ್ಕಾರ' ಪ್ರದಾನ ಮಾಡಿ ಮಾತನಾಡಿ, ಮಹಾತ್ಮ ಗಾಂಧೀಜಿಯವರ ಮೇಲೆ ಹರಿಶ್ಚಂದ್ರ ನಾಟಕ ಪ್ರಭಾವ ಬೀರಿತ್ತು. ವ್ಯಕ್ತಿ ಅಥವಾ ಜನಸಮುದಾಯದ ಮೇಲೆ ಪ್ರಭಾವ ಬೀರುವ ಶಕ್ತಿ ರಂಗಭೂಮಿಗಿದೆ. ನಿರಂತರ ನಾಟಕೋತ್ಸವಗಳ ಮೂಲಕ ಜನರ ಮನಸ್ಸನ್ನು ಅರಳಿಸುವ ಕೆಲಸ ಮಾಡುತ್ತಿರುವ ರಂಗತೋರಣ ಕಾರ್ಯ ಶ್ಲಾಘನೀಯ ಎಂದರು.

ಸಮಾಜದ ಅಭಿವೃದ್ಧಿಯನ್ನು ಕೇವಲ ಆರ್ಥಿಕ ಮಾನದಂಡಗಳಿಂದ ಅಳೆಯಲು ಸಾಧ್ಯವಿಲ್ಲ. ಹಣ, ಆಸ್ತಿ, ಅಧಿಕಾರ ಮತ್ತು ಭೌತಿಕ ಸೌಲಭ್ಯಗಳು ಕಾಲಕ್ರಮೇಣ ಕಳೆದುಹೋಗಬಹುದು. ಆರ್ಥಿಕ ಶ್ರೀಮಂತಿಕೆ ಏರಿಳಿತಗಳಿಗೆ ಒಳಗಾಗುವುದು ಸಹಜ. ಆದರೆ, ಒಂದು ಸಮಾಜದ ನಿಜವಾದ ಗುರುತು ಅದರ ಸಂಸ್ಕೃತಿ, ಪರಂಪರೆ, ಕಲೆ, ಸಾಹಿತ್ಯ ಮತ್ತು ಮೌಲ್ಯಗಳಲ್ಲಿ ಅಡಗಿದೆ. ಇವುಗಳೇ ಆ ಸಮಾಜದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಪ್ರತಿಬಿಂಬಿಸುತ್ತವೆ. ಈ ಸಾಂಸ್ಕೃತಿಕ ಸಂಪತ್ತು ಪೀಳಿಗೆಯಿಂದ ಪೀಳಿಗೆಗೆ ಸಾಗುತ್ತಾ ಸಮಾಜವನ್ನು ಜೀವಂತವಾಗಿರಿಸುತ್ತದೆ ಎಂದು ತಿಳಿಸಿದರು.



▶▶ ಜೇವರ್ಗಿ ರಾಜಣ್ಣ ರಚನೆ ಹಾಗೂ ನಿರ್ದೇಶನದ 'ರೈತ ಮನೆತನ' ನಾಟಕ ಪ್ರದರ್ಶನಗೊಂಡಿತು.

ರಂಗತೋರಣ ಸಂಸ್ಥೆಯ ಅಧ್ಯಕ್ಷ ಭೀಮಸೇನ ಅವರು ಪ್ರಾಸ್ತಾವಿಕ ಮಾತನಾಡಿ, ಮೂರು ದಿನಗಳ ನಾಟಕೋತ್ಸವದ ಯಶಸ್ವಿಗೆ ಶ್ರಮಿಸಿದ ಗ್ರಾಮಸ್ಥರ ಸಹಕಾರವನ್ನು ಸ್ಮರಿಸಿ, ನಾಟಕ ಬರೀ ಮನರಂಜನೆಯಷ್ಟೇ ಅಲ್ಲ; ಮನೋವಿಕಾಸವೂ ಹೌದು. ನಾಟಕದಲ್ಲಿ ಬರುವ ನೀತಿಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡಲ್ಲಿ ಮಾತ್ರ ನಾಟಕೋತ್ಸವ ಶ್ರಮ ಸಾರ್ಥಕವಾಗುತ್ತದೆ ಎಂದು ಹೇಳಿದರು.

ಆಂಧ್ರಪ್ರದೇಶದ ಉರವಕೊಂಡ ಮಠದ ಡಾ.ಕರಿಬಸವ ರಾಜೇಂದ್ರ ಶ್ರೀಗಳು ಸಾನ್ನಿಧ್ಯ ವಹಿಸಿ ಮಾತನಾಡಿದರು.

ಲೆಕ್ಕ ಪರಿಶೋಧಕ ಎರಿಸ್ವಾಮಿ ಚಿಲ್ಕರಾಯಿ, ಎಪಿಎಂಸಿ ಉಪಾಧ್ಯಕ್ಷ ರಾಮಣ್ಣ, ಬೆಂಗಳೂರಿನ ಸಾಮಾಜಿಕ ಕಾರ್ಯಕರ್ತ ವಾದಿರಾಜ ಉಪಸ್ಥಿತರಿದ್ದರು. ರಂಗತೋರಣ ಕಾರ್ಯದರ್ಶಿ ಪ್ರಭುದೇವ ಕಪ್ಪಗಲ್ಲು, ಜೋಳದರಾಶಿ ದೊಡ್ಡನಗೌಡ ಪ್ರತಿಷ್ಠಾನದ ಅಧ್ಯಕ್ಷ ಕೆ.ಪೊಂಪನಗೌಡ ಕಾರ್ಯಕ್ರಮ ನಿರ್ವಹಿಸಿದರು. ಮೆಹತಾಬ್, ಚಂದ್ರಶೇಖರ ಆಚಾರ್, ಅಡವಿಸ್ವಾಮಿ ಇದ್ದರು.

> ಜೀವನವೇ ಒಂದು ನಾಟಕ ರಂಗ. ಈ ಜೀವನ ಎಂಬ ನಾಟಕ ರಂಗದಲ್ಲಿ ನೈತಿಕ ಮೌಲ್ಯ ಉಳಿಸಿಕೊಂಡು ಉತ್ತಮ ಪಾತ್ರಧಾರಿಗಳಾದರೆ ಮಾತ್ರ ಹೆಸರು ಶಾಶ್ವತವಾಗಿ ಉಳಿಯುತ್ತದೆ. ಹಣ, ಆಸ್ತಿ, ಅಧಿಕಾರ, ಸ್ಥಾನಮಾನಗಳು ಶಾಶ್ವತವಲ್ಲ. ಆದರೆ, ಸಮಾಜದ ಒಳಿತಿಗಾಗಿ ಬದುಕಿದವರು, ಮಾನವೀಯ ಮೌಲ್ಯಗಳನ್ನು ಉಳಿಸಿದವರು ಮತ್ತು ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಿದವರು ಜನರ ಹೃದಯದಲ್ಲಿ ಸದಾಕಾಲ ಜೀವಂತವಾಗಿರುತ್ತಾರೆ.
> ■ ಸಿ.ಟಿ.ರವಿ, ವಿಧಾನ ಪರಿಷತ್ ಸದಸ್ಯ

ಶೈಕ್ಷಣಿಕ ಪ್ರಗತಿಗೆ ಆದ್ಯತೆ ನೀಡಿ: ಬಿಇಒ ಮಂಗಳಾ

◆ **ಹೂವಿನ ಹಡಗಲಿ:** 2026-27 ನೇ ಸಾಲಿನ ತಾಲೂಕಿನ ಶೈಕ್ಷಣಿಕ ಪ್ರಗತಿಗೆ ಆದ್ಯತೆ ನೀಡಿರಿ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಮಂಗಳಾ ಕೆ. ಅಭಿಮತ ವ್ಯಕ್ತಪಡಿಸಿದರು.

ಪಟ್ಟಣದ ಜಿಪಿಜಿ ಬಾಲಕರ ಪ್ರೌಢಶಾಲೆಯಲ್ಲಿ ಇತ್ತೀಚಿಗೆ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ನಡೆದ ಜೂನ್ ಮಾಹೆಯ ಶೈಕ್ಷಣಿಕ ಸಭೆಯಲ್ಲಿ ಮಾತನಾಡಿ, ಕಳೆದವರ್ಷದ ಎಸ್ಸೆಸ್ಸೆಲ್ಸಿ ಫಲಿತಾಂಶ ಕಲಬುರ್ಗಿ ವಿಭಾಗದಲ್ಲಿ ತಾಲೂಕಿಗೆ ಪ್ರಥಮ ಸ್ಥಾನ ಲಭಿಸಿದೆ. ಪ್ರಸಕ್ತ ಸಾಲಿನಲ್ಲಿಯೂ ಪ್ರಥಮ ಸ್ಥಾನ ಬರುವ ಹಾಗೆ ಆರಂಭದಿಂದಲೇ ಮುತುವರ್ಜಿ ವಹಿಸಿರಿ ಎಂದು ಮುಖ್ಯ ಗುರುಗಳಿಗೆ ತಾಕೀತು ಮಾಡಿದರು.

ಎಸ್ಸೆಸ್ಸೆಲ್ಸಿ ಬೆಳಗಿನ ತರಗತಿ ಸಂಜೆ ಗುಂಪು ಅಧ್ಯಯನ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಪಟ್ಟಿ ವಿಷಯವಾರು ಕ್ರಿಯಾ ಯೋಜನೆ ರೂಪಿಸಿ ಅನುಷ್ಠಾನಗೊಳಿಸಬೇಕು ಎಂದರು.

ಪ್ರವೇಶ ಪ್ರಕ್ರಿಯೆ ಎಸ್‌ಎಟಿಎಸ್‌ನಲ್ಲಿ ತ್ವರಿತವಾಗಿ ಇಂದೀಕರಿಸಿರುವುದು.

ಅಪಾರ್ ಐಡಿ ಮತ್ತು ಆಧಾರ್ ಸೀಡಿಂಗ್ ಪೂರ್ಣಗೊಳಿಸಲು ತಿಳಿಸಿದರು.

ಕ್ಷೇತ್ರ ಸಮನ್ವಯಾಧಿಕಾರಿ ಎ.ಕೋಟೆಪ್ಪ ಮಾತನಾಡಿ, ಕ್ಯಾಮ್ಸ್ ಹಾಗೂ ನಿರಂತರ ಆ್ಯಪ್ ಕುರಿತು ಮಾಹಿತಿ ಹಂಚಿಕೊಂಡರು.

ಶಾಲಾ ಲಾಗಿನ್‌ನಲ್ಲಿ ಪೆಂಡಿಂಗ್ ಇರದ ಹಾಗೆ ಕ್ರಮ ವಹಿಸಲು ತಿಳಿಸಿದರು.

ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ವಿ.ಹನುಮಂತಪ್ಪ 2026-27 ನೇ ಸಾಲಿನ ಮಧ್ಯಾಹ್ನ ಬಿಸಿಯೂಟ ಅನುಷ್ಠಾನ ಕುರಿತು ಉಪಯುಕ್ತ ಮಾಹಿತಿ ನೀಡಿದರು.

ತಾಲೂಕು ದೈಹಿಕ ಪರಿವೀಕ್ಷಕ ರಫಿ ಅಹಮ್ಮದ್ ಖವಾಸ್, ತಾಲೂಕು ಪ್ರೌಢಶಾಲಾ ಮುಖ್ಯ ಗುರುಗಳ ಸಂಘದ ಅಧ್ಯಕ್ಷ ಜಿ.ಎಂ.ಕಾಂತೇಶ, ಉಪಾಧ್ಯಕ್ಷೆ ಹನಸಿ ಮಂಗಳಾ, ಉಪ ಪ್ರಾಂಶುಪಾಲ ರಫಿ ಅಹಮ್ಮದ್ ಎಸ್ಸೆಸ್ಸೆಲ್ಸಿ ನೋಡಲ್ ಅಧಿಕಾರಿ ಹಣ್ಣಿ ನರೇಶ, ಬಿಆರ್‌ಪಿ ಸಚಿನ್ ಆರಾಧ್ಯ ಉಪಸ್ಥಿತರಿದ್ದರು. ನೂತನ ಬಿಇಒ ಮಂಗಳಾ ಕೆ ರವರಿಗೆ ತಾಲೂಕಿನ ಪ್ರೌಢಶಾಲಾ ಮುಖ್ಯ ಗುರುಗಳ ಸಂಘದ ವತಿಯಿಂದ ಗೌರವ ಸನ್ಮಾನ ನೆರವೇರಿಸಲಾಯಿತು. ವಿವಿಧ ಪ್ರೌಢಶಾಲೆಗಳ ಮುಖ್ಯ ಗುರುಗಳು ಇದ್ದರು.



ರೆಡ್‌ಕ್ರಾಸ್ ಸಂಸ್ಥೆಯ ಸೇವೆ ಶ್ಲಾಘನೀಯ



◆ **ಬಳ್ಳಾರಿ:** ತುರ್ತು ಪರಿಸ್ಥಿತಿಗಳಲ್ಲಿ ಸಾರ್ವಜನಿಕರ ಆಸ್ತಿ ಮತ್ತು ಪ್ರಾಣವನ್ನು ರಕ್ಷಿಸುವ ಮೂಲಕ ರೆಡ್‌ಕ್ರಾಸ್ ಸಂಸ್ಥೆಯ ಸಿಬ್ಬಂದಿ ಮಾಡುತ್ತಿರುವ ಮಾನವೀಯ ಸೇವೆ ಶ್ಲಾಘನೀಯ ಎಂದು ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಎನ್. ಹೇಳಿದರು.

ನಗರದಲ್ಲಿ ಹಳೇ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಭಾರತೀಯ ರೆಡ್‌ಕ್ರಾಸ್ ಬಳ್ಳಾರಿ ಶಾಖೆ ಹಾಗೂ ಜಿಲ್ಲಾಡಳಿತದ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ 'ವಿಶ್ವ ರೆಡ್ ಕ್ರಾಸ್ ದಿನಾಚಾರಣೆ' ಕಾರ್ಯಕ್ರಮದಲ್ಲಿ ಮಾತನಾಡಿದರು.

ರೆಡ್‌ಕ್ರಾಸ್ ಸಂಸ್ಥೆಯ ಈ.ಸಿ ಸದಸ್ಯ ಡಾ.ನಾಗರಾಜ್‌ರಾವ್ ಮಾತನಾಡಿ, ದಿನನಿತ್ಯದ ಸಾರ್ವಜನಿಕ ಕೆಲಸ ಕಾರ್ಯಗಳಲ್ಲಿ ಕಂದಾಯ ಇಲಾಖೆಯ ಸಿಬ್ಬಂದಿ ಎದುರಿಸುವ ಮಾನಸಿಕ ಒತ್ತಡವನ್ನು ನಿವಾರಿಸಲು ಯೋಗ, ಪ್ರಾಣಾಯಾಮ ಮತ್ತು ಉತ್ತಮ ಜೀವನಶೈಲಿಯ ಅಭ್ಯಾಸಗಳು ಅತ್ಯಂತ ಪರಿಣಾಮಕಾರಿ ಎಂದು ಅವರು ಸವಿಸ್ತಾರವಾಗಿ ವಿವರಿಸಿದರು.

ರೆಡ್‌ಕ್ರಾಸ್ ಸಂಸ್ಥೆ ಸ್ವಯಂ ಸೇವಕರಿಗೆ ಮುಖ್ಯ ಅತಿಥಿಗಳಿಂದ ಪ್ರಮಾಣ ಪತ್ರ ವಿತರಿಸಿ ಗೌರವಿಸಲಾಯಿತು.

ಸಂಸ್ಥೆ ಕಾರ್ಯದರ್ಶಿ ಎಂ.ಎ.ಷಕೀಬ್ ನಿರೂಪಿಸಿದರು. ರೆಡ್‌ಕ್ರಾಸ್ ಸಂಸ್ಥೆಯ ಖಜಾಂಚಿ ಪೊಲಾ ರಾಧಾಕೃಷ್ಣ, ಈ.ಸಿ., ಸದಸ್ಯ ಪ್ರೊ.ಕುಪ್ಪಗಲ್ಲು ವೀರೇಶ, ಬಳ್ಳಾರಿ ರೆಡ್‌ಕ್ರಾಸ್ ಸಂಸ್ಥೆಯ ಆಜೀವ ಸದಸ್ಯರು ಇದ್ದರು.

ರಾಷ್ಟ್ರೀಯ ಶಸ್ತ್ರಚಿಕಿತ್ಸಕರ ವಾರಾಚರಣೆ: ರಕ್ತದಾನ ಶಿಬಿರ ಯಶಸ್ವಿ



◆ **ಬಳ್ಳಾರಿ:** ರಾಷ್ಟ್ರೀಯ ಶಸ್ತ್ರಚಿಕಿತ್ಸಕರ ವಾರಾಚರಣೆಯ ನಿಮಿತ್ತ, ಕೆಎಸ್‌ಸಿ-ಎಎಸ್‌ಐ ಬಳ್ಳಾರಿ ನಗರ ಶಾಖೆಯು ಬಿಎಂಸಿಆರ್‌ಸಿಯ ಅಂತಿಮ ವರ್ಷದ ಎಂಬಿಬಿಎಸ್ ವಿದ್ಯಾರ್ಥಿಗಳಾದ ಅದ್ವೈತ ಬ್ಯಾಚ್ ಸಹಯೋಗದೊಂದಿಗೆ ಎರಡು ದಿನಗಳ ಕಾಲ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರವು ಅತ್ಯಂತ ಯಶಸ್ವಿಯಾಗಿ ನಡೆಯಿತು.

ಶಿಬಿರಕ್ಕೆ ವೈದ್ಯಕೀಯ ವಿದ್ಯಾರ್ಥಿಗಳು, ವೈದ್ಯರು, ಆರೋಗ್ಯ ಸಿಬ್ಬಂದಿ ಹಾಗೂ ಸಾರ್ವಜನಿಕರಿಂದ ಅಭೂತಪೂರ್ವ ಸ್ಪಂದನೆ ವ್ಯಕ್ತವಾಯಿತು. ಮುಖ್ಯ ಅತಿಥಿಯಾಗಿ ಬಿಎಂಸಿಆರ್‌ಸಿ ನಿರ್ದೇಶಕ ಡಾ.ಟಿ.ಗಂಗಾಧರಗೌಡ ಅವರು ಭಾಗವಹಿಸಿ ಮಾತನಾಡಿ, ಸಮುದಾಯದ ಆರೋಗ್ಯ ಸೇವೆಗೆ ಸಂಬಂಧಿಸಿದ ಇಂತಹ ಸಾಮಾಜಿಕ ಕಾರ್ಯಗಳ ಅಗತ್ಯತೆ ಅವಶ್ಯಕವಾಗಿದೆ. ಸ್ವಯಂಪ್ರೇರಿತ ರಕ್ತದಾನ ಮತ್ತು ವೈದ್ಯಕೀಯ ವಲಯದಲ್ಲಿ ಸಾಮಾಜಿಕ ಜವಾಬ್ದಾರಿಯ ಮಹತ್ವ ಇನ್ನಷ್ಟು ಅರಿತುಕೊಳ್ಳಬೇಕಾಗಿದೆ ಎಂದರು.

ಕೆಎಸ್‌ಸಿ-ಎಎಸ್‌ಐ ಖಜಾಂಚಿ ಡಾ.ಯಾಳಗುರು ಬಸವನಗೌಡ, ಎಎಸ್‌ಐ ಕಾರ್ಯದರ್ಶಿ ಡಾ.ಗಡ್ಡಿ ದಿವಾಕರ್, ಕೆಎಸ್‌ಸಿ-ಎಎಸ್‌ಐ ಬಳ್ಳಾರಿ ನಗರ ಶಾಖೆ ಅಧ್ಯಕ್ಷ ಡಾ.ಶೇಕಪ್ಪ ಸಿ.ಮಾಳಗಿಮನಿ, ಕಾರ್ಯದರ್ಶಿ ಡಾ.ಗುಡೇಕೋಟೆ ರವಿಕುಮಾರ, ಜಂಟಿ ಕಾರ್ಯದರ್ಶಿ ಡಾ.ಶೈಖ್ ಫರ್ಹಾನ್ ಎಂ.ಬಿ. ಹಾಗೂ ಖಜಾಂಚಿ ಡಾ.ಅತುಲ್ ಕುಲಕರ್ಣಿ ರಕ್ತದಾನ ಶಿಬಿರವನ್ನು ಯಶಸ್ವಿಯಾಗಿ ಆಯೋಜಿಸಿದ ಬಳ್ಳಾರಿ ನಗರ ಶಾಖೆಯ ಶ್ರಮವನ್ನು ಶ್ಲಾಘಿಸಿದರು.

ಈ ವೇಳೆ ಅದ್ವೈತ ಬ್ಯಾಚ್ ವಿದ್ಯಾರ್ಥಿಗಳು, ಅಧ್ಯಾಪಕ ವೃಂದ, ಸ್ನಾತಕೋತ್ತರ ಹಾಗೂ ಪದವಿಪೂರ್ವ ವೈದ್ಯಕೀಯ ವಿದ್ಯಾರ್ಥಿಗಳು, ಆರೋಗ್ಯ ಸಿಬ್ಬಂದಿಗಳು ಸ್ವಯಂಪ್ರೇರಿತವಾಗಿ ರಕ್ತದಾನ ಮಾಡಿದ ಎಲ್ಲ ಮಹಾದಾನಿಗಳಿಗೆ ಆಯೋಜಕರು ಅಭಿನಂದನೆ ಸಲ್ಲಿಸಿದರು.

ವಸತಿ ಶಾಲೆ ಪ್ರಾರಂಭಕ್ಕೆ ಒತ್ತಾಯ

◆ **ಬಳ್ಳಾರಿ:** ನಗರದ ಮಯೂರ ಹೋಟೆಲ್ ಹಿಂಭಾಗದ ಸಮಾಜ ಕಲ್ಯಾಣ ಇಲಾಖೆ ನಿರ್ವಹಿಸುತ್ತಿರುವ ಡಾ.ಅಂಬೇಡ್ಕರ್ ವಸತಿ ಶಾಲೆಯನ್ನು ಕೂಡಲೇ ಪ್ರಾರಂಭಿಸಬೇಕು. ಪ್ರಸಕ್ತ ಶೈಕ್ಷಣಿಕ ವರ್ಷದ ತರಗತಿಗಳು ಮೇ.29 ರಿಂದಲೇ ಪ್ರಾರಂಭಗೊಂಡರೂ ಇಲ್ಲಿವರೆಗೆ ವಸತಿ ಶಾಲೆ ಪ್ರಾರಂಭಿಸುವಲ್ಲಿ ನಿರ್ಲಕ್ಷ್ಯ ವಹಿಸಿದ ಅಧಿಕಾರಿಗಳ, ಸಿಬ್ಬಂದಿ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿ ಸಾಮಾಜಿಕ ಹೋರಾಟಗಾರ ಸಿದ್ದೇಶ ಉಳೂರು ನೇತೃತ್ವದಲ್ಲಿ ಪಾಲಕರು ಅಪರ ಜಿಲ್ಲಾಧಿಕಾರಿಗಳಿಗೆ ಸೋಮವಾರ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಿದ್ದೇಶ ಉಳೂರು ಮಾತನಾಡಿ, ಪ್ರಸಕ್ತ ಶೈಕ್ಷಣಿಕ ವರ್ಷದ ವಸತಿ ಸಹಿತ ಶಾಲಾ, ಕಾಲೇಜ್‌ಗಳು, ಕಳೆದ ಮೇ.29 ರಿಂದಲೇ ಪ್ರಾರಂಭಗೊಂಡಿದ್ದು, 17 ದಿನಗಳು ಕಳೆದಿವೆ. ಆದರೆ, ಇಲ್ಲಿನ ಡಾ.ಅಂಬೇಡ್ಕರ್ ವಸತಿ ಶಾಲೆ ಪ್ರಾರಂಭಿಸದಿರುವುದು, ಅತ್ಯಂತ ಖಂಡನೀಯ ಎಂದರು.

ಇದು ಮಕ್ಕಳ ಗುಣಮಟ್ಟದ ಶಿಕ್ಷಣಕ್ಕೆ ಹಿನ್ನೆಡೆಯಾಗಲಿದೆ. ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಈ ಬೆಳವಣಿಗೆ ಹಿಡಿದ ಕೈಗನ್ನಡಿಯಾಗಿದೆ. ಬಡ ಮಕ್ಕಳಿಗೆ ಅನುಕೂಲವಾಗಲೆಂದು ಸರ್ಕಾರ ಪ್ರತಿ ವರ್ಷ ಕೋಟ್ಯಂತರ ರೂ.ಖರ್ಚು ಮಾಡುತ್ತಿದೆ. ಕೆಲ ಅಧಿಕಾರಿಗಳ ನಿರ್ಲಕ್ಷ್ಯದಿಂದ ಮಕ್ಕಳು ಸಾಕಷ್ಟು ತೊಂದರೆಯಾಗಲಿದೆ. ಬಳ್ಳಾರಿ ಜಿಲ್ಲೆಯ ಸುತ್ತಲಿನ ಜಿಲ್ಲೆಗಳಾದ ಕೊಪ್ಪಳ, ವಿಜಯನಗರ ಜಿಲ್ಲೆಗಳ ವಸತಿ ಶಾಲೆಗಳಲ್ಲಿ ತರಗತಿಗಳು ಪ್ರಾರಂಭವಾಗಿವೆ. ಆದರೆ, ನಮ್ಮ ಬಳ್ಳಾರಿಯ ಹೃದಯ ಭಾಗದ ವಸತಿ ಶಾಲೆಯಲ್ಲಿ ತರಗತಿಗಳನ್ನು ಪ್ರಾರಂಭಿಸದಿರುವುದು ಪಾಲಕರನ್ನು ಕೆರಳಿಸಿದೆ. ವಸತಿ ಶಾಲೆ, ತರಗತಿಗಳನ್ನು ಪ್ರಾರಂಭಿಸಲು ನಿರ್ಲಕ್ಷ್ಯ ವಹಿಸಿದ ಅಧಿಕಾರಿಗಳು, ಸಿಬ್ಬಂದಿಗಳ ಕೂಡಲೇ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು. ಮಹೇಶ, ಮಲ್ಲಪ್ಪ, ಕಿಶೋರ, ತಿರುಮಲ ಸೇರಿದಂತೆ ಇತರರಿದ್ದರು.





ಕುರುಗೋಡು: ಇಲ್ಲಿಯ ಮಹಾಮಹಿಮ ಶ್ರೀ ಚೆಳ್ಳಗುರ್ಕಿ ಎರ್ರಿತಾತ ಶ್ರೀಗಳು ರಥೋತ್ಸವ ಹಿನ್ನೆಲೆ ನಡೆದ ಸಪ್ತ ಭಜನೆ ಕಾರ್ಯಕ್ರಮದಲ್ಲಿ ತಾಲೂಕಿನ ಮುಷ್ಟಗಟ್ಟೆ ಗ್ರಾಮದ ಈಶ್ವರ ಸ್ವಾಮಿ ಭಜನ ತಂಡ ನೃತ್ಯ ಪ್ರದರ್ಶನಗೊಂಡಿತು.

ಅಧಿಕಾರಿಗಳ ಬೇಜವಾಬ್ದಾರಿತನಕ್ಕೆ ರೋಸಿಹೋದ ಬಡಾವಣೆಯ ಜನತೆ

ಪಪಂ ನಿರ್ಲಕ್ಷ್ಯ: ಪಾರ್ಕ್ ಸ್ವಚ್ಛಗೊಳಿಸಿದ ಮಹಿಳೆಯರು

▶ ಅರವಿಂದ ಬಸ್ಸಾಪುರ

◆ **ಕೊಟ್ಟೂರು:** ಸ್ಥಳೀಯ ಪಟ್ಟಣ ಪಂಚಾಯಿತಿ ತೀವ್ರ ನಿರ್ಲಕ್ಷ್ಯ ಧೋರಣೆಗೆ ಬೇಸತ್ತ ಮಹಿಳೆಯರು, ತಾವೇ ಖುದ್ದಾಗಿ ಪೊರಕೆ ಹಾಗೂ ಚಲಕಿ ಹಿಡಿದು ಪಾರ್ಕ್ ಸ್ವಚ್ಛಗೊಳಿಸಿದ ಘಟನೆ ಪಟ್ಟಣದಲ್ಲಿ ನಡೆದಿದೆ.

ಪಟ್ಟಣದ ಉಜ್ಜಿನಿ ರಸ್ತೆಯಲ್ಲಿರುವ ಬಸವೇಶ್ವರ ಬಡಾವಣೆಯ ಈಶ್ವರ ಗುಡಿ ಹತ್ತಿರದ ಪಾರ್ಕ್‌ನಲ್ಲಿ ಈ ಘಟನೆ ನಡೆದಿದ್ದು, ಸಾರ್ವಜನಿಕ ವಲಯದಲ್ಲಿ ಪಪಂ ಅಧಿಕಾರಿಗಳ ವಿರುದ್ಧ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ಹಸಿರು ವನವಾದರೂ ಹೆಚ್ಚಿದ ವಿಷಜಂತುಗಳ ಭೀತಿ: ಬಸವೇಶ್ವರ ಬಡಾವಣೆ ನಿವಾಸಿಗಳು ತಾವೇ ಸ್ವತಃ ಕಾಳಜಿ ವಹಿಸಿ ಈ ಪಾರ್ಕ್‌ನಲ್ಲಿ ನೂರಾರು ಗಿಡಮರಗಳನ್ನು ನೆಟ್ಟು ಪೋಷಿಸಿ ಹಸಿರು ವನವನ್ನಾಗಿ ಮಾರ್ಪಡಿಸಿದ್ದಾರೆ. ಆದರೆ, ಕಳೆದ ಕೆಲವು ಸಮಯದಿಂದ ಮರಗಳಿಂದ ಬಿದ್ದ ಒಣ ಎಲೆಗಳು ಪಾರ್ಕ್ ತುಂಬಾ ರಾಶಿ ಬಿದ್ದಿದ್ದರಿಂದ, ಇಡೀ ಪಾರ್ಕ್ ಕಸದ ತೊಟ್ಟಿಯಂತಾಗಿತ್ತು. ಅಲ್ಲದೆ, ದಟ್ಟವಾದ ಕಸದ ಪೊದೆಗಳ ನಡುವೆ ಹಾವು ಸೇರಿದಂತೆ ಇನ್ನಿತರ ವಿಷಜಂತುಗಳು ಸೇರಿಕೊಂಡಿದ್ದು, ವಾಕಿಂಗ್ ಬರುವ ಸಾರ್ವಜನಿಕರು, ಮಕ್ಕಳ ಪ್ರಾಣಕ್ಕೆ ಭೀತಿ ಎದುರಾಗಿತ್ತು.

ಮನವಿ ಮಾಡಿದರೂ ಕರಗದ ಅಧಿಕಾರಿಗಳು: ಅಧಿಕಾರಿಗಳ ಈ ಬೇಜವಾಬ್ದಾರಿತನಕ್ಕೆ ರೋಸಿಹೋದ ಬಡಾವಣೆಯ ಮಹಿಳೆಯರು, ಇಂದು ತಮ್ಮ ಮಕ್ಕಳೊಂದಿಗೆ ಒಟ್ಟಾಗಿ ಸೇರಿ ಕೈಯಲ್ಲಿ ಪೊರಕೆ, ಚಲಕಿಗಳನ್ನು ಹಿಡಿದು ಪಾರ್ಕ್‌ನ್ನು ಸ್ವಚ್ಛಗೊಳಿಸಿದರು. ಕಸದ ರಾಶಿ ತೆರವುಗೊಳಿಸಿ ಬಳಕೆಗೆ ಯೋಗ್ಯವಾಗುವಂತೆ ಮಾಡಿದರು. ಇನ್ನಾದರೂ ಸಂಬಂಧಪಟ್ಟ ಉನ್ನತ ಅಧಿಕಾರಿಗಳು ಇತ್ತ ಗಮನಹರಿಸಿ, ಪಟ್ಟಣದ ಸ್ವಚ್ಛತೆಗೆ ಆದ್ಯತೆ ನೀಡಬೇಕಿದೆ ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.



> ಬಸವೇಶ್ವರ ನಗರದ ಪಾರ್ಕ್‌ನ ಸ್ವಚ್ಛತೆ ಬಗ್ಗೆ ಅಲ್ಲಿನ ನಾಗರಿಕರು ಪಪಂ ಗಮನಕ್ಕೆ ತಂದಿದ್ದು, ನಾಳೆಯೊಳಗೆ ಪೌರ ಕಾರ್ಮಿಕರು ಅಲ್ಲಿನ ಉದ್ಯಾನವನವನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಲು ಸೂಚಿಸಿದ್ದೇನೆ.
> ■ ಎ.ನಸರುಲ್ಲಾ, ಪಪಂ ಮುಖ್ಯಾಧಿಕಾರಿ

> ಪಾರ್ಕ್‌ನಲ್ಲಿ ಕಸ ಮತ್ತು ಒಣ ಎಲೆಗಳು ತುಂಬಿ ಹೋಗಿರುವ ಬಗ್ಗೆ ಹಾಗೂ ವಿಷಜಂತುಗಳ ಭಯದ ಕುರಿತು ಪಟ್ಟಣ ಪಂಗೆ ಹಲವಾರು ಬಾರಿ ಸ್ವಚ್ಛತೆ ಕೈಗೊಳ್ಳುವಂತೆ ವಿನಂತಿಸಲಾಗಿತ್ತು. ಆದರೆ ಅಧಿಕಾರಿಗಳು ಮಾತ್ರ ಯಾವುದೇ ಕ್ರಮ ಕೈಗೊಳ್ಳದೆ ಮೌನಕ್ಕೆ ಶರಣಾಗಿದ್ದರು.
> ■ ಬಡಾವಣೆಯ ನಿವಾಸಿಗಳು

ದಿಗಂತ ವಿಶೇಷ

ಹಣ್ಣು ಮಾಗಿಸಲು ರಾಸಾಯನಿಕ ಬಳಕೆ: ಆತಂಕ

▶ ವೆಂಕಟೇಶ ದೇಸಾಯಿ

◆ **ಬಳ್ಳಾರಿ:** ಹಣ್ಣಿನ ರಾಜ ಮಾವು, ಬಾಳೆಹಣ್ಣು ಸೇರಿದಂತೆ ವಿವಿಧ ಹಣ್ಣುಗಳನ್ನು ಮಾಗಿಸಲು ರಾಸಾಯನಿಕ ಬಳಕೆ ಮಾಡುವುದು ಸಾಮಾನ್ಯವಾಗಿದ್ದು, ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ.

ಹಣ್ಣುಗಳನ್ನು ದಿಢೀರ್ ಮಾಗಿಸಲು ರಾಸಾಯನಿಕ ಬಳಕೆ ಮಾಡಲಾಗುತ್ತಿದೆ.

ಎಲ್ಲ ಮಾರುಕಟ್ಟೆಯಲ್ಲಿ ಅತಿಹೆಚ್ಚು ಹೊಳಪು, ಆಕರ್ಷಕ ಬಣ್ಣಗಳಿಂದ ಕೂಡಿದ ಮಾವು, ಬಾಳೆಹಣ್ಣು ಸೇರಿದಂತೆ ವಿವಿಧ ಹಣ್ಣುಗಳು ರಾರಾಜಿಸುತ್ತಿವೆ. ಜನರನ್ನು ಆಕರ್ಷಿಸುವ ಈ ಹಣ್ಣುಗಳನ್ನು ಮಾರುಕಟ್ಟೆಯಲ್ಲಿ ಖರೀದಿಸುವುದು ಸಾಮಾನ್ಯವಾಗಿದೆ. ಇದು ನಿನ್ನೆಯದಲ್ಲ, ಕಳೆದ ಸುಮಾರು ವರ್ಷಗಳಿಂದ ವ್ಯಾಪಾರಿಗಳು ಮುಂದುವರೆಸಿದ್ದು, ಇದಕ್ಕೆ ಕಡಿವಾಣ ಹಾಕುವಲ್ಲಿ ಸಂಬಂಧಿಸಿದ ಇಲಾಖೆ ಮೇಲಧಿಕಾರಿಗಳು ಮೌನಕ್ಕೆ ಶರಣಾಗಿರುವುದು ಜನರ ಆಕ್ರೋಶಕ್ಕೆ ಕಾರಣವಾಗಿದೆ.

ಖರೀದಿಸಲು ಹಿಂದೇಟು: ಮಾವು, ಬಾಳೆಹಣ್ಣು ಸೇರಿದಂತೆ ವಿವಿಧ ಹಣ್ಣುಗಳನ್ನು ನಗರ ಸೇರಿದಂತೆ ಗ್ರಾಮೀಣ ಪ್ರದೇಶದಲ್ಲಿ ನೈಸರ್ಗಿಕವಾಗಿ ಹಣ್ಣುಗಳನ್ನು ಬೆಳೆಯಲಾಗುತ್ತಿದೆ. ಇಳುವರಿ, ಆದಾಯ ಕಡಿಮೆ ಆದರೂ ಪರವಾಗಿಲ್ಲ ಎಂದು, ಕೆಲ ರೈತರು, ಯಾವುದೇ ರಾಸಾಯನಿಕ ವಸ್ತು ಬಳಸದೇ ಹಣ್ಣುಗಳನ್ನು ಮಾರುಕಟ್ಟೆಗೆ ತಂದರೆ ವ್ಯಾಪಾರಿಗಳ ಅಸಹಕಾರ, ಖರೀದಿಸಲು ಜನರು ಹಿಂದೇಟು ಹಾಕುತ್ತಿದ್ದಾರೆ. ಇದು ಬೆಳೆಗಾರರಲ್ಲಿ ತಲೆನೋವನ್ನು ಸೃಷ್ಟಿಸಿದೆ. ಮಾರುಕಟ್ಟೆಯಲ್ಲಿ ಪ್ರತಿ ಕೆಜಿಗೆ 50 ರೂ.ಇದ್ದು, ರಾಸಾಯನಿಕ ಮುಕ್ತ ಹಣ್ಣುಗಳನ್ನು 80 ರೂ.ಗೆ ಮಾರಾಟ ಮಾಡಿದರೂ ಜನರು ಖರೀದಿಸಲು ಹಿಂದೂ ಮುಂದು ನೋಡುತ್ತಿದ್ದಾರೆ. ರಾಸಾಯನಿಕಗಳಿಂದ ಮಾಗಿಸಿದ ಹಣ್ಣುಗಳು ಕಂಡರೆ ಸಾಕು ಖರೀದಿಸಲು ಮುಂದಾಗ್ತಾರೆ, ಇದು ರೈತ ಸಮೂಹ, ಬೆಳೆಗಾರರಲ್ಲಿ ಸಂಕಷ್ಟ ತಂದೊಡ್ಡಿದೆ.

ರಾಸಾಯನಿಕ ಬಳಸಿ ಮಾಗಿಸಿದ ಹಣ್ಣುಗಳು ಮಾರುಕಟ್ಟೆಗೆ ಲಗ್ಗೆ ಇಟ್ಟ ಕೂಡಲೇ ಜನರು ಖರೀದಿಸಲು ಮುಗಿ ಬೀಳುವುದು ಕಂಡು ಬರುತ್ತಿದೆ.



> ಮಾವು, ಬಾಳೆಹಣ್ಣುಗಳನ್ನು ಮಾಗಿಸಲು ರಾಸಾಯನಿಕ ಬಳಕೆ ಮಾಡುವುದು ಸರಿಯಲ್ಲ, ಇದರಿಂದ ದಲ್ಲಾಳಿಗಳು, ವ್ಯಾಪಾರಿಗಳು, ಬೆಳೆಗಾರರು ಹೊರಬರಬೇಕು. ಇದಕ್ಕೆ ಕಡಿವಾಣ ಹಾಕಲು ಶ್ರಮಿಸುವೆ.
> ■ ಡಾ.ರಮೇಶ್ ಬಾಬು, ಡಿಎಚ್ಒ

ಇಂತಹ ಹಣ್ಣುಗಳನ್ನು ಬಳಸಿದರೆ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಹೆಚ್ಚು, ಜನರು ಇಂತಹ ಹಣ್ಣುಗಳಿಂದ ದೂರವಿರಿ ಎಂದು ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಜನರಲ್ಲಿ ಜಾಗೃತಿ ಮೂಡಿಸುವುದು, ರಾಸಾಯನಿಕ ಬಳಕೆ ಮಾಡುವ ವರ್ತಕರ, ದಲ್ಲಾಳಿಗಳಿಗೆ ಬಿಸಿ ಮುಟ್ಟಿಸುವ ಕೆಲಸ ನಡೆದರೆ ಇದಕ್ಕೆ ಕಡಿವಾಣ ಹಾಕಬಹುದು.

ಹಣ್ಣುಗಳನ್ನು ಬೇಗ ಮಾಗಿಸಲು ಈಥಲೈನ್ ರಾಸಾಯನಿಕ ಬಳಕೆ ಮಾಡುವುದು ಸಾಮಾನ್ಯವಾಗಿದ್ದು, ಇದರಿಂದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲಿದೆ. ಸಂಪೂರ್ಣ ಹಳದಿ ಬಣ್ಣಕ್ಕೆ ತಿರುಗಿದ್ದರೂ ಹಣ್ಣುಗಳಲ್ಲಿ ರಾಸಾಯನಿಕ ಬಳಕೆ ಮಾಡಿರುವುದನ್ನು ಪತ್ತೆ ಹಚ್ಚಬಹುದು ಎಂದು ಹೇಳಿದ್ದಾರೆ.